ಮಾನವಿಕ ಕರ್ಣಾಟಕ

ಸಂಪುಟ ೨ ಸಂಚಿಕೆ ೨

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೭೨

ಲೇಖಕರಿಗೆ ಸೂಚನೆಗಳು

೧ ಮಾನವಿಕ ಶಾಸ್ತ್ರ ವಿಷಯಗಳಿಗೆ ಸಂಬಂಧಿಸಿದ ಸ್ವತಂತ್ರ ಅಥವಾ ಅನುವಾದಿತ ಲೇಖನಗಳನ್ನು 'ಮಾನವಿಕ ಕರ್ಣಾಟಕ'ದಲ್ಲಿ ಪ್ರಕಟಿಸಲಾಗುವುದು. ಲೇಖನ ಅನುವಾದವಾಗಿದ್ದರೆ ಮೂಲ ಲೇಖಕರ ಮತ್ತು ಲೇಖನದ ಹೆಸರುಗಳನ್ನೂ ಲೇಖನದ ಆಕರವನ್ನೂ ಸೂಚಿಸಬೇಕಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಸಮ್ಮತಿಯನ್ನೂ ಲೇಖನದೊಂದಿಗೆ ಕಳುಹಿಸಬೇಕು.

೨ ಲೇಖನವನ್ನು ಕಾಗದದ ಒಂದೇ ಬದಿಯಲ್ಲಿ ಸ್ಪಷ್ಟವಾಗಿ ಬರೆದಿರಬೇಕು; ಅಥವಾ ಟೈಪು ಮಾಡಿರಬೇಕು. ಲೇಖಕರು ತಮ್ಮ ಲೇಖನದೊಂದಿಗೆ ತಮ್ಮ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಿಕೊಡಬೇಕು.

೩ ಲೇಖನಕ್ಕೆ ಆವಶ್ಯಕವಾದ ಚಿತ್ರಗಳಿದ್ದರೆ ಅವನ್ನು ಚಿತ್ರಕಾರರಿಂದ ಇಂಡಿಯನ್ ಇಂಕಿನಲ್ಲಿ ಬರೆಸಿ ಕಳುಹಿಸಿಕೊಡಬೇಕು. ಇದು ಸಾಧ್ಯವಾಗದಿದ್ದರೆ ಯಾವುದಾದರೂ ಪ್ರಕಟಿತ ಪುಸ್ತಕದಲ್ಲಿರುವ ಚಿತ್ರಗಳನ್ನು ಸೂಚಿಸಬಹುದು; ಅವುಗಳಲ್ಲಿ ಬದಲಾವಣೆಗಳೇನಾದರೂ ಆವಶ್ಯವಿದ್ದರೆ ಅವನ್ನೂ ಸೂಚಿಸಬೇಕು

೪ ಸ್ವೀಕೃತವಾಗದ ಲೇಖನಗಳನ್ನು ಹಿಂದಕ್ಕೆ ಪಡೆಯಬಯಸುವವರು ಈ ಬಗ್ಗೆ ತಿಳಿಸಬೇಕಲ್ಲದೆ ಇದಕ್ಕೆ ಸಾಕಷ್ಟು ಅಂಚೆ ಚೀಟಿ ಕಳುಹಿಸಿಕೊಡಬೇಕು.

೫ ಅಚ್ಚಾದ ಲೇಖನದ ೨೫ ಪ್ರತಿಗಳನ್ನು ಅದರ ಲೇಖಕರಿಗೆ ಒದಗಿಸಲಾಗುವುದು. ಹೆಚ್ಚು ಪ್ರತಿಗಳು ಬೇಕಾಗಿದ್ದರೆ ಮೊದಲೇ ತಿಳಿಸಬೇಕು. ಅದಕ್ಕೆ ತಗಲುವ ವೆಚ್ಚವನ್ನು ಲೇಖಕರೇ ವಹಿಸಿಕೊಳ್ಳಬೇಕು.

೬ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಿಗೆ ಸಂಬಂಧಿಸಿದಂತೆ ವಾಚಕರಿಂದ ಬರುವ ವಿಚಾರಪ್ರಚೋದಕವಾದ ಪತ್ರಗಳಿಗೆ ಸ್ವಾಗತವುಂಟು. ಇವುಗಳನ್ನು ಪ್ರಕಟಿಸುವ, ಬಿಡುವ ಅಥವಾ ಸೂಕ್ತ ಬದಲಾವಣೆ ಮಾಡುವ ಸ್ವಾತಂತ್ರ್ಯ ಸಂಪಾದಕರಿಗೆ ಸೇರಿದೆ.

೭ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಕನ್ನಡ ಅಥವಾ ಇಂಗ್ಲಿಷ್ ಪುಸ್ತಕಗಳನ್ನು ವಿಮರ್ಶೆಗಾಗಿ ಕಳುಹಿಸಬಯಸುವವರು ಅವುಗಳ ಎರಡು ಪ್ರತಿ ಕಳುಹಿಸಿಕೊಡಬೇಕು.

೮ ಲೇಖನಗಳನ್ನೂ ವಿಮರ್ಶೆಗಾಗಿ ಪುಸ್ತಕಗಳನ್ನೂ ಕಳುಹಿಸುವವರು ಸಂಪಾದಕರು, ಮಾನವಿಕ ಕರ್ಣಾಟಕ, ಪ್ರಸಾರಾಂಗ, ಮಾನಸ ಗಂಗೋತ್ರಿ, ಮೈಸೂರು–೬ ಎಂಬ ವಿಳಾಸಕ್ಕೆ ಕಳುಹಿಸಬೇಕು.

ಮಾನವಿಕ ಕರ್ಣಾಟಕ

ಸಂಪುಟ ೨ ಸಂಚಿಕೆ ೨

೬

ಫೆಬ್ರುವರಿ ಸಂಚಿಕೆ

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೭೨

MANAVIKA KARNATAKA, Kannada quarterly of the University of Mysore. Volume 2, Number 2, February 1972. Edited by H. S. Krishnaswamy Iyengar and Dr. A. V. Narasimha Murthy

ಪ್ರಧಾನ ಸಂಪಾದಕರು

ಡಾ. ಹಾ. ಮಾ. ನಾಯಕ

ಸಂಪಾದಕರು

ಎಚ್. ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್

ಡಾ. ಎ. ವಿ. ನರಸಿಂಹಮೂರ್ತಿ

ಪ್ರಕಾಶಕರು

ಡಾ. ಪ್ರಭುಶಂಕರ

ಡೈರೆಕ್ಟರ್, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ

ಮುದ್ರಕರು

ಎಚ್. ನರಸಣ್ಣ

ಡೆಪ್ಯೂಟಿ ಡೈರೆಕ್ಟರ್, ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯ

ವಿಷಯ ಸೂಚಿ

ಡಾ. ಎಚ್. ಎಂ. ಸದಾಶಿವಯ್ಯ

ಮಾರ್ಗರೆಟ್ ಮೀಡ್

ಮಾರ್ಗರೆಟ್ ಮೀಡರ ಹೆಸರು ಭಾರತೀಯ ಮಾನವಶಾಸ್ತ್ರಜ್ಞರಿಗೆ ಮತ್ತು ಸಮಾಜಶಾಸ್ತ್ರಜ್ಞರಿಗೆ
ಪರಿಚಿತವಾಗಿದ್ದರೂ ಜನಸಾಮಾನ್ಯರು ಅವರ ಹೆಸರನ್ನು ಕೇಳಿದ್ದು ಅವರಿಗೆ "ಕಳಿಂಗ ಪ್ರಶಸ್ತಿ" ದೊರೆ
ತಾಗ. ಯುನೆಸ್ಕೋ ನೀಡುವ ಪ್ರಶಸ್ತಿ ಭಾರತೀಯ ರಾಜಕಾರಣಿ–ಉದ್ಯಮಿ ಬಿಜಯಾನಂದ ಪಟ್ನಾ
ಯಕ್ ಅವರು ಇಟ್ಟಿರುವ ದತ್ತಿಯ ಫಲ. ಈ ಪ್ರಶಸ್ತಿಯನ್ನು ಎರಡು ಸಾವಿರದ ಇನ್ನೂರು
ವರುಷಗಳ ಕೆಳಗೆ ಸುಪ್ರಸಿದ್ಧವಾದ ಕಳಿಂಗ ಸಾಮ್ರಾಜ್ಯದ ನೆನಪಿನಲ್ಲಿ ಇಡಲಾಗಿದೆ. ಜಯಗಳಿಸಿದ ಅನಂತರ,
ಯುದ್ಧದ ನಿಷ್ಪ್ರಯೋಜಕತೆ ಅರಿತು, ಹಿಂಸೆಯನ್ನು ತ್ಯಜಿಸಿ, ಸಹಬಾಳ್ವೆಯ ತತ್ತ್ವವನ್ನು ನಿರಂತರ
ವಾಗಿ ಶಾಸನಗಳ ಮೂಲಕ ಸಾರಿದ ಅಶೋಕ ಚಕ್ರವರ್ತಿಯ ಆಳ್ವಿಕೆಗೆ ಕಳಿಂಗ ರಾಜ್ಯ ಒಳಪಟ್ಟಿತ್ತು.
ಅಶೋಕ ಚಕ್ರವರ್ತಿಯ ಜ್ಞಾನಚಕ್ಷುಗಳನ್ನು ತೆಗೆಯಲನುಕೂಲವಾದ ಯುದ್ಧಸನ್ನಿವೇಶ ಒದಗಿದ್ದು
ಕಳಿಂಗ ರಾಜ್ಯದಲ್ಲಿಯೇ. ಆದ್ದರಿಂದ ಲೋಕಹಿತಕ್ಕೆ ಅನುಕೂಲವಾಗುವ ಯಾವ ವಿಧವಾದ ಜ್ಞಾನ
ಸಂದೇಶವಾದರೂ ಮಾನ್ಯತೆಗೆ ಅರ್ಹವಾದ್ದು ಎಂಬ ಘನ ಉದ್ದೇಶದಿಂದ, ಸರ್ವದೇಶಗಳಿಗೂ ಅನ್ವಯ
ವಾಗುವಂತೆ ಕಳಿಂಗ ಪ್ರಶಸ್ತಿಯನ್ನು ಸ್ಥಾಪಿಸಲಾಗಿದೆ. ಈ ಪ್ರಶಸ್ತಿಯ ಮೌಲ್ಯ ಹದಿನೆಂಟು ಸಾವಿರ
ರೂಪಾಯಿಗಳು. ಈ ದತ್ತಿಯನ್ನು 1951ರಲ್ಲಿ ಸ್ಥಾಪಿಸಲಾಯಿತು. ಇದುವರೆಗೆ ಪ್ರಶಸ್ತಿಯನ್ನು ಗಳಿಸಿ
ಸಿರುವ ಮಹನೀಯರು ವಿವಿಧ ದೇಶಗಳಿಗೆ ಸೇರಿದವರು. ಈ ಪ್ರಶಸ್ತಿಯನ್ನು ಯುನೆಸ್ಕೋ ಸಂಸ್ಥೆ
ನೀಡುತ್ತದೆ. ವಿಜ್ಞಾನವನ್ನು ಜನಪ್ರಿಯಗೊಳಿಸಿ, ತನ್ಮೂಲಕ ಸಾಮಾನ್ಯಜನಕ್ಕೆ ವಿಜ್ಞಾನದ ಸದುಪ
ಯೋಗದ ಅರಿವನ್ನುಂಟುಮಾಡುವುದು ಇದರ ಮೂಲೋದ್ದೇಶ. ವಿಜ್ಞಾನ ಮತ್ತು ಸಂಶೋಧನೆ
ಯನ್ನು ಜನಸಾಮಾನ್ಯರಿಗೆ ಮುಟ್ಟುವಂತೆ ಮಾಡುವಲ್ಲಿ ಯಶಸ್ಸು ಗಳಿಸಿದ ವಿಜ್ಞಾನಿಗಳಿಗೆ, ಸಂಶೋಧ
ಕರಿಗೆ, ವ್ಯಾಖ್ಯಾನಗಾರರಿಗೆ ಈ ಪ್ರಶಸ್ತಿಯನ್ನು ಕೊಡಲಾಗುತ್ತಿದೆ. ಪ್ರತಿವರ್ಷ ಮೂರು ತಜ್ಞರ
ಮಂಡಳಿ ಪ್ರಶಸ್ತಿಯನ್ನು ನಿರ್ಧರಿಸುತ್ತದೆ. ಮಂಡಳಿಯ ಸದಸ್ಯರು ಪ್ರತ್ಯೇಕವಾಗಿ ಅರ್ಹ ಅಭ್ಯರ್ಥಿಗಳ
ಪಟ್ಟಿಯನ್ನು ಸಿದ್ಧಪಡಿಸುತ್ತಾರೆ. ಆಮೇಲೆ ಆ ಮೂವರಿಗೂ ಸಮ್ಮತವಾದ ಅಭ್ಯರ್ಥಿಯನ್ನು
ಆರಿಸುತ್ತಾರೆ.

1952ರಲ್ಲಿ ಕಳಿಂಗ ಪ್ರಶಸ್ತಿಯನ್ನು ಫ್ರೆಂಚ್ ಭೌತ ವಿಜ್ಞಾನಿ ಲೂಯಿ ಡ ಬ್ರಾಗ್ಲೀ ಅವರಿಗೆ
ಕೊಡಲಾಯಿತು. ಮರುವರುಷ ಕಳಿಂಗ ಪ್ರಶಸ್ತಿಯನ್ನು ಸುಪ್ರಸಿದ್ಧ ಜೀವವಿಜ್ಞಾನಿ ಜೂಲಿಯನ್
ಹಕ್ಸ್ಲಿಯವರಿಗೆ ನೀಡಲಾಯಿತು. 1963ರಲ್ಲಿ ಭಾರತದ ಜಗಜೀತ್ ಸಿಂಗರಿಗೆ ಈ ಗೌರವ ಸಂದಿತು.
ಡಬ್ಲ್ಯು ಕೇಂಫಫರ್ಟ್, ಬಟ್ರ್ರಂಡ್ ರಸಲ್, ಜೀನ್ ರೋಸ್ಟಂಡ್, ಫ್ರೆಡ್ ಹೋಯ್ಲ್. ರಿಚಿ ಕಾಲ್ಡರ್
ಮೊದಲಾದ ಮಹನೀಯರು ಈ ಪ್ರಶಸ್ತಿಯನ್ನು ಗಳಿಸಿರುವರು. 1969ರ ಪ್ರಶಸ್ತಿ
ಆಸ್ಟ್ರಿಯದ ಕೋನ್ರಾಡ್ ಲೋರೆನ್ಸ್ ಅವರಿಗೆ ದೊರಕಿತು. 1970ರ ಪ್ರಶಸ್ತಿ ಅಮೆರಿಕದ ಮಾನವ
ಶಾಸ್ತ್ರಜ್ಞೆ ಮಾರ್ಗರೆಟ್ ಮೀಡರಿಗೆ ದೊರಕಿದೆ. ಇವರನ್ನು ಆಯ್ಕೆ ಮಾಡಿದ ಸಮಿತಿಯಲ್ಲಿ ಮೂವರು
ವಿಜ್ಞಾನಿಗಳಿದ್ದರು. ಅಭಿವೃದ್ಧಿಗೊಳ್ಳುತ್ತಿರುವ ರಾಷ್ಟ್ರಗಳ ಪರವಾಗಿ ಭಾರತದ ಡಿ. ಎಸ್. ಕೊಠಾರಿ.
ಕೈಗಾರಿಕೆಯಲ್ಲಿ ಮುಂದುವರಿದ ರಾಷ್ಟ್ರಗಳ ಪರವಾಗಿ ಡೆನ್ಮಾರ್ಕಿನ ಭೌತವಿಜ್ಞಾನಿ ಮೊಗೆನ್ಸ್ ಫಿಲ್

ಮತ್ತು ಸಮಾಜವಾದಿ ರಾಷ್ಟ್ರಗಳ ಪರವಾಗಿ ಯೂಗೋಸ್ಲಾವಿಯದ ಜೀವ ವಿಜ್ಞಾನಿ ಬ್ರಾಂಕೊ ಜೆಜ್‌ಲ್ಡಿ ಇವರು ಒಮ್ಮತದಿಂದ ಮೀಡರನ್ನು ಆಯ್ಕೆ ಮಾಡಿದರು. ಆಯ್ಕೆಯ ಒಂದು ವಿಶಿಷ್ಟವಾದ ಅಂಶವೆಂದರೆ ಈ ಮೂವರೂ ಸಿದ್ಧಪಡಿಸಿದ್ದ ಅಭ್ಯರ್ಥಿಗಳ ಪಟ್ಟಿಯಲ್ಲಿ ಸೂಚಿಸಿದ್ದ ಮೊದಲನೆಯ ಹೆಸರು ಮಾರ್ಗರೆಟ್ ಮೀಡ್. ಮಾರ್ಗರೆಟ್ ಮೀಡ್ ಈ ಪ್ರಶಸ್ತಿ ಗಳಿಸಿರುವ ಮೊದಲನೆಯ ಮಹಿಳೆ; ಅಮೆರಿಕನರಲ್ಲಿ ಆರನೆಯವರು.

ಎಡ್ವರ್ಡ್ ಷರ್‌ವುಡ್ ಮತ್ತು ಎಮಿಲಿ ಫಾಗ್ ದಂಪತಿಗಳ ಏಕ ಮಾತ್ರ ಶಿಶುವಾದ ಮಾರ್ಗರೆಟ್ ಮೀಡ್ 1901ರ ಡಿಸೆಂಬರ್ 16ರಂದು ಫಿಲಡೆಲ್ಫಿಯದಲ್ಲಿ ಜನಿಸಿದರು. ಆಕೆ ಬರ್ನಾರ್ಡ್ ಕಾಲೇಜಿನಲ್ಲಿ 1923ರಲ್ಲಿ ಬಿ.ಎ. ಪದವಿ ಪಡೆದ ಅನಂತರ, ನ್ಯೂ ಯಾರ್ಕಿನ ಕೊಲಂಬಿಯ ವಿಶ್ವವಿದ್ಯಾಲಯದಲ್ಲಿ ಅಭ್ಯಾಸ ಮಾಡಿ, 1927ರಲ್ಲಿ ಎಂ.ಎ. ಪದವಿ ಪಡೆದರು. ಎಂ.ಎ. ಪದವಿಯನ್ನು ಪಡೆಯುವ ಮೊದಲೇ ಅವರು ಕ್ಷೇತ್ರಕಾರ್ಯಗಳಲ್ಲಿ ನಿರತರಾಗಿದ್ದರು. ಅವರ ತಾಯಿ ಎಮಿಲಿ ಫಾಗ್ ಮೀಡರು ಸಂಸ್ಕೃತಿ ಸಂಪರ್ಕ ಕುರಿತು ಬರೆದಿದ್ದ ದಿ ಇಟಾಲಿಯನ್ ಆನ್ ಲ್ಯಾಂಡ್ ಎಂಬ ಪುಸ್ತಕ ಅವರಿಗೆ ಸ್ಫೂರ್ತಿ ನೀಡಿತು. ಅವರ ಮೊದಲನೆಯ ಕ್ಷೇತ್ರಕಾರ್ಯ 1925–26ರಲ್ಲಿ ಪೆಸಿಫಿಕ್ ಸಾಗರದ ಪಾಲಿನೇಷ್ಯದ ಆಗ್ನೇಯ ದ್ವೀಪಸ್ತೋಮಗಳ ಸಮೋವದಲ್ಲಿ ಪ್ರಾರಂಭವಾಯಿತು. ಈ ಕ್ಷೇತ್ರಕಾರ್ಯದ ಫಲವಾಗಿ ಅವರ ಮೊದಲನೆಯ ಪುಸ್ತಕ 1928ರಲ್ಲಿ ಪ್ರಕಟವಾಯಿತು. ಆ ಪುಸ್ತಕದ ಹೆಸರು 'ಕಮಿಂಗ್ ಆಫ್ ಏಜ್ ಇನ್ ಸಮೋವ'. ಇಂದಿಗೂ ಈ ಪುಸ್ತಕ ಮೀಡರ ಮಹತ್ತ್ವ ಕೃತಿಯೆಂದು ಪರಿಗಣಿಸಲ್ಪಟ್ಟಿದೆ. ಈ ಪುಸ್ತಕ ಪ್ರಕಟವಾದಾಗ ಮೀಡರು ಇನ್ನೂ ಸಂಶೋಧನ ವಿದ್ಯಾರ್ಥಿನಿಯಾಗಿದ್ದರೆಂಬುದನ್ನು ಸ್ಮರಿಸಿದರೆ ಅವರ ಪ್ರತಿಭೆ ಮನದಟ್ಟಾಗುತ್ತದೆ. ಇವೊತ್ತಿಗೂ ಒಂದು ವರ್ಷಕ್ಕೆ ಆ ಪುಸ್ತಕದ ಒಂದು ಲಕ್ಷ ಪ್ರತಿಗಳ ಮಾರಾಟವಾಗುವುದು ಆಕೆಯ ಜನಪ್ರಿಯ ಬರಹದ ನಿದರ್ಶನ. ಮೀಡ್ 1929ರಲ್ಲಿ ಕೊಲಂಬಿಯ ವಿಶ್ವವಿದ್ಯಾಲಯದಲ್ಲಿ ಸಾಂಸ್ಕೃತಿಕ ಮಾನವಶಾಸ್ತ್ರದಲ್ಲಿ ಡಾಕ್ಟೊರೇಟ್ ಪಡೆದರು. ನ್ಯೂಯಾರ್ಕಿನಲ್ಲಿರುವ ಅಮೆರಿಕನ್ ಮ್ಯೂಸಿಯಂ ಆಫ್ ನ್ಯಾಚುರಲ್ ಹಿಸ್ಟೊರಿಯಲ್ಲಿ ಅಸಿಸ್ಟೆಂಟ್ ಕ್ಯೂರೇಟರಾಗಿ 1929 ರಿಂದ 1942ರ ವರೆಗೆ ಪದವಿಯಲ್ಲಿದ್ದು ಅನಂತರ ಅಸೋಸಿಯೇಟ್ ಕ್ಯೂರೇಟರಾದರು. ಇಂದು ಅವರು ಆ ಸಂಸ್ಥೆಯಲ್ಲಿ ಮಾನವಕುಲಶಾಸ್ತ್ರದ ಕ್ಯೂರೇಟರಾಗಿದ್ದಾರೆ. 1956ರಲ್ಲಿ ಕೊಲಂಬಿಯ ವಿಶ್ವವಿದ್ಯಾಲಯ ಮಾರ್ಗರೆಟ್ ಮೀಡರನ್ನು ಮಾನವಶಾಸ್ತ್ರದ ಆನುಷಂಗಿಕ (ಅಡ್‌ಜಂಕ್ಟ್) ಪ್ರಾಧ್ಯಾಪಕರನ್ನಾಗಿ ನಾಮಕರಣಮಾಡಿತು. ಇದಲ್ಲದೆ ಇತರ ಅನೇಕ ವಿಶ್ವವಿದ್ಯಾಲಯಗಳಲ್ಲಿ ಅವರು ಸಂದರ್ಶನ ಪ್ರಾಧ್ಯಾಪಕರಾಗಿ ಕೆಲಸಮಾಡಿದ್ದಾರೆ. ಅವರು ಅನೇಕ ಸಂಘಸಂಸ್ಥೆಗಳ ಮತ್ತು ಪಂಡಿತ ಮಂಡಳಿಗಳ ಸಂಗಡ ಸಂಬಂಧಗಳನ್ನಿಟ್ಟುಕೊಂಡಿದ್ದಾರೆ. 1948–50ರಲ್ಲಿ ಕೊಲಂಬಿಯ ವಿಶ್ವವಿದ್ಯಾಲಯದಲ್ಲಿ ಸಮಕಾಲೀನ ಸಂಸ್ಕೃತಿಯ ವಿಚಾರವಾಗಿ ಸಂಶೋಧನೆಯ ಕಾರ್ಯಕ್ರಮವನ್ನು ನಿರೂಪಿಸುವ ಮಂಡಲಿಯ ಅಧ್ಯಕ್ಷೆಯಾಗಿದ್ದರು. ಎರಡನೆಯ ಮಹಾಯುದ್ಧದ ಕಾಲದಲ್ಲಿ 'ಕಮಿಟಿ ಆನ್ ಫುಡ್ ಹ್ಯಾಬಿಟ್ಸ್ ಆಫ್ ದಿ ನ್ಯಾಶನಲ್ ರಿಸರ್ಚ್ ಕೌನ್ಸಿಲ್'ನ ನಿರ್ವಾಹಕ ಕಾರ್ಯದರ್ಶಿಯಾಗಿದ್ದರು. 1956–57ರಲ್ಲಿ ವರ್ಲ್ಡ್ ಫೆಡರೇಷನ್ ಆಫ್ ಮೆಂಟಲ್ ಹೆಲ್ತ್‌ನ ಅಧ್ಯಕ್ಷೆಯಾಗಿದ್ದರು. 1957ರಲ್ಲಿ ಮಾನವಶಾಸ್ತ್ರದ ಪ್ರಶಸ್ತಿಯಾದ ವೈಕಿಂಗ್ ಫಂಡ್ ಪದಕ ಗಳಿಸಿದರು. 1959–60ರಲ್ಲಿ ಅಮೆರಿಕನ್ ಆಂತ್ರೊಪಲಾಜಿಕಲ್ ಅಸೋಸಿಯೇಷನಿನ ಅಧ್ಯಕ್ಷೆಯಾಗಿದ್ದರು.

ಮಾರ್ಗರೆಟ್ ಮೀಡ್ ಸುಮಾರು ಹನ್ನೆರಡು ದೀರ್ಘಕಾಲದ ಕ್ಷೇತ್ರಕಾರ್ಯಗಳಲ್ಲಿ ನಿರತರಾಗಿದ್ದರು. ಅವುಗಳಲ್ಲಿ ಅತ್ಯಂತ ಪ್ರಮುಖವಾದವು ಯಾವುವೆಂದರೆ, ಸಮೋವ (1925–26), ಅಡ್ಮಿರಾಲ್ಟಿ ದ್ವೀಪಗಳ ಮಾನಸ್ (1928–29), ನ್ಯೂಗಿನಿಯ (1931–33; 1938), ಬಾಲಿ ದ್ವೀಪ (1936 38; 1939). ಈ ಕ್ಷೇತ್ರಕಾರ್ಯಗಳ ಫಲವಾಗಿ ಹಲವಾರು ಸುಪ್ರಸಿದ್ಧ ಪುಸ್ತಕಗಳು ಹೊರಬಿದ್ದುವು.

ಮಾರ್ಗರೆಟ್ ಮೀಡರಿಗೆ ಈಗ ಎಪ್ಪತ್ತು ವರುಷಗಳು ತುಂಬಿವೆ. ಇಂದಿಗೂ ಅವರ ಬರವಣಿಗೆಗಳು ಸ್ಫೂರ್ತಿದಾಯಕ ವಿಚಾರಪ್ರಚೋದಕವಾಗಿವೆ. ಸುಮಾರು ಅರ್ಧಶತಮಾನದ ಅವರ ಬರವಣಿಗೆಗಳಲ್ಲಿ ಹೆಚ್ಚಾಗಿ ಮಾನವಶಾಸ್ತ್ರ ಮತ್ತು ಅದರ ಕ್ಷೇತ್ರಕ್ಕೆ ನಿಕಟಸಂಬಂಧಗಳುಳ್ಳ ವಸ್ತುಗಳ ವಿಚಾರದಲ್ಲಿ ಅನೇಕ ಪುಸ್ತಕಗಳನ್ನೂ ಒಂದು ಸಾವಿರಕ್ಕೂ ಮೇಲ್ಪಟ್ಟು ಲೇಖನಗಳನ್ನೂ ಬರೆದಿದ್ದಾರೆ. ಅವರ ಪುಸ್ತಕ

ಗಳಲ್ಲಿ ಮುಖ್ಯವಾದವನ್ನು ನಿರೂಪಿಸಬಹುದು. 'ಕಮಿಂಗ್ ಆಫ್ ಏಜ್ ಇನ್ ಸಮೋವ' (1928), 'ಗ್ರೋಯಿಂಗ್ ಅಪ್ ಇನ್ ನ್ಯೂ ಗಿನಿ'(1930), 'ಸೆಕ್ಸ್ ಅಂಡ್ ಟೆಂಪರಮೆಂಟ್ ಇನ್ ತ್ರೀ ಪ್ರಿಮಿಟಿವ್ ಸೊಸೈಟೀಸ್' (1935), 'ಮೇಲ್ ಅಂಡ್ ಫೀಮೇಲ್: ಎ ಸ್ಟಡಿ ಆಫ್ ಸೆಕ್ಸ್ ಇನ್ ಎ ಚೇಂಜಿಂಗ್ ವರ್ಲ್ಡ್' (1949), 'ಕೀಪ್ ಯುವರ್ ಪೌಡರ್ ಡ್ರೈ' (1949), 'ಫುಡ್ ಅಂಡ್ ಫ್ಯಾಮಿಲಿ' (1950), 'ದಿ ಸ್ಕೂಲ್ ಇನ್ ಅಮೆರಿಕನ್ ಕಲ್ಚರ್' (1964), 'ಕಲ್ಚರ್ ಅಂಡ್ ಕಮಿಟ್‌ಮೆಂಟ್: ಎ ಸ್ಟಡಿ ಆಫ್ ದಿ ಜನರೇಷನ್ ಗ್ಯಾಪ್' (1970) ಮತ್ತು 'ರೇಪ್ ಅನ್ ರೇಸ್' (1971). ಇದಲ್ಲದೆ ಅವರು ಗ್ರಿಗರಿ ಬೆಟಿಸನ್ ಜೊತೆಯಲ್ಲಿ 'ಬೆಲನೀಸ್ ಕ್ಯಾರೆಕ್ಟರ್' (1942) ಎಂಬ ಪುಸ್ತಕವನ್ನು ಬರೆದಿರುವರು. ಈ ಪುಸ್ತಕಗಳು ಮತ್ತು ಲೇಖನಗಳಲ್ಲದೆ, ಅನೇಕ ಉಪನ್ಯಾಸಗಳನ್ನು ನಿರಂತರವಾಗಿ ನೀಡುತ್ತ ಬಂದಿದ್ದಾರೆ. 1968–69ರ ಒಂದು ವರ್ಷದ ಅವಧಿಯಲ್ಲಿ 43 ಶಾಸ್ತ್ರೀಯ ಮತ್ತು 36 ಜನಪ್ರಿಯ ಉಪನ್ಯಾಸಗಳನ್ನು ಕೊಟ್ಟರು. ಇದರ ಜೊತೆಗೆ ಅವರು 31 ರೇಡಿಯೋ ಹಾಗೂ ಟೆಲಿವಿಷನ್ ಕಾರ್ಯಕ್ರಮಗಳಲ್ಲಿಯೂ ಭಾಗವಹಿಸಿದ್ದರು.

ಇಂದು ಮಾರ್ಗರೆಟ್ ಮೀಡರಿಗೆ ದೊರಕಿರುವ ಪ್ರಶಸ್ತಿಗೆ ಕಾರಣ, ಮಾನವ ಕಲ್ಯಾಣಕ್ಕಾಗಿ ಆಕೆಯ ಅವಿಶ್ರಾಂತ ಅಧ್ಯಯನ. ಅವರು ಪ್ರಮುಖವಾಗಿ ಮಾನವಶಾಸ್ತ್ರಜ್ಞೆ, ಎಂಬುದನ್ನು ಜ್ಞಾಪಕದಲ್ಲಿಟ್ಟುಕೊಂಡರೆ ಅವರ ಪಾಂಡಿತ್ಯದ ವೈಶಾಲ್ಯದ ಅರಿವುಂಟಾಗುತ್ತದೆ. ಸಾಧಾರಣವಾಗಿ ಮಾನವಶಾಸ್ತ್ರಜ್ಞರು ಪ್ರಾಚೀನ ಬುಡಕಟ್ಟುಗಳ ಸಮಾಜಜೀವನದ ವಿವಿಧ ಸಂಸ್ಥೆಗಳ ನಂಬಿಕೆಗಳು ಮತ್ತು ನಡೆವಳಿಕೆಗಳಲ್ಲಿ ಆಸಕ್ತಿ ಹೊಂದಿರುತ್ತಾರೆ. ಸರಳ ಸಮಾಜಗಳ ಕೂಲಂಕಷ ವರ್ಣನೆಯೇ ಅವರ ಗುರಿ. ಆದರೆ ಮಾರ್ಗರೆಟ್ ಮೀಡರ ಆಸಕ್ತಿ ವಿವಿಧ ಮುಖವಾಗಿದ್ದು, ಅವರ ಮನಶ್ಶಾಸ್ತ್ರದ ಆಸಕ್ತಿ ಅವರ ಮಾನವಶಾಸ್ತ್ರದ ಅಧ್ಯಯನದ ವಿಧಾನದ ಮೇಲೆ ಪ್ರಭಾವ ಬೀರಿತು. ಇದಲ್ಲದೆ ಅವರಿಗೆ ಸಾಹಿತ್ಯ ಮತ್ತು ಶಿಕ್ಷಣಗಳಲ್ಲೂ ಗಮನಾರ್ಹವಾದ ಆಸಕ್ತಿಯಿತ್ತು. ಅವರು ಸಂಸ್ಕೃತಿಯ ವಿಚಾರದಲ್ಲಿ 'ಸಂಪೂರ್ಣತೆ'ಯ ದೃಷ್ಟಿಯನ್ನು ಪ್ರತಿಪಾದಿಸಲು ಈ ವಿವಿಧ ಕ್ಷೇತ್ರಗಳ ಆಳವಾದ ಪರಿಚಯ ಸಹಾಯಕವಾಯಿತು. ಅವರ ಬರವಣಿಗೆಗಳಲ್ಲಿ ಆಧುನಿಕ ಸಾಮಾಜಿಕ ಜೀವನದ ಬಹುಮುಖ ಸಮಸ್ಯೆಗಳ ಸರಿಯಾದ ಅರಿವಿಗೆ ಸಹಾಯ ಒದಗುವುದಲ್ಲದೆ, ಆಡಳಿತಗಾರರು ಅನುಸರಿಸಬೇಕಾದ ನೀತಿಗಳ ರೂಪರೇಷೆಗಳ ಸೂಚನೆ ದೊರಕುತ್ತದೆ. ಈ ವಿಷಯಗಳ ನಿರೂಪಣೆಗೆ ಮಾತ್ರ ಈ ಲೇಖನ ಸೀಮಿತಗೊಂಡಿದೆ. ಈ ಲೇಖನದಲ್ಲಿ ಮಾರ್ಗರೆಟ್ ಮೀಡರು ಮಾನವಶಾಸ್ತ್ರ ಕ್ಷೇತ್ರದಲ್ಲೂ ಅದರ ಅಭ್ಯಾಸದ ವಿಧಾನದಲ್ಲೂ ನೀಡಿರುವ ಕೊಡುಗೆಗಳಿಗೆ ಗಮನ ಕೊಟ್ಟಿಲ್ಲ. ಸ್ಥೂಲವಾಗಿ ಹೇಳುವುದಾದರೆ, ಅವರು ಕ್ರೋಬರ್, ಬೊಯಸ್ ಮತ್ತು ರ್‍ಯಾಡ್‌ಕ್ಲಿಫ್ ಬ್ರೌನ್ ಮೊದಲಾದವರ ಪ್ರಭಾವಕ್ಕೆ ಒಳಗಾಗಿದ್ದಾರೆ. ಕ್ರಿಯಾತ್ಮಕ ಪಂಥದೃಷ್ಟಿ ಗೋಚರಿಸುತ್ತದೆ. ಎಡ್ವರ್ಡ್ ಸೇಪಿಯರನ ಪ್ರಭಾವ ಅವರ ಅಧ್ಯಯನದ ವಿಧಾನದಲ್ಲಿ ನಮಗೆ ಗೋಚರಿಸುತ್ತದೆ. ಸಂಸ್ಕೃತಿಯನ್ನು ಅರಿಯಬೇಕಾದರೆ ಒಂದು ಜನಾಂಗದ ಭಾಷೆಯನ್ನು ವಿಶ್ಲೇಷಿಸಿ, ಆ ಜನಾಂಗದ ಗುಂಪಿನ ನಡೆವಳಿಕೆಗಳಿಗೆ ಆದ್ಯ ಗಮನ ಕೊಡಬೇಕೆಂದು ಸೇಪಿಯರ್ ತಿಳಿಸಿದ. ಈ ನಡೆವಳಿಕೆಗಳಲ್ಲಿ ಸುಪ್ತ ಮಾದರಿಗಳು ಗೋಚರಿಸುವುವುದಾಗಿ ನಿರೂಪಿಸಿದ. ಈತ ನಿರೂಪಿಸಿದ ಮಾರ್ಗವನ್ನು ಒಂದು ರೀತಿಯಲ್ಲಿ ಆತನಿಗಿಂತಲೂ ಹೆಚ್ಚು ನಿಖರವಾಗಿ ಮೀಡ್ ಅನುಸರಿಸಿದರು. ಮೀಡರ ಅಧ್ಯಯನವಿಧಾನದಲ್ಲಿ ಹೆಚ್ಚು ಪ್ರಭಾವವನ್ನು ಬೀರಿದ ಮತ್ತೊಂದು ವ್ಯಕ್ತಿಯೆಂದರೆ ರೂತ್ ಬೆನಿಡಿಕ್ಟ್. ಒಂದು ಜನಾಂಗದ ಸಂಸ್ಕೃತಿಯನ್ನು ಅರಿಯಬೇಕಾದರೆ, ಆ ಜನಾಂಗದ ಭಾಷೆ ಮತ್ತು ಗುಂಪುಗಳ ನಡೆವಳಿಕೆಗಳಲ್ಲದೆ, ಅಲ್ಲಿಯ ವ್ಯಕ್ತಿಯ ಮಾನಸಿಕ ರಚನೆಯನ್ನು ಅಧ್ಯಯನ ಮಾಡುವ ಆವಶ್ಯಕತೆಯನ್ನು ರೂತ್ ಬೆನಿಡಿಕ್ಟ್ ನಿರೂಪಿಸಿದರು. ಮೀಡರನ್ನು ರೂತ್ ಬೆನಿಡಿಕ್ಟರ 'ಬೌದ್ಧಿಕ ಉತ್ತರಾಧಿಕಾರಿ' ಎಂದು ಪರಿಗಣಿಸಲಾಗಿದೆ. ಸಂಸ್ಕೃತಿಯ ಅಧ್ಯಯನ ಮಾಡುವಾಗ ಮೇಲೆ ತಿಳಿಸಿದ ಅಂಶಗಳನ್ನಲ್ಲದೆ, ಮಗುವಿನ ಆರೈಕೆ ಮತ್ತು ಪೋಷಣೆಯ ವಿಧಾನಗಳನ್ನೂ ಗಮನಿಸಿ ವ್ಯಕ್ತಿತ್ವದ ನಿರೂಪಣೆಯಲ್ಲಿ ಅವು ವಹಿಸುವ ಪಾತ್ರವನ್ನು ಅರಿಯಬೇಕೆಂದು ಮೀಡ್ ಸ್ಪಷ್ಟಪಡಿಸಿದರು. ಈ ವಿವಿಧ ಭಾವನೆಗಳನ್ನೊಳಗೊಂಡ ಒಂದು ಸಂಘಟಿತ ಅಧ್ಯಯನದ ವಿಧಾನವನ್ನು ಅನುಸರಿಸಿ ಸಂಸ್ಕೃತಿಯನ್ನು ವೀಕ್ಷಿಸಿದರು.

ಮಾರ್ಗರೆಟ್ ಮೀಡ್ ಸಂಸ್ಕೃತಿಯ ಅಧ್ಯಯನದಲ್ಲಿ ಮತ್ತೊಂದು ಭಾವನೆಯ ಪ್ರಾಮುಖ್ಯ

ವನ್ನು ಸ್ಪಷ್ಟಗೊಳಿಸಿದರು. ಪ್ರತಿಯೊಂದು ಸಂಸ್ಕೃತಿಯೂ ತನ್ನದೇ ಆದ ವಿಶಿಷ್ಟ ಮೌಲ್ಯ ಹೊಂದಿರುತ್ತದೆ. ಆದ್ದರಿಂದ ವಿವಿಧ ಸಂಸ್ಕೃತಿಗಳನ್ನು ತುಲನೆ ಮಾಡಿ, "ಇದು ಹೆಚ್ಚು, ಇನ್ನೊಂದು ಕಡಿಮೆ" ಎಂಬ ಭಾವನೆಗಳನ್ನು ಸ್ಥಿರಪಡಿಸಲು ಸಾಧ್ಯವಿಲ್ಲ. ಪ್ರತಿಯೊಂದು ಸಂಸ್ಕೃತಿಗೂ ಒಂದು ಅಸದೃಶ ಮೌಲ್ಯವಿರುತ್ತದೆ. ಈ ವಿಚಾರವನ್ನು ಹಿಂದುಳಿದ ಸಮಾಜಗಳ ಸಂಸ್ಕೃತಿಯ ಅಧ್ಯಯನದಲ್ಲಿ ಗಮನದಲ್ಲಿಡುವ ಆವಶ್ಯಕತೆಯನ್ನು ಮೀಡ್ ಸ್ಪಷ್ಟವಾಗಿ ತಿಳಿಸಿದ್ದಾರೆ.

ಮಾರ್ಗರೆಟ್ ಮೀಡ್ 'ಕಮಿಂಗ್ ಆಫ್ ಏಜ್ ಇನ್ ಸಮೋವ' ಎಂಬ ಪುಸ್ತಕದಲ್ಲಿ, ಆಗಿನ ಕಾಲದಲ್ಲಿ ಯುವಜನಾಂಗದ ವಿಚಾರದಲ್ಲಿ ವಿಶೇಷವಾಗಿ ಪ್ರಚಲಿತವಾಗಿದ್ದ ಅಭಿಪ್ರಾಯಗಳನ್ನು ಪರೀಕ್ಷಿಸಿದ ರೀತಿ ಸಾಮಾಜಿಕ ಶಾಸ್ತ್ರಪದ್ಧತಿಗಳಲ್ಲಿ ಮುಖ್ಯವಾದ ವಿಚಾರವೆಂದು ಪಾಲೀನ್ ಯಂಗ್ ಅಭಿಪ್ರಾಯಪಟ್ಟಿದ್ದಾರೆ. ಅಂದು ವಿಶೇಷವಾಗಿ ಪ್ರಚಲಿತವಾಗಿದ್ದ ಜಿ. ಸ್ಟಾನ್‌ಲೇ ಹಾಲರ ಅಭಿಪ್ರಾಯದ ಪ್ರಕಾರ, ಪ್ರತಿಯೊಂದು ಜನಾಂಗದಲ್ಲೂ ತಾರುಣ್ಯಾವಸ್ಥೆ ಒಂದು ಉರುಬಿನ ಒತ್ತಡದ ಅಥವಾ ಪ್ರತಿಬಲದ ಕಾಲ. ಆ ಗಲಾಟೆಯ ಅಥವಾ ಗೊಂದಲದ ದಿನಗಳು ಮಾನವನ ಬೆಳವಣಿಗೆ ಮತ್ತು ಅಭಿವೃದ್ಧಿಯ ದಿನಗಳಲ್ಲಿ ಅನಿವಾರ್ಯವಾದ ಸ್ಥಿತಿ ಎಂಬುದಾಗಿ ಜಿ. ಎಸ್. ಸ್ಟಾನ್‌ಲೆ ಹಾಲ್ ನಿರೂಪಿಸಿದ್ದರು. ಈ ಅಭಿಪ್ರಾಯ ಬಹು ಜನರ ಮನ್ನಣೆ ಪಡೆದಿತ್ತು. ಇದು ನೈಸರ್ಗಿಕವಾದ ಸ್ಥಿತಿ ಎಂಬ ಭಾವನೆ ಮೂಡಿ ಪಶ್ಚಾತ್ಯ ತರುಣ ಜನಾಂಗಗಳ ಅಂದಿನ ನಡೆವಳಿಕೆಗಳು ಅನಿವಾರ್ಯವೆಂಬ ಭಾವನೆ ಮೂಡಿತ್ತು. ಮೀಡ್ ಈ ಭಾವನೆಯನ್ನು ಕಾರಣಪೂರ್ವಕ ರೀತಿಯಲ್ಲಿ ಒಪ್ಪಲು ಸಿದ್ಧರಿರಲಿಲ್ಲ. ಮೀಡರು ತಾರುಣ್ಯಾವಸ್ಥೆಯ ವರ್ತನೆ ಒಂದು ಸಾಮಾಜಿಕ ಗುಂಪಿನ ಮೌಲ್ಯಗಳು, ದ್ವಂದ್ವಗಳು ಮತ್ತು ಅಭಿವ್ಯಕ್ತಿಗಳನ್ನವಲಂಬಿಸಿರುವುದಾಗಿ ಭಾವಿಸಲು ಕಾರಣಗಳಿರುವುದನ್ನು ಮನಗಂಡಿದ್ದರು. ಆದ್ದರಿಂದ ಅವರ ಪ್ರಾಕ್-ಕಲ್ಪನೆಯನ್ನು ಪರೀಕ್ಷಿಸಲು ಸಮೋವನ್ ಎಂಬ ತಾರುಣ್ಯಾವಸ್ಥೆಯಲ್ಲಿದ್ದ ಒಂದು ಸರಳ ಜನಾಂಗದ ಯುವತಿಯರ ವಿಚಾರವಾಗಿ ಅಧ್ಯಯನ ಕೈಗೊಂಡರು. ಈ ಜನಾಂಗದಲ್ಲಿಯ ಅನೇಕ ತರುಣಿಯರ ಜೀವನ ಚರಿತ್ರೆಯನ್ನು ಕೂಲಂಕಷವಾಗಿ ಅಧ್ಯಯನ ಮಾಡಿದರು. ಅಲ್ಲಿಯ ಯುವಜನರ ಜೀವನದಲ್ಲಿ ಬಹುತೇಕವಾಗಿ ಯಾವ ವಿಧವಾದ ಆಂದೋಲನವೂ ಗೋಚರಿಸಲಿಲ್ಲ. ಇದಕ್ಕೆ ಕಾರಣಗಳನ್ನು ಪರೀಕ್ಷಿಸುವ ಉದ್ದೇಶದಿಂದ ಸಮೋವನ್ ಯುವತಿಯರ ಜೀವನದ ರೀತಿನೀತಿಗಳನ್ನು ಆಳವಾಗಿ ಅಧ್ಯಯನ ಮಾಡಿದರು. ಅವರ ಅಧ್ಯಯನದಲ್ಲಿ ಒಂದು ಗಮನಾರ್ಹವಾದ ವಿಚಾರ ಬೆಳಕಿಗೆ ಬಂತು. ಸಮೋವನ್ ಸಂಸ್ಕೃತಿ ಪಾಶ್ಚಾತ್ಯಸಂಸ್ಕೃತಿಯ ರೀತಿಯಲ್ಲಿ ಯುವಜನಾಂಗವನ್ನು ಒಂದು ರೀತಿಯ ಸಾಮಾಜಿಕ ವರ್ಗವೆಂದು ಪರಿಗಣಿಸುವುದಿಲ್ಲ. ಲೈಂಗಿಕ ಒತ್ತಡ ಒಂದು ನೈಸರ್ಗಿಕ ವಿಷಯ. ಆ ಒತ್ತಡದಿಂದ ಉದ್ಭವಿಸುವ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು, ಸಮಾಜ ಅಂಗೀಕೃತ ನಡವಳಿಕೆಗಳನ್ನು ನಿರೂಪಿಸಿಸಬೇಕು. ಸಂಸ್ಕೃತಿಯ ವಿಶಾಲವಾದ ಚೌಕಟ್ಟಿನಲ್ಲಿ ಜೀವನದ ರೀತಿಯನ್ನು ಅವಲೋಕಿಸಿ, ಅವುಗಳಲ್ಲಿ ಉದ್ಭವವಾಗುವ ಯುವಜನಾಂಗದ ಸಮಸ್ಯೆಗಳಿಗೆ ಸಾಮಾಜಿಕ ಜೀವನದಲ್ಲಿ ಅದಷ್ಟು ಗೊಂದಲವಾಗದಂತೆ ಪರಿಹಾರಗಳು ರೂಪಿತವಾಗಬೇಕು. ಸಂಸ್ಕೃತಿಯ ವಿಚಾರದಲ್ಲಿ ಒಂದು ಸಂಪೂರ್ಣ ದೃಷ್ಟಿಯ ಆವಶ್ಯಕತೆಯನ್ನು ಮೀಡರ ವಿವಿಧ ಅಧ್ಯಯನಗಳು ಸ್ಪಷ್ಟವಾಗಿ ನಿರೂಪಿಸಿವೆ. "ವಿಶಾಲವಾದ ಅರ್ಥದಲ್ಲಿ ಹೇಳುವುದಾದರೆ, ಸಂಸ್ಕೃತಿಯೆಂಬುದು ಜೀವನದ ವಿಧಾನ." ಈ ವಿಧಾನದಲ್ಲಿರುವ ವಿವಿಧ ಅಂಶಗಳ ವ್ಯತ್ಯಾಸಗಳನ್ನು ಜೀವನಕ್ಕೆ ಪೂರಕವಾದವುಗಳೆಂದು ಭಾವಿಸಿದಾಗಲೇ ನಮಗೆ ಒಂದು ಜನಾಂಗದ ಜೀವನದ ಅರ್ಥ ಗೋಚರಿಸುತ್ತದೆ. ಜನಾಂಗದ ಜೀವನದ ವೈವಿಧ್ಯದ ಒಂದು ಸಂಪೂರ್ಣ ದೃಷ್ಟಿ ತಳೆಯಲು ಸಂಸ್ಕೃತಿಯ ಹಿನ್ನೆಲೆ ಸಹಾಯಕವಾಗುತ್ತದೆ. ಆದರೆ ಇದರಿಂದ ಮಾನವಶಾಸ್ತ್ರ ಕೇವಲ ಒಂದು ನಾಗರಿಕತೆಯ ಸಂಸ್ಕೃತಿಯ ಮಾದರಿಯ ಅಭ್ಯಾಸವಾಗಕೂಡದು. ಮಾನವಶಾಸ್ತ್ರ ವ್ಯಕ್ತಿಯನ್ನು ಕೂಲಂಕಷವಾಗಿ ಅವಲೋಕಿಸಬೇಕು. ಆಗ ವ್ಯಕ್ತಿಯ ಅಪೂರ್ಣ ಗುಣಗಳ ಮತ್ತು ಮಾನಸಿಕ ಸ್ವಭಾವಗಳ ಅರಿವುಂಟಾಗಿ, ಅವು ಹೇಗೆ ಸಂಸ್ಕೃತಿಯನ್ನು ರೂಪಿಸಲು ಸಾಧನಗಳಾಗುತ್ತವೆ ಎಂಬುದು ತಿಳಿಯುತ್ತದೆ. ಸಾಧಾರಣವಾಗಿ ಸಂಸ್ಕೃತಿಯ ಅಧ್ಯಯನದಲ್ಲಿ ನಿರತರಾಗಿರುವ ಮಾನವಶಾಸ್ತ್ರಜ್ಞರು ಸಂಸ್ಕೃತಿಯ ಪೂರ್ಣತೆಗೆ ಮಾರುಹೋಗಿ, ವ್ಯಕ್ತಿ ಜೀವನದಲ್ಲಿ ನಡೆಯುವ ಮಾನಸಿಕ ಆಂದೋಲನಗಳಿಗೆ ಹೆಚ್ಚು ಗಮನ ಹರಿಸುವುದಿಲ್ಲ. ಮೀಡರ ಬರಹಗಳಲ್ಲಿ ವ್ಯಕ್ತಿಯ ಮಾನಸಿಕ ಪ್ರಕ್ರಿಯೆಗಳಿಗೆ ವಿಶೇಷ



ಮಾರ್ಗರೆಟ್ ಮೀಡ್ : ಆದಿಮಾನವರ ಕಲಾವಸ್ತುವೊಂದರ ಪ್ರಾಮುಖ್ಯವನ್ನು
ವಿವರಿಸುತ್ತಿದ್ದಾರೆ

[ಕೃಪೆ: ಯು.ಎಸ್.ಐ.ಎಸ್]

ವಾಗಿ ಗಮನ ಕೊಟ್ಟು, ಅವುಗಳನ್ನು ಸಮಾಜದ ವಿವಿಧ ಶಕ್ತಿಗಳು ರೂಪಿಸುವ ವಿಧಾನಗಳನ್ನು ಕೂಲಂಕಷವಾಗಿ ಚರ್ಚಿಸಿದ್ದಾರೆ.

ಇಂದು ವಿಜ್ಞಾನದ ಮುನ್ನಡೆಯ ಫಲವಾಗಿ ಕೈಗಾರಿಕೆ ಮತ್ತು ವ್ಯವಸಾಯಕ್ಷೇತ್ರಗಳಲ್ಲಿ ಕ್ರಾಂತಿದಾಯಕ ಬದಲಾವಣೆಗಳಿಂದ ಹೆಚ್ಚುಹೆಚ್ಚಾಗಿ ರಾಷ್ಟ್ರದ ಉತ್ಪತ್ತಿಯನ್ನು ಅಭಿವೃದ್ಧಿಗೊಳಿಸಿ ಜನಜೀವನದ ಮಟ್ಟವನ್ನು ಉತ್ತಮಪಡಿಸಿ ತನ್ಮೂಲಕ ಪ್ರಗತಿ ಸಾಧಿಸುವುದು ಎಲ್ಲ ರಾಷ್ಟ್ರಗಳ ಉದ್ದೇಶವಾಗಿದೆ. ಯಂತ್ರವಿಜ್ಞಾನದ ಬೆಳವಣಿಗೆಯ ಫಲವಾಗಿ ಮನುಷ್ಯ ಸಾಧಿಸುವ ಆರ್ಥಿಕ ಅಭಿವೃದ್ಧಿ ವಿವಿಧ ಸಮಾಜಗಳ ಮೇಲೆ ಒಂದೇ ರೀತಿಯ ಪರಿಣಾಮದಿಂದ ಕೂಡಿರುವುದಿಲ್ಲ. ಅಭಿವೃದ್ಧಿ ರಾಷ್ಟ್ರಗಳು. ಅಭಿವೃದ್ಧಿ ಪಥದಲ್ಲಿರುವ ರಾಷ್ಟ್ರಗಳು ಮತ್ತು ಆರ್ಥಿಕವಾಗಿ ಹಿಂದುಳಿದ ರಾಷ್ಟ್ರಗಳು ಇವುಗಳ ಸಮಾಜಗಳ ಮೇಲೆ ಯಂತ್ರ ವಿಜ್ಞಾನದ ಪರಿಣಾಮಗಳು ಒಂದೇ ರೀತಿಯಾಗಿರದೆ ಹಲವು ಸಾಮಾಜಿಕ ಸಮಸ್ಯೆಗಳಿಗೆ ಎಡೆಕೊಟ್ಟಿವೆ. ಇದಲ್ಲದೆ ಹಿಂದುಳಿದ ಮತ್ತು ಅಭಿವೃದ್ಧಿ ಪಥದಲ್ಲಿರುವ ರಾಷ್ಟ್ರಗಳಿಗೆ ತಾಂತ್ರಿಕ ಜ್ಞಾನದ ವಿವಿಧ ಅಂಶಗಳ ಸಹಾಯ ಅಭಿವೃದ್ಧಿ ಪಡೆದ ರಾಷ್ಟ್ರಗಳಿಂದ ದೊರೆಯುತ್ತಿವೆ. ಇವುಗಳ ಪರಿಣಾಮ ಸಂಪೂರ್ಣವಾಗಿ ಸುಖದಾಯಕವಾಗಿಲ್ಲ. ಆಧುನಿಕ ತಾಂತ್ರಿಕ ವಿಧಾನಗಳ ಸಹಾಯದಿಂದ ಕೈಗಾರಿಕಾ ಪಥದಲ್ಲಿ ಸಾಗುತ್ತಿರುವ ಸಮಾಜಗಳಲ್ಲಿ. ಸಾಮಾಜಿಕ ಸಂಬಂಧಗಳಲ್ಲಿ ವಿವಿಧ ರೀತಿಯ ಜಿಕ್ಕಟ್ಟುಗಳು ಕಾಣುರುತ್ತಿವೆ. ಇದಲ್ಲದೆ ವ್ಯಕ್ತಿಯಲ್ಲಿ ಉದ್ಭವಿಸುವ ಉದ್ವೇಗಗಳನ್ನು ಅರಿಯುವ ಅವಶ್ಯಕತೆ ಇದೆ. ಇವೆಲ್ಲವನ್ನೂ ಕೂಲಂಕಷವಾಗಿ ಪರೀಕ್ಷಿಸುವ ದೃಷ್ಟಿಯಿಂದ ಯುನೆಸ್ಕೋದ ವರ್ಲ್ಡ್ ಫೆಡರೇಷನ್ ಆಫ್ ಮೆಂಟಲ್ ಹೆಲ್ತಿನ ಕೋರಿಕೆಯ ಪ್ರಕಾರ. ಮಾರ್ಗರೆಟ್ ಮೀಡರ ನೇತೃತ್ವದಲ್ಲಿ ಒಂದು ಸಮೀಕ್ಷೆಯನ್ನು ಕೈಗೊಳ್ಳಲಾಯಿತು. ಇದರ ಫಲವಾಗಿ ಮಾರ್ಗರೆಟ್ ಮೀಡ್ ವಿವಿಧ ದೇಶಗಳ ಪ್ರಾಜ್ಞರ ಬರವಣಿಗೆಗಳನ್ನೊಳಗೊಂಡ ಒಂದು ಅಮೂಲ್ಯವಾದ ಕೈಪಿಡಿಯನ್ನು ತಯಾರಿಸಿದರು. ಅದರ ಹೆಸರು 'ಕಲ್ಚರಲ್ ಪ್ಯಾಟರ್ನ್ಸ್ ಅಂಡ್ ಟೆಕ್ನಿಕಲ್ ಚೇಂಜ್.' ಈ ವಿವಿಧ ಅಧ್ಯಯನಗಳಲ್ಲಿ ಮಾನಸಿಕ ಆರೋಗ್ಯದೃಷ್ಟಿ ಹೆಚ್ಚು ಪ್ರಾಮುಖ್ಯ ತಾಳಿದೆ. ಇಂಟರ್‌ನ್ಯಾಷನಲ್ ಕಾಂಗ್ರೆಸ್ ಆಫ್ ಹೆಲ್ತಿನ ಪ್ರಕಾರ ಮಾನಸಿಕ ಆರೋಗ್ಯದ ಮೂಲಭೂತ ಗುರಿ "ಒಂದು ವಿಶ್ವದಲ್ಲಿ ಮಾನವರು ಒಟ್ಟಿಗೆ ಬಾಳುವ ರೀತಿಗೆ ಸಹಾಯ ಮಾಡುವುದು." ತಾಂತ್ರಿಕ ಬದಲಾವಣೆಗಳ ಸಮಸ್ಯೆಗಳು ಕೇವಲ ಆಧುನಿಕ ಕಾಲಕ್ಕೆ ಸೀಮಿತವಾದವಲ್ಲ. ಮಾನವ ಹೊಸಹೊಸ ಉಪಕರಣಗಳನ್ನು ಕಂಡುಹಿಡಿದಾಗ ಸಾಮಾಜಿಕ ಸಂಬಂಧಗಳಲ್ಲಿ ಅನಿವಾರ್ಯವಾದ ಬದಲಾವಣೆಗಳು ತಲೆದೋರಿ ವ್ಯಕ್ತಿಯ ಜೀವನದಲ್ಲಿ ನಾನಾ ಬಗೆಯ ಉದ್ವೇಗಗಳು ಕಾಣಿಸಿಕೊಂಡಿವೆ. ಆ ಸಮಾಜ ಆ ಸಮಸ್ಯೆಗಳನ್ನು ತನ್ನ ಸಂಸ್ಕೃತಿಯ ಹಿನ್ನೆಲೆಯಲ್ಲಿ ನಿವಾರಿಸುವ ಉಪಾಯಗಳನ್ನು ರೂಪಿಸುವಂತಾಗಬೇಕು. ಇದಕ್ಕೆ ಜನಜೀವನ ವಿಧಾನದ ಸಂಪೂರ್ಣ ಅರಿವು ಅಗತ್ಯ. ಇಂದು ಒಂದು ಹೊಸ ವಿಚಾರವೇನೆಂದರೆ. ತಾಂತ್ರಿಕ ಬದಲಾವಣೆಗಳು ಅಂತರರಾಷ್ಟ್ರೀಯ ಮಟ್ಟದಲ್ಲಿ ಅಂತರರಾಷ್ಟ್ರೀಯ ಸಂಸ್ಥೆಯ ಸಹಾಯದಿಂದ ಜರಗುತ್ತಿವೆ. ತಾಂತ್ರಿಕ ಶಿಕ್ಷಣದಲ್ಲಿ ಮುಂದುವರಿದ ರಾಷ್ಟ್ರಗಳ ಅನೇಕ ತಜ್ಞರು ಹಿಂದುಳಿದ ಮತ್ತು ಅಭಿವೃದ್ಧಿಗೊಳ್ಳುತ್ತಿರುವ ರಾಷ್ಟ್ರಗಳಿಗೆ ತಮ್ಮ ಅಮೂಲ್ಯವಾದ ಸಹಾಯ ನೀಡುತ್ತಿದ್ದಾರೆ. ಈ ತಜ್ಞರ ಸಂಸ್ಕೃತಿಗೂ ಅವರು ಕೆಲಸ ಮಾಡುತ್ತಿರುವ ಸಮಾಜದ ಸಂಸ್ಕೃತಿಗೂ ವ್ಯತ್ಯಾಸವಿರುವುದು ಸಹಜ. ಅವರು ಆ ಸಮಾಜದ ಸಂಸ್ಕೃತಿಯ ಹಿನ್ನೆಲೆಯನ್ನರಿತರೆ, ಆಗ ಅವರ ಕಾರ್ಯನಿರ್ವಹಣೆ ಸುಲಭವಾಗುತ್ತದೆ. ಆದ್ದರಿಂದ ಆ ಸಮಾಜದ ಮುಂದಾಳುಗಳ ಸಲಹೆಗಳನ್ನು ಸ್ವೀಕರಿಸಬೇಕು. ಆದರೆ ಈ ಸಂದರ್ಭಗಳಲ್ಲಿ ಮೀಡರು ತಿಳಿಸಿರುವಂತೆ ಇನ್ನೊಂದು ಸಮಸ್ಯೆ ಉದ್ಭವಿಸುವ ಸಂಭವವೊದಗಬಹುದು. ಆ ಸಮಾಜದ ಮುಂದಾಳುಗಳು ಆರ್ಥಿಕ ಅಭಿವೃದ್ಧಿಯನ್ನೇ ಪರಮ ಗುರಿಯನ್ನಾಗಿಟ್ಟುಕೊಂಡು, ಆ ಸಮಾಜದಲ್ಲಿರುವ ಅಜ್ಞಾನ ಮತ್ತು ಜಡತನವನ್ನು ಹೋಗಲಾಡಿಸುವ ಉದ್ದೇಶದಿಂದ. ಅಲ್ಲಿಯ ಜನರ ನಂಬಿಕೆಗಳನ್ನು ಮೂಢನಂಬಿಕೆಗಳೆಂದು ಮೂಲೆಗೊತ್ತರಿಸಿ. ಆತುರದಿಂದ ಬದಲಾವಣೆಗಳನ್ನು ರೂಪಿಸಲು ಹೊರಡಬಹುದು. ಇದಕ್ಕೆ ಹೊರಗಿನ ತಜ್ಞರು ತಮ್ಮ ವಸ್ತುನಿಷ್ಠೆಯ ದೃಷ್ಟಿಯ ಪ್ರಭಾವವನ್ನು ಬೀರಿ ತಾಳ್ಮೆಯಿಂದ ಎಲ್ಲ ವಿಷಯಗಳನ್ನೂ ಪರಿಶೀಲಿಸುವ ಮನೋಭಾವವನ್ನು ಪ್ರಚೋದಿಸಬೇಕು. ಮೀಡರ ಪ್ರಕಾರ 'ಸಾಂಸ್ಕೃತಿಕ ಸಾಪೇಕ್ಷತೆ'—ಒಂದು ಸಮಾಜದ ನಡವಳಿಕೆಗಳು. ನಂಬಿಕೆಗಳು ಮತ್ತು ಮೌಲ್ಯಗಳು. ಆ ಸಮಾಜದ ಸಂಪೂರ್ಣ

ಸಂಸ್ಕೃತಿಯ ದೃಷ್ಟಿ ಇರಬೇಕು. ಇದರಿಂದ ಎಲ್ಲ ಸಂಸ್ಕೃತಿಗಳೂ ಒಂದೇ ರೀತಿಯಲ್ಲಿ ಸಮಗ್ರವಾಗಿರುವುವೆಂದು ಭಾವಿಸಬಾರದು. ಒಂದು ಸಮಾಜದ ಸಂಸ್ಕೃತಿಯ ಪೂರ್ಣತೆಯ ಅರಿವು, ನಾವು ಆಚರಣೆಗೆ ತರುವ ಬದಲಾವಣೆಯ ಪರಿಣಾಮವನ್ನು ಸ್ಪಷ್ಟಪಡಿಸುತ್ತದೆ. ಹಲವು ಬದಲಾವಣೆಗಳು ಸಂಸ್ಕೃತಿಯ ಒಂದು ಅಂಶಕ್ಕೆ ಸೀಮಿತವಾಗಿ, ಮಿಕ್ಕ ಅಂಶಗಳ ಮೇಲೆ ಯಾವ ವಿಧವಾದ ಅನಪೇಕ್ಷಿತ ಬದಲಾವಣೆಗಳನ್ನೂ ಉಂಟುಮಾಡದೆ ಇರಬಹುದು. ಒಂದು ಸಾರಿ ಒಬ್ಬ ವ್ಯವಸಾಯತಜ್ಞ ಬೇರೊಂದು ದೇಶಕ್ಕೆ ಸಲಹೆಗಳನ್ನು ನೀಡಲು ಹೋದ. ಆತನ ವ್ಯವಸಾಯದ ಅಭಿವೃದ್ಧಿಯ ದೃಷ್ಟಿಯಿಂದ ಒಂದು ವ್ಯವಸಾಯದ ಘಟಕವನ್ನು ಆದಷ್ಟು ದೊಡ್ಡದನ್ನಾಗಿ ಮಾಡುವ ಯೋಜನೆ ಹೊಂದಿದ್ದ. ಆ ಯೋಜನೆಯನ್ನು ಕಾರ್ಯಗತ ಮಾಡುವಾಗ ಆತ ಆ ಜನಾಂಗದ ಸಂಸ್ಕೃತಿಯಲ್ಲಿದ್ದ ಹಲವಾರು ಅಂಶಗಳನ್ನು ಪರಿಶೀಲಿಸುವ ಅಗತ್ಯವನ್ನು ಮನಗಂಡ. "ಅಲ್ಲಿಯ ಗೋರಿಗಳು ಮತ್ತು ದೆವ್ವಗಳು, ಫಲೋತ್ಪಾದಕ ವೃಕ್ಷಗಳು, ಪೂಜಾಗೃಹಗಳು, ಬಳುವಳಿಗಳು, ಲೈಂಗಿಕ ಅಭ್ಯಾಸಗಳು, ಹುಟ್ಟದೆ ಇರುವ ಶಿಶುಗಳು, ಉತ್ತರಾಧಿಕಾರ, ಆಸ್ತಿಯ ಕಾನೂನುಗಳು, ದಾರಿಯ ಹಕ್ಕುಗಳು ಮತ್ತು 'ಹಿಂದಿನ ಬೆಳಕುಗಳ' ಮೂಲಭಾವವನ್ನು ಅರಿತ ಮೇಲೆ, ಆತ ತನ್ನ ಕಾರ್ಯಾಚರಣೆಯಲ್ಲಿ ಎದುರಾಗಬಹುದಾದ ಅಡಚಣೆಗಳ ಸ್ವರೂಪವನ್ನು ತಿಳಿದುಕೊಂಡ". ಹೀಗೆ ಸಂಸ್ಕೃತಿಯ ವಿವಿಧ ಅಂಶಗಳ ಅರಿವು ನಮ್ಮ ಯೋಜನೆಗಳ ಯಶಸ್ಸಿಗೆ ಸಹಾಯಕವಾಗುವ ಜ್ಞಾನವನ್ನು ಒದಗಿಸುತ್ತದೆ. ಹೀಗೆ ಈ ಕೈಪಿಡಿಯ ಸಹಾಯದಿಂದ ಮಾರ್ಗರೆಟ್ ಮೀಡರು ತಾಂತ್ರಿಕ ಬದಲಾವಣೆಗಳಿಂದ ಉದ್ಭವಿಸುವ ವಿವಿಧ ಸಮಸ್ಯೆಗಳ ಸ್ವರೂಪವನ್ನು ನಮಗೆ ತಿಳಿಸಿದ್ದಾರೆ. ಆ ಸಮಸ್ಯೆಗಳು ಹೇಗೆ ಬಹುಮುಖವಾದವೋ, ಅವುಗಳ ನಿವಾರಣೆಯ ವಿಧಾನಗಳೂ ಬಹುಮುಖವಾದವು. ಈ ಸಮಸ್ಯೆಗಳ ನಿವಾರಣೆಗೆ ಆ ಸಮಾಜದ ಜೀವನದ ರೀತಿಯನ್ನು—ಸಂಸ್ಕೃತಿಯನ್ನು—ಸರಿಯಾಗಿ ತಿಳಿದುಕೊಳ್ಳುವ ಅಗತ್ಯವನ್ನು ಮೀಡರು ಹೇಳಿದ್ದಾರೆ.

ಹೆಂಗಸರ ಸ್ಥಾನದ ಬಗ್ಗೆ ಪಾಶ್ಚಾತ್ಯ ಸಂಸ್ಕೃತಿ ಅನುಸರಿಸಿರುವ ಅನ್ಯಾಯವನ್ನು ಮಾರ್ಗರೆಟ್ ಮೀಡ್ ತೋರಿಸಿದ್ದಾರೆ. ಆಕೆಯ ಸ್ಥಾನದ ನಿರೂಪಣೆಯಲ್ಲಿ ಅನುಸರಿಸಬೇಕಾದ ತತ್ತ್ವವನ್ನು ಸೂಚಿಸಿದ್ದಾರೆ. "ಚಾರಿತ್ರಿಕವಾಗಿ ವೀಕ್ಷಿಸಿದರೆ ನಮ್ಮ ಸಂಸ್ಕೃತಿ ತನ್ನ ಸಂಪದ್ಭರಿತ ಮತ್ತು ವೈವಿಧ್ಯಪೂರಿತ ಮೌಲ್ಯಗಳ ನಿರ್ಮಾಣವನ್ನು ಕೃತಕ ವ್ಯತ್ಯಾಸಗಳ ಮೇಲೆ ನಿರೂಪಿಸಿದೆ. ಈ ಕೃತಕ ವ್ಯತ್ಯಾಸಗಳಲ್ಲಿ ಮುಖ್ಯವಾದುದು ಲೈಂಗಿಕ ವ್ಯತ್ಯಾಸ." ಆದ್ದರಿಂದ ಮಾನವರ ವೈವಿಧ್ಯಪೂರ್ಣ ಸಂಸ್ಕೃತಿಯನ್ನು ನಿರೂಪಿಸಬೇಕಾದರೆ, ಮಾನವನಲ್ಲಿರುವ ಅನಂತ ವ್ಯತ್ಯಾಸಗಳನ್ನು ಗಣನೆಗೆ ತಂದುಕೊಂಡು ಅವುಗಳನ್ನು ಸದುಪಯೋಗಪಡಿಸಿಕೊಳ್ಳಬೇಕು. ಈ ಉದ್ದೇಶ ಸಾಧನೆಗೆ ನಿರಾಕಾರದ ಅಸಹಜ ಕೃತಕ ವ್ಯತ್ಯಾಸಗಳನ್ನು ಮಾಡಕೂಡದು.

ಮಾನವಶಾಸ್ತ್ರಜ್ಞರು ಸಾಧಾರಣವಾಗಿ ಪ್ರಾಚೀನ ಬುಡಕಟ್ಟುಗಳ, ಆದಿವಾಸಿಗಳ ಮತ್ತು ಸರಳ ಸಮಾಜಗಳ ಅಧ್ಯಯನಗಳಲ್ಲಿ ನಿರತರಾಗಿ, ಸಂಪ್ರದಾಯಶರಣ ಪ್ರವೃತ್ತಿಗಳಾಗಿ, ಆಧುನಿಕ ಜೀವನದ ಸಮಸ್ಯೆಗಳಿಗೆ ಹೆಚ್ಚಾಗಿ ಗಮನ ಕೊಡುವ ಮನೋಭಾವ ಹೊಂದಿರುವುದು ಬಹಳ ವಿರಳ. ಮಾರ್ಗರೆಟ್ ಮೀಡರು ಆಧುನಿಕ ಸಮಸ್ಯೆಗಳ ಪರಿಶೀಲನೆಯಲ್ಲಿ ಸಲ್ಲಿಸಿರುವ ಕೊಡುಗೆಯನ್ನು ಕಂಡಿದ್ದೇವೆ. ಕೆಲವು ಸಾರಿ ಅವರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ಸಮಾಜ ಮುಂದೆ ಎದುರಿಸಬೇಕಾದ ಸಮಸ್ಯೆಗಳನ್ನು ಗಮನಕ್ಕೆ ತಂದುಕೊಂಡು, ಮುಂದಿನ ಪೀಳಿಗೆಯನ್ನು ಸರಿಯಾದ ರೀತಿಯಲ್ಲಿ ತಯಾರಿಸುವ ಅಗತ್ಯವನ್ನು ತಿಳಿಸಿದ್ದಾರೆ. ಈ ವಿಚಾರದಲ್ಲಿ ಶಿಕ್ಷಣ ರೀತಿಯ ಬದಲಾವಣೆ ಅಗತ್ಯವನ್ನು 'ದಿ ಸ್ಕೂಲ್ ಇನ್ ಅಮೆರಿಕನ್ ಕಲ್ಚರ್' ಎಂಬ ಸಣ್ಣ ಹೊತ್ತಗೆಯಲ್ಲಿ ನಿರೂಪಿಸಿದ್ದಾರೆ. ಇಂದಿನ ಉಪಾಧ್ಯಾಯರ ಆದ್ಯ ಕರ್ತವ್ಯ ಇಂದಿನ ಮಕ್ಕಳಲ್ಲಿ ಮುಂಬರುವ, ಗೊತ್ತಿಲ್ಲದ ಪ್ರಪಂಚಕ್ಕೆ ಅನುವಾಗುವ ಮನೋಭಾವವನ್ನು ಪ್ರಚೋದಿಸುವುದು. ಆಧುನಿಕ ಜೀವನದ ನಾನಾ ಮುಖಗಳನ್ನು ವೀಕ್ಷಿಸಿದರೆ, ಅವು ಆಶಾದಾಯಕವಾಗಿಲ್ಲ. ನಾವು ಇಂದು ನಮ್ಮನ್ನು ಕಾಡುತ್ತಿರುವ ವಿವಿಧ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಹಿಡಿಯುವುದರಲ್ಲಿ ವಿಫಲರಾಗಿದ್ದೇವೆ. ಹೊಸ ಪ್ರಪಂಚದಲ್ಲಿ ಉದ್ಭವಿಸುವ ಸಮಸ್ಯೆಗಳನ್ನು ಎದುರಿಸಲು ಹೊಸ ಮಾರ್ಗವನ್ನು ಕಂಡುಹಿಡಿಯಬೇಕು. ಮೀಡರ ಪ್ರಕಾರ ಈ

ಪರಿಹಾರ ನಮ್ಮ ಇಂದಿನ ಯುವಜನಾಂಗಕ್ಕೆ 'ಹೇಗೆ ಯೋಚಿಸಬೇಕು' ಎಂಬುದನ್ನು ತಿಳಿಯಪಡಿಸಬೇಕು. ಯೋಚಿಸುವ ವಿಧಾನದ ಅರಿವುಂಟಾದರೆ, ಅವರು ಹೊಸ ಪ್ರಪಂಚದ ಸಮಸ್ಯೆಗಳನ್ನು ಎದುರಿಸುವ ಹೊಸ ವಿಧಾನಗಳನ್ನು ಕಂಡುಹಿಡಿಯುವರೆಂಬ ನಂಬುಗೆಯನ್ನು ಮೀಡರು ಹೊಂದಿದ್ದಾರೆ.

ಮಾರ್ಗರೆಟ್ ಮೀಡರು ಸುಮಾರು ಐವತ್ತು ವರ್ಷಗಳ ಕಾಲ ನಿರಂತರವಾಗಿ ಮಾನವನ ಜೀವನವನ್ನು ಉತ್ತಮಪಡಿಸುವ ಉದ್ದೇಶದಿಂದ ಮಾನವಜೀವನದ ವಿವಿಧ ಮುಖಗಳ ಅಧ್ಯಯನ ವನ್ನು ಆಳವಾಗಿ ನಡೆಸಿದ್ದಾರೆ. ಅವರ ಬಹುಮುಖ ನೈಪುಣ್ಯ ಆಧುನಿಕ ಜೀವನದ ಸಮಸ್ಯೆಗಳನ್ನು ಗುರುತಿಸಲು, ಅವುಗಳಿಗೆ ಪರಿಹಾರಗಳನ್ನು ಹುಡುಕುವ ಮಾರ್ಗಗಳನ್ನು ಸೂಚಿಸುತ್ತದೆ. ಈ ಮಹತ್ತರ ವಾದ ಕಾರ್ಯಕ್ರಮದಲ್ಲಿ ಮಾರ್ಗರೆಟ್ ಮೀಡರ ಕಾಣಿಕೆ ಅಮೂಲ್ಯವಾದುದು.

ತಲೆಮಾರುಗಳ ಅಂತರ

ಕಿರಿಯ ತಲೆಮಾರಿನವರ ತಿಳಿವಿನ ಬಗೆಯನ್ನು ತಿಳಿದಿರುವ ಹಿರಿಯ ಜನ ಇಂದು ಎಲ್ಲೂ ಇಲ್ಲ. ಜನಸಂಪರ್ಕವಿಲ್ಲದ ಅತ್ಯಂತ ಸರಳವಾದ ಸಮಾಜಕ್ಕೆ ಸಂಬಂಧಿಸಿದಂತೆ ಕೂಡ ಈ ಮಾತು ನಿಜ. ಹಿಂದೆ ಹೀಗಿರಲಿಲ್ಲ. ತಮ್ಮ ಮಕ್ಕಳಿಗಿಂತ ಹೆಚ್ಚು ತಿಳಿದ ಕೆಲವರಾದರೂ ಯಾವಾಗಲೂ ಇದ್ದೇ ಇರುತ್ತಿದ್ದರು. ತಾವು ಯಾವ ಸಾಂಸ್ಕೃತಿಕ ವ್ಯವಸ್ಥೆಯೊಳಗೆ ಬೆಳೆದು ಬಂದಿದ್ದರೋ ಆ ವ್ಯವಸ್ಥೆಯೇ ಅವರಿಗೆ ಅನುಭವ ದೊರಕಿಸಿಕೊಡುತ್ತಿತ್ತು. ಈ ದೃಷ್ಟಿಯಿಂದ ಅವರು ತಮ್ಮ ಮಕ್ಕಳಿಗಿಂತ ಮಿಗಿಲಾಗಿದ್ದರು. ಆದರೆ ಇಂದು ಅಂಥವರು ಯಾರೂ ಇಲ್ಲ. ಹಿಂದಿದ್ದಂತೆ ಈಗ ತಂದೆತಾಯಿಯರಿಂದ ತಮ್ಮ ಮಕ್ಕಳಿಗೆ ಮಾರ್ಗದರ್ಶನ ದೊರಕುವುದಿಲ್ಲ. ಮಾತ್ರವಲ್ಲ: ಈಗ ಮಾರ್ಗದರ್ಶಿಗಳೇ ಇಲ್ಲ. ಸ್ವದೇಶದಲ್ಲೇ ಆಗಲಿ. ಪರದೇಶದಲ್ಲೇ ಆಗಲಿ ಅಂಥವರಿಗಾಗಿ ಅನ್ವೇಷಿಸಿ ಫಲವಿಲ್ಲ. ಕಳೆದ ಇಪ್ಪತ್ತು ವರ್ಷಗಳಲ್ಲಿ ಹುಟ್ಟಿ ಬೆಳೆದಂಥವರು ತಮ್ಮ ಸುತ್ತಣ ಪ್ರಪಂಚದ ಬಗ್ಗೆ ಏನು ಅರಿತುಕೊಂಡಿದ್ದಾರೆಂಬುದನ್ನು ಬಲ್ಲಂಥ ಹಿರಿಯರೇ ಈಗ ಇಲ್ಲ.

ಈಗಿನ ಹಿರಿಯರ ತಲೆಮಾರು ಕೂಡ ವಿಲಕ್ಷಣ ರೀತಿಯಲ್ಲಿ ಪೃಥಕ್ಕಾಗಿ ಬೆಳೆದಂಥದೇ. ಆದ್ದರಿಂದ ಅವರು ಕೂಡ ಕಿರಿಯರಿಗಿಂತ ವಿಶಿಷ್ಟವಾದ ಜನ. ಬೇರೆ ಯಾವ ತಲೆಮಾರಿನ ಜನರೂ ಈ ತಲೆಮಾರಿನವರಂತೆ ಕ್ಷಿಪ್ರ ಬದಲಾವಣೆಗಳನ್ನು ಕಂಡಿಲ್ಲ. ಅನುಭವಿಸಿಲ್ಲ. ಮೈಗೂಡಿಸಿಕೊಂಡಿಲ್ಲ: ಶಕ್ತಿಮೂಲಗಳನ್ನೂ ಸಂಪರ್ಕ ಸಾಧನಗಳನ್ನೂ ಮಾನವತೆಯ ವ್ಯಾಪ್ತಿಯನ್ನೂ ತಮ್ಮ ಪರಿಶೋಧನೆಗೆ ಒಳಪಡುವ ವಿಶ್ವದ ಇತಿಮಿತಿಯನ್ನೂ ತಮಗೆ ಪರಿಚಿತವಾದ ವಿಶ್ವಪ್ರಪಂಚದ ಖಂಡಿತತೆಯನ್ನೂ ಬಾಳು ಸಾವುಗಳ ಮೂಲಭೂತ ಅನಿವಾರ್ಯತೆಗಳನ್ನೂ—ಇವೆಲ್ಲವೂ ತಮ್ಮ ಕಣ್ಣ ಮುಂದೆಯೇ ಬದಲಾಗುತ್ತಿರುವುದನ್ನು—ಬೇರಾರೂ ಅವಲೋಕಿಸಿಲ್ಲ. ಬದಲಾವಣೆಯ ಬಗ್ಗೆ ಹಿಂದಣ ಯಾವುದೇ ತಲೆಮಾರಿಗೆ ಗೊತ್ತಿದ್ದುದಕ್ಕಿಂತ ಹೆಚ್ಚಾಗಿ ಇವರಿಗೆ ಗೊತ್ತುಂಟು. ಆದ್ದರಿಂದ ಇವರು ತಮ್ಮ ಕಿರಿಯರಿಗಿಂತಲೂ ಮೇಲೆ. ಆದರೆ ಅವರಿಗೆ ಇದಿರುಬದಿರಾಗಿ. ಜೊತೆಗೆ ಅವರಿಂದ ಬಹಳಮಟ್ಟಿಗೆ ವಿಮುಖವಾಗಿ. ನಿಂತಿದ್ದಾರೆ. ಈ ತಲೆಮಾರಿನ ಜನರ ವಿಶಿಷ್ಟ ಪರಿಸ್ಥಿತಿಯಿಂದಾಗಿ ಇವರು ತಮ್ಮ ಹಿರಿಯರ ಗತಕಾಲದ ಅನುಭವಗಳನ್ನು ತಿರಸ್ಕರಿಸುವುದು ಅನಿವಾರ್ಯವಾಗಿತ್ತು.

ಗತಕಾಲದ ಹಗಲುಗನಸು ಕಟ್ಟುವ ಬದಲು ವರ್ತಮಾನದಲ್ಲಿ ಆಸಕ್ತರಾಗಬೇಕೆಂದು ಆದ್ಯ ಅಮೆರಿಕನರು ತಮಗೆ ತಾವೇ ಬೋಧಿಸಿಕೊಳ್ಳಬೇಕಾಗಿಬಂದಿದ್ದ ಹಾಗೆ. ಅಂತೆಯೇ. ತಮ್ಮ ಮಕ್ಕಳು ಕೂಡ ಹಗಲುಗನಸು ಕಟ್ಟುವ ಬದಲು ಕಾರ್ಯಪ್ರವೃತ್ತರಾಗಬೇಕೆಂದು ಬೋಧಿಸಿದ ಹಾಗೆ. ಇಂದಿನ ಹಿರಿಯರು ಕೂಡ ತಮ್ಮ ಸ್ವಂತ ಗತಕಾಲವೂ ಇನ್ನೊಬ್ಬರಿಗೆ ತಿಳಿಸಲಾಗದ್ದು. ಕೊಡಲಾಗದ್ದು ಎಂದು ಪರಿಗಣಿಸಬೇಕು. ಅದು ಹಾಗೆ ಪರಿಣಮಿಸಿದ್ದಕ್ಕಾಗಿ ಇವರು ಹಲುಬುವುದೇನೋ ಸಹಜ. ಆದರೆ ತಮ್ಮ ಗತಕಾಲದ ಬಗ್ಗೆ ತಮ್ಮ ಮಕ್ಕಳು ಪ್ರಶ್ನೆ ಹಾಕಕೂಡದೆಂದು ಇವರು ತಮ್ಮ ಮಕ್ಕಳಿಗೆ ಬೋಧಿಸಬೇಕು. ಏಕೆಂದರೆ ಅವರು ಇದನ್ನೆಲ್ಲ ಎಂದೂ ಅರ್ಥ ಮಾಡಿಕೊಳ್ಳಲಾರರು. ನಮ್ಮ ಅನುಭವಗಳು ನಮ್ಮವೇ. ಅವು ಬೇರೆ ಯಾರವೂ ಆಗಲಾರವು. ಇತರ ತಲೆಮಾರುಗಳವರು ಅವನ್ನು ಎಂದೂ ಪಡೆಯಲಾರರು—ಎಂಬುದನ್ನು ನಾವು ಅರಿತುಕೊಳ್ಳಬೇಕು. ಈ ಅರ್ಥದಲ್ಲಿ ನಮಗೆ ಸಂತತಿಯೂ ಇಲ್ಲ. ನಮ್ಮ ಮಕ್ಕಳಿಗೆ ಪೂರ್ವಜರೂ ಇಲ್ಲ[1].

---

1 Margaret Mead: *Culture and Commitment*: *A Study of the Generation Gap*; The Bodley Head, London, 1970; pp. 76–7

ಪಿ. ಆರ್. ತಿಪ್ಪೇಸ್ವಾಮಿ

ಪ್ರಾಚೀನ ಭಾರತದ ಆಟದ ಸಾಮಾನುಗಳು

ಬೊಂಬೆಗಳ ತಯಾರಿಕೆ ಭಾರತದ ಒಂದು ಪ್ರಾಚೀನ ಕೈಗಾರಿಕೆ ಎಂಬುದನ್ನು ಐತಿಹಾಸಿಕ ಸಂಶೋಧನೆಗಳು ತೋರಿಸಿಕೊಟ್ಟಿವೆ. ನಾಗರಿಕತೆಯ ಉಗಮವಾದಾಗಿನಿಂದಲೂ ಅನೇಕ ಕುತೂಹಲಕಾರಿಯಾದ ಬೊಂಬೆಗಳನ್ನು ಕಾಣಬಹುದಾಗಿದೆ. ತನ್ನ ಉದರಪೋಷಣೆಗೆ ಆದಿಮಾನವ ಬೇಟೆಯನ್ನು ಅವಲಂಬಿಸಬೇಕಾಯಿತಷ್ಟೆ. ಇದಕ್ಕಾಗಿ ಕೋಲುಗಳು, ಬಿಲ್ಲುಗಳು, ಅನೇಕ ಕಲ್ಲಿನ ಆಯುಧಗಳು ಮುಂತಾದವನ್ನು ಬಳಸುತ್ತಿದ್ದ. ತನ್ನ ಬಳಕೆಯ ವಸ್ತುಗಳ ಆಕೃತಿಯಲ್ಲೇ ತನ್ನ ಮಕ್ಕಳಿಗೆ ಆಟದ ವಸ್ತುಗಳನ್ನೂ ಅವನು ಮಾಡಿಕೊಟ್ಟ. ಕಾಲ ಕ್ರಮಿಸಿದಂತೆ ಅವನ ಜೀವನದಲ್ಲಿ ಪರಿವರ್ತನೆಯಾಗುತ್ತ ಬಂದು ವ್ಯವಸ್ಥಿತವಾದ ಒಂದು ಬದುಕಿನ ಹಾದಿಯನ್ನು ಅವನು ಕಂಡುಕೊಂಡಾಗ. ಮಡಿಕೆ ಕುಡಿಕೆ ಮುಂತಾದ ಪದಾರ್ಥಗಳನ್ನೂ ಬಟ್ಟೆಬರೆಗಳನ್ನೂ ಲೋಹದ ವಸ್ತುಗಳನ್ನೂ ಬಳಸಲು ಅರಿತಾಗ ಮಕ್ಕಳ ಆಟದ ಪದಾರ್ಥಗಳಿಗೂ ಅದೇ ಆಕೃತಿಗಳು ದೊರೆತುವು. ಚರಿತ್ರೆಯ ಪೂರ್ವಯುಗಕ್ಕೆ ಸೇರಿದ ಹರಪ್ಪ ಮೊಹೆಂಜೊದಾರೊಗಳ ಸಂಸ್ಕೃತಿಯ ಸಮಯದಲ್ಲಿ ನಗರಸಂಸ್ಕೃತಿಯ ಅಸ್ತಿತ್ವವನ್ನು ಇತಿಹಾಸಕಾರರು ಸಂಶೋಧಿಸಿದ್ದಾರೆ. ಈ ಸಂಸ್ಕೃತಿಯಲ್ಲಿ ಬೊಂಬೆಗಳಿಗೆ ಒಂದು ಮಿಗಿಲಾದ ಸ್ಥಾನವನ್ನು ನಾವು ಕಾಣಬಹುದು.

ಹರಪ್ಪ ಮೊಹೆಂಜೊದಾರೊಗಳಲ್ಲಿ ಸಿಕ್ಕಿರುವ ವಸ್ತುಗಳಲ್ಲಿ ಹಾಸಿಗೆಯಲ್ಲಿ ಮಲಗಿಕೊಂಡ ಮಗುವೊಂದನ್ನು ಆರೈಕೆ ಮಾಡುತ್ತಿರುವ ಸ್ತ್ರೀಮೂರ್ತಿಯೊಂದು ತುಂಬ ಕುತೂಹಲಜನಕವಾಗಿದೆ. ಒಂದು ವಿಧವಾದ ಒಳಲಿಂಗವನ್ನು ಧರಿಸಿ ಒಂದು ವಿಚಿತ್ರ ಟೋಪಿಯನ್ನು ಆ ಮೂರ್ತಿಗೆ ಹಾಕಲಾಗಿದೆ. ಹಾಗೆಯೇ ಆಟದ ಪದಾರ್ಥಗಳ ಸಮೂಹದಲ್ಲಿ ಪ್ರಾಣಿಗಳೂ ಇವೆ. ತಲೆಯನ್ನು ಅತ್ತಿಂದಿತ್ತ ಅಲ್ಲಾಡಿಸಬಲ್ಲ ಗೂಳಿಗಳು ದೊರೆತಿವೆ. ಈ ಬಗೆಯ ಅಲ್ಲಾಡುವ ಅನೇಕ ತಲೆಗಳು ಈ ಸಂಶೋಧನೆಯಿಂದ ದೊರಕಿವೆ. ಅಲ್ಲದೆ ಅನೇಕ ಪಕ್ಷಿ ರಥಗಳೂ ಮಣ್ಣಿನ ಟಗರುಗಳೂ ದೊರೆತಿವೆ. ಟಗರಿನ ಮೈಮೇಲಿನ ಉಣ್ಣೆಯನ್ನು ಸೂಚಿಸಲು ಕೆಂಪುವರ್ಣದ ಗೆರೆಗಳು ಕಂಡುಬರುತ್ತವೆ. ಅದಕ್ಕೆ ದಾರ ಕಟ್ಟಿ ಎಳೆದಾಡುವ ಸಲುವಾಗಿ ಕತ್ತಿನಲ್ಲಿ ಒಂದು ಸಣ್ಣ ರಂಧ್ರವನ್ನೂ ಮಾಡಲಾಗಿದೆ. ಇವುಗಳ ಜೊತೆಗೆ ಒಳಗೆ ಸುಟ್ಟ ಜೇಡಿಮಣ್ಣಿನ ಗುಳಿಗೆಗಳಿರುವ ಮಣ್ಣಿನ ಗಿಲಿಕೆಗಳೂ ದೊರೆತಿವೆ. ಕೋಳಿ ಹಾಗೂ ಪಾರಿವಾಳಗಳ ಆಕಾರದಲ್ಲಿರುವ ಪೀಪಿಗಳೂ ಮಣ್ಣಿನ ಚಕ್ರಗಳೂ ಶಂಖಗಳೂ ದೊರೆತಿವೆ. ಆಟದ ಸುಟ್ಟ ಮಣ್ಣಿನ ಚಿಕ್ಕ ಬಂಡಿಗಳು ಅತ್ಯಂತ ಪುರಾತನವಾದ ಆಟದ ವಸ್ತುಗಳು. ಇವೆಲ್ಲ ಆಟದ ಸಾಮಾನುಗಳು ಕೈಗಾರಿಕಾ ಕೇಂದ್ರವಾಗಿದ್ದ ಚಾನ್ಹುದಾರೋದಲ್ಲಿ ದೊರೆತುವು. ಹರಪ್ಪದಲ್ಲಿ ಪುಟ್ಟ ತಾಮ್ರದ ಬಂಡಿ ಸಿಕ್ಕಿದೆ. ಅದಕ್ಕೆ ಒಂದು ಛತ್ರಿಯನ್ನೂ ಅಳವಡಿಸಲಾಗಿದೆ. ಆದರೆ ಚಕ್ರಗಳು ದೊರೆತಿಲ್ಲ. ಕೇವಲ ಎರಡು ಅಂಗುಲ ಎತ್ತರದ ಈ ಬಂಡಿಯ ಹಿಂದಿನ ಭಾಗಗಳು ತೆರೆದು. ಎಡಬಲ ಪಕ್ಕಗಳು ಮುಚ್ಚಿವೆ. ಮುಂದೆ ಸಾರಥಿಯೂ ಇದ್ದಾನೆ.

ಈ ಎಲ್ಲ ವಸ್ತುಗಳಲ್ಲಿಯೂ ಉನ್ನತ ಮಟ್ಟದ ಕಲೆಗಾರಿಕೆಯನ್ನು ಕಾಣಬಹುದು. ಗೋಲಿ ಮತ್ತು ಚೆಂಡುಗಳನ್ನು ಜೇಡಿಮಣ್ಣು ಮತ್ತು ಕಲ್ಲುಗಳಲ್ಲಿ ಮಾಡುತ್ತಿದ್ದರು. ಕೆಲವು ಚಿಪ್ಪಿನ ಚೆಂಡುಗಳೂ ಇವೆ. ಮೊಹೆಂಜೊದಾರೊದಲ್ಲಿ ಕೆಲವು ಹುಂಜಗಳೂ ದೊರೆತಿವೆ. ಇವನ್ನು ತುಂಬ ಕುಶಲವಾಗಿ

ಕಡೆಯಲಾಗಿದೆ. ಇವು ಜೀವಸದೃಶವಾದವು. ಗೂಳಿಗಳೂ ಕೋಣಗಳೂ ಕಾಳಗಕ್ಕೆ ಸಿದ್ಧವಾದ ರೀತಿಯಲ್ಲಿ ನಿರ್ಮಿತವಾಗಿವೆ. ಒಂದು ಕಡೆ ಒಂದು ಕೋಣ ಅನೇಕ ಜನರನ್ನು ತಿವಿದು ಬೀಳಿಸಿರುವ ದೃಶ್ಯವೂ ದೊರೆಯುತ್ತದೆ.

ಹೀಗೆ ನಿರ್ದಿಷ್ಟವಾದ ಕೆಲವು ಕಾಲಗಳಲ್ಲಿ ವಸ್ತು, ಕಲ್ಪನೆ ಮತ್ತು ಕಲೆಗಾರಿಕೆಗಳಲ್ಲಿ ಏಕಸೂತ್ರತೆ ಇರುವ ಬೊಂಬೆಗಳನ್ನು ಕಾಣಬಹುದು. ಈ ವಿಪುಲ ವಸ್ತುಗಳು ಭಾರತೀಯ ಸಂಸ್ಕೃತಿಯ ಒಂದು ನಿಧಿ ಎಂದೇ ಹೇಳಬೇಕು. ಪಾಟ್ನಾದ ಕುಮ್ರಹಾರ್, ಬುಲಂದಿಬಾಗಿನ ಕದಮ್‌ಖಾನ್, ಬಿಹಾರದ ಮುಜಾಪಾವರ್, ಅಲಹಾಬಾದಿನ ಕೌಶಾಂಬಿ, ಶರಣ್ ಜಿಲ್ಲೆಯ ಚಿಲ್ಲಾ; ಕೊಲ್ಲಾಪುರ ಜಿಲ್ಲೆಯ ಬ್ರಹ್ಮಪುರಿ; ಮೈಸೂರಿನ ಬ್ರಹ್ಮಗಿರಿ—ಇಲ್ಲೆಲ್ಲ ಮಕ್ಕಳ ಆಟದ ವಿವಿಧ ರೀತಿಯ ಪ್ರಾಣಿಗಳು, ಪಕ್ಷಿಗಳು, ಗಾಡಿಗಳು, ವರ್ಣರಂಜಿತ ಕುಡಿಕೆಗಳು, ಗೋಲಿಗಳು ಮುಂತಾದವು ದೊರೆತಿವೆ. ಈ ವಸ್ತುಗಳಲ್ಲಿ ಆಯಾ ಪ್ರದೇಶದ ಒಂದೊಂದು ವೈಲಕ್ಷಣ್ಯವನ್ನು ಕಾಣಬಹುದು. ಬ್ರಹ್ಮಪುರಿಯ ತಾಮ್ರದ ಬಂಡಿಗಳ ಮೇಲೆ ರೋಂ ಮೊದಲಾದ ವಿದೇಶಿ ಕಲೆಗಳ ಪ್ರಭಾವ ಬಿದ್ದಂತೆ ಕಾಣುತ್ತದೆ. ಐಚಕ ಮುಂತಾದ ಕೆಲವು ಪ್ರದೇಶಗಳಲ್ಲಿ ದೊರೆತ ಬೊಂಬೆಗಳಲ್ಲಿ ಕುದುರೆಯ ಮೇಲಿನ ಸವಾರನ ಬೊಂಬೆ ತುಂಬ ಆಕರ್ಷಕವಾದ್ದು. ಕೆಲವು ಪ್ರದೇಶಗಳ ಬೊಂಬೆಗಳಲ್ಲಿ ಅತ್ಯಂತ ಕುಶಲಕಲೆಗಾರಿಕೆಯನ್ನು ಕಂಡರೆ ಮತ್ತೆ ಕೆಲವು ಕಡೆಗಳಲ್ಲಿಯ ವಸ್ತುಗಳಲ್ಲಿ ಅಷ್ಟು ನಯ, ನಾಜೂಕು ಇಲ್ಲದಿರುವ ನಿದರ್ಶನಗಳೂ ಉಂಟು.

ಬೊಂಬೆಗಳ ತಯಾರಿಕೆಯ ವಿವಿಧ ಮಾಧ್ಯಮಗಳನ್ನು ಕಾಣಬಹುದು. ಎಷ್ಟೋ ವೇಳೆ ಜೇಡಿಮಣ್ಣನ್ನು ಒಣ ಹುಲ್ಲಿನೊಡನೆ ಬೆರಸುತ್ತಿದ್ದರು. ಮೊದಲು ಸುಣ್ಣವನ್ನು ಲೇಪಿಸಿ, ಅನಂತರ ಕೆಮ್ಮಣ್ಣನ್ನು ಬಳಿದ ಪದಾರ್ಥಗಳೂ ಇವೆ. ಕೆಲವು ಕಂದು ಹಾಗೂ ಕಪ್ಪು ಜೇಡಿಮಣ್ಣಿನಿಂದ ಮಾಡಿದವಾಗಿವೆ. ಬಡವ ತನ್ನ ಶಿಲ್ಪಶಕ್ತಿಯನ್ನು ಮೆರೆಯುವ ಏಕೈಕ ಸಾಧನವಾದ ಜೇಡಿಮಣ್ಣಿನಲ್ಲಿ ಹೆಚ್ಚು ಬೊಂಬೆಗಳು ನಿರ್ಮಿತವಾಗಿವೆ. ಗಾಜು, ಕಲ್ಲು, ಕಂಚು ಮತ್ತು ತಾಮ್ರಗಳನ್ನು ಬಳಸಿರುವ ನಿದರ್ಶನಗಳೂ ಉಂಟು.

ಪಾಟ್ನ ವಸ್ತುಸಂಗ್ರಹಾಲಯದಲ್ಲಿ ಈ ಬಗೆಯ ಅನೇಕ ಮಾದರಿಗಳನ್ನು ಕಾಣಬಹುದು. ವಸ್ತು, ರೀತಿ, ಶೈಲಿ ಇವುಗಳಲ್ಲಿ ಒಂದೊಂದರಲ್ಲೂ ವೈಶಿಷ್ಟ್ಯದಿಂದ ಕೂಡಿದ ಅನೇಕ ಅಪೂರ್ವ ಬೊಂಬೆಗಳನ್ನು ಅಲ್ಲಿ ಸಂಗ್ರಹಿಸಲಾಗಿದೆ. ಸುಂಗ, ಕುಶಾನ ಮತ್ತು ಸಾತವಾಹನರ ಕಾಲಕ್ಕೆ ಸೇರಿದ ವಸ್ತುಗಳೂ ಅಲ್ಲುಂಟು. ದಖನ್ ಪ್ರದೇಶದ ಬ್ರಹ್ಮಪುರಿಯ ಕಂಚಿನ ಗಾಡಿಗಳನ್ನೂ ನರ್ಮದಾತೀರದ ಮಹೇಶ್ವರ ಮುಂತಾದ ಮಧ್ಯಪ್ರದೇಶಕ್ಕೆ ಸೇರಿದ ನೆಲೆಗಳ ಕೆಲವು ಪ್ರಾಣಿಗಳ ಬೊಂಬೆಗಳನ್ನೂ ನೋಡಬಹುದು.

ಮೃದು ಕಲೆಯಲ್ಲಿ ಕಲಾವಿದರು ಶೀಘ್ರ ಕರಕೌಶಲ ಮತ್ತು ವ್ಯಕ್ತಿತ್ವಪ್ರದರ್ಶನಕ್ಕೆ ಹೆಚ್ಚು ಗಮನ ಕೊಡಬೇಕಾಗುತ್ತದೆ. ಅಲಂಕಾರಿಕ ವಿಷಯಗಳಲ್ಲಿ ರೇಖೆಯ ಸೌಂದರ್ಯ ಮತ್ತು ಆಕೃತಿಗಳಿಗೆ ಆಧಾರವಾದ ಬೆಡಗುಗಳನ್ನು ತರಬೇಕಾಗುತ್ತದೆ. ಸುಂಗಕಾಲದ ವಸ್ತುಗಳಲ್ಲಿ ನಾಲ್ಕು ಹೋರಿಗಳನ್ನು ಕಟ್ಟಿದ ಮಣ್ಣಿನ ರಥ, ಗಂಭೀರವಾದ ಕುದುರೆ, ಮೊಂಡುಬುದ್ಧಿಯ ಟಗರು ಮುಂತಾದವುಗಳಲ್ಲಿ ಮಣ್ಣಿನ ಕೈಕೆಲಸದ ಅತ್ಯಂತ ಶ್ರೇಷ್ಠಮಟ್ಟದ ಕಲೆಗಾರಿಕೆಯನ್ನು ಕಾಣುತ್ತೇವೆ. ಕುಶಾನರ ಕಾಲದ ಬೊಂಬೆಗಳಲ್ಲಿ ಸರಳ ರೇಖಾವಿನ್ಯಾಸವಿದ್ದರೂ ಅಪಾರ ಆಭರಣಗಳ ಅಲಂಕಾರವೂ ಇಲ್ಲದಿಲ್ಲ.

ದಕ್ಷಿಣ ಸಾತವಾಹನರ ಕಾಲದ ಕಂಚಿನ ಗೊಂಬೆಗಳಿಗೇ ಒಂದು ಅಪೂರ್ವವಾದ ಸ್ಥಾನವಿದೆ. ಮಣ್ಣಿನ ವಸ್ತುಗಳಿಗಿಂತ ತೀರ ಭಿನ್ನವಾದ ಈ ಪದಾರ್ಥಗಳು ಲೋಹಪ್ರಾಮುಖ್ಯವನ್ನು ಹೊಂದಿದ ಒಂದು ಉನ್ನತ ನಾಗರಿಕತೆಯ ಸಂಕೇತಗಳಾಗಿವೆ. ಕಂಚಿನ ಒಂದು ಆನೆಯ ಬೆನ್ನಿನ ಮೇಲೆ ಒಂದು ಇಡೀ ಸಂಸಾರವನ್ನೇ ಬಿಡಿಸಲಾಗಿದೆ. ಹುಲಿ ತನ್ನ ಪಂಜವನ್ನು ಮೇಲೆತ್ತಿ ಅಪ್ಪಳಿಸಲು ಅನುವಾದಂತೆ ಕಡೆಯಲಾಗಿದೆ. ಭಾರತೀಯ ಮೂಲದ ಎರಡು ಗಾಡಿಗಳೂ ಉಂಟು. ಇವು ಶಾತವಾಹನ ಹಾಗೂ ರೋಮನರ ಸಂಪರ್ಕದ ಕಾಲವನ್ನು ಸೂಚಿಸುವುದಾಗಿ ಹೇಳುತ್ತಾರೆ.

ಹೀಗೆ ಭಾರತದ ಸಂಸ್ಕೃತಿಯಲ್ಲಿ ಬೊಂಬೆಗಳಿಗೇ ಒಂದು ಪ್ರಮುಖ ಸ್ಥಾನವಿತ್ತು. ಪ್ರಾಚೀನ ಕಾಲದಲ್ಲಿಯೇ ಭಾರತೀಯರು ಒಂದು ಉನ್ನತ ಸಂಸ್ಕೃತಿಯನ್ನು ಬೆಳೆಸಿ, ಕಲಾಪೂರ್ಣವಾದ ಜೀವನವನ್ನು ನಡೆಸಿದರೆಂಬುದಕ್ಕೆ ಇವು ಉತ್ತಮ ನಿದರ್ಶನಗಳಾಗಿವೆ. ಆಧುನಿಕ ಕಾಲದಲ್ಲಿ ಊಹಿಸಲೂ ಆಗದಂಥ ಅದ್ಭುತ ಕಲೆಗಾರಿಕೆ ಆಗಿನ ವಸ್ತುಗಳಲ್ಲಿ ಕಾಣಬರುತ್ತದೆ.



ಮೊಹೆಂಜೊದಾರೊದ ಮಕ್ಕಳ ಆಟದ ಸಾಮಾನುಗಳು :
ಹೋರಿ (ಮೇಲಿನ ಚಿತ್ರ), ಕೋಣ (ಕೆಳಗಡೆಯ ಚಿತ್ರ)



ಮೊಹೆಂಜೊವಾರೊದಲ್ಲಿ ದೊರೆತ, ಮಕ್ಕಳ ಆಟದ ಸಾಮಾನುಗಳು

ರೇಖಾಚಿತ್ರಗಳು: 1 ಪೀಪಿ, 2 ಗಿಲಿಕೆ, 3 ಗಾಲಿಗಳಿದ್ದ ಪಾರಿವಾಳ, 4 ಮರದ ಕೊಂಬೆಯನ್ನೇರುತ್ತಿರುವ ಅಳಿಲು, 5 ಬಂಡಿಯ ಚಕ್ರ, 6, 7A, 7B ಮತ್ತು 7C ಗೊಂಬೆಗಳ ಗಾಲಿಗಳು, 8 ಗಾಲಿಗಳಿದ್ದ ಪಕ್ಷಿ, 9 ಕೋಳಿ, 10 ಗಿಣಿ, 11 ತಾಯಿ ಮಗು, 12 ನಾಯಿ ಮರಿ, 13 ಮತ್ತು 14 ಕೀಲುಗಳಿದ್ದ ಬೊಂಬೆಗಳು, 15 ಬಂಡಿಯ ಪಾರ್, 16 ಟಗರು.*

---

*ಮೂಲ: E. J. H. Mackay, Further Excavations at Mohenjo-Daro, Vol. II, Plates I–CXLVI

ಗಿರಿಧರ ಗೋವಿಂದರಾವ್

ಜೋಗಲತಂಬಿಯ ನಾಣ್ಯಗಳ ರಾಶಿ : ಐತಿಹಾಸಿಕ ಮಹತ್ತ್ವ[1]

ಜೋಗಲತಂಬಿಯ ನಾಣ್ಯಗಳ ಆಧಾರಗಳನ್ನು ಪರಿಶೀಲಿಸದೆ ಕ್ಷತ್ರಪ ಹಾಗೂ ಶಾತವಾಹನರ ಚರಿತ್ರೆಯ ಕೆಲವಂಶಗಳನ್ನು ನಿರ್ಧಾರವಾಗಿ ಹೇಳಲಾಗುವುದಿಲ್ಲ. ಈ ನಾಣ್ಯರಾಶಿಯಲ್ಲಿ ಹದಿಮೂರು ಸಾವಿರಕ್ಕಿಂತ ಹೆಚ್ಚು ನಾಣ್ಯಗಳಿದ್ದುವು ಎಂದರೆ ಇದರ ಮಹತ್ತ್ವದ ಅರಿವಾಗುತ್ತದೆ. ಈ ನಾಣ್ಯರಾಶಿ ಬೆಳಕಿಗೆ ಬರುವ ಮೊದಲು ನವಹಪಾನನಿಗೆ ಸಂಬಂಧಿಸಿದ್ದ ನಾಣ್ಯಗಳು ಕೇವಲ ಹತ್ತು–ಹನ್ನೆರಡು ಸಿಕ್ಕಿದ್ದುವು. ಆ ನಾಣ್ಯಗಳು ಸಹ ಒಳ್ಳೆಯ ಸ್ಥಿತಿಯಲ್ಲಿರಲಿಲ್ಲ. ಈ ನಾಣ್ಯಗಳು ಬೆಳಕಿಗೆ ಬಂದ ಮೇಲೆ ಅನೇಕ ಸಮಸ್ಯೆಗಳಿಗೆ ಉತ್ತರ ದೊರೆತಿದೆ.

ಈ ನಾಣ್ಯರಾಶಿಯಲ್ಲಿ 4.000ಕ್ಕಿಂತ ಹೆಚ್ಚಿನ ನಾಣ್ಯಗಳು ನಹಪಾನನವು. ಮಿಕ್ಕ ಒಂಬತ್ತು ಸಾವಿರಕ್ಕಿಂತ ಹೆಚ್ಚು ನಾಣ್ಯಗಳಲ್ಲಿ ನಹಪಾನನ ಚಿಹ್ನೆಯ ಮೇಲೆ ಗೌತಮೀಪುತ್ರ ಶಾತಕರ್ಣಿಯ ಮುದ್ರೆಗಳಿವೆ. ಸುಮಾರು ಎರಡು ಸಾವಿರ ನಾಣ್ಯಗಳಲ್ಲಿ ರಂಧ್ರ ಮಾಡಲಾಗಿದೆ. ಈ ರಂಧ್ರಗಳನ್ನು ಮಾಡಿರುವ ಉದ್ದೇಶ ಸ್ಪಷ್ಟವಾಗಿದೆ. ನಾಣ್ಯಗಳನ್ನು ಪೋಣಿಸಿ ಹಾರ ಮಾಡುವುದು ಭಾರತದಲ್ಲಿ ಹಿಂದಿನಿಂದಲೂ ಬಂದ ಪದ್ಧತಿ. ಶಾತವಾಹನರ ಕಾಲವೂ ಇದಕ್ಕೆ ಹೊರತಾಗಿರಲಿಲ್ಲ—ಎಂಬುದಕ್ಕೆ ಈ ನಾಣ್ಯಗಳು ಸಾಕ್ಷಿ. ಈ ಕಾಸಿನ ಹಾರದ ನಾಣ್ಯಗಳು ಸಿಕ್ಕಿರುವುದರಿಂದ ಈ ನಾಣ್ಯರಾಶಿ ಯಾವುದಾದರೂ ದೇವಸ್ಥಾನಕ್ಕೆ ಸೇರಿದ್ದಿರಬಹುದು—ಎಂದು ಅನೇಕ ಪಂಡಿತರು ಭಾವಿಸುತ್ತಾರೆ. ಆದರೆ ನಮಗೆ ಈಗ ಸಿಕ್ಕಿರುವಷ್ಟೆ ಪುರಾವೆಗಳಿಂದ ಯಾವುದನ್ನೂ ಖಂಡಿತವಾಗಿ ಹೇಳಲಾಗುವುದಿಲ್ಲ.

ಕ್ಷತ್ರಪ ರಾಜರುಗಳಲ್ಲಿ ನಹಪಾನನೇ ಮೊದಲಿಗನೆಂದು ಅನೇಕ ನಾಣ್ಯ ಹಾಗೂ ಶಾಸನಗಳಿಂದ ತಿಳಿದುಬಂದಿದೆ. ಆದರೆ ಅವನ ಮತ್ತು ಚಷ್ಟಣನ ಸಂಬಂಧವೇನು ಎಂದು ನಿಖರವಾಗಿ ತಿಳಿದಿಲ್ಲ. ಚಷ್ಟಣ ಆಳಿದ ರಾಜ್ಯ ತತ್ಪೂರ್ವದಲ್ಲಿ ನಹಪಾನನ ಅಧೀನದಲ್ಲಿತ್ತು ಎಂಬುದು ತಿಳಿದ ಸಂಗತಿ. ನಾಸಿಕದ ಒಂದು ಗುಹೆಯಲ್ಲಿರುವ ಶಾಸನದಿಂದ ಶಾತಕರ್ಣಿ "ಖಕರಾತ್ ರಾಜವಂಶವನ್ನು ಬೇರುಸಹಿತ ಕಿತ್ತೊಗೆದ" ಎಂದು ತಿಳಿದುಬರುತ್ತದೆ. ಈ ನಾಣ್ಯಗಳು ಅದಕ್ಕೆ ಸಚಿತ್ರ ಸಾಕ್ಷ್ಯವನ್ನು ಒದಗಿಸುತ್ತವೆ. ನಹಪಾನನ ನಾಣ್ಯಗಳ ಮೇಲೆ ವಜ್ರಾಯುಧ ಹಾಗೂ ಬಾಣದ ಚಿಹ್ನೆಗಳಿವೆ. ಗೌತಮೀಪುತ್ರ ಶಾತಕರ್ಣಿ 'ಚೈತ್ಯ' ಹಾಗೂ 'ಉಜ್ಜಯಿನಿಯ ಚಿಹ್ನೆ'ಯನ್ನು ಉಪಯೋಗಿಸಿದ್ದಾನೆ. ಆಶ್ಚರ್ಯದ ಸಂಗತಿಯೆಂದರೆ. ಚಷ್ಟಣ ವಂಶದ ಕ್ಷತ್ರಪ ರಾಜರೂ 'ಚೈತ್ಯ'ದ ಚಿಹ್ನೆಯನ್ನು ಉಪಯೋಗಿಸುತ್ತಿದ್ದರು.

---

1 ಜೋಗಲತಂಬಿಹಳ್ಳಿ ಗೋದಾವರಿ ಹಾಗೂ ದರನ ನದಿಗಳು ಸಂಧಿಸುವ ಜಾಗದ ಸಮೀಪದಲ್ಲಿದೆ. ಹಳ್ಳಿಯ ಹೊರವಲಯದಲ್ಲಿರುವ ಸಣ್ಣಗುಡ್ಡದಲ್ಲಿ ಈ ಅತ್ಯಮೂಲ್ಯವಾದ ನಾಣ್ಯರಾಶಿ ಸಿಕ್ಕಿತು. 1907ರ ಮೇ ತಿಂಗಳ 31ರಂದು ಹಳ್ಳಿಯ ಹುಡುಗರಿಂದ ಆಕಸ್ಮಿಕವಾಗಿ ಬೆಳಕಿಗೆ ಬಂದ ಈ ನಾಣ್ಯರಾಶಿಯನ್ನು ಪ್ರೊ. ಸ್ಕಾಟ್‌ರವರು ಪರಿಶೀಲಿಸಿದ್ದಾರೆ.

ಗ್ರೀಕ್ ಶಾಸನವಿರುವ ನಾಣ್ಯಗಳು :

ಈ ನಾಣ್ಯಗಳು ಬೆಳಕಿಗೆ ಬರುವ ಮೊದಲು ನಹಪಾನನಿಗೆ ಸಂಬಂಧಿಸಿದ ಕೆಲವು ನಾಣ್ಯಗಳು ಸಿಕ್ಕಿದ್ದುವು ಎಂದು ಆಗಲೇ ಹೇಳಲಾಗಿದೆ. ಆದರೆ ಆ ನಾಣ್ಯಗಳ ಮೇಲಿನ ಗ್ರೀಕ್ ಶಾಸನವನ್ನು ಓದಲು ಅಸಾಧ್ಯವಾಗಿತ್ತು. ಅನೇಕ ಪಂಡಿತರ ಅನೇಕ ವರ್ಷಗಳ ಸತತ ಪ್ರಯತ್ನವೂ ನಿಷ್ಫಲವಾಗಿತ್ತು. ಇವುಗಳ ಬಗ್ಗೆ ಅನೇಕಾನೇಕ ಭಿನ್ನಾಭಿಪ್ರಾಯಗಳಿದ್ದುವು. ಜೋಗಲತಂಬಿಯ ನಾಣ್ಯಗಳು ಬೆಳಕಿಗೆ ಬಂದ ತತ್‌ಕ್ಷಣ ಈ ಸಮಸ್ಯೆಗಳೆಲ್ಲ ನಿವಾರಣೆಯಾದುವು. ಈ ನಾಣ್ಯಗಳ ಮೇಲೆ ಗ್ರೀಕ್ ಹಾಗೂ ರೋಮನ್ ಅಕ್ಷರಗಳ ಮಿಶ್ರಣದಿಂದ ಶಾಸನವನ್ನು ಬರೆದಿದ್ದಾರೆ. ಈ ನಾಣ್ಯಗಳ ಮೇಲೆ ಲಿಪ್ಯಂತರವನ್ನು (ಟ್ರಾನ್ಸ್‌ಲಿಟರೇಷನ್) ಅತ್ಯುತ್ತಮವಾಗಿ ಮಾಡಲಾಗಿದೆ. ಈ ನಾಣ್ಯಗಳ ರಾಶಿಯಲ್ಲಿ ಗಮನಿಸಬೇಕಾದ ಮುಖ್ಯಾಂಶವೆಂದರೆ ಗ್ರೀಕ್ ಶಾಸನ ಕ್ರಮೇಣವಾಗಿ ಅಶುದ್ಧವಾದ ಬಗೆ. ಕಾಲಾನುಕ್ರಮದಲ್ಲಿ ಈ ಶಾಸನ ಎಲ್ಲ ಅರ್ಥವನ್ನೂ ಕಳೆದುಕೊಂಡು ಕೇವಲ ಅಲಂಕಾರಪ್ರಿಯವಾಗಿ ಉಳಿದುಕೊಂಡಿತು. ಈ ಕಾರಣದಿಂದಲೇ ನಹಪಾನ ಮತ್ತು ಚಷ್ಟನರ ಅನಂತರ ಬಂದ ಕ್ಷತ್ರಪ ರಾಜರ ನಾಣ್ಯಗಳ ಮೇಲಿರುವ ಗ್ರೀಕ್ ಶಾಸನವನ್ನು ಓದಲಾಗಲಿಲ್ಲ.

ಖರೋಷ್ಠಿ ಶಾಸನವಿರುವ ನಾಣ್ಯಗಳು

ಕೆಲವು ನಾಣ್ಯಗಳ ಹಿಂಬದಿಯಲ್ಲಿ ಖರೋಷ್ಠಿಯಲ್ಲಿರುವ ಶಾಸನ ಹೀಗೆ ಇದೆ: "ರಾಞೊ ಛಹರಾತಸ ನಹಪಾನಸ". ಛಹರಾತ ನಹಪಾನನಿಗೆ ಸೇರಿದ್ದು ಎಂದು ಇದರ ಅರ್ಥ. ಗ್ರೀಕ್ ಶಾಸನದಲ್ಲಿರುವಂತೆ ಇದರಲ್ಲೂ ಕ್ರಮೇಣ ಅಶುದ್ಧತೆ ಮೂಡಿದೆ ಎನ್ನಬಹುದು. ಇನ್ನೊಂದು ದೃಷ್ಟಿಯಿಂದ ನೋಡಿದರೆ ಅಶುದ್ಧತೆಗಿಂತ ಶುದ್ಧತೆ ಕ್ರಮೇಣವಾಗಿ ಮೂಡಿದೆ ಎಂದು ಬೇಕಾದರೂ ಹೇಳಬಹುದು! ಈ ವಿರೋಧಾಭಾಸಕ್ಕೆ ಕಾರಣವಿಷ್ಟೆ. ಉತ್ತಮ ಗ್ರೀಕ್ ಶಾಸನವಿರುವ ನಾಣ್ಯಗಳ ಮೇಲೆ ಅತಿ ಕೆಟ್ಟ ಖರೋಷ್ಠಿ ಶಾಸನವಿದೆ. ಅದೇ ರೀತಿ ಉತ್ತಮ ಖರೋಷ್ಠಿ ಶಾಸನವಿರುವ ನಾಣ್ಯಗಳ ಮೇಲೆ ಅತಿ ಕೆಟ್ಟ ಗ್ರೀಕ್ ಶಾಸನವಿದೆ. ಗ್ರೀಕ್ ಶಾಸನ ಕೆಡುತ್ತಾ ಹೋದಂತೆ ಖರೋಷ್ಠಿ ಉತ್ತಮವಾಗುತ್ತಾ ಹೋಗುತ್ತದೆ. ಇದಕ್ಕೆ ಕಾರಣ ಹುಡುಕುವುದು ಅಂಥ ಕಷ್ಟದ ಕೆಲಸವೇನಲ್ಲ. ಕ್ಷತ್ರಪರು ಭಾರತಕ್ಕೆ ಪರಕೀಯರು. ಆದ್ದರಿಂದ ಅವರಿಗೆ ಭಾರತಕ್ಕೆ ಬಂದ ಹೊಸತರಲ್ಲಿ ಖರೋಷ್ಠಿ ಚೆನ್ನಾಗಿ ಪರಿಚಿತವಿರಲಿಲ್ಲ. ಆದರೆ ಗ್ರೀಕ್ ಅವರಲ್ಲಿ ಬಳಕೆಯಲ್ಲಿದ್ದುದರಿಂದ ಅದು ಚೆನ್ನಾಗಿ ಪರಿಚಿತವಾಗಿತ್ತು. ಕಾಲಕ್ರಮೇಣ ಅವರು ಭಾರತದಲ್ಲಿ ಒಂದಾಗಿ ಬೆರೆತುಹೋದರು. ಖರೋಷ್ಠಿ ಹೆಚ್ಚಾಗಿ ಕರಗತವಾಗುತ್ತ ಇದ್ದ ಹಾಗೆ ಗ್ರೀಕ್‌ಭಾಷೆಯನ್ನು ಮರೆತರು.

ಆದರೆ ಬ್ರಾಹ್ಮಿ ಶಾಸನವಿರುವ ನಾಣ್ಯಗಳಲ್ಲಿ ಇಂಥ ತಪ್ಪುಗಳು ಕಾಣಬರುವುದಿಲ್ಲ. ಈ ನಾಣ್ಯಗಳಲ್ಲಿರುವ ಬ್ರಾಹ್ಮಿಲಿಪಿ ಸುಮಾರಾಗಿ ಕ್ರಿಸ್ತಶಕದ ಪ್ರಾರಂಭಕಾಲಕ್ಕೆ ಸೇರುತ್ತದೆ. ಎಂದು ಪಂಡಿತರು ಅಭಿಪ್ರಾಯಪಡುತ್ತಾರೆ. ಸಂಪೂರ್ಣ ಬ್ರಾಹ್ಮಿಶಾಸನ ಈ ರೀತಿ ಇದೆ : "ರಾಜ್ಞೊ ಕ್ಷಹರಾತಸ ನಹಪಾನಸ". ಕ್ಷಹರಾತ ರಾಜ್ಯ ನಹಪಾನನಿಗೆ ಸೇರಿದ್ದು ಎಂದು ಇದರ ಅರ್ಥ.

ಈ ನಾಣ್ಯಗಳ ವಿಷಯವಾಗಿ ಹೇಳುವಾಗ ನಹಪಾನನ ಎದೆಚಿತ್ರವಿರುವ ನಾಣ್ಯಗಳನ್ನು ಅವಲೋಕಿಸಬೇಕು. ಆ ಚಿತ್ರಗಳನ್ನು ನೋಡಿದಾಗ ಮೊದಲಿಗೆ ಹೊಳೆಯುವ ವಿಷಯವೆಂದರೆ ಅವುಗಳಲ್ಲಿರುವ ಭಿನ್ನತೆ. ಈ ನಾಣ್ಯರಾಶಿ ಸಿಗುವ ಮೊದಲು ನಹಪಾನನಿಗೆ ಸಂಬಂಧಿಸಿದ ನಾಲ್ಕು ನಾಣ್ಯಗಳು ಪಂಡಿತ ಭಗವಾನ್‌ಲಾಲ್ ಇಂದ್ರಾಜಿ ಅವರಿಗೆ ದೊರೆತಿದ್ದುವು. ಅವರು ಅವನ್ನು ಅಭ್ಯಸಿಸಿ ಒಂದು ಸಿದ್ಧಾಂತ ಮಂಡಿಸಿದರು. ಅದೇನೆಂದರೆ. ಈ ಚಿತ್ರಗಳು ನಹಪಾನನನ್ನು ಬೇರೆಬೇರೆ ವಯಸ್ಸಿನಲ್ಲಿ ಪ್ರತಿಬಿಂಬಿಸುತ್ತವೆ. ಅವರ ಅಭಿಪ್ರಾಯದಲ್ಲಿ ಆ ನಾಣ್ಯಗಳು ನಹಪಾನ ತನ್ನ 30. 45, 60 ಹಾಗೂ 70 ನೆಯ ವಯಸ್ಸುಗಳಲ್ಲಿ ಇದ್ದಂತೆ ಚಿತ್ರಿಸುತ್ತವೆ. ಆದರೆ ಈಗ ಸಿಕ್ಕಿರುವ ಜೋಗಲತಂಬಿಯ ನಾಣ್ಯರಾಶಿಯನ್ನು ಆಳವಾಗಿ ಅಭ್ಯಸಿಸಿದ ಪ್ರೊ. ಸ್ಕಾಟ್ ಈ ಅಭಿಪ್ರಾಯವನ್ನು ಒಪ್ಪುವುದಿಲ್ಲ. ಅವರ ಸಿದ್ಧಾಂತದ ಪ್ರಕಾರ ಈಗ ಸಿಕ್ಕಿರುವ ನಾಣ್ಯಗಳಲ್ಲಿ ಕೇವಲ ಮೂರನೆಯ ಒಂದು ಭಾಗ ಮಾತ್ರ ಪಂಡಿತ ಇಂದ್ರಾಜಿಯವರ ಸಿದ್ಧಾಂತಕ್ಕೆ ಸಾಕ್ಷ್ಯವಾಗಿದೆ. ಉಳಿದ ಮೂರನೆಯ ಎರಡು ಭಾಗ ಖಂಡಿತವಾಗಿಯೂ

ಇಂದ್ರಾಜಿಯವರ ಸಿದ್ಧಾಂತವನ್ನು ಪುಷ್ಟೀಕರಿಸುವುದಿಲ್ಲ. ಆ ಚಿತ್ರಗಳು ಒಬ್ಬ ರಾಜನಿಗೆ ಸಂಬಂಧಿಸಿದವಲ್ಲ. ಏಂದರೆ. ಆ ನಾಣ್ಯಗಳ ಮೇಲಿರುವ ಶಾಸನಗಳ ಪ್ರಕಾರ ಎಲ್ಲ ನಾಣ್ಯಗಳೂ ನಹಪಾನನಿಗೇ ಸೇರಿದವುವಾದರೂ. ಅವುಗಳ ಮೇಲಿರುವ ಚಿತ್ರಗಳು ಒಬ್ಬ ರಾಜನದೇ ಅಲ್ಲವೆಂದಾಯಿತು. ಹಾಗಾದರೆ ಆ ನಾಣ್ಯಗಳ ಮೇಲಿರುವ ಚಿತ್ರಗಳು ಯಾರವು? ನಹಪಾನನ ಮಕ್ಕಳ, ಮೊಮ್ಮಕ್ಕಳ ಚಿತ್ರಗಳಾಗಿರಬಹುದೇ? ಹಾಗಿದ್ದಲ್ಲಿ ಅವರು ತಮ್ಮ ಹೆಸರುಗಳನ್ನು ನಾಣ್ಯಗಳಲ್ಲಿ ಏಕೆ ಬರೆಯಿಸಲಿಲ್ಲ? ಈ ಪ್ರಶ್ನೆಗಳು ಉದ್ಭವಿಸುತ್ತವೆ. ಈ ಪ್ರಶ್ನೆಗಳನ್ನು ಖಂಡಿತವಾಗಿ ಉತ್ತರಿಸಲಾಗದಿದ್ದರೂ ಕೆಲವು ಸಲಹೆಗಳನ್ನು ಮಾಡಬಹುದು.

ಎಲ್ಲರಿಗೂ ತಿಳಿದಿರುವಂತೆ ನಹಪಾನ ಕ್ಷತ್ರಪವಂಶದ ಮೊದಲ ರಾಜ. ಅವನಿಗೆ ವಿಶಾಲವಾದ ರಾಜ್ಯವಿದ್ದಿರಬಹುದು. ಅದನ್ನು ಆಳಲು ಅವನಿಗೆ ಸಹಜವಾಗಿ ಅನೇಕರ ಸಹಾಯವಿದ್ದಿರಬೇಕು. ಆದರೆ ಮುಖ್ಯ ಅಧಿಕಾರವೆಲ್ಲ ನಹಪಾನನ ಕೈಯಲ್ಲೇ ಇದ್ದಿರಬೇಕು. ಅವನ ಕೈಕೆಳಗೆ ಇದ್ದ ಸಾಮಂತರಾಜರುಗಳೆಲ್ಲ ತಮ್ಮ ತಮ್ಮ ಚಿತ್ರಗಳನ್ನು ನಾಣ್ಯಗಳ ಮೇಲೆ ಅಚ್ಚೊತ್ತಿದ್ದರೂ ಶಾಸನದಲ್ಲಿ ಮಾತ್ರ ಇದು ನಹಪಾನನಿಗೇ ಸೇರಿದ್ದು ಎಂಬುದನ್ನು ಘಂಟಾಘೋಷವಾಗಿ ತಿಳಿಸಿದ್ದಾರೆ. ಇದರಿಂದ ಎಲ್ಲಾ ನಾಣ್ಯಗಳೂ ರಾಜ್ಯದ ಎಲ್ಲಾ ಕಡೆಯಲ್ಲೂ ಚಲಾವಣೆಯಲ್ಲಿರಲು ಸಹಾಯಕವಾಗುತ್ತಿತ್ತು. ಈ ನಾಣ್ಯಗಳ ಮೇಲಿನ ಚಿತ್ರಗಳಲ್ಲಿರುವ ಎಲ್ಲಾ ಸಾಮಂತರಾಜರೂ ನಹಪಾನನ ಸಮಕಾಲೀನರೇ ಆಗಿರಬೇಕು. ಯಾರೂ ನಹಪಾನನ ಅನಂತರ ಬಂದವರಲ್ಲ. ಏಕೆಂದರೆ ಈಗ ಸಿಕ್ಕಿರುವ ನಾಣ್ಯರಾಶಿಯಲ್ಲಿ ನಹಪಾನನಿಗೆ ಸಂಬಂಧಿಸಿದಂತೆ ಇರುವ ಎಲ್ಲ ರೀತಿಯ ನಾಣ್ಯಗಳ ಮೇಲೂ ವಿಜಯೀ ಗೌತಮೀಪುತ್ರನ ಚಿಹ್ನೆ ಇದೆ.

ನಾಸಿಕ್ ಗುಹೆಯಲ್ಲಿರುವ ಗೌತಮಿ ಬಾಲಶ್ರೀಯ (ಗೌತಮೀಪುತ್ರ ಶಾತಕರ್ಣಿಯ ತಾಯಿ) ಶಾಸನವೂ ಈ ಅಭಿಪ್ರಾಯವನ್ನು ಪುಷ್ಟೀಕರಿಸುತ್ತದೆ. ಆ ಶಾಸನದಲ್ಲಿ ಆಕೆ 'ಖಕರಾತ ವಂಶವನ್ನು ಬೇರು ಸಹಿತ ಕಿತ್ತೊಗೆದ' ಎಂದು ಗೌತಮೀಪುತ್ರ ಶಾತಕರ್ಣಿಯ ವಿಷಯವಾಗಿ ಹೇಳುತ್ತಾಳೆ. ಇದು ಅಕ್ಷರಶಃ ನಿಜವಿರಬೇಕು. ನಹಪಾನನ ವಂಶಜರು ಸಾಮಂತರಾಗಿ ರಾಜ್ಯದ ವಿವಿಧ ಭಾಗಗಳನ್ನು ಆಳುತ್ತಿದ್ದಿರಬೇಕು. ಗೌತಮೀಪುತ್ರ ಅವರೆಲ್ಲರನ್ನೂ ಸೋಲಿಸಿರಬೇಕು. ನಹಪಾನ ಈ ಯುದ್ಧದಲ್ಲಿ ಮಡಿದ ಎಂದು ಖಂಡಿತವಾಗಿ ಹೇಳಲಾಗದಿದ್ದರೂ ಅವನು 'ಬದುಕಿದ್ದೂ ಸತ್ತಂತೆಯೇ' ಜೀವಿಸಿರಬೇಕು. ಏಕೆಂದರೆ ನಹಪಾನನು ಕೈಕೆಳಗಿದ್ದ ರಾಜ್ಯಭಾಗಗಳೆಲ್ಲಾ ಶಾತಕರ್ಣಿಯ ವಶವಾದುವೆಂಬುದನ್ನು ನಾವು ನಾಸಿಕ್ ಶಾಸನದಲ್ಲಿ ಕಾಣುತ್ತೇವೆ.

ಈಗ ಸಿಕ್ಕಿರುವ ನಾಣ್ಯಗಳಲ್ಲಿರುವ ನಹಪಾನನ ಚಿಹ್ನೆಯನ್ನು ವೀಕ್ಷಿಸಿ ಅವನಿಗೂ ಅನಂತರ ಬಂದ ಕ್ಷತ್ರಪರಿಗೂ ಏನಾದರೂ ಸಂಬಂಧವಿದೆಯೇ ಎಂಬುದನ್ನು ನೋಡೋಣ. ನಹಪಾನ ತನ್ನ ನಾಣ್ಯಗಳಿಗೆ ಗ್ರೀಕ್ ಮತ್ತು ರೋಮನ್ ನಾಣ್ಯಪದ್ಧತಿಯನ್ನು ಆಧಾರವಾಗಿಟ್ಟುಕೊಂಡಂತೆ ಕಂಡುಬರುತ್ತದೆ. ಆದರೆ ನಹಪಾನ ಉಪಯೋಗಿಸಿದ ವಜ್ರಾಯುಧ (ಥಂಡರ್‌ಬೋಲ್ಟ್) ಮತ್ತು ಬಾಣದ ಚಿಹ್ನೆಯನ್ನು ಅವನ ಅನಂತರ ಬಂದ ಯಾವ ರಾಜರೂ ಉಪಯೋಗಿಸಿಲ್ಲ. ಅವನ ಕಾಲಕ್ಕಿಂತ ಹಿಂದೆ ಇದ್ದ ರಾಜರೂ ಈ ಚಿಹ್ನೆಯನ್ನು ಉಪಯೋಗಿಸಿದಂತೆ ಕಂಡುಬರುವುದಿಲ್ಲ. ಈ ಚಿಹ್ನೆ ನಹಪಾನನಲ್ಲಿ ಪ್ರಾರಂಭವಾಗಿ ನಹಪಾನನೊಂದಿಗೇ ಕೊನೆಗಂಡಿತು. ಚಷ್ಟಣ ಹಾಗೂ ಅವನ ವಂಶದ ಕ್ಷತ್ರಪರಾಜರು ಸೂರ್ಯಚಂದ್ರರಿರುವ ಚೈತ್ಯದ ಚಿಹ್ನೆಯನ್ನು ಉಪಯೋಗಿಸಿದ್ದಾರೆ. ಈ ಚಿಹ್ನೆಗಳು ಧಾರ್ಮಿಕ ಅರ್ಥವನ್ನು ಹೊಂದಿರುವುದು ಸಾಧ್ಯ ಎಂದು ಪ್ರೊ. ಸ್ಕಾಟ್ ಅಭಿಪ್ರಾಯಪಡುತ್ತಾರೆ. ಅವರ ಅಭಿಮತದಲ್ಲಿ ನಹಪಾನನ ಚಿಹ್ನೆ ಹಿಂದೂ ಧರ್ಮವನ್ನೂ ಚಷ್ಟಣನ ಚಿಹ್ನೆ ಬೌದ್ಧ ಧರ್ಮವನ್ನೂ ಪ್ರತಿಬಿಂಬಿಸುತ್ತವೆ. ಹಾಗಾದರೆ ನಹಪಾನ ಮತ್ತು ಚಷ್ಟಣ ಒಂದೇ ವಂಶದವರಲ್ಲವೇ ? ಇರಲಾರರು. ನಹಪಾನ ಮತ್ತು ಚಷ್ಟಣ ಹೆಚ್ಚು ಕಡಿಮೆ ಸಮಕಾಲೀನರೆಂದು ನಮಗೆ ತಿಳಿದಿದೆ. ನಹಪಾನ ಚಕ್ರವರ್ತಿಯಾಗಿದ್ದಾಗ ಚಷ್ಟಣ ಎಲ್ಲೋ ಸಣ್ಣ ರಾಜನಿದ್ದಿರಬಹುದು. ಶಾತಕರ್ಣಿಯಿಂದ ನಹಪಾನನ ವಂಶ ಹಾಗೂ ರಾಜ್ಯ ನಾಶವಾದ ಮೇಲೆ ಚಷ್ಟಣ ತನ್ನ ಸ್ವಶಕ್ತಿಯಿಂದ ರಾಜ್ಯ ಸಂಪಾದಿಸಿರಬೇಕು. ಗೌತಮೀಪುತ್ರ ಶಾತಕರ್ಣಿಯ ಮಗ ವಾಸಿಷ್ಠೀಪುಲುಮಾಯಿಯ ಕಾಲದಲ್ಲಿ ಚಷ್ಟಣ ಒಬ್ಬ ಬಲಶಾಲಿ ರಾಜನಾಗಿದ್ದ ಎಂದು ಟಾಲೆಮಿಯಿಂದ ತಿಳಿಯುತ್ತೇವೆ. ನಹಪಾನನ ನಾಣ್ಯದ

ಮೇಲಿರುವ ಚಿತ್ರಗಳಿಗೂ ಚಷ್ಟಣನ ವಂಶದ ರಾಜರ ನಾಣ್ಯದ ಮೇಲಿರುವ ಚಿತ್ರಗಳಿಗೂ ಅನೇಕ ವ್ಯತ್ಯಾಸಗಳಿವೆ. ತಲೆಕೂದಲನ್ನು ಚಿತ್ರಿಸಿರುವ ರೀತಿಯೇ ವಿಭಿನ್ನವಾಗಿದೆ. ತಲೆಟೊಪ್ಪಿಗೆಯ ರೂಪಗಳೂ ಬೇರೆಬೇರೆ ರೀತಿಯವು. ನಹಪಾನನ ನಾಣ್ಯಗಳ ಚಿತ್ರದಲ್ಲಿ ಮೀಸೆಯಿಲ್ಲ. ಚಷ್ಟಣನ ವಂಶದ ರಾಜರ ಚಿತ್ರಗಳಲ್ಲಿ ಮೀಸೆ ಇದೆ. ಈ ವಿಧದ ವ್ಯತ್ಯಾಸಗಳೂ ಇರುವುದರಿಂದ ನಹಪಾನ ಹಾಗೂ ಚಷ್ಟಣನಿಗೆ ಸಂಬಂಧವಿರಲಿಲ್ಲವೆಂದು ಹೇಳಿದರೆ ತಪ್ಪಾಗಲಾರದು. ಇಷ್ಟೇ ಅಲ್ಲದೆ ಚಷ್ಟಣನ ವಂಶದ ರಾಜರ ವಂಶಾವಳಿಗಳಲ್ಲಿ ಚಷ್ಟಣನದೇ ಮೊದಲ ಹೆಸರು. ನಹಪಾನನ ಹೆಸರು ಎಲ್ಲೂ ಕಂಡುಬರುವುದಿಲ್ಲ. ಅಂದರೆ ರಾಜರ ವಂಶಾವಳಿಗಳೂ ನಮ್ಮ ಸಿದ್ಧಾಂತವನ್ನು ಪುಷ್ಟೀಕರಿಸುತ್ತವೆ.

ಇನ್ನು ಗೌತಮೀಪುತ್ರ ಶಾತಕರ್ಣಿಯ ಚಿಹ್ನೆ ಇರುವ ನಾಣ್ಯಗಳನ್ನು ನೋಡೋಣ. ಇಲ್ಲಿಯ ಶಾಸನ ಪ್ರಾಪ್ತಿಯಲ್ಲಿದೆ. ಈ ಶಾಸನ ನಾಸಿಕ್ ಶಾಸನದ ಕಾಲಕ್ಕೆ ಸೇರುತ್ತದೆ ಎಂದು ಪಂಡಿತರು ಅಭಿಪ್ರಾಯಪಡುತ್ತಾರೆ. ಶಾಸನ ಹೀಗಿದೆ: "ರಾಞೋ ಗೋತಮಿ ಪುತ್ರಸ ಸಿರಿಶಾತಕಣಿಸ"—ಎಂದರೆ ಗೌತಮೀಪುತ್ರ ಶಾತಕರ್ಣಿಗೆ ಸೇರಿದ್ದು.

ಅಕ್ಷರಗಳಿರುವ ವಿವಿಧ ರೀತಿಗಳು. ಆಕಾರಗಳನ್ನು ನೋಡಿದರೆ ಈ ನಾಣ್ಯಗಳನ್ನು ಬೇರೆಬೇರೆ ಕಡೆ ಅಚ್ಚೊತ್ತಿದ್ದಂತೆ ಕಾಣುತ್ತದೆ. ಚಿಹ್ನೆಗಳಲ್ಲೂ ನಾವು ಸಣ್ಣಸಣ್ಣ ವ್ಯತ್ಯಾಸಗಳನ್ನು ಕಾಣುತ್ತೇವೆ.

‘ಚೈತ್ಯ’ ಚಿಹ್ನೆಗಳು

ಈ ಚಿಹ್ನೆಗಳು ಚರಿತ್ರಕಾರರಿಗೆ ಹೊಸವೇನಲ್ಲ. ಇವು ಬಹಳ ಹಿಂದಿನ ಕಾಲದ ನಾಣ್ಯಗಳ ಮೇಲೂ ಕಂಡುಬರುತ್ತವೆ. ಕ್ರಿ.ಪೂ. ಸುಮಾರು 200ಕ್ಕೆ ಸೇರುವ ತಕ್ಷಶಿಲೆಯ ನಾಣ್ಯಗಳಲ್ಲೂ ಈ ಚಿಹ್ನೆಗಳನ್ನು ನಾವು ನೋಡುತ್ತೇವೆ. ಅಂಥ ಪ್ರಾಚೀನ ಚಿಹ್ನೆಗಳನ್ನು ಚಷ್ಟಣ ಮತ್ತು ಅವನ ವಂಶಜರೂ ಉಪಯೋಗಿಸುತ್ತಿದ್ದುದು ಗಮನಾರ್ಹ ವಿಷಯ. ಇದರಿಂದ ಶಾತವಾಹನ ಹಾಗೂ ಕ್ಷತ್ರಪ ವಂಶಗಳ ನಿಕಟಸಂಬಂಧವನ್ನು ನಾವು ಸುಲಭವಾಗಿ ಊಹಿಸಬಹುದು.

ಮಹಾಕ್ಷತ್ರಪ ರುದ್ರದಾಮನನ (ಚಷ್ಟಣನ ಮೊಮ್ಮಗ) ಜುನಾಗಢ್ ಶಾಸನವನ್ನು (ಕ್ರಿ.ಶ. 150) ನಾವು ಇಲ್ಲಿ ಸ್ಮರಿಸಬಹುದು. ರುದ್ರದಾಮನ್ ಆ ಶಾಸನದಲ್ಲಿ ತಾನು ಶಾತಕರ್ಣಿಯನ್ನು (ಯಾವ ನಿರ್ದಿಷ್ಟ ಶಾತಕರ್ಣಿ ಎಂದು ನಿಶ್ಚಿತವಾಗಿ ಹೇಳಬರುವುದಿಲ್ಲ) ಎರಡು ಬಾರಿ ಸೋಲಿಸಿದುದಾಗಿಯೂ ಆದರೆ ಅವನು ಹತ್ತಿರ ಸಂಬಂಧಿಯಾದುದರಿಂದ ಅವನನ್ನು ಕೊಲ್ಲದೆ ಇದ್ದುದಾಗಿಯೂ ಹೇಳುತ್ತಾನೆ. ಹಾಗಾದರೆ ಚೈತ್ಯ ಚಿಹ್ನೆ ಅವರಿಬ್ಬರಲ್ಲೂ ಇರಲು ಕಾರಣ ಅವರಲ್ಲಿದ್ದ ಸಂಬಂಧವೇ ಇರಬಹುದಲ್ಲವೆ? ನಾನಘಾಟ್ ಶಾಸನದಲ್ಲಿ ರುದ್ರದಾಮನ ಅಳಿಯನಾದ ಒಬ್ಬ ಶಾತಕರ್ಣಿಯ ಹೆಸರು ಬರುತ್ತದೆ. ಹಾಗಾದರೆ ರುದ್ರದಾಮನ ಕಾಲದಿಂದ ಮಾತ್ರ ಎರಡು ವಂಶಕ್ಕೂ ಸಂಬಂಧವಾಯಿತೇ ಎಂಬುದು ಒಂದು ಮುಖ್ಯಪ್ರಶ್ನೆ. ಆಗ ಚಷ್ಟಣನ ಕಾಲದಿಂದ ಇರುವ ಚೈತ್ಯದ ಚಿಹ್ನೆಯನ್ನು ವಿವರಿಸುವುದು ಕಷ್ಟವಾಗುತ್ತದೆ. ಅದನ್ನು ಹೀಗೆ ವಿವರಿಸಬಹುದು. ನಹಪಾನ ನಾಶವಾದಮೇಲೆ ಚಷ್ಟಣ ಗೌತಮೀಪುತ್ರನನ್ನು ವಿರೋಧಿಸುವ ಸಾಹಸ ಮಾಡಲಿಲ್ಲ. ಇಬ್ಬರೂ ಸ್ನೇಹಿತರಾಗೇ ಇದ್ದಿರಬೇಕು. ನಹಪಾನ ನಾಶವಾಗಲು ಚಷ್ಟಣ ಗೌತಮೀಪುತ್ರ ಶಾತಕರ್ಣಿಗೆ ಸಹಾಯಕನಾಗಿದ್ದಿರಬಹುದು. ವಂಶಾನುಗತವಾಗಿ ಬಂದ ಸ್ನೇಹ ರುದ್ರದಾಮನ ಕಾಲದಲ್ಲಿ ರಕ್ತಸಂಬಂಧಕ್ಕೆಡೆಕೊಟ್ಟಿರಬೇಕು. ಮಹಾಕ್ಷತ್ರಪ ಚಷ್ಟಣ ಗೌತಮೀಪುತ್ರ ಶಾತಕರ್ಣಿಯರ ಸ್ನೇಹಕ್ಕೆ ಲಿಖಿತ ಸಾಕ್ಷ್ಯವಿಲ್ಲದಿದ್ದರೂ ನಾಣ್ಯದ ಮೇಲಿರುವ ಈ ಸಾಮ್ಯ ಹಾಗೂ ಆಗಿನ ಸ್ಥಿತಿಗತಿಗಳು ಈ ಅಭಿಪ್ರಾಯಕ್ಕೆ ಪುಷ್ಟಿಕೊಡುತ್ತವೆ ಎಂದು ಅನ್ನಿಸುತ್ತದೆ.

ಇನ್ನೊಂದು ಮುಖ್ಯ ಸಂಗತಿ ಎಂದರೆ ಈಗ ಸಿಕ್ಕಿರುವ ನಾಣ್ಯರಾಶಿಯಲ್ಲಿ ಶಾತಕರ್ಣಿಯದೇ ಆದ ಸ್ವಂತ ನಾಣ್ಯ ಒಂದಾದರೂ ಸಿಕ್ಕಿಲ್ಲ. ಇದರಿಂದ ಉದ್ಭವಿಸುವ ಪ್ರಶ್ನೆ ಎಂದರೆ ಶಾತಕರ್ಣಿ ತನ್ನದೇ ಆದ ನಾಣ್ಯಗಳನ್ನು ಅಚ್ಚೊತ್ತಿಸಿದ್ದನೇ ಇಲ್ಲವೇ ಎಂಬುದು. ಗೌತಮಿ ಬಾಲಶ್ರೀಯ ನಾಸಿಕ್ ಶಾಸನವನ್ನು ಪುನಃ ಸ್ಮರಿಸಿದರೆ ಇದಕ್ಕೆ ಉತ್ತರ ಸಿಗುತ್ತದೆ. ಅಲ್ಲಿ ಬಾಲಶ್ರೀ ತನ್ನ ಮಗನ ವಿಚಾರವಾಗಿ ಹೇಳುತ್ತ,

"ತನ್ನ ವಂಶವನ್ನು ಅಪಾರ ಸಂಪತ್ತಿಗೆ ಏರಿಸಿದ" ಎನ್ನುತ್ತಾನೆ. ನಹಪಾನ ಅತುಲೈಶ್ವರ್ಯವನ್ನು ಸೇರಿಸಿದ್ದನೆಂಬುದು ಇತರ ಮೂಲಗಳಿಂದ ತಿಳಿಯುತ್ತದೆ. ನಹಪಾನನನ್ನು ಸೋಲಿಸುವ ಮೂಲಕ ಗೌತಮೀಪುತ್ರ ತನ್ನ ವಂಶದ ಹೆಸರಿನ ಜೊತೆಗೆ ಸಂಪತ್ತನ್ನೂ ಹೆಚ್ಚಿಸಿರಬೇಕು. ಇದರಿಂದ ತನ್ನದೇ ಆದ ನಾಣ್ಯಗಳನ್ನು ಅಚ್ಚೊತ್ತಿಸುವ ಅಗತ್ಯ ಗೌತಮೀಪುತ್ರನಿಗೆ ಕಾಣಬರಲಿಲ್ಲ.

ಈಗ ಸಿಕ್ಕಿರುವ ನಾಣ್ಯಗಳ ರಾಶಿ ಒಟ್ಟು ಇದ್ದ ನಾಣ್ಯಗಳ ಒಂದು ಸಣ್ಣ ಅಂಶವಿರಬೇಕು. ಅಂದರೆ ಇನ್ನೂ ಬೆಳಕನ್ನು ಕಾಣಬೇಕಾದ ನಾಣ್ಯಗಳೆಷ್ಟಿವೆಯೊ. ಅವು ಬೆಳಕಿಗೆ ಬರುವ ಸುದಿನವನ್ನು ನೆನೆಸಿಕೊಂಡು ಚರಿತ್ರಕಾರನ ಹೃದಯ ಪುಳಕಿತಗೊಳ್ಳುತ್ತದೆ.

ಕರ್ನಾಟಕದ ನಾಣ್ಯ ಪದ್ಧತಿಯ ಬಗ್ಗೆ ನಮಗೆ ಖಚಿತವಾದ ಮಾಹಿತಿ ದೊರಕುವುದು ಸಾತವಾಹನರ ಕಾಲದಿಂದ. ಕರ್ನಾಟಕದ ಬಹುಭಾಗ ಅವರ ಅಧಿಪತ್ಯಕ್ಕೆ ಒಳಪಟ್ಟಿತ್ತು. ಈ ಭಾಗಗಳಲ್ಲಿ ಅವರ ನಾಣ್ಯಗಳು ಹೇರಳವಾಗಿ ದೊರೆತಿವೆ. ಸಾತವಾಹನರ ನಾಣ್ಯಗಳು ವೈವಿಧ್ಯಪೂರ್ಣವಾಗಿಯೂ ಅವರ ಇತಿಹಾಸರಚನೆಗೆ ಬಹು ಉಪಯುಕ್ತವೂ ಆಗಿವೆ. ಅವರ ನಾಣ್ಯಗಳು ವಿಶೇಷವಾಗಿ ಸೀಸ ಮತ್ತು ತಾಮ್ರಗಳಲ್ಲಿವೆ. ಬೆಳ್ಳಿಯ ನಾಣ್ಯಗಳು ಬಲು ವಿರಳ. ಆದರೆ ಚಿನ್ನದ ನಾಣ್ಯಗಳು ದೊರೆತಿಲ್ಲ. ಆ ನಾಣ್ಯಗಳಲ್ಲಿ ವಿದೇಶೀಯ ಪ್ರಭಾವ ಕಾಣಬರುವುದಿಲ್ಲ. ಅಲ್ಲದೆ ಅವು ಕಲಾತ್ಮಕವಾಗಿಯಾಗಲಿ ನೋಡಲು ಸುಂದರವಾಗಿಯಾಗಲಿ ಇಲ್ಲ. ಬೆಳ್ಳಿಯ ನಾಣ್ಯಗಳಲ್ಲಿ ಒಂದು ಕಡೆ ರಾಜನ ಚಿತ್ರವೂ ಮತ್ತೊಂದು ಕಡೆ ಆನೆ. ಕುದುರೆ. ಸಿಂಹ. ಬಿಲ್ಲು-ಬಾಣ ಮುಂತಾದ ಚಿತ್ರಗಳೂ ಇವೆ. ಕೆಲವು ನಾಣ್ಯಗಳಲ್ಲಿ ಶಾಸನಗಳೂ ಉಂಟು. ಗೌತಮೀಪುತ್ರ ಸಾತಕರ್ಣಿ ದೊರೆ ನಹಪಾನನನ್ನು ಸೋಲಿಸಿ ಅವನ ರಾಜ್ಯವನ್ನು ತನ್ನ ವಶಮಾಡಿಕೊಂಡು ಆ ಪ್ರದೇಶದಲ್ಲಿ ಬಳಕೆಯಲ್ಲಿದ್ದ ನಹಪಾನನ ನಾಣ್ಯಗಳನ್ನು ಹಿಂದಕ್ಕೆ ತೆಗೆದುಕೊಂಡು ಅವುಗಳ ಮೇಲೆ ತನ್ನ ಹೆಸರಿನ ಶಾಸನ ಮುದ್ರಿಸಿದ. ಮತ್ತೊಬ್ಬ ಸಾತವಾಹನ ದೊರೆ ಯಜ್ಞಶ್ರೀ ಸಾತಕರ್ಣಿಯ ನಾಣ್ಯಗಳಲ್ಲಿ ಹಡಗಿನ ಚಿತ್ರವಿದೆ. ಆ ಕಾಲದಲ್ಲಿ ನೌಕಾಯಾನ ಎಷ್ಟೊಂದು ಮುಂದುವರಿದಿತ್ತೆಂಬುದನ್ನು ಇದು ಸೂಚಿಸುತ್ತದೆ. ಚಿತ್ರದುರ್ಗ ಜಿಲ್ಲೆಯ ಚಂದ್ರವಳ್ಳಿಯಲ್ಲಿ ಅಗೆತ ಮಾಡಿದಾಗ ಸಾತವಾಹನರ ಅನೇಕ ನಾಣ್ಯಗಳು ದೊರೆತುವು. ಇಲ್ಲಿ ದೊರೆತ ಚೀನೀ ನಾಣ್ಯವೊಂದು ಕ್ರಿ. ಪೂ. 2ನೆಯ ಶತಮಾನಕ್ಕೆ ಸೇರಿದುದೆಂದು ಭಾವಿಸಲಾಗಿತ್ತು. ಆದರೆ ಅದು ಅಷ್ಟೊಂದು ಪ್ರಾಚೀನವಾದುದಲ್ಲವೆಂದು ಇತ್ತೀಚಿನ ಸಂಶೋಧನೆಗಳಿಂದ ತಿಳಿದುಬಂದಿದೆ.

ಚಿತ್ರದುರ್ಗ ಜಿಲ್ಲೆಯಲ್ಲಿ ಸಾತವಾಹನರ ಸಮಕಾಲೀನರೂ ಸಾಮಂತರೂ ಆದ ದೊರೆಗಳು ಆಳುತ್ತಿದ್ದರು. ಮಹಾರಥಿಗಳು ಅಥವಾ ಸದಕನ ವಂಶಕರು ಎಂದು ಪ್ರಸಿದ್ಧರಾಗಿರುವ ಇವರು ಸೀಸದ ನಾಣ್ಯಗಳನ್ನು ಅಚ್ಚುಹಾಕಿಸಿದರು. ಅಗಲವಾದ ಈ ನಾಣ್ಯಗಳಲ್ಲಿ ಒಂದು ಕಡೆ ಎತ್ತಿನ ಚಿತ್ರವೂ ಮತ್ತೊಂದು ಕಡೆ ಬೇಲಿಯೊಳಗಿರುವ ವೃಕ್ಷದ ಚಿತ್ರವೂ ಇವೆ. ಉತ್ತರಕನ್ನಡ ಜಿಲ್ಲೆಯಲ್ಲಿ ಸಾತವಾಹನರ ಸಾಮಂತರೇ ಆದ ಆನಂದವಂಶದ ರಾಜರು ಆಳುತ್ತಿದ್ದರು. ಚುಟುಕುಲಾನಂದ. ಮುಡಾನಂದ ಎಂಬ ರಾಜರು ಆಳುತ್ತಿದ್ದುದು ಇವರ ಸೀಸದ ನಾಣ್ಯಗಳಿಂದ ತಿಳಿದು ಬರುತ್ತದೆ. ಅಗಲವಾಗಿರುವ ಇವರ ನಾಣ್ಯಗಳಲ್ಲಿ ಬ್ರಾಹ್ಮೀ ಲಿಪಿಯ ಶಾಸನ. ಬೇಲಿಯೊಳಗಿನ ವೃಕ್ಷ. ಕಮಾನುಗಳ ಗುಪ್ಪೆ ಇವುಗಳ ಚಿತ್ರವನ್ನು ಕಾಣ ಬಹುದು. ಬನವಾಸಿ. ಕಾರವಾರ, ಚಂದ್ರವಳ್ಳಿ ಮುಂತಾದೆಡೆಗಳಲ್ಲಿ ಇವರ ನಾಣ್ಯಗಳು ದೊರಕಿವೆ.1

---

1 ಕರ್ನಾಟಕದ ನಾಣ್ಯಗಳು: ಕನ್ನಡ ವಿಶ್ವಕೋಶ, ಸಂಪುಟ 4: ಪು. 119

ಬಿ. ಎಂ. ಪಂಡಿತ

ಪಂಚವಾರ್ಷಿಕ ಯೋಜನೆಗಳಲ್ಲಿ ಕೃಷಿರಂಗ

ವಿದೇಶೀಯರ ಆಳ್ವಿಕೆಯ ಕಾಲದಲ್ಲಿ ಭಾರತದಲ್ಲಿ ಕ್ಷಾಮ ಸಾಮಾನ್ಯವಾಗಿತ್ತು. ಮೂರು ವರ್ಷಕ್ಕೊಮ್ಮೆ ಅಧಿಕಮಾಸ ಹೇಗೋ ಹಾಗೆ ಮೂವತ್ತು ವರುಷಕ್ಕೊಮ್ಮೆ ಬರ ಎಂಬುದು ನಮ್ಮಲ್ಲಿ ಹಳೆಯ ಪ್ರತೀತಿ. "ಬರಗಾಲದಲ್ಲಿ ಅಧಿಕಮಾಸ" ಎಂಬುದು ಒಂದು ಗಾದೆ. ಪ್ರಕೃತಿಯ ವಿಕ್ರಮ ಪ್ರಕೋಪ, ಆಡಳಿತದಲ್ಲಿ ಅಲಕ್ಷ್ಯ. ಸಾರಿಗೆ–ಸಂಚಾರದಲ್ಲಿ ಅವ್ಯವಸ್ಥೆ. ಕಾಯಕಪ್ರೀತಿಯ ಮತ್ತು ಕಾರ್ಯದಕ್ಷತೆಯ ನಿರ್ಲಕ್ಷ್ಯ—ಇವು ಕ್ಷಾಮಗಳಿಗೆ ಕಾರಣಗಳು. ಸುಮಾರು 2.14 ಕೋಟಿ ಜನ ಕಳೆದ ಶತಮಾನದಲ್ಲಿ ಕ್ಷಾಮಕ್ಕೀಡಾಗಿ ಸತ್ತರೆಂದು ಅಂದಾಜಿಸಲಾಗಿದೆ. ದ್ವಿತೀಯ ಮಹಾಯುದ್ಧಕಾಲದಲ್ಲಿ ಬಂಗಾಳದಲ್ಲಿ ಸಂಭವಿಸಿದ ಬರದಿಂದಾಗಿ ಸತ್ತವರ ಸಂಖ್ಯೆ ಮೂವತ್ತೈದು ಲಕ್ಷ. ಭಾರತಕ್ಕೆ ಸ್ವಾತಂತ್ರ್ಯ ಪ್ರಾಪ್ತಿಯಾದ ಅನಂತರ ಇಂತಹ ಭೀಕರ ಬರ ತಲೆದೋರದಂತೆ ಆರ್ಥಿಕ ಹಾಗೂ ಭೌತಿಕ ಪ್ರಗತಿಗೆ ಮೂಲಾಧಾರವಾಗಿ ಹಸಿವಿನ ವಿಮೋಚನೆಗೆ ಜನರಿಂದಲೂ ಸರ್ಕಾರದಿಂದಲೂ ನಾನಾ ಕ್ರಮಗಳು ಜಾರಿಗೆ ಬಂದಿವೆ.

"ಭಾರತದಲ್ಲಿ ಹಿಂದುಳಿದ ವರ್ಗದವರಿದ್ದಾರೆ; ಹಿಂದುಳಿದ ಉದ್ಯಮಗಳೂ ಇವೆ. ದುರ್ದೈವದಿಂದ ಒಕ್ಕಲುತನವೂ ಅವುಗಳಲ್ಲಿ ಒಂದಾಗಿದೆ" ಎಂದು ಭಾರತ ಸರ್ಕಾರದ ಹಿಂದಿನ ಕೃಷಿಸಲಹೆಗಾರ ಡಾ. ಕ್ಲಾಸ್ಟನ್ ಭಾರತೀಯ ಒಕ್ಕಲುತನದ ವಿಷಯವಾಗಿ ನುಡಿದರು. ಆದರೆ ಇಂದು ನಮ್ಮ ಒಕ್ಕಲುತನ ನೊಗ ಮತ್ತು ಜೋಡೆತ್ತುಗಳಿಂದ ಕೂಡಿರುವ ಕೇವಲ ವ್ಯವಸಾಯವಾಗಿರದೆ ದೊಡ್ಡ ಉದ್ಯಮವಾಗಿ ರೂಪುಗೊಳ್ಳುತ್ತಿದೆ. ದೇಶವೆಂಬ ಮನೆಗೆ ಮೂಲಭೂತ ಕಂಬಗಳಂತಿರುವ ಕೃಷಿರಂಗದಲ್ಲಿಯ ಸಮಸ್ಯೆಗಳನ್ನು ಸರ್ವೇಕ್ಷಣದಿಂದ ಸೂಕ್ಷ್ಮವಾಗಿ ವಿವೇಚಿಸಿ ಅವುಗಳಿಗೆ ಸೂಕ್ತ ಪರಿಹಾರೋಪಾಯಗಳನ್ನು ಕೈಕೊಂಡು ಕೃಷಿಪ್ರಪಂಚಕ್ಕೆ ಹೊಸ ಚೈತನ್ಯ ನೀಡಲು ಸ್ವಾತಂತ್ರ್ಯೋತ್ತರ ವರ್ಷಗಳಲ್ಲಿ ಭಾರತ ಸರ್ಕಾರ ಹಲವು ಬಗೆಯ ಯೋಜನೆಗಳನ್ನು ಅನುಷ್ಠಾನಕ್ಕೆ ತರುತ್ತಿರುವುದು ಆರ್ಥಿಕ ಹಾಗೂ ಸಾಮಾಜಿಕ ದೃಷ್ಟಿಯಿಂದ ಅತ್ಯಂತ ಗಮನಾರ್ಹವಾದ ಸಂಗತಿಯಾಗಿದೆ.

ಹಸುರು ಕ್ರಾಂತಿಯೆಡೆಗೆ ಹೆಜ್ಜೆ

ಸ್ವಾತಂತ್ರ್ಯಪ್ರಾಪ್ತಿಯ ವರ್ಷಗಳಲ್ಲಿ ದೇಶದ ಕೃಷಿರಂಗ ಅನಿಶ್ಚಿತತೆಗಳ ಆಗರವಾಗಿತ್ತು. ಪುಷ್ಕಳ ಆಹಾರಜಿನಸುಗಳನ್ನು ಪರರಾಷ್ಟ್ರಗಳಿಂದ ಆಮದು ಮಾಡಿಕೊಳ್ಳಲಾಯಿತು. 1948ರಲ್ಲಿ 29 ಲಕ್ಷ ಟನ್ನುಗಳು, 1949ರಲ್ಲಿ 39 ಲಕ್ಷ ಟನ್ನುಗಳು, 1950 ರಲ್ಲಿ 21 ಲಕ್ಷ ಟನ್ನುಗಳು, ಪ್ರಥಮ ಪಂಚವಾರ್ಷಿಕ ಯೋಜನೆಯನ್ನು ಪ್ರಾರಂಭಿಸಿದ ವರ್ಷದಲ್ಲಿ ಅಂದರೆ 1951ರಲ್ಲಿ 48 ಲಕ್ಷ ಟನ್ನುಗಳಷ್ಟು ಆಹಾರಜಿನಸುಗಳನ್ನು ವಿದೇಶಗಳಿಂದ ತರಿಸಿಕೊಳ್ಳಲಾಯಿತು. ಅಂದು 1,320 ಲಕ್ಷ ಹೆಕ್ಟೇರುಗಳಷ್ಟು ಕ್ಷೇತ್ರದಲ್ಲಿ ಆಹಾರಸಾಮಗ್ರಿಗಳನ್ನು ಬೆಳೆಸಲಾಗುತ್ತಿತ್ತು. ಇವುಗಳ ಪೈಕಿ

1,010 ಲಕ್ಷ ಹೆಕ್ಟೇರುಗಳಲ್ಲಿ ಆಹಾರಧಾನ್ಯಗಳನ್ನೂ 210 ಲಕ್ಷ ಹೆಕ್ಟೇರುಗಳಲ್ಲಿ ವಾಣಿಜ್ಯ ಬೆಳೆಗಳನ್ನೂ ಉಳಿದ 100 ಲಕ್ಷ ಹೆಕ್ಟೇರುಗಳಲ್ಲಿ ಹಣ್ಣುಹಂಪಲುಗಳನ್ನೂ ಬೆಳೆಸಲಾಗುತ್ತಿತ್ತು. ಅಂದು ಅಂದಾಜಿಸಲಾಗಿದ್ದ ಜನಸಂಖ್ಯೆ 35 ಕೋಟಿ. ಆಹಾರೋತ್ಪಾದನೆ 549 ಲಕ್ಷ ಟನ್ನು ಗಳು. 1951–52ರಿಂದ 1969–70ರ ವರೆಗಿನ ಹದಿನೆಂಟು ವರ್ಷಗಳಲ್ಲಿ ಪಂಚವಾರ್ಷಿಕ ಯೋಜನೆಗಳ ಪ್ರಭಾವ, ಹೊಸ ತಳಿಗಳ ವಿಕಾಸ, ನೀರಾವರಿ, ರಾಸಾಯನಿಕ ಗೊಬ್ಬರ, ಯಾಂತ್ರಿಕ ಕೃಷಿ ವಿಧಾನ ಇವುಗಳಿಂದಾಗಿ ಹೊಲದ ಮಟ್ಟದಲ್ಲಿ ಸಮಾಧಾನಕರವಾದ ಪ್ರಗತಿ ಕಾಣಬರುತ್ತಲಿದೆ. 'ಹಸುರು ಕ್ರಾಂತಿ' ಇಂದು ಸಂಭವಿಸಿದೆ. ವಿಜ್ಞಾನವನ್ನು ಕೃಷಿಗೆ ಹಚ್ಚಿ ಆಹಾರೋತ್ಪಾದನೆಯನ್ನು ಹೆಚ್ಚಳಗೊಳಿಸುತ್ತಿರುವ ಕ್ರಮವಿದು. "ಈ ಹಸುರುಕ್ರಾಂತಿ ದೇಶದ ಇತರ ಕ್ಷೇತ್ರಗಳ ಸಾಧನೆಯಂತೆಯೇ ಮಾನವಕೋಟಿಯ ಕಲ್ಯಾಣಕ್ಕೆ ಪ್ರಮುಖ ಸಾಧನೆಯಾಗಿದೆ" ಎಂದು ಪತ್ರಿಕೆಗಳು ಹೊಗಳಿವೆ. 1970ರ ನೊಬೆಲ್ ಪ್ರಶಸ್ತಿ ವಿಜೇತ ಡಾ. ಬಾರ್ಲಾಗ್ ಭಾರತಕ್ಕೆ ಅದ್ಭುತ ಉತ್ಪನ್ನ ನೀಡುವ ಗೋಧಿಯನ್ನು ತಂದದ್ದರಿಂದ ಭಾರತದ ಗೋಧಿಯ ಉತ್ಪಾದನೆ ದುಪ್ಪಟ್ಟು ಆಗಿದೆ. ದೇಶದ ಇತರ ಬೆಳೆಗಳ ಇಳುವರಿ ಗಳೂ ಹೆಚ್ಚಾಗಿವೆ. ಇದಕ್ಕಿಂತ ಮಹತ್ತರ ಪ್ರಗತಿಯಾಗುವ ಬಗ್ಗೆಯೂ ಪ್ರತೀಕ್ಷೆ ಇದೆ. 1950–51 ರಲ್ಲಿ 549 ಲಕ್ಷ ಟನ್ನುಗಳಷ್ಟಿದ್ದ ಆಹಾರೋತ್ಪಾದನೆ 1969–70ರ ಬೆಳೆ ವರ್ಷದಲ್ಲಿ 995 ಲಕ್ಷ ಟನ್ನುಗಳಷ್ಟಾಗಿದ್ದು ಹೊಸ ದಾಖಲೆಯ ನಿರ್ಮಾಣವಾಗಿದೆ. ಈ ಹದಿನೆಂಟು ವರ್ಷಗಳಲ್ಲಿ ಪ್ರತಿವರ್ಷವೂ ಆಹಾರೋತ್ಪಾದನೆಯಲ್ಲಿ ಸರಾಸರಿ ಶೇ. 4ರಷ್ಟು ಅಧಿಕತೆ ಉಂಟಾಗಿದೆ. ಈ ಹಿಂದೆ ಸತತವಾಗಿ ಆಹಾರಧಾನ್ಯಗಳ ಕೊರತೆಯನ್ನನುಭವಿಸುತ್ತಿದ್ದ ಅದರ ಇನ್ನುಳಿಕೆ ಆಹಾರ ಧಾನ್ಯಗಳ ನಿರ್ಯಾತಮಾಡುವ ರಾಷ್ಟ್ರಗಳಾಗಲಿರುವ ಆರು ರಾಷ್ಟ್ರಗಳ ಪಾಲಿಕೆಯನ್ನು ಭಾರತ ಅಗ್ರಸ್ಥಲದಲ್ಲಿಯೇ ಸೇರುವುದು ಎಂದು ರೋಮಿನಲ್ಲಿ ಸೇರಿದ್ದ ಆಹಾರ ಮತ್ತು ಬಿತ್ತಲುತನ ಸಂಸ್ಥೆಯ 25ನೆಯ ವಾರ್ಷಿಕೋತ್ಸವಕ್ಕೆ ಸಿದ್ಧಪಡಿಸಿದ ವಿಶೇಷ ವರದಿಯಲ್ಲಿ ವ್ಯಕ್ತಪಡಿಸಿದೆ. ಆದರೆ ಅನುಕ್ರಮವಾಗಿ ಮೂರು ವರ್ಷಗಳ ಕಾಲ ಅತ್ಯುತ್ತಮ ಬೆಳೆ ಬಂದಿದ್ದರೂ ಬೆಲೆ ಏರುತ್ತಿರುವುದು ವಿರೋಧಾಭಾಸ ವೆಂದೇ ಹೇಳಬೇಕು. ಅಭಿವೃದ್ಧಿ ಹೊಂದುತ್ತಿರುವ ಆರ್ಥಿಕ ವ್ಯವಸ್ಥೆಯಲ್ಲಿ ಕೆಲಮಟ್ಟಿನ ಪ್ರಮಾಣದಲ್ಲಿ ಬೆಲೆಯೇರಿಕೆ ಅನಿವಾರ್ಯವಾದುದಾದರೂ ಅದು ಶೇ. 4ರಷ್ಟಕ್ಕೆ ನಿಮಿತಗೊಂಡರೆ ಗಾಬರಿಪಡಬೇಕಾದ ಕಾರಣವೇನಿಲ್ಲ. ಇತ್ತೀಚೆಗೆ ಗ್ರಾಹಕವಸ್ತುಗಳ ಥೋಕ ಬೆಲೆಯ ಸೂಚ್ಯಂಕ ಮೇರೆ ಮೀರಿ ಹೆಚ್ಚುತ್ತಿದೆ. ಬೆಲೆಮಟ್ಟವನ್ನು ಯೋಗ್ಯ ನಿಯಂತ್ರಣದಲ್ಲಿಟ್ಟುಕೊಳ್ಳದಿದ್ದರೆ ನಾಲ್ಕನೆಯ ಯೋಜನೆಯ ಗುರಿಗಳನ್ನು ಸಾಧಿಸುವುದು ಸಾಧ್ಯವಾಗಲಿಕ್ಕಿಲ್ಲ ಎಂಬುದನ್ನು ಮರೆಯುವಂತಿಲ್ಲ.

ಮೊದಲ ಮೂರು ಯೋಜನೆಗಳಲ್ಲಿ

ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ಬಿತ್ತಲುತನ, ನೀರಾವರಿ ಹಾಗೂ ವಿದ್ಯುಚ್ಛಕ್ತಿಗಳ ಪ್ರಾಧ್ಯೆಕೆಗಳಿಗೆ ವಿಶೇಷ ಪ್ರಾಶಸ್ತ್ಯ ಕೊಡಲಾಯಿತು. ಯೋಜನೆಯ ಗಾತ್ರ ರೂ. 2,356 ಕೋಟಿ. ಇದರಲ್ಲಿ ರೂ. 357 ಕೋಟಿ ಎಂದರೆ ಒಟ್ಟು ವೆಚ್ಚದ ಶೇಕಡ 15.1ರಷ್ಟು ಬಿತ್ತಲುತನ ಹಾಗೂ ಸಾಮೂಹಿಕ ಅಭಿವೃದ್ಧಿ ಕಾರ್ಯಗಳಿಗಾಗಿಯೇ ಮೀಸಲಾಗಿತ್ತು. ಈ ಅವಧಿಯಲ್ಲಿ ಕೃಷಿಕ್ಷೇತ್ರದಲ್ಲಾದ ಗಮನಾರ್ಹ ಪ್ರಗತಿ ದೇಶದ ಆರ್ಥಿಕ ಸ್ಥಿತಿಯನ್ನು ಪುರಸ್ಕರಿಸಲು ಪ್ರೋತ್ಸಾಹಕವಾಯಿತು; ಹಾಗೂ ದ್ವಿತೀಯ ಯೋಜನೆಯ ಪ್ರಗತಿಯನ್ನು ಹೆಚ್ಚಿಸಲು ದಾರಿಮಾಡಿಕೊಟ್ಟಿತು. ಎರಡನೆಯ ಪಂಚವಾರ್ಷಿಕ ಯೋಜನೆ ಯಲ್ಲಿ ರೂ. 568 ಕೋಟಿಯನ್ನು ಬಿತ್ತಲುತನ ಹಾಗೂ ಸಮಾಜಾಭಿವೃದ್ಧಿಗೆ ತೆಗೆದಿರಿಸಲಾಯಿತು. ಆದರಲ್ಲಿ ಕೈಗಾರಿಕೆಗೆ ಹೆಚ್ಚಿನ ಪ್ರಾಶಸ್ತ್ಯ ದೊರೆತರೂ ಯೋಜನಾ ಆಯೋಗದವರು ವ್ಯವಸಾಯ ಹಾಗೂ ನೀರಾವರಿಯನ್ನು ಕಡೆಗಣಿಸಲಿಲ್ಲ. ವೆಚ್ಚದ ದೃಷ್ಟಿಯಿಂದ ಎರಡನೆಯ ಯೋಜನೆಯಲ್ಲಿ ಪ್ರಥಮ ಯೋಜನೆಗಿಂತ ಹೆಚ್ಚು ಹಣವನ್ನೇ ವ್ಯವಸಾಯ ಹಾಗೂ ನೀರಾವರಿಗೆ ತೆಗೆದಿಡಲಾಯಿತು. ಯೋಜನಾವಧಿಯಲ್ಲಿ ಕಾರ್ಯರೂಪಕ್ಕೆ ಬಂದ ನಾನಾ ವ್ಯವಸಾಯಾಭಿವೃದ್ಧಿ ಕಾರ್ಯಕ್ರಮಗಳ ಫಲವಾಗಿ ಆಹಾರೋತ್ಪಾದನೆ ಶೇ. 21ರಷ್ಟು ಹೆಚ್ಚಿತು. ತೃತೀಯ ಪಂಚವಾರ್ಷಿಕ ಯೋಜನೆಯಲ್ಲಿ ಬಿತ್ತಲುತನ, ಚಿಕ್ಕ ನೀರಾವರಿ ಯೋಜನೆ, ಭೂಸಂರಕ್ಷಣೆ ಹಾಗೂ ಸಹಕಾರ ಇವುಗಳಿಗಾಗಿ ರೂ. 1,460 ಕೋಟಿ

ಯನ್ನು ನಿರೀಕ್ಷಿಸಲಾಗಿತ್ತು. ಯೋಜನೆಯ ಮೊದಲ ಮೂರು ವರ್ಷಗಳಲ್ಲಿ ಕೃಷಿರಂಗದಲ್ಲಾದ ನಿರ್ವಹಣೆ ತೀವ್ರ ಅಸಮಾಧಾನಕರವಿದ್ದುದರಿಂದ ಯೋಜನಾವಧಿಯಲ್ಲಿ 250 ಲಕ್ಷ ಟನ್ನುಗಳಷ್ಟು ಆಹಾರಧಾನ್ಯಗಳನ್ನೂ 39 ಲಕ್ಷ ಬೇಲ್ ಹತ್ತಿಯನ್ನೂ 15 ಲಕ್ಷ ಬೇಲ್ ಸೆಣಬನ್ನೂ ಪರದೇಶಗಳಿಂದ ಆಮದು ಮಾಡಿಕೊಳ್ಳಲಾಯಿತು. 1964ರಲ್ಲಿ ಕೃಷಿಕ್ಷೇತ್ರದಲ್ಲಿ ಒಂದು ಮಹತ್ತರವಾದ ಮತ್ತು ಉಪಯುಕ್ತವಾದ ಸಂಶೋಧನೆಯ ಮಾಹಿತಿ ರೈತರಿಗೆ ಒದಗಿಬಂತು. ಅದೇ ಮಿಶ್ರತಳಿ ವ್ಯವಸಾಯ. ಮಿಶ್ರತಳಿ ವ್ಯವಸಾಯದಿಂದ ಹೆಚ್ಚು ಉತ್ಪಾದನೆಯನ್ನು ಮತ್ತು ಲಾಭವನ್ನು ಪಡೆಯಬಹುದು ಎಂಬುವಾಗಿ ರೈತರು ಮನಗಂಡರು. ಅವರ ಆಸಕ್ತಿ ಮಿಶ್ರತಳಿ ವ್ಯವಸಾಯದೆಡೆಗೆ ಹರಿಯಿತು. 1967–68ರಲ್ಲಿ ಆಹಾರೋತ್ಪಾದನೆಯಲ್ಲಿ ಗಮನಾರ್ಹ ಪ್ರಗತಿ ಕಂಡುಬಂತು. ಆ ವರುಷದಲ್ಲಾದ ಆಹಾರೋತ್ಪಾದನೆ 951 ಲಕ್ಷ ಟನ್ನುಗಳು. ಈ ಹೆಚ್ಚಳಕ್ಕೆ ಮಿಶ್ರತಳಿ ವ್ಯವಸಾಯವೇ ಮಹತ್ತ್ವದ ಕಾರಣ ಎಂಬುದು ಸುಸ್ಪಷ್ಟ. ಮಿಶ್ರತಳಿ ವ್ಯವಸಾಯಕ್ಕೆ ಬೇಕಾಗುವ ತಾಂತ್ರಿಕ ಜ್ಞಾನ ಮತ್ತು ಸೂಕ್ತ ಸಲಹೆ–ಸೂಚನೆಗಳ ಬಗ್ಗೆ ಸರಿಯಾದ ತಿಳಿವಳಿಕೆಯನ್ನು ವೈಯಕ್ತಿಕವಾಗಿ ಮತ್ತು ವಿವಿಧ ಮಾಧ್ಯಮಗಳ ದ್ವಾರಾ ನೀಡಲಾಯಿತು. ಇಂದು 92 ಲಕ್ಷ ಹೆಕ್ಟೇರುಗಳಷ್ಟು ಹೊಲ ಹೆಚ್ಚು ಇಳುವರಿ ಕೊಡುವ ಮಿಶ್ರತಳಿ ವ್ಯವಸಾಯಕ್ಕೆ ಒಳಪಟ್ಟಿದೆ. ಸುಮಾರು 20.9 ಲಕ್ಷ ಪಂಪುಸೆಟ್ಟುಗಳು ಹಾಗೂ 4 ಲಕ್ಷ ಕೊಳವೆ ಬಾವಿಗಳು ಈಗ ಭೂಮಿಗೆ ನೀರುಣಿಸಲು ಸಿದ್ಧವಾಗಿವೆ.

ಮುಖ್ಯ ಫಸಲುಗಳ ಉತ್ಪಾದನೆ[1]

ಫಸಲುಗಳು		1950–51	1955–56	1960–61	1967–68	1968–69
ಭತ್ತ	'000 ಟನ್	2.05.76	2.75.57	3,45.74	3.76,12	3,97,61
ಜೋಳ	"	54.95	67.26	98.14	1.00,48	98,04
ಸಜ್ಜೆ	"	25.95	34,28	32.83	51.85	38,02
ಗೋವಿನಜೋಳ	"	17.29	26,02	40.80	62.70	57.01
ರಾಗಿ	"	14,29	18.46	18.38	18.84	16.48
ಸಾವೆ	"	17.50	20,70	19.09	19,07	18.04
ಗೋಧಿ	"	64,62	87.60	1.09.97	1.65,40	18.65
ಬಾರ್ಲಿ	"	23,78	28,16	28,19	35.04	24.24
ಒಟ್ಟು ಆಹಾರ ಧಾನ್ಯಗಳು		4.24.14	5.58.05	6.93.14	8.29.50	8.35 95
ಕಡಲೆ	"	36.51	54,18	62.50	59,71	43.09
ಕೆಂಪುಕಡಲೆ	"	17.19	18,61	20.60	17,41	18,16
ಇತರ ದ್ವಿದಳ ಧಾನ್ಯಗಳು	"	30.41	37.66	43.88	43.90	42.93
ಒಟ್ಟು ಬೇಳೆಕಾಳುಗಳು		5.08.25	6.68.50	8.20.18	9,50,52	9,40,13

1 Source : *India 1970 ;* Publications Division, Ministry of Information & Broadcasting, Government of India, New Delhi

ಇತರ ಫಸಲುಗಳ ಉತ್ಪಾದನೆ 2

ಫಸಲುಗಳು		1950–51	1955–56	1960–61	1967–68	1968–69
ಬಟಾಟೆ	'000 ಟನ್ನುಗಳು	16.60	18.59	27.19	42.32	47.73
ಕಬ್ಬು	"	5.70.51	6.05.43	11.00.01	9,55,00	11.75.72
ಕರಿಮೆಣಸಿನಕಾಳು	"	21	28	28	22	21
ಒಣಮೆಣಸು	"	3.51	3.61	4.19	5,01	4.19
ಒಣಶುಂಠಿ	"	15	16	18	20	19
ತಂಬಾಕು	"	2.61	3,03	3.07	3,69	3,47
ಶೇಂಗಾಬೀಜ	"	38.41	38.62	48.12	57.31	44.76
ಔಡಲಬೀಜ	"	1.03	1.25	1.07	1,21	1.11
ಎಳ್ಳು	"	4.45	4.67	3.18	4.45	4.15
ಸಾಸಿವೆ	"	7.62	8.60	13.47	15.68	15.72
ನಾರಗಸೆಬೀಜ	"	3.67	4.20	3.98	4.38	3.52
ಹತ್ತಿ	'000 ಬೇಲು*	28,75	39.49	52.93	54.54	52.70
ಸಣಬು	"	33.09	42.32	41.34	63.20	30.52
ಚಹ	'000 ಟನ್ನುಗಳು	2,75	2,85	3.21	3,85	3.80
ಕಾಫಿ	"	25	34	43	58	73
ರಬ್ಬರು	"	14	23	25	65	71
ತೆಂಗಿನಕಾಯಿ	ಕೋಟಿಗಳು	3.58	4.23	4.64	5.32	—-

*1 ಬೇಲು = 180 ಕಿಜಿ.

ನೀರಾವರಿ ಕ್ಷೇತ್ರ3

(ಕೋಟಿ ಹೆಕ್ಟೇರುಗಳಲ್ಲಿ)

ನೀರಾವರಿ ಮೂಲಗಳು	1950–51	1966–67	ಏರಿಕೆ (+) ಅಥವಾ ಇಳಿಕೆ (—)
ಕಾಲುವೆಗಳು	0.83	1.13	(+) 0.30
ಕೆರೆಗಳು	0.36	0.46	(+) 0.10
ಬಾವಿಗಳು	0.60	0.95	(+) 0.35
ಏತ ಮತ್ತು ಇತರ ವಿಧಾನಗಳು	0.30	0.21	(—) 0.09
ಒಟ್ಟು	2.09	2.25	(+) 0.66

1 ಹೆಕ್ಟೇರು = 2.471 ಎಕರೆಯಷ್ಟರ ಒಂದು ಚದರಳತೆ

2 ಅದೇ

3 ಅದೇ

ಆಮದು ಮಾಡಿಕೊಂಡ ಆಹಾರಧಾನ್ಯ4

(ಸಹಸ್ರ ಟನ್ನುಗಳಲ್ಲಿ)

ಆಹಾರಧಾನ್ಯಗಳು	1956	1963	1964	1965	1966	1967	1968	1969
ಅಕ್ಕಿ	3,30	4.83	6,45	7,83	7,87	4,53	4,46	4,87
ಗೋದಿ ಮತ್ತು ಗೋದಿಹಿಟ್ಟು	11.13	40.73	56.21	65.83	82.70	64.00	47,66	30.90
ಇತರ ಆಹಾರ ಧಾನ್ಯಗಳು	—	—	—	96	17,38	18,19	4.82	2,95
ಒಟ್ಟು	14.43	45.56	62.66	74.62	1,07.95	86,72	56.94	38,72

ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ

ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ರೂ. 27,28.18 ಕೋಟಿಯನ್ನು ಒಕ್ಕಲುತನದ ಅಭಿವೃದ್ಧಿಗಾಗಿ ವಿನಿಯೋಗಿಸಬೇಕೆಂದು ನಿಗದಿ ಮಾಡಲಾಗಿದೆ. ಅಧಿಕ ಫಸಲು ಪಡೆಯಲು ಕೃಷಿ ಭೂಮಿಯನ್ನು ಸಾಂದ್ರ ಸಾಗುವಳಿಗೆ ಒಳಪಡಿಸುವುದು ಅವಶ್ಯ. ಮುಂಬರುವ ಹತ್ತು ವರುಷಗಳ ವರೆಗೆ ಸರಾಸರಿಯಲ್ಲಿ ಶೇ. 5ರಷ್ಟು ಆಹಾರೋತ್ಪಾದನೆಯನ್ನು ಹೆಚ್ಚಿಸಲು ಪ್ರಸಕ್ತ ಯೋಜನಾ ಆಯೋಗದವರು ನೀರಾವರಿ. ರಾಸಾಯನಿಕ ಗೊಬ್ಬರ ಮತ್ತು ಆಧುನಿಕ ಯಂತ್ರಗಳ ಸಹಾಯದಿಂದ ಬೇಸಾಯ ನಿರ್ವಹಣ ಹಾಗೂ ಮಿಶ್ರಿತ ವ್ಯವಸಾಯ ಇವುಗಳಿಗೆ ವಿಶೇಷ ಪ್ರಾಶಸ್ತ್ಯ ಕೊಟ್ಟಿದ್ದಾರೆ. ರೈತರ ಹಿತಾಸಕ್ತಿಗಳನ್ನು ಪೋಷಿಸಲು ಅನೇಕ ಯೋಜನಾಕ್ರಮಗಳನ್ನು ಕೈಕೊಳ್ಳಲಾಗುವುದು. ಚಿಕ್ಕ ಹಿಡುವಳಿದಾರರ ನೆರವಿಗೆಂದು ರೂ. 67.5 ಕೋಟಿಯನ್ನು ನಿಗದಿ ಮಾಡಲಾಗಿದೆ. ದೇಶದ ಆಯ್ಕೆ ಮಾಡಿದ 46 ಜಿಲ್ಲೆಗಳಲ್ಲಿ "ಸಣ್ಣ ಬೇಸಾಯಗಾರರ ಅಭಿವೃದ್ಧಿ ಅಧಿಕರ್ತೃತ್ವ"ಗಳನ್ನು ಪ್ರಾರಂಭಿಸಲಾಗುವುದು. ಬೇಸಾಯಗಾರರ ಸಮಸ್ಯೆಗಳನ್ನು ಪರಿಶೀಲಿಸಿ ಅವರಿಗೆ ಸಾಂಸ್ಥಿಕ ಪತ್ತನ್ನು ಹಾಗೂ ಶಕ್ತಿಮಾನ್ ಬೀಜ ಮತ್ತು ಪುಷ್ಕಳ ನೀರನ್ನು ಒದಗಿಸಲು ಅನುವು ಮಾಡಿಕೊಡುವುದೇ ಈ ಅಭಿವೃದ್ಧಿ ಏಜನ್ಸಿಗಳ ಕಾರ್ಯಕ್ಷೇತ್ರದಲ್ಲಿ ಬರುವ ಮುಖ್ಯ ಕಾರ್ಯನಿರ್ವಹಣೆ. ಈಗಾಗಲೇ 13 ಜಿಲ್ಲೆಗಳಲ್ಲಿ ಈ ಕಾರ್ಯ ಭರದಿಂದ ಸಾಗುತ್ತಿದೆ. ಬಡರೈತರ ಮತ್ತು ಕೃಷಿಕಾರ್ಮಿಕರ ಜೀವನಮಟ್ಟವನ್ನು ಎತ್ತರಿಸಲು 40 ವಿವಿಧ ಯೋಜನೆಗಳನ್ನು ತಯಾರಿಸಲಾಗಿದ್ದು ಇವಕ್ಕೆಲ್ಲ ಒಟ್ಟು ರೂ. 47.5 ಕೋಟಿ ವೆಚ್ಚವಾಗಬಹುದೆಂದು ಅಂದಾಜಿಸಲಾಗಿದೆ. ಉತ್ತರಪ್ರದೇಶ, ಮಧ್ಯಪ್ರದೇಶ, ರಾಜಸ್ಥಾನ ಹಾಗೂ ಗುಜರಾತುಗಳಲ್ಲಿ ಬೆಟ್ಟದ ಒಳಿಯ ಕೊರಕಲಿನ ಪ್ರದೇಶಗಳನ್ನು ಸಾಗುವಳಿಗೆ ಒಳಪಡಿಸಲು ಪ್ರಾಯೋಗಿಕ ಯೋಜನೆಗಳನ್ನು ಪ್ರಾರಂಭಿಸಲಾಗಿದೆ. ಕ್ಷಾಮಪೀಡಿತ ಪ್ರದೇಶದಲ್ಲಿ ಹೆಚ್ಚು ಜನರಿಗೆ ಕೂಲಿ ದೊರೆಯುವಂತೆ ಹಾಗೂ ಭೂಮಿಯ ಫಲವಂತಿಕೆಯನ್ನು ಹೆಚ್ಚಿಸಲು ರೂ. 100 ಕೋಟಿಯ ಯೋಜನೆಯೊಂದನ್ನು ಸಿದ್ಧಪಡಿಸಲಾಗಿದೆ. ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ 1973–74ರಲ್ಲಿ 55 ಲಕ್ಷ ಟನ್ ರಾಸಾಯನಿಕ ಗೊಬ್ಬರವನ್ನು ಉತ್ಪಾದಿಸಲು ಯೋಜಿಸಲಾಗಿದೆ. 80 ಮಿಲಿಯನ್ ಹೆಕ್ಟೇರು ಭೂಮಿಯ ಬೆಳೆಗಳನ್ನು ಬೆಳೆನಾಶಕ ಕ್ರಿಮಿಕೀಟಗಳಿಂದ ರಕ್ಷಿಸಲು ಉದ್ದೇಶಿಸಲಾಗಿದೆ. ಬೇರೆಬೇರೆ ಪ್ರದೇಶಗಳಲ್ಲಿ ಮಳೆ ಬೀಳುವ ಪ್ರಮಾಣವನ್ನು ಲಕ್ಷಿಸಿ ಸಂಘಟಿತ ನೀರಾವರಿ ಯೋಜನೆಗಳನ್ನು ಅಧಿಕ ಪ್ರಮಾಣದಲ್ಲಿ ಕೈಕೊಳ್ಳಲಾಗುವುದು. ಹೆಚ್ಚು ಇಳುವರಿ ಕೊಡುವ ಬೀಜಗಳನ್ನು ಪೂರೈಸಲು ವಿಶೇಷ ಲಕ್ಷ್ಯ ಪೂರೈಸಲಾಗುತ್ತಿದೆ. ಸಣ್ಣ ಬೇಸಾಯಗಾರರಿಗೆ ಬಾಡಿಗೆ–ಖರೀದಿ ರೀತಿಯಿಂದ ಕೃಷಿಯಂತ್ರೋ

4 ಅದೇ

ಪಕರಣಗಳನ್ನು ಒದಗಿಸಲು 'ದಿ ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್' ಪ್ರತಿ ರಾಜ್ಯದಲ್ಲೂ ಕಾರ್ಯ ನಿರ್ವಹಿಸುತ್ತಲಿದೆ. 1973-74ರ ವೇಳೆಗೆ ಕೃಷಿ ಉದ್ದರಿ ಸಂಘಗಳು 690 ಕೋಟಿ ರೂಪಾಯಿಗಳನ್ನು ಅಲ್ಪಾವಧಿ ಸಾಲವಾಗಿಯೂ 90 ಕೋಟಿ ರೂಪಾಯಿಗಳನ್ನು ಮಧ್ಯಮಾವಧಿ ಸಾಲವಾಗಿಯೂ ನೀಡುವ ನಿರೀಕ್ಷೆಯಿದೆ. ಸಹಕಾರ ಸಂಸ್ಥೆಗಳ ಡಿಬೆಂಚರುಗಳಿಗೆ ಕೇಂದ್ರ-ರಾಜ್ಯ ಸರ್ಕಾರಗಳು, ರಿಸರ್ವ್ ಬ್ಯಾಂಕ್, ಜೀವವಿಮಾ ಕಾರ್ಪೊರೇಷನ್ ಮತ್ತು ಸ್ಟೇಟ್ ಬ್ಯಾಂಕ್ ಅಧಿಕ ಬೆಂಬಲ ನೀಡುತ್ತವೆ. ಸಣ್ಣ ನೀರಾವರಿ ಕಾರ್ಯಕ್ಕೆ ಕೃಷಿ ಮರುಹಣಕಾಸು ಕಾರ್ಪೊರೇಷನ್ ಸಹಾಯಧನ ನೀಡುವುದನ್ನು ಹೆಚ್ಚಿಸಿದೆ. ಅಲ್ಲದೆ ಉಗ್ರಾಣಗಳ ನಿರ್ಮಾಣಕ್ಕೆ ಸಹಾಯ ನೀಡುತ್ತಿದೆ. ರಾಷ್ಟ್ರೀಕೃತ ಬ್ಯಾಂಕುಗಳು ಕೃಷಿಕ್ಷೇತ್ರಕ್ಕೆ ಸಾಲಕೊಡುವ ವಿಷಯದಲ್ಲಿ ವಿಶೇಷ ಆಸಕ್ತಿ ತಳೆದಿವೆ. ಹೀಗೆ ನಮ್ಮ ಕೃಷಿರಂಗ ಇಂದು ಹೊಸದಿಗಂತದ ಅಂಚಿನಲ್ಲಿದೆ.

ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಕೃಷಿರಂಗಕ್ಕೆ ಮೀಸಲಾಗಿರಿಸಿದ

ಮೊತ್ತದ ವಿವರ [5]

ಸಂ.	ಕಾರ್ಯಕ್ರಮ	ಮೀಸಲಾಗಿರಿಸಿದ ಮೊತ್ತ (ಕೋಟಿ ರೂ.ಗಳಲ್ಲಿ)
1	ಕೃಷಿ ಉತ್ಪಾದನೆ	420.23
2	ಚಿಕ್ಕ ಹಿಡುವಳಿದಾರರ ಅಭಿವೃದ್ಧಿ ಮತ್ತು ಕೃಷಿ ಕಾರ್ಮಿಕರ ಕಲ್ಯಾಣ	115.00
3	ಕೃಷಿಸಂಶೋಧನೆ ಮತ್ತು ಕೃಷಿ ಶಿಕ್ಷಣ	85.00
4	ಸಣ್ಣ ನೀರಾವರಿ ಯೋಜನೆಗಳು	515.71
5	ಭೂಸಂರಕ್ಷಣೆ	159.38
6	ಕ್ಷೇತ್ರಾಭಿವೃದ್ಧಿ	38.32
7	ಜಾನುವಾರುಗಳ ಅಭಿವೃದ್ಧಿ	94.06
8	ದುಗ್ಧಾಲಯ ಮತು ಕ್ಷೀರಪೂರೈಕೆ	138.97
9	ಮೀನುಗಾರಿಕೆ	83.31
10	ವನಸಂರಕ್ಷಣೆ	92.55
11	ರೈತರ ಪೇಟೆ, ಉಗ್ರಾಣ ಮತ್ತು ಮಳಿಗೆಗಳು	94.02
12	ಉಪ-ಆಹಾರಗಳು	18.60
13	ಕೃಷಿ ಹಣಕಾಸಿನ ಸಂಸ್ಥೆಗಳಿಗೆ ಕೇಂದ್ರದ ಸಹಕಾರ	324.00
14	ಆಹಾರ ಪದಾರ್ಥಗಳ ಮೀಸಲು ದಾಸ್ತಾನು	255.00
15	ಸಹಕಾರ	178.57
16	ಸಮಾಜ ವಿಕಾಸ ಹಾಗೂ ಪಂಚಾಯತಿ	115.46
	ಒಟ್ಟು	ರೂ. 2,728.18

5 *Fourth Five-Year Plan, 1969-74* ; Planning Commission, Government of India, New Delhi

ಆಹಾರೋತ್ಪಾದನೆ ಮತ್ತು ಜನಸಂಖ್ಯೆ

ಜನಸಂಖ್ಯೆಯ ದೃಷ್ಟಿಯಿಂದ ಭಾರತ ಪ್ರಪಂಚದಲ್ಲಿ ದ್ವಿತೀಯ ಸ್ಥಾನ ಪಡೆದಿದೆ. ಇಂದು ಭಾರತದ ಜನಸಂಖ್ಯೆ 55 ಕೋಟಿಯಷ್ಟಿದೆ. ಕಳೆದ 20 ವರುಷಗಳಲ್ಲಿ ನಮ್ಮ ದೇಶದಲ್ಲಿ ಜನಸಂಖ್ಯೆಯ ಬೆಳವಣಿಗೆ ಅದರ ಹಿಂದಿನ 30 ವರುಷಗಳಲ್ಲಿ ಆದ ಬೆಳವಣಿಗೆಯ ಎರಡರಷ್ಟು ಎಂಬುದಾಗಿ ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ. ನಮ್ಮ ದೇಶದಲ್ಲಿ ಪ್ರತಿದಿನ ಸುಮಾರು 50.000 ಮಂದಿ ಹುಟ್ಟುತ್ತಿದ್ದಾರೆ. ಅವರಿಗಾಗಿ ಒಂದು ವರ್ಷಕ್ಕೆ 10 ಲಕ್ಷ ಟನ್ನು ಹೆಚ್ಚು ಆಹಾರ ಧಾನ್ಯಗಳು ಬೇಕಾಗುತ್ತವೆ. ಆದರೆ ಆಹಾರ ಧಾನ್ಯಗಳನ್ನು ಜನಸಂಖ್ಯೆಯ ಹೆಚ್ಚಳದ ಪ್ರಮಾಣದಲ್ಲಿ ನಾವು ಹೆಚ್ಚಿಸುತ್ತಿಲ್ಲ. 1951ರಲ್ಲಿ ನಮ್ಮ ದೇಶದ ಜನಸಂಖ್ಯೆ 36.1 ಕೋಟಿ ಇತ್ತು. 1969ರಲ್ಲಿ ಇದು 53.7 ಕೋಟಿ ಆಯಿತು. ಅಂದರೆ ಈ ಅವಧಿಯಲ್ಲಿ ಜನಸಂಖ್ಯೆಯಲ್ಲಿ ಸೇ. 49ರಷ್ಟು ಹೆಚ್ಚಳವುಂಟಾಯಿತು. ಆದರೆ ಸಾಗುವಳಿಯಲ್ಲಿದ್ದ ಹೊಲದ ವಿಸ್ತೀರ್ಣ ಈ ಅವಧಿಯಲ್ಲಿ ಸೇ. 16ರಷ್ಟು ಮಾತ್ರ ಹೆಚ್ಚಿತು. ಹಿಂದಿನದೇ ವೇಗದಲ್ಲಿ, ಯೌಗಿಕ ನಿಯಮದಂತೆ, ನಮ್ಮ ಜನಸಂಖ್ಯೆ ಅಧಿಕಗೊಳ್ಳುತ್ತ ನಡೆದರೆ ಕೇವಲ ಜೀವ ಹಿಡಿದುಕೊಂಡು ಬದುಕಿರಲು ಸಾಕಾಗುವಷ್ಟು ಆಹಾರ ಜಿನಸುಗಳನ್ನು ಪಡೆಯುವುದೂ ದುರ್ಲಭವಾಗುವ ಕಾಲ ಪ್ರಾಪ್ತವಾಗಲೂ ಬಹುದು. ಈ ಸಂದರ್ಭದಲ್ಲಿ ಸುಪ್ರಸಿದ್ಧ ಲೇಖಕ ಹಕ್ಸ್ಲೆಯವರ ಅಭಿಪ್ರಾಯವೊಂದನ್ನು ನೆನಪಿಗೆ ತಂದುಕೊಳ್ಳಬಹುದು—"ಪ್ರಪಂಚದ ಜನಸಂಖ್ಯೆಯನ್ನು ಕುರಿತು ಯೋಚನೆ ಮಾಡಿದರೆ ಮುಂಬರುವ ಯುಗ ಸ್ಪುಟ್ನಿಕ್ ಯುಗವಾಗಿರದೆ ಮಿತಿಮೀರಿದ ಜನಸಂಖ್ಯೆಯ ಯುಗವೆಂದು ಸ್ಪಷ್ಟವಾಗಿ ತೋರುವುದು."

ಭರದಿಂದ ಬೆಳೆಯುತ್ತಿರುವ ಜನಸಂಖ್ಯೆಯ ಜೊತೆಗೆ ನಾವು ಭೂಮಿಯನ್ನು ಹೆಚ್ಚಿಸಲಾರೆವು. ಆದಕಾರಣ ಕುಟುಂಬಯೋಜನೆಯನ್ನು ಸಫ ಯಶಸ್ವಿಯಾಗಿ ಅನುಷ್ಠಾನಕ್ಕೆ ತರುವುದು ದೇಶದ ಆರ್ಥಿಕ ಪುರೋಭಿವೃದ್ಧಿಯ ದೃಷ್ಟಿಯಿಂದ ಅತ್ಯಂತ ಅನಿವಾರ್ಯದ ಕಾರ್ಯವಾಗಿದೆ. ಈ ಸಂಗತಿಯನ್ನು ಲಕ್ಷ್ಯದಲ್ಲಿರಿಸಿ, ನಮ್ಮ ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಕುಟುಂಬಯೋಜನೆಗೆ ಆದ್ಯತೆಯನ್ನು ನೀಡಲಾಗಿದೆ. ದೇಶದಲ್ಲಿ ಈಗ ಜನನ ಪ್ರಮಾಣ ಪ್ರತಿಸಾವಿರಕ್ಕೆ 39ರಷ್ಟಿದೆ. ಇದನ್ನು ಮುಂದಿನ 10–12 ವರ್ಷಗಳಲ್ಲಿ 25ಕ್ಕೆ ಇಳಿಸುವುದು ಪ್ರಸ್ತುತ ಕುಟುಂಬಯೋಜನೆಯ ಗುರಿಗಳಲ್ಲಿ ಒಂದು. ದೇಶದಾದ್ಯಂತ ಸಾಮೂಹಿಕ ಕುಟುಂಬಯೋಜನೆಗಳನ್ನು ಕೈಕೊಂಡಾಗಿದೆ. 4ನೆಯ ಮತ್ತು 5ನೆಯ ಯೋಜನೆಗಳಲ್ಲಿ ತಗಲುವ ಪೂರ್ಣ ವೆಚ್ಚವನ್ನು ಕೇಂದ್ರ ಸರ್ಕಾರದವರೇ ನಿರ್ವಹಿಸುತ್ತಾರೆ. ಕುಟುಂಬಯೋಜನೆಯ ವಿವಿಧ ಕಾರ್ಯಕ್ರಮಗಳಿಗಾಗಿ ಪ್ರಸಕ್ತ ಯೋಜನೆಯಲ್ಲಿ 315 ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ. ಈ ಹಣದಲ್ಲಿ 46 ಕೋಟಿ ರೂಪಾಯಿಗಳನ್ನು ಕುಟುಂಬಯೋಜನೆ ಕುರಿತ ತರಬೇತಿ, ಸಂಶೋಧನೆ, ಕುಟುಂಬಯೋಜನೆಯನ್ನು ಅನುಸರಿಸಲು ಉತ್ತೇಜನ ನೀಡಿಕೆ—ಇತ್ಯಾದಿಗಳಿಗಾಗಿ ವೆಚ್ಚ ಮಾಡಲಾಗುತ್ತದೆ. ಉಳಿದ 269 ಕೋಟಿ ರೂಪಾಯಿಗಳನ್ನು ನಗರ ಮತ್ತು ಗ್ರಾಮಾಂತರ ಜನತೆಗೆ ಯೋಜನೆಯನ್ನು ಅನುಸರಿಸಲು ಅಗತ್ಯವಾದ ಸಾಧನಸೌಲಭ್ಯಗಳನ್ನು ಪೂರೈಸಲು, ಹಣಕಾಸಿನ ನೆರವು ನೀಡಲು ವೆಚ್ಚ ಮಾಡಲಾಗುವುದು. ನಾಲ್ಕನೆಯ ಯೋಜನೆಯಲ್ಲಿ ಅನೇಕ ಸಾಮಾಜಿಕ ಹಾಗೂ ಆರ್ಥಿಕ ಬದಲಾವಣೆಗಳನ್ನು ತರಲು ಉದ್ದೇಶಿಸಲಾಗಿದೆ. ವಿವಾಹದ ವಯೋಮಿತಿಯನ್ನು ಹೆಚ್ಚಿಸುವುದು, ಗರ್ಭಪಾತ ಕುರಿತಾದ ಕಾನೂನನ್ನು ಸಡಿಲಗೊಳಿಸುವುದು ಇವೇ ಮುಂತಾದವು ಸರ್ಕಾರ ಗಮನದಲ್ಲಿಟ್ಟುಕೊಂಡಿರುವ ಅಂಶಗಳು. ಆರೋಗ್ಯ ಮತ್ತು ಕುಟುಂಬಯೋಜನಾ ಇಲಾಖೆಗಳೇ ಅಲ್ಲದೆ ದೇಶದ ಸಾಮಾಜಿಕ ಕಲ್ಯಾಣ ಮತ್ತು ದೇಶಾಭಿವೃದ್ಧಿಯಲ್ಲಿ ತೊಡಗಿರುವ ಎಲ್ಲ ಇಲಾಖೆಗಳೂ ಕುಟುಂಬಯೋಜನೆಯ ಯಶಸ್ಸಿಗಾಗಿ ಶ್ರಮಿಸುತ್ತವೆ. ಇಷ್ಟೇ ಅಲ್ಲದೆ ವಿವಿಧ ಅಂತರರಾಷ್ಟ್ರೀಯ ಸಂಸ್ಥೆಗಳು ಮತ್ತು ವಿದೇಶಿ ಸರ್ಕಾರಗಳು ಈ ಯೋಜನೆಗೆ ಆರ್ಥಿಕ ನೆರವು ನೀಡಲು ಮುಂದೆ ಬಂದಿವೆ. ಕುಟುಂಬಯೋಜನೆ ಕ್ರಮಗಳು ಹೆಚ್ಚು ಫಲಪ್ರದವಾಗುವಂತೆ ಕೆಲವು ವಿಧಾನಗಳನ್ನು ಬಳಸಲಾಗುತ್ತಿದೆ. ಜಿಲ್ಲಾಮಟ್ಟದಲ್ಲಿ ಕುಟುಂಬಯೋಜನೆಯನ್ನು ತೀವ್ರಗೊಳಿಸುವುದು, ಪ್ರಸವಾನಂತರದ ಕಾರ್ಯಕ್ರಮಗಳು ಹಾಗೂ ಜನಸಂಖ್ಯಾ ಶಿಕ್ಷಣ ಇವು ಈ ಹೊಸ ವಿಧಾನಗಳು.

ಕುಟುಂಬಯೋಜನೆ – ಪ್ರಗತಿ ಮತ್ತು ಗುರಿ[6]

		ಘಟಕ	3ನೆಯ ಯೋಜನೆ	1966–69	ನಾಲ್ಕನೆಯ ಯೋಜನೆ
1	ಖರ್ಚು	ಕೋಟಿ ರೂ.	24.86	69.48	315.00
2	ಜಿಲ್ಲಾ ಕುಟುಂಬಯೋಜನಾ ಬ್ಯೂರೋಗಳು	ಸಂಖ್ಯೆ	199	303	335
3	ಗ್ರಾಮೀಣ ಕುಟುಂಬ ಯೋಜನಾ ಕೇಂದ್ರಗಳು	"	3,676	4,326	5,225
4	ಗ್ರಾಮೀಣ ಉಪಕೇಂದ್ರಗಳು	"	7,081	22,826	31,752
5	ನಗರ ಕುಟುಂಬಕಲ್ಯಾಣ ಯೋಜನಾ ಕೇಂದ್ರಗಳು	"	1,381	1,797	1,856
6	ಕುಟುಂಬ ಯೋಜನಾ ತರಬೇತಿ ಕೇಂದ್ರಗಳು	"	30	48	51

ಕೃಷಿಯ ನೂತನ ಪಾತ್ರ

ದೇಶದ ಕೃಷಿರಂಗದಲ್ಲಿ ನವಚೈತನ್ಯ ಮೂಡಿದೆ. ಆಹಾರೋತ್ಪಾದನೆ ಹೆಚ್ಚಿದೆ. ಅಧಿಕ ಇಳುವರಿಯ ಹೊಸ ತಳಿಗಳು ರೈತರನ್ನು ಆಕರ್ಷಿಸಿವೆ. ಕೃಷಿನಿರ್ವಹಣೆಯ ನವೀನ ವಿಧಾನಗಳು, ರಾಸಾಯನಿಕ ಗೊಬ್ಬರ ಹಾಗೂ ಕ್ರಿಮಿನಾಶಕ ಔಷಧಗಳ ಬಳಕೆಯಲ್ಲಿ ರೈತರ ಆಸಕ್ತಿ ಹೆಚ್ಚಿದೆ. ಆದರೆ ಇನ್ನೂ ಸಾಧಿಸಬೇಕಾದ್ದು ಬಹಳ ಉಂಟು. ಕೃಷಿಗೆ ಸಂಬಂಧಿಸಿದ ವಿವಿಧ ಇಲಾಖೆಗಳು, ಸಂಘ–ಸಂಸ್ಥೆಗಳು ರೈತ ಬಾಂಧವರ ಅವಶ್ಯಕತೆಗಳನ್ನು ಗಮನಿಸಿ ಕಾರ್ಯನಿರ್ವಹಿಸಬೇಕಾಗಿದೆ. ರೈತರಿಗೆ ರೈತರೇ ಧುರೀಣರಾಗಬೇಕು. ಒಕ್ಕಲುತನದ ಪ್ರಾಯೋಗಿಕ ಮಾಹಿತಿ ಇರುವ ಅಧಿಕಾರಿಗಳನ್ನೇ ಕೃಷಿಯೋಜನೆಯಲ್ಲಿ ನೇಮಕ ಮಾಡುವುದು ಹೆಚ್ಚಿನ ಪರಿಣಾಮವನ್ನುಂಟುಮಾಡಬಲ್ಲುದು. ಭೂಮಿ ಹಾಗೂ ಋತುಮಾನಕ್ಕನುಸರಿಸಿ ವರ್ಷದಲ್ಲಿ 3 ಅಥವಾ 4 ಬೆಳೆಗಳನ್ನು ಬೆಳೆದು ಹೆಚ್ಚಿನ ಲಾಭ ಪಡೆಯಲು ವಿಶೇಷ ಸಂಶೋಧನೆ ಅಗತ್ಯ. ಆಹಾರವಸ್ತುಗಳು ಹಾಳಾಗದಂತೆ ನೋಡಿಕೊಳ್ಳುವುದು ಇನ್ನೊಂದು ಮುಖ್ಯ ವಿಷಯ. ದಾಸ್ತಾನಿನ ಕಾಲದಲ್ಲಿ ಆಹಾರಧಾನ್ಯಗಳು ಗಮನಾರ್ಹ ಪ್ರಮಾಣದಲ್ಲಿ ನಷ್ಟವಾಗುತ್ತವೆ. ಅಭಿವೃದ್ಧಿಶೀಲ ದೇಶಗಳಲ್ಲಿ ಈ ನಷ್ಟಗಳು ತುಂಬಾ ಹೆಚ್ಚಾಗಿರುತ್ತವೆ. ಭಾರತದಲ್ಲಿ ಸರ್ಕಾರಿ ಅಂದಾಜುಗಳ ಪ್ರಕಾರ ಪ್ರತಿಸುಗ್ಗಿಯಲ್ಲಿ ಶೇ. 20ರಿಂದ 30ರಷ್ಟು ಭಾಗವನ್ನು ಇಲಿ ಹೆಗ್ಗಣಗಳು ತಿಂದುಹಾಕುತ್ತವೆ. ಇಲಿ ಹೆಗ್ಗಣಗಳನ್ನು ಮತ್ತು ಸಸ್ಯರೋಗಗಳನ್ನು ನಾಶಗೊಳಿಸುವ ಸಾಧನ ಅಧಿಕಗೊಳ್ಳಬೇಕು. ಇದರಿಂದಾಗಿ ಸುಮಾರು ಮೂರರಲ್ಲೊಂದು ಪಾಲು ಉತ್ಪನ್ನ ಉಳಿತಾಯವಾಗುತ್ತದೆ.

ಇನ್ನುಮುಂದೆ ಕೃಷಿ ಕೇವಲ ಆಹಾರದಲ್ಲಿ ಸ್ವಯಂಪೂರ್ಣತೆಯನ್ನು ಸಾಧಿಸುವುದಲ್ಲದೆ ಉದ್ಯೋಗ ಹೆಚ್ಚಿಸಲೂ ಸಹಾಯಕವಾಗಬೇಕು. ಕೃಷಿ ಹೆಚ್ಚು ಉದ್ಯೋಗಾವಕಾಶವನ್ನುಂಟುಮಾಡುವುದರಲ್ಲಿ ಚಿಕ್ಕ ಹಿಡುವಳಿಯಿಂದ ಹೆಚ್ಚು ಉತ್ಪಾದಿಸುವುದರಲ್ಲಿ ಹಾಗೂ ಕೃಷಿಗೆ ಸಂಬಂಧಪಟ್ಟ ಇತರ ಉದ್ಯಮಗಳನ್ನು ಪ್ರೋತ್ಸಾಹಿಸುವುದರಲ್ಲಿ ಪ್ರಬಲ ಸಾಧನವಾಗಬೇಕು. ಆಹಾರದಲ್ಲಿ ಸ್ವಯಂಪೂರ್ಣತೆಯನ್ನು ಸಾಧಿಸುವುದರ ಜೊತೆಗೆ ಉತ್ಪಾದನೆಯಲ್ಲೂ ದಕ್ಷತೆಯನ್ನು ಸಾಧಿಸಬೇಕು. ಕೃಷಿರಂಗ ವ್ಯಾಪಕವಾಗಿ ಅಭಿವೃದ್ಧಿಗೊಳ್ಳಬೇಕಾಗಿದೆ. ಕೃಷಿ ಅತಿದೊಡ್ಡ ಉದ್ಯೋಗಮೂಲವಾಗಿದೆ. ಇಂದು ಕೃಷಿಯಾಗದಿರುವ ಉತ್ತಮ ಭೂಮಿಯನ್ನೆಲ್ಲ ಕೃಷಿಗೆ ಒಳಪಡಿಸುವುದೇ ನೂತನ ಉದ್ಯೋಗಸೃಷ್ಟಿಗೆ ನಾಂದಿ

6 ಅದೇ

ಯ್ಯಾಗಬೇಕು. ಕಡಿಮೆ ಮಳೆ ಬೀಳುವ ಪ್ರದೇಶಗಳಲ್ಲಿಯು ಹಾಗೂ ಶುಷ್ಕ ಭೂಮಿಗಳಲ್ಲಿಯು ಕೃಷಿ ಸಮಸ್ಯೆಗಳು ಸಂಶೋಧಕರಿಗೆ ಒಂದು ಆಹ್ವಾನವಾಗಿವೆ.

ನಮ್ಮಲ್ಲಿ ಇಂದು ನಡೆಯುತ್ತಿರುವ ಕೃಷಿ ಸಂಶೋಧನೆಗಳು ಈಗಾಗಲೇ ನೀರಾವರಿಯಲ್ಲಿರುವ ಅಥವಾ ಮಳೆನೀರಿನ ಭರವಸೆ ಹೊಂದಿರುವ ಕ್ಷೇತ್ರಕ್ಕೆ ಮಾತ್ರ ಸಂಬಂಧಪಟ್ಟಿವೆ. ದೇಶದಲ್ಲಿ ಬೆಳೆಗಳನ್ನು ಬೆಳೆಸುವ 1380 ಲಕ್ಷ ಹೆಕ್ಟೇರುಗಳಷ್ಟು ಕ್ಷೇತ್ರದಲ್ಲಿ ಸೇ. 80ರಷ್ಟು ನೀರಾವರಿರಹಿತವಾಗಿದೆ. ನೀರಾವರಿರಹಿತ ಈ ವಿಶಾಲ ಪ್ರದೇಶದ ಅಭಿವೃದ್ಧಿಗೆ ಸಮಗ್ರ ಕೃಷಿ ವಿಧಾನ. ಮಣ್ಣಿನ ಸಾರ. ತೇವದ ರಕ್ಷಣೆ—ಇವೇ ಮುಂತಾದ ವಿಚಾರಗಳಲ್ಲಿ ಶೀಘ್ರವಾಗಿ ವೈಜ್ಞಾನಿಕ ಸಂಶೋಧನೆಗಳು ಭಾರತೀಯ ಪ್ರಯೋಗಾಲಯಗಳಲ್ಲಿ ನಡೆಯಬೇಕು. ಕೃಷಿರಂಗದಲ್ಲಿ ವೈಜ್ಞಾನಿಕ ಮನೋಭಾವ ಇನ್ನೂ ಹೆಚ್ಚು ಮೂಡಬೇಕು. ಕೃಷಿವಿಜ್ಞಾನ ಹಾಗೂ ಕೃಷಿ ವಿಜ್ಞಾನಿಗಳ ಪ್ರಯೋಗವೆಲ್ಲ ಪ್ರಯೋಗಶಾಲೆಯ ನಾಲ್ಕು ಗೋಡೆಗಳ ಮಧ್ಯದಲ್ಲಿರದೆ ರೈತರಿಗೆ ಲಭ್ಯವಾಗುವಂತಿರಬೇಕು. ರೈತರು ವೈಜ್ಞಾನಿಕ ಸಂಶೋಧನೆಗಳನ್ನು ಬಳಸಿಕೊಂಡು ತಮ್ಮ ಜೀವನ ಮಟ್ಟವನ್ನು ಎತ್ತರಿಸಿಕೊಳ್ಳಬೇಕು. ಇದು ದೇಶದ ಆರ್ಥಿಕಾಭಿವೃದ್ಧಿಗೆ ಅತ್ಯಂತ ಆವಶ್ಯಕ. ನಾಲ್ಕನೆಯ ಯೋಜನೆಯಲ್ಲಿ ಸೂಚಿತವಾಗಿರುವ ಕ್ರಮಗಳೆಲ್ಲ ಸಮರ್ಪಕವಾಗಿ ಕಾರ್ಯರೂಪಕ್ಕಿಳಿದು ಫಲಪ್ರದವಾದಾಗ ಭಾರತದ ಕೃಷಿಕ್ಷೇತ್ರ ಸುಭದ್ರವೂ ಲಾಭಪ್ರದವೂ ಆಗುತ್ತದೆ.

ಕೃಷಿಯನ್ನು ಒಂದು ಕೈಗಾರಿಕೆಯೆಂದು ಭಾವಿಸಿ ಅದಕ್ಕೆ ಕಾಲಕಾಲಕ್ಕೆ ಸುಯೋಜಿತವಾಗಿ ಅಗತ್ಯವಿರುವ ಬಂಡವಾಳವನ್ನು ತೊಡಗಿಸಿ ಅದರಿಂದ ಪರಮಾವಧಿ ಲಾಭ ಪಡೆಯಬೇಕೆಂಬ ಪ್ರವೃತ್ತಿ ನಮ್ಮಲ್ಲಿ ಇನ್ನೂ ಸಾಕಷ್ಟು ಮೂಡಿಲ್ಲ. ಇದು ಕೃಷಿಯನ್ನು ತೀರ ಅವ್ಯವಸ್ಥಿತ ಮತ್ತು ಧ್ಯೇಯರಹಿತ ಉದ್ಯೋಗವನ್ನಾಗಿಸಿದೆ. ಈ ಪರಿಸ್ಥಿತಿ ಬದಲಾಗಬೇಕು. ಪಟ್ಟಣ ಸೇರಿ ಕಟ್ಟಿಯಾದರೆ ಮಾತ್ರವಲ್ಲ: ಹಳ್ಳಿಯಲ್ಲಿದ್ದುಕೊಂಡು ಹೊಲಮಾಡಿದರೂ ಸಮೃದ್ಧ ಜೀವನ ಸಾಧ್ಯವಿದೆಯೆಂಬ ಭರವಸೆ ಮೂಡಬೇಕು. ಅಂದಾಗ ಮಾತ್ರ ನಮ್ಮ ಕೃಷಿಗೂ ಕೃಷಿಕನಿಗೂ ಕೂಡಿಯೇ ಒಂದು ನೂತನ ಯುಗ ಪ್ರಾರಂಭವಾದೀತು.

ನಮ್ಮ ದೇಶದಲ್ಲಿ ವ್ಯಾಪಕವಾಗಿ ಹಬ್ಬಿರುವ ಸಮಾಜವಿಕಾಸ ಯೋಜನೆ. ರಾಷ್ಟ್ರೀಯ ವಿಸ್ತರಣ ಯೋಜನೆ ಮೊದಲಾದವುಗಳ ಕಾರ್ಯವನ್ನು ನಾವು ಬೇರೆ ಯಾವುದೇ ದೃಷ್ಟಿಯಿಂದ ಟೀಕಿಸಿದರೂ ಹಳ್ಳಿಗಾಡಿನಲ್ಲಿ ಸುಧಾರಿತ ಬೇಸಾಯದ ಬಗ್ಗೆ ತಕ್ಕ ಜಾಗೃತಿಯನ್ನುಂಟುಮಾಡಿದ ಶ್ರೇಯಸ್ಸನ್ನು ಮಾತ್ರ ಅವುಗಳಿಗೆ ನೀಡಲೇ ಬೇಕು. ಇಂದು ನಮ್ಮ ರೈತನಿಗೆ ನೀರಾವರಿ ಉಪಯೋಗವನ್ನಾಗಲಿ. ಬೆಳೆ ರಕ್ಷಣೆಯ ಬಗ್ಗೆ ರಾಸಾಯನಿಕ ಪ್ರಯೋಗದ ಮಹತ್ವವನ್ನಾಗಲಿ ಒಪ್ಪದು ಬಿಂಬಿಸುವ ಅಗತ್ಯವಿಲ್ಲ. ಸೌಕರ್ಯಗಳನ್ನು ನೀಡಿದರೆ ಅವರ ಪ್ರಯೋಜನ ಪಡೆಯಲು ಅವನು ಸಿದ್ಧನೆಂಬ ಮಾತು ಈಗ ಸ್ಪಷ್ಟವಾಗಿದೆ. ಸುಧಾರಿತ ಒಕ್ಕಲತನ ಉಪಕರಣಗಳ ಬಳಕೆ ಇನ್ನೂ ನಮ್ಮಲ್ಲಿ ಕ್ರಾಂತಿಕಾರಕವಾಗಿ ಬಳಕೆಗೆ ಬಂದಿಲ್ಲ. ಅದರ ಅಗತ್ಯವೂ ಈಗ ಕಂಡುಬರುತ್ತಿಲ್ಲ. ನಮ್ಮಲ್ಲಿಯ ಚಿಕ್ಕ ಹಿಡುವಳಿಗೆ ಅನುಕೂಲವಾಗುವ ಸುಧಾರಿತ ಒಕ್ಕಲತನ ಉಪಕರಣಗಳು ಇನ್ನೂ ಶೋಧಗೊಳ್ಳಬೇಕಾಗಿದೆಯಷ್ಟೇ.

ಕೃಷಿಕ್ಷೇತ್ರದಲ್ಲಿಯ ಸಂಶೋಧನೆಯ ಕಾರ್ಯ ಸಹ ನಮ್ಮಲ್ಲಿ ಇನ್ನೂ ಪ್ರತ್ಯಕ್ಷಕ್ಷೇತ್ರದಿಂದ ದೂರವೇ ಉಳಿದಿದೆ. ಕೃಷಿ ಸಂಶೋಧನೆಯ ಕ್ಷೇತ್ರಗಳಿಗೂ ಕೃಷಿ ಕಾಲೇಜು ಮತ್ತು ಪ್ರಯೋಗಾಲಯಗಳಿಗೂ ನೇರವಾದ ಸಂಪರ್ಕ ಬೆಳೆಯಬೇಕು. ಮತ್ತು ಸಂಶೋಧನೆಯ ಕ್ಷೇತ್ರಗಳು ಇನ್ನಷ್ಟು ವ್ಯಾಪಕವಾಗಿ ಹಬ್ಬಿ ರೈತನಿಗೆ ತನಗೆ ಸಮಸ್ಯೆ ಉದ್ಭವಿಸಿದ ಕೂಡಲೇ ಸಲಹೆ ಲಭ್ಯವಿದೆಯೆಂಬ ಭಾವನೆ ಉಂಟಾಗಬೇಕು.[1]

—ಅರ್ಥಶಾಸ್ತ್ರಾಭ್ಯಾಸಿ

---

1 ಸಾಧನೆ- ಸವಾಲು: ಮೈಸೂರು ರಾಜ್ಯದ ಹತ್ತು ವರ್ಷಗಳ ಪ್ರಗತಿಯ ಪೃಥಃಕರಣ, ಬೃಂದಾವನ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್, ಪ್ರೈ. ಲಿ.. ಬೆಂಗಳೂರು-18. ಪು. 22-23

ಲಕ್ಷ್ಮಣ್-ತೆಲಗಾವಿ

ಕನ್ನಡ ಕಡುಗಲಿ ಕುಮಾರರಾಮನ ಚಾರಿತ್ರಿಕತೆ

ಕನ್ನಡ ಕಡುಗಲಿ ಕುಮಾರರಾಮನ ವಿಚಾರವನ್ನು ಕುರಿತು ಇತಿಹಾಸಕಾರರಲ್ಲಿ ಹಲವಾರು ವಿಚಾರಭೇದಗಳಿವೆ. ಕುಮಾರರಾಮ ಕಾಲ್ಪನಿಕ ವ್ಯಕ್ತಿಯೆಂದೂ ಐತಿಹಾಸಿಕ ವ್ಯಕ್ತಿಯಲ್ಲವೆಂದೂ ವಾದ ವಿವಾದಗಳಿವೆ. ಕುಮಾರರಾಮನಿಗೆ ಸಂಬಂಧಿಸಿದಂತೆ ಕೆಲವು ಶಾಸನಾಧಾರಗಳಿದ್ದರೂ ಅವನ ಬಗ್ಗೆ ಅನುಮಾನವಿನ್ನೂ ಇದ್ದೇ ಇದೆ. ಕುಮಾರರಾಮ ಚಾರಿತ್ರಿಕ ವ್ಯಕ್ತಿಗಿಂತಲೂ ಕಾಲ್ಪನಿಕ ವ್ಯಕ್ತಿಯೆಂದು ಹೇಳುವ ಬಗ್ಗೆ ಸಾಕಷ್ಟು ಕಾರಣಗಳಿವೆ. ಬಹುಶಃ ಅವನನ್ನು ಕುರಿತು ರಸವತ್ತಾಗಿ ಹೆಣೆದಿರುವ ಸಾಂಗತ್ಯಗಳೇ ಕಾರಣವಿರಬೇಕು. ಏಕೆಂದರೆ ಪ್ರತಿ ಸಾಂಗತ್ಯದಲ್ಲಿಯೂ ಅವನನ್ನು ಶ್ರೇಷ್ಠ ವೀರರ ಸಾಲಿಗೆ ಸೇರಿಸಿರುವುದನ್ನು ಕಾಣುತ್ತೇವೆ. ಕುಮಾರರಾಮನ ಶೌರ್ಯ–ಸಾಹಸದ ವರ್ಣನೆಯೇ ಈ ಸಾಂಗತ್ಯಗಳ ಉದ್ದೇಶವಾಗಿದೆ. ಅಲ್ಲದೆ ಅಂದಿನ ಸಮಾಜ ವರ್ಣನೆ, ರಾಜಕೀಯ, ಆರ್ಥಿಕ ಪರಿಸ್ಥಿತಿ, ಜನಜೀವನ ಮೊದಲಾದವುಗಳ ಮೇಲೆ ಈ ಸಾಂಗತ್ಯಗಳು ತಕ್ಕಷ್ಟು ಬೆಳಕನ್ನು ಚೆಲ್ಲುತ್ತವೆ.

ಕುಮಾರರಾಮನ ಇತಿಹಾಸವನ್ನು ತಿಳಿಸುವ ಹಲವು ಸಾಂಗತ್ಯಗಳಲ್ಲಿ ಈ ಕೆಳಕಂಡ ಸಾಂಗತ್ಯ ಮತ್ತು ಬುದಂತಗಳು ಮುಖ್ಯವಾದವು: 1 ಗಂಗಯ್ಯನ 'ಕುಮಾರ ರಾಮನ ಚರಿತೆ', 2 ನಂಜುಂಡ ಕವಿಯ 'ಬಲ್ಲಾಳರಾಯನ ಯುದ್ಧ' ಅಥವಾ 'ಪರದಾರಸೋದರ ರಾಮನ ಕಥೆ', 3 ಕಂಪಿಲಿಯ ಕೈಫಿಯತ್ ಮತ್ತು 4 ಛತ್ತರ್ ಕೈಫಿಯತ್. ಇವುಗಳಲ್ಲಿ ನಂಜುಂಡಕವಿಯ ಕೃತಿ ಐತಿಹಾಸಿಕ ದೃಷ್ಟಿಯಿಂದ ತುಂಬ ಉಪಯುಕ್ತವಾದ್ದು; ಕುಮಾರರಾಮನ ಬಗ್ಗೆ ಇತರ ಎಲ್ಲ ಸಾಂಗತ್ಯಗಳಿಗಿಂತಲೂ ಅತಿ ಹೆಚ್ಚಿನ ಮಾಹಿತಿ ನೀಡುತ್ತದೆ. ಛತ್ತರ್ ಕೈಫಿಯತ್ ಸಹ ನಂಜುಂಡಕವಿಯ ಸಾಂಗತ್ಯದಷ್ಟೇ ಅಮೂಲ್ಯವಾಗಿದ್ದು ಸಮಕಾಲೀನ ಘಟನೆಗಳ ಮೇಲೆ ಬೆಳಕು ಬೀರುತ್ತದೆ. ಇನ್ನೆರಡು ಗ್ರಂಥಗಳು ಸಾಕಷ್ಟು ಮಾಹಿತಿಯನ್ನೊಳಗೊಂಡಿಲ್ಲ.

ಇವೇ ಅಲ್ಲದೆ ಈ ಕೃತಿಗಳೂ ಕುಮಾರರಾಮನ ಇತಿಹಾಸವನ್ನು ತಿಳಿಸುತ್ತವೆ: 1 ಪಾಂಚಾಳ ಗಂಗನ 'ಕುಮಟಿರಾಮ ಸಾಂಗತ್ಯ'. 2 ಮಹಲಿಂಗಸ್ವಾಮಿಯ 'ಬಾಲಕುಮಾರನ ಸಾಂಗತ್ಯ'. 3 ಕನ್ನಡ ಕವಿಜಾಣಗಂಗಯ್ಯನ 'ಚೆನ್ನರಾಮ ಸಾಂಗತ್ಯ'. 4 ನಾಗಸಂಗಯ್ಯನ 'ಪರದಾರಸೋದರ ರಾಮನ ಸಾಂಗತ್ಯ' ಅಥವಾ 'ಪರನಾರಿಯರಿಗೆ ಸೋದರನೆಂಬಂಥ ಕಥೆ'. ಇವು ಕನ್ನಡದಲ್ಲಿ ರಚಿಸಿದ ಕೃತಿಗಳಾದರೆ, ಕುಮಾರ ರಾಮನನ್ನು ಕುರಿತು ತೆಲುಗಿನಲ್ಲಿ 'ಕುಮಾರರಾಮುನಿ ಕಥಾ' ಎಂಬ ಸಾಂಗತ್ಯ ಉಂಟು. ಆದರೆ ಇದು ಇತಿಹಾಸದ ದೃಷ್ಟಿಯಿಂದ ಅಷ್ಟೇನೂ ತೃಪ್ತಿಕರವಾಗಿಲ್ಲ. ಇದಲ್ಲದೆ ಅದೃಶ್ಯಕವಿಯಿಂದ ರಚಿತವಾಗಿರುವ ಕೃತಿಯೊಂದಿದೆ. ಕುಮಾರರಾಮನನ್ನು ಕುರಿತು ರಚಿಸಲಾಗಿರುವ ಹಲವಾರು ಕಥೆಗಳು ಯಕ್ಷಗಾನ ರೂಪದಲ್ಲಿ ಹೇರಳವಾಗಿವೆ.

ನಂಜುಂಡಕವಿಯ 'ಕುಮಾರ ರಾಮನ ಸಾಂಗತ್ಯ' ಹನ್ನೆರಡು ಆಶ್ವಾಸ ಮತ್ತು ನಲವತ್ತೆಂಟು ಸಂಧಿಗಳನ್ನು ಒಳಗೊಂಡಿದೆ. ನಂಜುಂಡ ಶೈವಮತಸ್ಥನಾಗಿದ್ದನೆಂಬುದು ಪಂಡಿತರ ಅಭಿಪ್ರಾಯ. ಈ ಕವಿಯ ಕಾಲ 1525 ಎಂದು ಆರ್. ನರಸಿಂಹಾಚಾರ್ಯ ಅವರು ತಮ್ಮ 'ಕರ್ಣಾಟಕ ಕವಿ ಚರಿತೆ' ಯಲ್ಲಿ ಸೂಚಿಸಿದ್ದಾರೆ.

ಕುಮಾರ ರಾಮನ ಇತಿಹಾಸವನ್ನು ತಿಳಿಸುವಾಗ ನಂಜುಂಡಕವಿ ಹಲವಾರು ಅಸತ್ಯ ಸಂಗತಿಗಳನ್ನು ಪ್ರಸ್ತಾಪಿಸಿದ್ದಾನೆ. ಅವನು ಪ್ರಸ್ತಾಪಿಸಿರುವ ಕೆಲವು ಘಟನೆಗಳು ಇತಿಹಾಸಕಾರರಿಗೆ ಬಿಡಿಸಲಾಗದ ಕಗ್ಗಂಟುಗಳಾಗಿವೆ. ಆದರೂ ಆತನ ಕೃತಿ ಹೊಸ ವಿಷಯಗಳ ಮೇಲೆ ಬೆಳಕು ಹಾಯಿಸುತ್ತದೆ ಎಂದು ಹೇಳಬಹುದು. ಅವನ ಗ್ರಂಥವನ್ನು ಕ್ರೋಡೀಕರಿಸಿ ಹೇಳುವುದಾದರೆ ಈ ಕೆಳಗಿನ ಅಂಶಗಳು ಹೊರಬರುತ್ತವೆ:

ಮುಮ್ಮಡಿ ಸಿಂಗರಾಯ ಅಥವಾ ಸಿಂಗೇಯ ನಾಯಕನೇ ಕಂಪಿಲಿ ರಾಜ್ಯವನ್ನು ಸ್ಥಾಪಿಸಿದ ಮೂಲ ಪುರುಷ. ಮಲೆನಾಡಿನ ಕುಟುಂಬವೊಂದಕ್ಕೆ ಸೇರಿದ ಸಿಂಗೇಯ ನಾಯಕ ಕೆಲವು ವರ್ಷಗಳ ತನ್ನ ಆಳ್ವಿಕೆಯನ್ನು ನಡೆಸಿ ಮರಣವನ್ನಪ್ಪಿದಾಗ ಆತನ ಮಗ ಕಂಪಿಲರಾಯ ತನ್ನ ಮಂತ್ರಿ ಬೈಚಪ್ಪನ ಆದೇಶದಂತೆ ಪಟ್ಟಾಭಿಷಿಕ್ತನಾದ. ಈತನ ಪಟ್ಟದರಸಿ ಹರಿಹರದೇವಿ. ಜಟ್ಟಂಗಿ ರಾಮೇಶ್ವರನ ವರಪ್ರಸಾದವೆಂಬಂತೆ ಒಂದು ಗಂಡುಮಗುವಿಗೆ ಜನ್ಮವಿತ್ತಳು. ಜಟ್ಟಂಗಿ ರಾಮೇಶ್ವರನ ಹೆಸರೇ ಆ ಮಗುವಿಗೂ ಬಂತು. ಅವನೇ ಮುಂದೆ ಧೀರನೆನಿಸಿಕೊಂಡ ಕುಮಾರರಾಮ. ರಾಮನಾಥ ಮತ್ತು ಕಡುಗಲಿ ಕುಮಾರರಾಮನೆಂದೂ ಈತನಿಗೆ ಹೆಸರು.

ತನ್ನ ಆಡಳಿತಾವಧಿಯಲ್ಲಿ ಕಂಪಿಲರಾಯ ತುಂಗಭದ್ರಾನದಿಯ ದಂಡೆಯ ಮೇಲೆ ಮೂರಾನೆಯ ಸಂಧಿ ಎಂಬ ಪ್ರದೇಶದಲ್ಲಿ ಒಂದು ದುರ್ಗವನ್ನು ಕಟ್ಟಿಸಿದ. ಮುಂದೆ ಆ ಕೋಟೆ ಹೊಸಮಲೆದುರ್ಗವೆಂದು ಪ್ರಸಿದ್ಧವಾಯಿತು. ಅನಂತರ ರಾಯ ತನ್ನ ರಾಜಧಾನಿಯನ್ನು ಅಲ್ಲಿಗೆ ಬದಲಾಯಿಸಿಕೊಂಡ.

ಕಂಪಿಲರಾಯ ತನ್ನ ಮಗ ಕುಮಾರರಾಮನ ಸಹಾಯದಿಂದ ಸುತ್ತಮುತ್ತಲಿನ ಪ್ರದೇಶಗಳನ್ನು ಗೆದ್ದುಕೊಂಡ. ತೊರಗಲ್, ಬಾದಾಮಿ, ಮುದುಕಲ್ ಮತ್ತು ಹಾನಗಲ್ ಇವು ಈತನ ಕೈವಶವಾದುವು. ಅನಂತರ ಕಂದನೂಲುನಾಡು ಎಂಬ ಪ್ರದೇಶವನ್ನು ಜಯಿಸಿದ. ಪ್ರಬಲವಾದ ಕೋಟೆಗಳೆನಿಸಿಕೊಂಡ ನಿಡುಗಲ್ ಮತ್ತು ಪೆನುಗೊಂಡ ದುರ್ಗಗಳು ಈತನಿಗೆ ಶರಣಾದುವು. ಹೀಗೆ ರಾಯ ತುಂಗಭದ್ರೆಯ ಎರಡೂ ದಂಡೆಗಳ ಮೇಲೆ ತನ್ನ ಆಧಿಪತ್ಯ ಸ್ಥಾಪಿಸಿದ.

ಕಂಪಿಲರಾಯನಿಗುಂಟಾದ ಜಯಗಳನ್ನು ಕಂಡು ಈರ್ಷ್ಯಾಸೂಯೆಗಳಿಂದ ರೊಚ್ಚಿಗೆದ್ದ ಇತರ ಅರಸರುಗಳಲ್ಲಿ ಗುತ್ತಿರಾಜ್ಯದ ಜಗಪತಿರಾಯ, ಹೊಯ್ಸಳ ಸಾಮ್ರಾಜ್ಯದ ಮುಮ್ಮಡಿ ವೀರಬಲ್ಲಾಳ ಮತ್ತು ವಾರಂಗಲ್ಲಿನ ಪ್ರತಾಪರುದ್ರ, ಇವರು ಮುಖ್ಯರು.

ಜಗಪತಿರಾಯನೊಂದಿಗೆ ನಡೆದ ಕಾಳಗ ಕುಮಾರರಾಮನ ಶೌರ್ಯಸಾಹಸಗಳಿಗೆ ಇಂಬುಕೊಟ್ಟಂಥದು. ಆ ಯುದ್ಧದಲ್ಲಿ ಕುಮಾರರಾಮ ಜಗಪತಿಯನ್ನು ಸೋಲಿಸಿದ್ದು ಮಾತ್ರವಲ್ಲದೆ ಅವನನ್ನು ಜೀವಸಹಿತ ಸೆರೆಹಿಡಿದ. ಹೊಯ್ಸಳ ವೀರಬಲ್ಲಾಳನೊಂದಿಗೆ ನಡೆದ ಯುದ್ಧ ಕಂಪಿಲರಾಯ ಮತ್ತು ಯುವರಾಜ ಕುಮಾರರಾಮ ಇವರ ಕಲಿತನಕ್ಕೆ ಹಿಡಿದ ಕನ್ನಡಿ. ಕಂಪಿಲನ ಸೇನೆ ಆನೆಗೊಂದಿ ಪ್ರದೇಶದಲ್ಲಿ ಬಿಡಾರ ಮಾಡಿತು. ಕಂಪಿಲರಾಯನ ಸಾಕುಮಗ ಕಾಟಣ್ಣ ಮತ್ತು ಕುಮಾರರಾಮನ ಅಳಿಯ ಸಂಗಮದೇವ ಇವರೂ ಅವರೊಡನೆ ಸೇರಿದರು. ಹೊಯ್ಸಳರೊಡನೆ ನಡೆದ ಯುದ್ಧ ಕಂಪಿಲರಾಯನಿಗೆ ದೊಡ್ಡ ಜಯವನ್ನು ತಂದುಕೊಟ್ಟಿತು.

ವಾರಂಗಲ್ಲಿನ ಪ್ರತಾಪರುದ್ರನೊಡನೆ ಉಂಟಾದ ಕಾದಾಟದಲ್ಲಿ ಪ್ರತಾಪರುದ್ರನ ದಳಪತಿ ಸಿಂಗಮನಾಯಕ ಕುಮಾರರಾಮನಿಂದ ಸೆರೆಹಿಡಿಯಲ್ಪಟ್ಟ. ಆತನ ಸೈನ್ಯ ಸೋತು ಓಡಿತು. ಇದರಿಂದ ಸಂಪ್ರೀತನಾದ ಕಂಪಿಲರಾಯ ರಾಜ್ಯದ ಎಲ್ಲ ಆಡಳಿತವನ್ನೂ ಯುವರಾಜ ಕುಮಾರರಾಮನಿಗೇ ವಹಿಸಿಕೊಟ್ಟ.

ಕುಮಾರರಾಮನ ಖ್ಯಾತಿ ಹಿಂದೂಸ್ಥಾನದ ಮೂಲೆಮೂಲೆಗೂ ಮುಟ್ಟಿತು ಎಂಬುದಕ್ಕೆ ದಿಲ್ಲಿಯಲ್ಲಿ ನಡೆದ ಒಂದು ಘಟನೆಯೇ ಸಾಕ್ಷಿ. ಆಗಲೇ ದಿಲ್ಲಿಯ ಜನ ಕುಮಾರರಾಮನ ಪರಾಕ್ರಮದ ಕಥೆಯನ್ನು ಕೇಳಿ ಬಲ್ಲವರಾಗಿದ್ದರು. ದಿಲ್ಲಿಯ ಸುಲ್ತಾನನ ಮಗಳು ಕುಮಾರರಾಮನ ಸಾಹಸವಿಚಾರ ಕೇಳಿದ್ದು, ಒಮ್ಮೆ ಆತನ ಭಾವಚಿತ್ರವೊಂದನ್ನು ನೋಡಿ ಅವನಲ್ಲಿ ಮೋಹಗೊಂಡಳು. ಸುಲ್ತಾನನ ಗಮನಕ್ಕೂ ಇದು ಬಂತು. ಸುಲ್ತಾನ ತನ್ನ ಕಡೆಯ ಜನರನ್ನು ಆನೆಗೊಂದಿಯ ಕಂಪಿಲರಾಯನ ಆಸ್ಥಾನಕ್ಕೆ ಕಳುಹಿಸಿಕೊಟ್ಟು, "ಕುಮಾರರಾಮನನ್ನು ನಮ್ಮ ಕಡೆಗೆ ಜರೂರು ಕಳುಹಿಸಿಕೊಡಿ: ಆತನಿಗೆ ನಮ್ಮ ಮಗಳನ್ನಿತ್ತು ವಿವಾಹ ಮಾಡುವೆವು" ಎಂಬ ಸಂದೇಶವನ್ನೂ ಬಿತ್ತರಿಸಿದ. ಆದರೆ ಕಂಪಿಲರಾಯ ಸುಲ್ತಾನನ ಇಂಥ

ಇಚ್ಛೆಯನ್ನು ನೀಡಿದೆ. ಇದೊಂದು ಮೋಸದ ಕೃತ್ಯವೆಂದು ಸಂದೇಹಿಸಿ, ದಿಲ್ಲಿಗೆ ಕುಮಾರರಾಮನನ್ನು ಕಳುಹಿಸಿಕೊಡಲು ನಿರಾಕರಿಸಿದ. ಇದು ಸುಲ್ತಾನನನ್ನು ರೊಚ್ಚಿಗೇಳುವಂತೆ ಮಾಡಿತು. "ಕುಮಾರ ರಾಮನನ್ನು ಸರಪಳಿಯಿಂದ ಬಿಗಿಸಿ ದೆಹಲಿಗೆ ತರಿಸುವೆ" ಎಂಬ ಸುಲ್ತಾನನ ನಿರ್ಧಾರಕ್ಕೆ ಇಂಬುಗೊಟ್ಟಿತು.

ಮತ್ತೊಂದು ಘಟನೆ ಸುಲ್ತಾನನ ಕೋಪವನ್ನು ಇಮ್ಮಡಿಗೊಳಿಸಿ ಕಂಪಿಲಿಯ ವಿರುದ್ಧ ಯುದ್ಧ ಮಾಡಲು ಪ್ರೋತ್ಸಾಹಿಸಿತು. ಬಾದುರಖಾನ(ಬಹಾದ್ದೂರ್ ಖಾನ್)ನೆಂಬ ಸರದಾರನೊಬ್ಬ ಸುಲ್ತಾನನ ಸೇವೆಯಲ್ಲಿದ್ದು, ಆತನ ಉನ್ನತಿಯನ್ನು ಸಹಿಸದೆ ಇತರ ಸರದಾರರು ಮಾಡಿದ ಪಿತೂರಿಗೆ ಅಂಜಿ, ತನ್ನ ಪ್ರಾಣಕ್ಕೆ ಸಂಚಕಾರ ಬರುವುದೆಂಬ ಭಯದಿಂದ ಕಂಪಿಲರಾಯನ ಆಶ್ರಯ ಕೋರಿ ಕಂಪಿಲಿಗೆ ಪಲಾಯನ ಮಾಡಿದ. ಬಾದುರಖಾನನನ್ನು ಹಿಡಿದು ತರಲು ಸುಲ್ತಾನ ನೇಮಿ ಮಲ್ಲುಕ (ಮಲ್ಲಿಕ್ ಕಾಫರ್?) ಎಂಬ ದಳಪತಿಯನ್ನು ನೇಮಿಸಿ ಆತನ ಕೈ ಕೆಳಗೆ 4.00.000 ತೇಜಿ, 3.000 ಆನೆ, 2.000 ಕರಭ (ಒಂಟೆ) ಪಡೆಗಳನ್ನು ಕಳುಹಿಸಿಕೊಟ್ಟ[1]. ಕಂಪಿಲರಾಯ ಶತ್ರುವಿನ ಆಗಮನವನ್ನರಿತು ಕುಮ್ಮಟದುರ್ಗದಲ್ಲಿ ಬೀಡುಬಿಟ್ಟು ಕುಮಾರರಾಮನೊಡಗೂಡಿ ಹೋರಾಡಿದ. ಈ ಯುದ್ಧದಲ್ಲಿ ನೇಮಿಗೆ ಸೋಲಾದುದಲ್ಲದೆ ಅವನ ಸೈನ್ಯ ದಿಕ್ಕಾಪಾಲಾಗಿ ಓಡಿಹೋಯಿತು. ಕುಮಾರರಾಮ ರಣ ರಂಗದಲ್ಲಿ ದೊರೆತ ಕುದುರೆ, ಆನೆ, ಒಂಟೆಗಳ ಕೊಳ್ಳೆಯೊಡನೆ ರಾಜಧಾನಿಗೆ ಹಿಂತಿರುಗಿದ.

ಈ ವಿಜಯದಿಂದ ಕುಮಾರರಾಮನ ಹೆಸರು ಪ್ರಖ್ಯಾತವಾಯಿತು. ಅವನಿಗೆ 'ಗಂಡರ ಗಂಡ', 'ಗರ್ವಿತರಾಯ ಶರಭಭೇರುಂಡ', 'ಛಲದಂಕಮಲ್ಲ', 'ಜಟ್ಟರ ಗಂಡ', 'ಕಲಿರಿಪುಕುವಲಿಯಾಮಾರ್ತಂಡ', 'ತುರಷ್ಕಲಜಂಘ ಸಮೀರಣ', 'ಕೊಂಕಣ ಕೋಲಾಹಲ', 'ಬಲ್ಲಾಳ ಬಲುಬಂಧಿಕಾರ'—ಇವೇ ಮೊದ ಲಾದ ಬಿರುದುಗಳು ಪ್ರಾಪ್ತವಾದುವು.

ಆದರೆ ಇದೇ ಸಮಯದಲ್ಲಿ ಕುಮಾರರಾಮ ಒಂದು ಗಂಡಾಂತರವನ್ನು ಗೆಲ್ಲಬೇಕಾಯಿತು. ಕಂಪಿಲರಾಯನ ಅರಸಿಯರಲ್ಲಿ ಕಡೆಯವಳೂ ಚಂಚಲಚಿತ್ತಳೂ ಆದ ರತ್ನಾಜಿ ಎಂಬವಳು ಕುಮಾರ ರಾಮನ ರೂಪಿಗೆ ಮನಸೋತು ಅವನನ್ನು ಮೋಹಿಸಿದಳು. ಒಮ್ಮೆ ಕಂಪಿಲರಾಯ ಬೇಟೆಗೆಂದು ಕಾಡಿಗೆ ಹೋದ ಸಮಯವನ್ನರಿತು, ತನ್ನ ತಂತ್ರವನ್ನು ಉಪಯೋಗಿಸಿ ಕುಮಾರರಾಮನನ್ನು ತನ್ನ ಅರಮನೆಗೆ ಬರಮಾಡಿ, ಅವನನ್ನು ನಾನಾವಿಧದಿಂದ ಉಪಚರಿಸಿ ತನ್ನ ವಿಷಯವಾಂಛೆಯನ್ನು ಅವನ ಮುಂದೆ ಪ್ರದರ್ಶಿಸಿದಳು. ಕುಮಾರರಾಮ ತನ್ನ ಚಿಕ್ಕಮ್ಮನ ದುರ್ಬುದ್ಧಿಗೆ ಹೇಸಿ ಅಲ್ಲಿ ನಿಲ್ಲದೆ ಹೊರಹೊರಟು ಬಂದ. ಅವನ ವರ್ತನೆಗೆ ಖತಿಗೊಂಡ ರತ್ನಾಜಿ ಅವನ ಮೇಲೆ ಸೇಡು ತೀರಿಸಲು ರಾಜನ ಹಾದಿಯನ್ನೇ ಕಾಯುತ್ತಾ ಕುಳಿತಳು. ಬೇಟೆಯಿಂದ ಹಿಂತಿರುಗಿ ಬಂದ ಕಂಪಿಲರಾಯ, ತನ್ನ ಪ್ರಿಯ ಮಡದಿಯ ಪಾತಿವ್ರತ್ಯವನ್ನು ಕೆಡಿಸಲು ಕುಮಾರರಾಮ ಯತ್ನಿಸಿದನೆಂಬ, ರತ್ನಾಜಿ ಕಟ್ಟಿದ ಸುಳ್ಳು ಕಥೆಯನ್ನು ನಂಬಿ, ಕುಮಾರರಾಮನನ್ನು ವಧಿಸುವಂತೆ ತನ್ನ ಮಂತ್ರಿ ಬೈಚಪ್ಪನಿಗೆ ಆಜ್ಞೆಮಾಡಿದ. ಆದರೆ ನಿಜಸ್ಥಿತಿಯನ್ನರಿತ ಬೈಚಪ್ಪ ಕುಮಾರರಾಮನನ್ನು ನೆಲಮಾಳಿಗೆಯೊಂದರಲ್ಲಿ ಅಡಗಿಸಿಟ್ಟು, ಕುಮಾರರಾಮನನ್ನು ವಧಿಸಲಾಯಿತೆಂಬ ಸುಳ್ಳು ಸುದ್ದಿಯನ್ನು ಹರಡಿ ಅವನ ಪ್ರಾಣವನ್ನುಳಿಸಿದ.

ಕುಮಾರರಾಮ ಪ್ರಾಣ ತೆತ್ತನೆಂಬ ಸುದ್ದಿ ದೇಶದಲ್ಲೆಲ್ಲ ಹರಡುತ್ತಲೆ, ಸದವಕಾಶ ಬಂತೆಂದು ಹಿಗ್ಗಿದ ದೆಹಲಿ ಸುಲ್ತಾನ ಕುಮ್ಮಟದುರ್ಗದ ಮೇಲೆ ದಂಡೆತ್ತಿಹೋಗಲು ನೇಮಿಮಲ್ಲುಕನನ್ನು ಎರಡನೆಯ ಬಾರಿ ಸೈನ್ಯದ ದಂಡನಾಯಕನನ್ನಾಗಿ ನೇಮಿಸಿ, ಅವನ ಸಂಗಡ 3.90.000 ತೇಜಿ ಪಡೆ ಯನ್ನು ಕಳುಹಿಸಿದ. ಈ ಬಾರಿ ಕಂಪಿಲರಾಯನನ್ನು ಕೈಸೆರೆಹಿಡಿದು ತರುವೆನೆಂದು ಹಠತೊಟ್ಟು ಹೊರಟ ನೇಮಿ ಕುಮ್ಮಟದುರ್ಗವನ್ನು ತಲುಪಿದಾಗ ನಿಜಕ್ಕೂ ಮೋಸಹೋದ. ತನ್ನ ತಂದೆಯ

---

1 ತುರಗ ಚಾತುರ್ಲಕ್ಷ ಕರಿಯಾರುಸಾವಿರ
ಕರಭವಿಚ್ಛಾರ್ಸಿರವೆರಸಿ
ತೆರಳಿದನಂದಲಿ ಭಟದಿಂದ ಕರ್ನಾಟ
ಧರಣಿಗೆ ನೇಮಿ ಮಲ್ಲುಕನು॥
(ನಂಜುಂಡಕವಿಯ 'ಕುಮಾರರಾಮ ಸಾಂಗತ್ಯ'-ಸಂಧಿ 19, ಪದ್ಯ 8)

ವಿರುದ್ಧ ದಿಲ್ಲಿ ಸುಲ್ತಾನ ಸೇನೆಯನ್ನು ಕಳುಹಿಸಿರುವನೆಂಬ ಸುದ್ದಿ ತಿಳಿದ ಕುಮಾರರಾಮ ಅಮಾತ್ಯ ಬೈಚಪ್ಪನ ಅಪ್ಪಣೆ ಪಡೆದು. ತನ್ನ ತಂದೆಗೆ ತಿಳಿಯದಂತೆ ತಾನೇ ಸೇನೆಯ ನಾಯಕತ್ವ ವಹಿಸಿ. ರಣರಂಗದಲ್ಲಿ ನೇಮಿ ಮಲ್ಲಿಕನನ್ನು ಎದುರಿಸಿದ. ಕುಮಾರರಾಮ ಬದುಕಿರುವನೆಂಬ ಸುದ್ದಿ ಕೇಳಿಯೇ ಶತ್ರುಸೇನೆಯ ಅರ್ಧ ಬಲ ಕುಸಿದಂತಾಯಿತು. ಎರಡನೆಯ ಬಾರಿಗೆ ಮತ್ತೊಮ್ಮೆ ನೇಮಿ ಸೋಲನ್ನಪ್ಪಿ ಹಿಂದೆ ಸರಿಯಬೇಕಾಯಿತು. ಒಂದು ಕಡೆ ಪ್ರಚಂಡ ಗೆಲುವು. ಮತ್ತೊಂದೆಡೆ ತನ್ನ ಮಗ ಕುಮಾರರಾಮ ಬದುಕಿರುವನೆಂಬ ಸುದ್ದಿ—ಇದರಿಂದ ಕಂಪಿಲರಾಯ ತುಂಬ ಹರ್ಷಿತನಾದ: ಮಗನನ್ನು ತಾನೇ ಸ್ವಾಗತಿಸಿ ಬಿಗಿದಪ್ಪಿ ಕೊಂಡಾಡಿದ: ತಾನು ಮಾಡಿದ ತಪ್ಪನ್ನು ನೆನೆದು ಪಶ್ಚಾತ್ತಾಪಪಟ್ಟ. ಕುಮಾರರಾಮನ ಸುದ್ದಿಯನ್ನು ತಿಳಿದ ರತ್ನಾಜಿ ಭಯಭೀತಳಾಗಿ ಆತ್ಮಹತ್ಯೆ ಮಾಡಿಕೊಂಡಳು.

ಎರಡನೆಯ ಬಾರಿಗೂ ತನಗೆ ಸೋಲುಂಟಾದುದಕ್ಕೆ ಸುಲ್ತಾನ ಅಪಮಾನದಿಂದ ಕುದಿಯತೊಡಗಿದ. ಕಂಪಿಲಿಯನ್ನು ನಾಶಮಾಡುವ ಬಗೆ ಹೇಗೆಂದು ಅವನಿಗೆ ತೋಚದೆ ಹೋಯಿತು. ಸುಲ್ತಾನನ ಪಾಲಿಗೆ ಕುಮಾರರಾಮ ಸಿಂಹಸ್ವಪ್ನನಾದ. ಸುಲ್ತಾನ ಈ ಚಿಂತೆಯಲ್ಲಿರುವಾಗ ಅವನ ಜನಾನಕ್ಕೆ (ಅಂತಃಪುರಕ್ಕೆ) ಸೇರಿದ ಮಾತಂಗಕುಲದ ಮಾತಂಗಿ ಎಂಬ ಹೆಸರಿನ ಯುವತಿಯೊಬ್ಬಳು ಮುಂದೆ ಬಂದು ತನಗೆ ಅಪ್ಪಣೆ ದೊರಕಿದುದಾದರೆ ತಾನು ಕುಮ್ಮಟದುರ್ಗವನ್ನು ಹಿಡಿದು ಕಂಪಿಲರಾಯನನ್ನು ಸೆರೆಹಿಡಿದು ತರುವುದಾಗಿ ಶಪಥ ಮಾಡಿದಳು. ಮಾತಂಗಿಯ ಧೈರ್ಯೋತ್ಸಾಹಕ್ಕೆ ಮೆಚ್ಚಿದ ಸುಲ್ತಾನ ಆಕೆಯನ್ನು ಸೈನ್ಯದ ಮೇಲಧಿಕಾರಿಯನ್ನಾಗಿ ನೇಮಿಸಿ ಆಕೆಯ ಅಧೀನದಲ್ಲಿ 12.000 ಆನೆ. 6.000 ಕರಭ. 10.00.000 ತೇಜಿ ಮತ್ತು 10.000.000 ಕಾಲಾಳುಗಳನ್ನು ಕಳುಹಿಸಿಕೊಟ್ಟ2.

ಕುಮಾರರಾಮನಾಥನಾದರೊ. ದಾಳಿಯನ್ನೆದುರಿಸಲು ಸಿದ್ಧನಾಗಿದ್ದ. ಮೊದಲ ದಿನದ ಕಾಳಗದಲ್ಲಿ ಕಾಟಣ್ಣ ಮಾತಂಗಿಯ ವಿರುದ್ಧ ಹೋರಾಡಿ. ಜಯಗಳಿಸಿ. 1.000 ಕುದುರೆಗಳನ್ನು ಸ್ವಾಧೀನಪಡಿಸಿಕೊಂಡು ಅವುಗಳನ್ನು ಕುಮಾರರಾಮನಿಗರ್ಪಿಸಿದ. ಎರಡನೆಯ ದಿನ ಸ್ವತಃ ಕುಮಾರರಾಮನೇ ಕಾಳಗ ನಡೆಸಲು ಸಿದ್ಧನಾಗಿ 3.000 ವಾಜಿ. 30.000 ತೇಜಿ ಮತ್ತು ಸಹಸ್ರಾರು ಕಾಲಾಳುಗಳೊಂದಿಗೆ ರಣರಂಗಕ್ಕೆ ತೆರಳಿದ. ಅಂದು ನಡೆದ ಭಯಾನಕ ಯುದ್ಧದಲ್ಲಿ ಮಾತಂಗಿಯ ಸರದಾರರನೇಕರು ಮಡಿದು ಬಿದ್ದರು. ಕುಮಾರರಾಮನನ್ನು ಘಾಸಿಪಡಿಸಲು ಅಥವಾ ಸೆರೆಹಿಡಿಯಲು ಅವಳ ಸೈನಿಕರು ಅಸಮರ್ಥರಾದರು. ಪರಿಸ್ಥಿತಿಯನ್ನು ಗಮನಿಸಿ ಮಾತಂಗಿ. ಕುಮಾರರಾಮನನ್ನು ಎಲ್ಲ ಕಡೆಯಿಂದಲೂ ಮುತ್ತುವಂತೆ ಸೈನಿಕರಿಗೆ ಅಪ್ಪಣೆ ಮಾಡಿದಳು. ತನ್ನ ಸುತ್ತಲೂ ಶತ್ರುಗಳು ಮುತ್ತಿರಲು ಕುಮಾರರಾಮ ಕಲಿಯುಗದ ಭೀಮನಂತೆ ಅವರ ರುಂಡಗಳನ್ನು ಚೆಂಡಾಡತೊಡಗಿದ. ಏಕಾಂಗಿಯಾಗಿ ಹೋರಾಡುತ್ತಿದ್ದ ಅವನ ಕಲಿತನವನ್ನು ಮಾತಂಗಿಯೂ ಬೆರಗಾಗಿ ನೋಡಿದಳು3.

ಇತ್ತ ಕುಮಾರರಾಮ ಏಕಾಂಗಿಯಾಗಿ ಹೋರಾಡುತ್ತಿರುವ ಸಮಯ ಸಾಧಿಸಿ ಮಧುರಖಾನನೆಂಬೊಬ್ಬ ಸರದಾರ ತನ್ನ ಪಡೆಯೊಂದಿಗೆ ಕುಮ್ಮಟದುರ್ಗಕ್ಕೆ ಲಗ್ಗೆಹತ್ತಿದ. ಬಾಗಿಲು ಮುರಿದು ಒಳಹೊಕ್ಕ. ದುರ್ಗದಲ್ಲಿ ಆಕಾಶವನ್ನು ಮುಟ್ಟುವಂಥ ಜ್ವಾಲೆಯುರಿದು ಹೊಗೆಯಾಡತೊಡಗಿದ್ದನ್ನು ಗಮನಿಸಿದ

---

2 ಕರಿ ಹನ್ನೆರಡು ಸಾವಿರವಾರು ಸಾವಿರ
ಕರಭ ತುರಗ ಹತ್ತುಲಕ್ಷ
ಚರರೊಂದು ಕೋಟಿವೆರಸಿ ನಡೆತಂದಳು
ಧರಣಿ ಕಂಪಿಸೆ ಮಾತಂಗಿ॥

(ಸಂಧಿ 42. ಪದ್ಯ 50)

3 ಪೊಕ್ಕೆಡೆಯನು ಪೊರಮಟ್ಟೆಡೆಯನು ಮೇ
ಲಿಕ್ಕಿ ತಿವಿದು ಚಿಗಿವ್ವನನು
ಮುಕ್ಕಿರಿದೋಡಿ ಮುಯ್ಯಾಂತು ನಿಲ್ಲುದನೆವೆ
ಯಿಕ್ಕದಾ ವನಿತೆ (ಮಾತಂಗಿ) ನೋಡಿದಳು॥

(ಸಂಧಿ 44, ಪದ 160)

ಕುಮಾರರಾಮು ಕಾಲಮಿಂಚಿತೆಂದು ಸಂಕಟಪಟ್ಟು ಕೋಟೆಯತ್ತ ಧಾವಿಸಿದ. ನಡುವೆ ಕಾಟಣ್ಣ, ಸಂಗಮದೇವ ಮತ್ತು ಬಾದುರಖಾನರು ಎದುರಾದರು. ಕೋಟೆಯಲ್ಲಿ ನೋಡಿದರೆ ಅಂತಃಪುರದ ಎಲ್ಲ ಹೆಂಗಸರೂ ಚಿತೆಯೇರಿಸಿ ಅದರಲ್ಲಿ ಹಾರಲು ಸಿದ್ಧವಾಗಿದ್ದರು. ಕುಮಾರರಾಮ ತಾನೂ ದೇವರ ಪೂಜೆ ಸಲ್ಲಿಸಿ ಕಡೆಯ ನಿರ್ಧಾರ ಕೈಗೊಂಡು ಹಸಿದ ಹೆಬ್ಬುಲಿಯಂತೆ ಪುನಃ ಸೈನ್ಯದ ಮೇಲೆರಗಿದ. ಈ ಕಡೆಯ ಕಾಳಗದಲ್ಲಿ ಕಾಟಣ್ಣ, ಬಾದುರಖಾನ ಮತ್ತು ಸಂಗಮದೇವರಾದಿಯಾಗಿ ಎಲ್ಲರೂ ವೀರಸ್ವರ್ಗವನ್ನೈದಿದರು. ಕುಮಾರರಾಮ ನೂರಾರು ಅರಿಭಟರನ್ನು ಕೊಂದು. ಗಾಯಗಳ ಬಳಲಿಕೆಯಿಂದ ಶಕ್ತಿ ಸಾಲದೆ ಬಳಿಯಲ್ಲಿದ್ದ ಶಿಲೆಯೊಂದನ್ನು ತಬ್ಬಿ ಕುಸಿದುಬಿದ್ದ[4]. ಕುಮಾರರಾಮನ ಸಾವಿನ ಜೊತೆಗೆ ಮಾತಂಗಿಯ ದಂಡಯಾತ್ರೆಯೂ ಮುಗಿಯಿತು. ಕುಮಾರರಾಮನ ತಲೆಯನ್ನು ಕತ್ತರಿಸಿ ಅದನ್ನು ರೇಷ್ಮೆಯ ಅರಿವೆಯಲ್ಲಿ ಸುತ್ತಿಸಿ ದಿಲ್ಲಿಯ ಸುಲ್ತಾನನ ಬಳಿಗೆ ಕಳುಹಿಸಲಾಯಿತು[5]. ಕುಮಾರರಾಮನ ಶಿರವನ್ನು ನೋಡಿ ಸುಲ್ತಾನನ ಮಗಳು ದುಃಖಾವೇಶದಿಂದ ಮೃತಿಹೊಂದಿದಳು. ಸುಲ್ತಾನ ಮಗಳ ಮರಣದಿಂದ ತುಂಬಾ ನೊಂದ. ಕುಮಾರರಾಮನ ತಲೆಯನ್ನು ಪುನಃ ಕುಮ್ಮಟದುರ್ಗಕ್ಕೆ ಹಿಂದಿರುಗಿಸಿ ಬರಲು ಅಪ್ಪಣೆ ಮಾಡಿದ.

ಇದು ನಂಜುಂಡಕವಿಯ 'ಕುಮಾರರಾಮಸಾಂಗತ್ಯ' ತಿಳಿಸುವ ವಿಚಾರ. ಮೊದಲಿಗೆ ಕುಮಾರರಾಮನ ಬಗ್ಗೆ ಗಮನ ಸೆಳೆದವರು ರೆವರೆಂಡ್ ಎಫ್. ಕಿಟ್ಟೆಲ್. 1875ರಲ್ಲಿ ತಾವು ಸಂಪಾದಿಸಿದ ನಾಗವರ್ಮನ 'ಛಂದೋಂಬುಧಿ'ಯ ಮುನ್ನುಡಿಯಲ್ಲಿ ಇವನ ವಿಚಾರವನ್ನು ಪ್ರಸ್ತಾಪಿಸಿ. ಪಾಂಚಾಳಗಂಗನ ಮಗ ರಂಗಯ್ಯನೆಂಬೊಬ್ಬ ಕುಮಾರರಾಮನ ಕಥೆಯನ್ನು ಬರೆದಿರುವನೆಂದು ಹೇಳಿದ್ದಾರೆ. ಯಕ್ಷಗಾನ ರೂಪದಲ್ಲಿ 'ಕುಮಾರರಾಮಕಥೆ'ಯೊಂದುಂಟು ಎಂಬುದು ಅವರ ಗ್ರಂಥದಿಂದಲೇ ತಿಳಿದುಬರುತ್ತದೆ.

ಬಿ. ಎಲ್. ರೈಸ್ 'ಕರ್ಣಾಟಕ ಭಾಷಾಭೂಷಣ'ದ (1884) ಮುನ್ನುಡಿಯಲ್ಲಿ, ನಂಜುಂಡಕವಿ 'ಕುಮಾರರಾಮ ಚರಿತೆ'ಯೆಂಬ ಗ್ರಂಥವನ್ನು ರಚಿಸಿರುವುದಾಗಿಯೂ. ಕುಮಾರರಾಮ ಕಂಪಿಲರಾಯನ ಮಗನೆಂದೂ. ಕಂಪಿಲ ಮೊದಲಿಗೆ ಓರಂಗಲ್ಲಿನ ಪ್ರತಾಪರುದ್ರನ ಬಳಿ ದಂಡನಾಯಕನಾಗಿದ್ದನೆಂದೂ ಸಂಕ್ಷಿಪ್ತವಾಗಿ ತಿಳಿಸಿದ್ದಾರೆ.

ನಾ. ಎಂ. ಎಚ್. ಕೃಷ್ಣ ಅವರು 1929ರ 'ಮೈಸೂರು ಆರ್ಕಿಯಾಲಜಿ ರಿಪೋರ್ಟ್'ನಲ್ಲಿ ನಂಜುಂಡಕವಿಯ ಕೃತಿ ಕುಮಾರರಾಮನ ಇತಿಹಾಸವನ್ನು ತಿಳಿಸುವುದರಲ್ಲಿ ಪ್ರಾಮುಖ್ಯ ಪಡೆದಿದೆಯೆಂದೂ. ಅತ್ರ ಪ್ರಸ್ತಾಪಿಸಿರುವ ಘಟನೆಗಳು ಸತ್ಯಕ್ಕೆ ಬಹು ಸಮೀಪವಾಗಿವೆಯೆಂದೂ ವಿವರಿಸುತ್ತಾರೆ[6]. ದಿವಂಗತ ಡಿ. ಎಲ್. ನರಸಿಂಹಾಚಾರ್ಯರೂ ನಂಜುಂಡನ 'ಕುಮಾರರಾಮನ ಕಥೆ' ಸಾಹಿತ್ಯ ದೃಷ್ಟಿಯಿಂದ ಅಮೂಲ್ಯವಾಗಿರುವಂತೆಯೇ ಐತಿಹಾಸಿಕ ದೃಷ್ಟಿಯಿಂದ ಅದು ಸಾಕಷ್ಟು ಆಧಾರಗಳನ್ನೊಳಗೊಂಡಿದೆಯೆಂಬ ಅಭಿಪ್ರಾಯವನ್ನು ಮುಂದಿಡುತ್ತಾರೆ.[7]

ಇವರೇ ಅಲ್ಲದೆ ವಿದೇಶಿ ಇತಿಹಾಸಕಾರರಾದ ಬಾರ್ನಿ, ಫೆರಿಷ್ತಾ ಮತ್ತು ಇಸಾಮಿ ಇವರು

---

4 ಕೊಂದ ಸಂಖ್ಯಾತ ಭಟರ ಮತ್ತೆ ಮೈಯ್ಯೊಳು
ಸಂದಣಿಸಿದ ಘಾಯಗಳಿಗೆ
ನೊಂದಳವಳಿವು ತೊಯ್ಯನೆ ನಡೆತಂದೊಂದು
ನಿಂದ ಶಿಲೆಯ ನೆಮ್ಮಿದನು॥ (ಸಂಧಿ 46, ಪದ್ಯ 36)

5 ಬಳಿಕ ರಾಮನ ಪಂದಲೆಯ ಚೀನಾಂಬರ
ದೊಳಡಗಿಸಿ ಮಾತಂಗಿ
ಕಳುಹಿದಳಂಚೆಯ ಮೇಲಿಂದು ರಾಯನ ಬಳಿಗೆ
ಡಿಳ್ಳಿಯ ಪಟ್ಟಣಕೆ (ಸಂಧಿ 47, ಪದ್ಯ 84)

6 *Mysore Archaeological Report* (1929); pp. 37-38

7 *Vijayanagara Sex-Centurary Commemmoration Volume* p. 365

ಕಂಪಿಲಿಯ ಬಗ್ಗೆ ಪ್ರಸ್ತಾಪಿಸಿ, ಕಂಪಿಲರಾಯ ಮತ್ತು ಆತನ ಮಗ ಕುಮಾರರಾಮ ಇಬ್ಬರೂ ಮಹಮ್ಮದೀಯರ ವಿರುದ್ಧ ಹೋರಾಡಿದರೆಂದೂ, ಮೂರನೆಯ ಯುದ್ಧದಲ್ಲಿ ಸೋತುಹೋದರೆಂದೂ ತಿಳಿಸುತ್ತಾರೆ.

ಕುಮಾರರಾಮ ಐತಿಹಾಸಿಕ ವ್ಯಕ್ತಿಯೆಂಬುದಕ್ಕೆ ಶಾಸನಾಧಾರಗಳೂ ಸಿಕ್ಕಿವೆ. ಹಾವೇರಿಯ ಸಮೀಪದ ಸಂಗೂರಿನ ಬಳಿ ಇರುವ ಶಾಸನವೊಂದು ಹೀಗೆ ಹೇಳುತ್ತದೆ: "ಸ್ವಸ್ತಿ ಶ್ರೀ ಸಮಸ್ತ ಭುವನಾಶ್ರಯಂ ಶ್ರೀ ಪೃಥ್ವೀವಲ್ಲಭ ಮಹಾರಾಜಾಧಿರಾಜ ಪರಮೇಶ್ವರ ಸತ್ಯಾಶ್ರಯ ಕುಳತಿಳಕಂ ಶ್ರೀ ವೀರ ಪ್ರತಾಪ ಹರಿಹರರಾಯರ ಕುಮಾರದೇವರಾಯರು ಸುಖದಿಂ ರಾಜ್ಯಂಗೆಯ್ಯುತ್ತಿರಲ್. ಗೋವೆಯ ರಾಜ್ಯಕ್ಕೆ ಸಲ್ಲುವ ಚಂದ್ರಗುತ್ತಿಯ ನಾಡೊಳಗಣ ಚಂಗಾಪುರದಲ್ಲು ಕಂಪಿಲರಾಯನ ಬಾಹತ್ತರ ನಿಯೋಗಾಧಿಪತಿ ಪತಿಕಾರ್ಯಧುರಂಧರನುಮಪ್ಪ ಬೈಚಪ್ಪ ಹೆಗ್ಗಡೆ ಮೊಮ್ಮಗಂ. ಸೇನಾಧಿಪತಿ ಸಂಗಮನ ಕುಮಾರ ಮಾದರಸು **ಕುಮಾರ ರಾಮನಾಥ ದೇವರ** ಪ್ರತಿಷ್ಠೆಯನ್ನು ಶಕವರ್ಷ 1329ನೆಯ ಸರ್ವಜಿತು ಸಂವತ್ಸರದ ಅಶ್ವಯುಜ ಶುದ್ಧ 10 ಆದಿತ್ಯವಾರದಲ್ಲು ಮಾಡಿಸಿದರು. ಮಂಗಳ ಮಹಾ ಶ್ರೀ ಶ್ರೀ ಶ್ರೀ."8

ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲ್ಲೂಕು ಕೊಳವಳ್ಳಿ ಗ್ರಾಮದ ವೀರಗಲ್ಲೊಂದು. "ಶಕವರುಷ 1354ನೆಯ ಪರಿಧಾವಿ ಸಂವತ್ಸರದ ಮಾರ್ಗಶಿರ ಬಹುಳ ಬಿದಿಗೆ ಬುಧವಾರದಲ್ಲು ಕೊಳವಳಿಗೆ ಪಟಾವಳಿ ಬಂದು ಕಾದಿದಲ್ಲಿ ಬೊಮ್ಮರಸ ಹೆಗ್ಗಡೆಯವರ ಮಗ ಪುಟ್ಟ ಹೆಗ್ಗಡೆಯು ದಳವನ್ನು ಮುರಿದು ಅವರುಗಳೊಳಗೆ ಕುಮಾರರಾಮನಾಥನ ಪ್ರತಾಪವಾಗಿ ಅಂಬುಗೊಂಡಾಗಿ ಸ್ವರ್ಗವನ್ನು ಸೂರೆಗೊಂಡನು" ಎಂದು ತಿಳಿಸುತ್ತದೆ9.

ಹೊಯ್ಸಳರೊಡನೆ ನಡೆದ ಯುದ್ಧವನ್ನು ಕುರಿತು ಶಾಸನವೊಂದು, ಮುಮ್ಮಡಿ ಬಲ್ಲಾಳನು ಕಂಪಿಲರಾಯನ ಮೇಲೆ ದಂಡೆತ್ತಿ ಹೋದನೆಂದೂ, ಕುರುಗೋಡುನಾಡಿನ ದೋರವಾಡಿ ಬಯಲ್ಲಿ ನಡೆದ ಯುದ್ಧದಲ್ಲಿ ಬಲ್ಲಾಳ ಸೋತು ಕುರುಕನಾಯಕನೆಂಬೊಬ್ಬ ಸಾಮಂತ ಕಂಪಿಲನಿಂದ ವಧಿಸಲ್ಪಟ್ಟನೆಂದೂ ಹೇಳುತ್ತದೆ10. 1325ರ ಶಾಸನವೂ ಸಹ ಈ ಬಗ್ಗೆ ಬೆಳಕು ಚೆಲ್ಲುತ್ತದೆ.

ಶಾಸನಗಳು ಮಾತ್ರವಲ್ಲದೆ ಕುಮಾರರಾಮನ ಜ್ಞಾಪಕಾರ್ಥವಾಗಿ ಕಟ್ಟಿಸಲ್ಪಟ್ಟ ಕೆಲವು ದೇವಾಲಯಗಳಲ್ಲೊಂದು ತುಮಕೂರು ಕೊರಟಗೆರೆ ತಾಲ್ಲೂಕಿನ ಪಾಲನಹಳ್ಳಿಯಲ್ಲಿ ಈಗಲೂ ಇದೆ.

ಕುಮಾರರಾಮ ಐತಿಹಾಸಿಕ ವ್ಯಕ್ತಿಯೆಂಬುದಕ್ಕೆ ನಂಜುಂಡಕವಿಯ ಗ್ರಂಥ ನಂಬಿಕೆಗರ್ಹವಾಗಿದ್ದು ಸಾಕಷ್ಟು ಆಧಾರಗಳನ್ನು ಒದಗಿಸಿದರೂ, ಕೆಲವು ವಿಚಾರಗಳು ಸ್ಪಷ್ಟವಾಗಿಲ್ಲ. ನಂಜುಂಡಕವಿ ತನ್ನ ಸಾಂಗತ್ಯದ ಯಾವುದೇ ಮೂಲೆಯಲ್ಲಿ ಕುಮಾರರಾಮ, ಕಂಪಿಲರಾಯರ ಸಮಕಾಲೀನ ಸುಲ್ತಾನರ ಹೆಸರನ್ನು ತಿಳಿಸಿಲ್ಲ. ಕೇವಲ 'ಡಿಳ್ಳಿಯ ಸುರುತಾಳ'ನೆಂದು ಸಂಬೋಧಿಸಿದ್ದಾನೆ. ಇತಿಹಾಸಕಾರರ ತೀರ್ಮಾನದಂತೆ ಕುಮಾರರಾಮ ಅಲ್ಲಾವುದ್ದೀನ್ ಖಿಲ್ಜಿ ಮತ್ತು ಮಹಮ್ಮದ್ ಬಿನ್ ತೊಗಲಕ್ ಈ ಇಬ್ಬರ ಕಾಲದಲ್ಲೂ ಇದ್ದನೆಂದು ವ್ಯಕ್ತವಾಗಿದೆ. ಇದು ಸರಿಯೆಂದು ಒಪ್ಪಿದರೂ ಯಾವ ಸುಲ್ತಾನನ ಮಗಳು ಕುಮಾರರಾಮನನ್ನು ಪ್ರೇಮಿಸಿದಳೆಂದು ತಿಳಿಯುವುದು ಕಷ್ಟ. ಹುಲ್ಲೂರು ಶ್ರೀನಿವಾಸ ಜೋಯಿಸರು ಹೇಳುವಂತೆ ಮಹಮ್ಮದ್ ಬಿನ್ ತೊಗಲಕನಿಗೆ ಮೂರು ಜನ ಹೆಣ್ಣುಮಕ್ಕಳಿದ್ದರು11. ಈ ಬಗ್ಗೆ

---

8 Epigraphia Indica. Vol. XXII (A.D. 1407) p. 185. ಈ ಶಾಸನ ಮೆಕೆಂಜಿಯ ಹಸ್ತಪ್ರತಿಯಲ್ಲಿಯೂ ಉಕ್ತವಾಗಿದೆ.

9 E.C. Vol. VII, part II, No. 23 (A.D. 1432)

10 E.C. Vol. VIII, No. 19. ಈ ಶಾಸನವಲ್ಲದೆ, E.C. XI No. 86, 87: E.C. XV No. 83 ಇವೂ ಮೂರನೆಯ ಬಲ್ಲಾಳನೊಂದಿಗೆ ನಡೆದ ಯುದ್ಧವನ್ನು ವರ್ಣಿಸುತ್ತವೆ.

11 'ಗಂಡುಗಲಿ ಕುಮಾರರಾಮ': ಶ್ರೀ ಹುಲ್ಲೂರು ಶ್ರೀನಿವಾಸ ಜೋಯಿಸ್: ಪಿಸ್ಸುವಿ– ಪು. 136

ಸಾಕಷ್ಟು ಆಧಾರಗಳಿಲ್ಲ. ಅಲ್ಲಾವುದ್ದೀನನಿಗೊಬ್ಬ ಮಗಳಿದ್ದಳೆಂದೂ ಅವಳು ಮೇಲುಕೋಟೆ ಚೆಲುವ ರಾಯಸ್ವಾಮಿಗೆ ತನ್ನನ್ನು ಸಮರ್ಪಿಸಿಕೊಂಡಳೆಂದೂ ದಂತಕಥೆಯೊಂದಿದೆ. ಜನರ ಬಾಯಲ್ಲಿದ್ದ ಈ ಕಥೆಯ ಆಧಾರದ ಮೇಲೆ ಸುಲ್ತಾನನ ಮಗಳ ಪ್ರೇಮಕಥೆಯನ್ನು ನಂಜುಂಡಕವಿ ಸೃಷ್ಟಿಸಿಕೊಂಡಿರ ಬೇಕೆಂಬ ಅಭಿಪ್ರಾಯವೊಂದಿದೆ12.

ರತ್ನಾಜಿ ಮತ್ತು ಮಾತಂಗಿ ಇವರ ಬಗ್ಗೆ ಐತಿಹಾಸಿಕ ಆಧಾರಗಳಿಲ್ಲದಿರುವುದರಿಂದ ಇವರು ಕಾಲ್ಪನಿಕ ವ್ಯಕ್ತಿಗಳೆಂದು ಹೇಳದೆ ವಿಧಿಯಿಲ್ಲ. ನೇಮಿ ಮಲ್ಲುಕನೆಂಬ ಹೆಸರಿನ ಸೇನಾನಿಯ ಬಗ್ಗೆ ಕೆಲವು ಊಹಾಪೋಹಗಳಿವೆ. ಇಸಾಮಿ ಹೇಳುವಂತೆ ಮಲ್ಲಿಕ್ ರುಕುದೀನ್, ಕುತುಬ್ ಮಲ್ಲಿಕ್ ಜಹಾನ್ ಮತ್ತು ಅಹಮದ್ ಅಯಾಜ್ ಮಲ್ಲಿಕ್ ಜಾದಾ ಇವರು ಕಂಪಿಲಿಯ ಮೇಲೆ ದಂಡೆತ್ತಿಬಂದ ತೊಗಲಖಿನ ಸೇನಾನಿಗಳೆಂದು. ಬಹುಶಃ ಅವರೆಲ್ಲರೂ ನೇಮಿಯೆಂಬ ಸಾಧಾರಣ ನಾಮಧೇಯದಿಂದ ಕರೆಯಲ್ಪಟ್ಟಿರ ಬೇಕೆಂದು ಊಹಿಸಲಾಗಿದೆ,13.

ಬಾಮರಖಾನ ಅಥವಾ ಬಹಾದ್ದೂರ್ ಖಾನ ಇಬನ್ ಬತೂತನ ಪ್ರವಾಸಲೇಖನದಲ್ಲಿ ಬರುವ ಬಹಾವುದ್ದೀನ್ ಗಷ್ತಾಪ್ ಮತ್ತು ಫೆರಿಷ್ತಾನ ಗ್ರಂಥದಲ್ಲಿ ಬರುವ ಬಹಾವುದ್ದೀನ್ ಗರ್‌ಷಾಪ್ –ಈ ಇಬ್ಬರಲ್ಲಿ ಒಬ್ಬನಾಗಿರಬೇಕೆಂದು ಎನ್. ವೆಂಕಟರಮಣಯ್ಯನವರ ಮತ14.

ಮುಮ್ಮಡಿ ಸಿಂಗೇಯನಾಯಕ ಮತ್ತು ಕಂಪಿಲಿರಾಯ ಇಬ್ಬರೂ ಐತಿಹಾಸಿಕ ವ್ಯಕ್ತಿಗಳೆನ್ನಲು ಸಾಕಷ್ಟು ಆಧಾರಗಳಿವೆ. ಕುಮಾರರಾಮ ಮಾತಂಗಿಯೊಡನೆ ತನ್ನ ಕೊನೆಯ ಕಾಳಗವನ್ನು ಕೊಡುವ ಮುನ್ನ ಕಂಪಿಲರಾಯ ಮತ್ತು ಹರಿಹರದೇವಿಯರನ್ನು ದೂರದ ಸುರಕ್ಷಿತ ಸ್ಥಳಕ್ಕೆ ಕಳುಹಿಸಿಕೊಡು ತ್ತಾನೆ. ಕುಮಾರರಾಮನ ಮರಣಾನಂತರ ಕಂಪಿಲರಾಯ ಏನಾದನೆಂಬುದು ಖಚಿತವಾಗಿ ತಿಳಿದಿಲ್ಲ.

ಕುಮಾರರಾಮನನ್ನು ಕುರಿತು ಸೃಷ್ಟಿಯಾಗಿರುವ ಗ್ರಂಥಗಳ ಬಗ್ಗೆಯೂ ಪಂಡಿತರಲ್ಲಿ ಭಿನ್ನಾಭಿ ಪ್ರಾಯಗಳಿವೆ. ಮುಳ್ಳೂರು ಶ್ರೀನಿವಾಸ ಜೋಯಿಸರು ಆರು ಜನ ಕವಿಗಳು ಆರು ಕೃತಿಗಳನ್ನು ರಚಿಸಿ ರುವರೆಂದರೆ, ಡಾ. ಜಿ. ವರದರಾಜರಾಯರ ಪ್ರಕಾರ 'ಕುಮಾರರಾಮನ ಸಾಂಗತ್ಯ'ಗಳನ್ನು ರಚಿಸಿದವರು ಆರು ಮಂದಿಯಲ್ಲ, ಮೂರೇ ಮಂದಿ15. ಆದರೆ 'ಕುಮಾರರಾಮನ ಸಾಂಗತ್ಯ'ವನ್ನು ರಚಿಸಿದ ಗಂಗಯ್ಯ ಹೆಸರಿನ ಮೂವರು ಕವಿಗಳಿರುವುದರಿಂದ ಕೆಲವೊಮ್ಮೆ ಅವರೆಲ್ಲ ಒಂದೇ ಹೆಸರಿನವರಿರಬೇಕೆಂಬ ಸಂದೇ ಹಕ್ಕೂ ಅವಕಾಶವಿದೆ.

ಕಂಪಿಲಿ ಮುಂದೆ ವಿಜಯನಗರ ಸಾಮ್ರಾಜ್ಯದ ಸ್ಥಾಪನೆಗೆ ತಳಹದಿಯಾಯಿತೆಂಬ ಸಂಗತಿಯನ್ನು ಡಾ. ಎಂ. ಎಚ್. ಕೃಷ್ಣ ಅವರು ಒಪ್ಪುತ್ತಾರೆ16. ಹರಿಹರ ಮತ್ತು ಬುಕ್ಕರಾಯರು ಕಂಪಿಲನ ಸೇವೆ ಯಲ್ಲಿದ್ದು ಮುಂದೆ ವಿಜಯನಗರದ ಸ್ಥಾಪನೆಗೆ ಕಾರಣರಾದರು; ಬಹುಶಃ ಅವರು ಭಾವ ಸಂಗಮ ದೇವನ ಮಕ್ಕಳಾಗಿದ್ದಿರಬಹುದೆಂಬ ಪ್ರೊ. ದೇ. ಜವರೇಗೌಡರ ಅಭಿಪ್ರಾಯ ಸಮಂಜಸವಾದುದು.17.

• ತಕ್ಕ ಆಧಾರಗಳಿಲ್ಲವೆಂದು ಕುಮಾರರಾಮ ಐತಿಹಾಸಿಕ ವ್ಯಕ್ತಿಯಲ್ಲವೆಂಬ ವಾದವಿದ್ದರೂ ಈಗ ದೊರಕಿದಷ್ಟೇ ಸಾಮಗ್ರಿಯಿಂದ ಅವನು ಐತಿಹಾಸಿಕ ಪುರುಷನೆಂದು ಸಾಧಿಸಿ ತೋರಿಸಬಹುದಾಗಿದೆ. ಯಾವ ಸಂದೇಹಕ್ಕೂ ಆಸ್ಪದವಿಲ್ಲದಂತೆ ಇದನ್ನು ಸ್ಥಾಪಿಸಲು ಈ ದಿಶೆಯಲ್ಲಿ ಶೋಧನೆಯ ಕಾರ್ಯ ಮುಂದುವರಿಯಬೇಕಾಗಿದೆ.

---

12 'ನಂಜುಂಡಕವಿ': ಪ್ರೊ. ದೇ. ಜವರೇಗೌಡ; ಪು. 160

13 ಅದೇ, ಪು. 159

14 *Kampili and Vijayanagar* : N. Venkata Ramanaiah: p. 18

15 'ಕುಮ್ಮಟ ಕೇಸರಿ' : ಡಾ. ಜಿ. ವರದರ್‍ಾಜರಾವ್; ಮುನ್ನುಡಿ–ಪು. vii (ಡಾ. ಜಿ. ವರದರಾಜರಾಯರು ತುಳುವಿನಲ್ಲಿ 'ಕೋಮಲ್ ರಾಯನ ಚರಿತ್ರೆ' ಎಂಬ ಪಾಡ್ದನ ಇದೆ ಎಂಬ ಅಂಶವನ್ನು ಹೊರಗೆಡವಿದ್ದಾರೆ– 'ಕುಮ್ಮಟ ಕೇಸರಿ'. ಮುನ್ನುಡಿ–ಪು. ix)

16 MAR (1929); pp. 37–38

17 'ನಂಜುಂಡ ಕವಿ': ಪ್ರೊ. ದೇ. ಜವರೇಗೌಡ; ಪು. 161

ಕುಮಾರರಾಮನ ಸಾಂಗತ್ಯಗಳು ಬೇಡರ ನಾಯಕನೊಬ್ಬನ ವೃತ್ತಾಂತವನ್ನು ಒಳಗೊಂಡಿರುವುದರಿಂದ ಇವುಗಳಲ್ಲಿ ಈ ಜನಾಂಗಕ್ಕೆ ಸಂಬಂಧಿಸಿದ ವಿಶಿಷ್ಟವಾದ ಸಂಗತಿಗಳೇನಾದರೂ ಅಡಕವಾಗಿವೆಯೆ ಎಂಬುದನ್ನು ಇಲ್ಲಿ ವಿಚಾರಿಸುವುದು ಅಪ್ರಕೃತವಾಗಲಾರದು. ನಂಜುಂಡ ಮತ್ತು ಪಾಂಚಾಳ ಗಂಗರಲ್ಲಿ ಕುಮಾರರಾಮನನ್ನು ದೈವಾಂಶಪುರುಷನೆಂದು ಮಾತ್ರವೇ ಗಣಿಸಿದ್ದರೆ, ಮಹಲಿಂಗಸ್ವಾಮಿಯಲ್ಲಿ ರಾಮನಾಥನೆಂಬಾತನ ಸ್ಥಾಪನೆ, ಕುಮಾರರಾಮನ ಜಾತ್ರೆ ಮುಂತಾದ ಇತರ ವಿಷಯಗಳೂ ಕೇಳಿಬರುತ್ತವೆ. (xviii, 102; xix 255). ಈ ಸೂಚನೆಗಳು [ಸಂಗೂರಿನ ಶಿಲಾಶಾಸನದಲ್ಲಿ ಬರುವ ಕುಮಾರರಾಮನಾಥ ದೇವರ ಪ್ರತಿಷ್ಠೆಯನ್ನೂ ಕುಮ್ಮಟದುರ್ಗದಲ್ಲಿ ವರ್ಷಕ್ಕೊಮ್ಮೆ ಆಚರಿಸುವ ಕುಮಾರರಾಮನ ಉತ್ಸವವನ್ನೂ ಹೋಲುತ್ತವೆ. ಕುಮಾರರಾಮನ ರುಂಡವು ಲಿಂಗಾಕೃತಿಯಾಯಿತೆಂದೂ, ಅದಕ್ಕೆ ಪೂಜೆ ಸಲ್ಲಿಸುವ ತನಕ ಹಾಸಿ ತಪ್ಪಲಿಲ್ಲವೆಂದೂ ಈ ಕಾವ್ಯಗಳಲ್ಲಿ ಬರುತ್ತವೆ. ಇದು ಮೇಲೆ ಹೇಳಿದ ಉತ್ಸವದಲ್ಲಿ ರುಂಡಾಕೃತಿಗಳನ್ನು ಪೂಜಿಸುವ ಸಂಪ್ರದಾಯವನ್ನೇ ಸ್ಮರಣೆಗೆ ತರುತ್ತದೆ. ಕಾವ್ಯದಲ್ಲಿ ಪ್ರಾಸಂಗಿಕವಾಗಿ ಬರುವ ಕೋಳಿದ ಹಬ್ಬವು ಇಂದಿಗೂ ಸುರಪುರದ ಬೇಡರಲ್ಲಿ ಆಚರಣೆಯಲ್ಲಿರುವುದಾಗಿ ತಿಳಿದುಬರುತ್ತದೆ. ಹೀಗೆಯೇ ಇಲ್ಲಿ ವರ್ಣಿತವಾಗಿರುವ ಬಹು ಪತ್ನೀತ್ವ, ಸಹಗಮನ ಮೊದಲಾದವು ಬೇಡರಲ್ಲಿ ಒಂದು ಕಾಲದಲ್ಲಿ ವಿಶೇಷವಾಗಿ ಬಳಕೆಯಲ್ಲಿದ್ದುವೆಂಬುದಾಗಿ ಶ್ರೀ ಬಿ. ಎಸ್. ಪುಟ್ಟಣ್ಣ ಅವರು ಸೂಚಿಸಿರುತ್ತಾರೆ. ಇಂತೆಯೇ ಪ್ರಾಸಂಗಿಕವಾಗಿ ಉಲ್ಲೇಖಿಸಿರುವ ಆನೆಗೊಂದಿ, ರಾಯದುರ್ಗ, ಪೆನುಗೊಂಡೆ, ಗಂಡಿಕೋಟೆ (ಗುಡಿಕೋಟೆ?), ಗುತ್ತಿ, ಆದವಾನಿ ಮೊದಲಾದ ಎಡೆಗಳು ಪಾಳಯಗಾರರ ಚರಿತ್ರೆಯಲ್ಲಿ ಒಂದಲ್ಲ ಒಂದು ರೀತಿಯಾಗಿ ಸುಪ್ರಸಿದ್ಧವಾಗಿವೆ. ಎಲ್ಲಕ್ಕಿಂತಲೂ ಮಿಗಿಲಾಗಿ ಈ ಕೃತಿಗಳ ಪ್ರಧಾನ ಪಾತ್ರಗಳು ಮತ್ತು ವೀರಯೋಧರ ಹೆಸರುಗಳು ಈ ದೃಷ್ಟಿಯಿಂದ ಗಮನಾರ್ಹವಾಗಿವೆ. ನಂಜುಂಡನಲ್ಲಿ ಕುಮಾರರಾಮನ ಧನುರ್ವಿದ್ಯೆಯನ್ನು "ಗುರುಮುಖದಿಂದ ವೇತಾಳನಿದಿರೊಳು ಬರಿಸಿಕೊಂಡನು (vii. 84)" ಎಂದು ಹೇಳಿರುವಂತೆಯೇ ಗಂಗನ ಒಂದು ಪ್ರತಿಯಲ್ಲಿ "ಉತ್ತಮ ಬೈತಾಳದೇವರ ಪೂಜಿಸಿ ಚಿತ್ರದ ಸಾಧನೆಯ ತೋರಿ (ಗಂ.5. iii. 34)" ಎಂದು ಬರೆದಿದೆ. ಈ ವೇತಾಳ ಪೂಜೆಯ ವೈಶಿಷ್ಟ್ಯವು ವಿಚಾರಾರ್ಹವಾಗಿದೆ. ಮಹಲಿಂಗಸ್ವಾಮಿ ಕುಮಾರರಾಮನ ಮಗನಾದ ಜಟ್ಟಿಂಗಿರಾಯನನ್ನು "ಕಾಮಕೇತಕಿ ಭೂಪಾಲ (i. 37)" ಎಂದು ಸಂಬೋಧಿಸಿದ್ದರೆ, ಗಂಗನ ಒಂದು ಪ್ರತಿಯಲ್ಲಿ ಕಂಪಿಲರಾಯನ ತಂದೆಯನ್ನು "ಕುಲದಲ್ಲಿ ಪೂವಾಲಿ ಮುಮ್ಮಡಿ ಸಿಂಗನು (ಗಂ.2 . 13)" ಎಂದು ಕರೆದಿದೆ. ಗಂಗನ ಇದೇ ಪ್ರತಿಯಲ್ಲಿಯೇ ಹರಿಯಾಲದೇವಿಯನ್ನು "ಗುಜ್ಜಾರಿಯನಾಕ್ಷ" ಆರೇಯ ಜಾಮರಾಯನ ಮಗಳೆಂದು ಹೇಳಿರುವಂತೆಯೇ (ಗಂ.2 ii 13–18) ರಾಮಘಡದ ಶಿಲಾಶಾಸನದಲ್ಲಿ ಈಕೆಯನ್ನು "ವೀರಗುಜ್ಜಲ ಹರಿಹರದೇವಿ" ಎಂದು ಕರೆಯಲಾಗಿದೆ. ಈ ಹೆಸರುಗಳ ಹಿಂದೆ ಬರುವ ವಿಶೇಷಣಗಳು ಬೇಡರ ಶಾಖೆಗಳಾದ 'ಕಾಮಗೇತಿ' 'ಪೂವ್ವಲಿ' ಮತ್ತು 'ಗುಜ್ಜಲ' ಎಂಬುವುಗಳೆಂದು ಸ್ಪಷ್ಟವಾಗುತ್ತದೆ[1].

—ಡಾ॥ ಜಿ. ವರದರಾಜರಾವ್

---

1 ಕುಮಾರರಾಮನ ಸಾಂಗತ್ಯಗಳು: ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು-6 ಪು. 367–8

ಎಚ್. ಎ. ಖಾನ್

ಸಾರ್ವಜನಿಕ ಗ್ರಂಥಾಲಯ—ಅರ್ಥ, ವ್ಯಾಪ್ತಿ

ನಮ್ಮ ದೇಶದಲ್ಲಿ ಇತ್ತೀಚೆಗೆ ಸಾರ್ವಜನಿಕ ಗ್ರಂಥಾಲಯಗಳು ಅಲ್ಲಲ್ಲಿ ಕಾಣಬರುತ್ತವೆ. ಇಂಥ ಒಂದು ಗ್ರಂಥಾಲಯವನ್ನು ನಿರೀಕ್ಷಿಸಿದ ಪಕ್ಷದಲ್ಲಿ ಅದರ ಒಳನೋಟ ಹೀಗೆ ಕಂಡುಬರುತ್ತದೆ: ಹಲವಾರು ಗ್ರಂಥಗಳು, ಕೆಲವು ದಿನಪತ್ರಿಕೆಗಳು ಹಾಗೂ ನಿಯತಕಾಲಿಕೆಗಳು, ಎರಡು–ಮೂರು ಜನರ ಸಿಬ್ಬಂದಿ, ಆಗಾಗ್ಗೆ ಬರು–ಹೋಗುವ ಕೆಲವು ಓದುಗರು. ಗ್ರಂಥಗಳನ್ನು ಎರವಲು ತೆಗೆದುಕೊಳ್ಳುವ ದಿಪ್ಸಲ್ಲಿ ಆ ಓದುಗರು ಮೊದಲು ಗ್ರಂಥಾಲಯದ ನಿಯಮಗಳ ಪ್ರಕಾರ ನಮೂದಿಸಿದ ಹಣವನ್ನು ಠೇವಣಿಯಾಗಿ ಇಡಬೇಕು. ಇಂಥ ಗ್ರಂಥಾಲಯಗಳನ್ನು ನಾವು ಸಾರ್ವಜನಿಕ ಗ್ರಂಥಾಲಯಗಳೆಂದು ಕರೆಯಬಹುದೇ? ಅವು ತಮ್ಮ ಕಾರ್ಯಗಳನ್ನು ನಿಜರೀತಿಯಲ್ಲಿ ನಿರ್ವಹಿಸುತ್ತವೆಯೇ? ಜನಸಾಮಾನ್ಯರ ಯಾವ ಬೇಡಿಕೆಗಳನ್ನು ಈ ಗ್ರಂಥಾಲಯಗಳು ಪೂರೈಸಬಹುದು? ಪಾಶ್ಚಾತ್ಯ ದೇಶಗಳಲ್ಲಿ ಇರುವ ಸಾರ್ವಜನಿಕ ಗ್ರಂಥಾಲಯಗಳು ಹೇಗೆ ಸಾರ್ವಜನಿಕ ಜೀವನದ ಒಂದು ಅಂಗವಾಗಿವೆ? ನಮ್ಮ ದೇಶದಲ್ಲಿ ಇವು ಯಾವ ಪಾತ್ರವನ್ನು ನಿರ್ವಹಿಸಬೇಕು? ಈ ಹಲವಾರು ಪ್ರಶ್ನೆಗಳಿಗೆ ಉತ್ತರ ದೊರಕಿಸುವುದು ಅತ್ಯಗತ್ಯ. ಅದಕ್ಕಾಗಿ ನಾವು ಮೊದಲಾಗಿ ನಿಜರೂಪದಲ್ಲಿ ಸಾರ್ವಜನಿಕ ಗ್ರಂಥಾಲಯ ಎಂದರೇನು ಎಂಬುದನ್ನು ತಿಳಿದುಕೊಳ್ಳಬೇಕು.

ಸುಮಾರು ನೂರು ವರುಷಗಳ ಹಿಂದೆ ಸಾರ್ವಜನಿಕ ಗ್ರಂಥಾಲಯವೆಂಬ ಸಂಸ್ಥೆ ತನ್ನ ನಿಜ ರೂಪದಲ್ಲಿ ಇಂಗ್ಲೆಂಡ್ ಮತ್ತು ಅಮೆರಿಕ ಸಂಯುಕ್ತಸಂಸ್ಥಾನಗಳಲ್ಲಿ ಜನ್ಮತಾಳಿತು. ಈ ಮಾತು ಬಹುಜನರಿಗೆ ತಿಳಿದ ವಿಷಯ. ಆದರೆ ಈ ಸಂಸ್ಥೆಯ ವಿಕಾಸ ಹೇಗಾಯಿತು, ಇದು ಹೇಗೆ ಬೆಳೆಯಿತು, ಜನಸಾಮಾನ್ಯರಿಂದ ಹೇಗೆ ಮನ್ನಣೆ ಪಡೆಯಿತು ಮತ್ತು ವಿದ್ಯಾವಂತರ ಹಾಗೂ ಜನಸಾಮಾನ್ಯರ ಮೇಲೆ ಇದು ಏನು ಪರಿಣಾಮ ಮಾಡಿತು—ಈ ವಿಷಯಗಳ ಬಗ್ಗೆ ಬಹುಶಃ ಬಹಳ ಮಂದಿಗೆ ಜ್ಞಾನ ವಿಲ್ಲ. ಈ ಸಂಸ್ಥೆ ಕೆಲವೇ ವರ್ಷಗಳಲ್ಲಿ ಜನರಲ್ಲಿ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ಕೈಗಾರಿಕಾ, ವೈಜ್ಞಾನಿಕ ಕ್ರಾಂತಿಯನ್ನು ಉಂಟುಮಾಡಿತು. ಜನಜೀವನದಲ್ಲಿ ಅದೊಂದು ಜೀವನಾಡಿಯಾಗಿ ಪರಿಣಮಿಸಿತು. ಈ ಬದಲಾವಣೆ ಹೇಗಾಯಿತು ಮತ್ತು ಯಾವ ರೀತಿಯಲ್ಲಿ ಈ ಸಂಸ್ಥೆ ಬೇರೂರಿತು ಎಂಬುದನ್ನು ತಿಳಿಯಬೇಕಾದರೆ ಆಗಿನ ಕಾಲದ ಸಾಮಾಜಿಕ ಇತಿಹಾಸದ ಮೇಲೆ ಕಣ್ಣೋಡಿಸಬೇಕಾಗುವುದು.

ಕೈಗಾರಿಕಾ ಕ್ರಾಂತಿ ಬರುವ ಮುಂಚೆ ಶಿಕ್ಷಣ ಉನ್ನತವರ್ಗದ ಕೆಲ ಜನರ ಸೊತ್ತಾಗಿತ್ತು. ಜನಸಾಮಾನ್ಯರು ಶಿಕ್ಷಣ ಪಡೆಯುವುದು ಹಾಸ್ಯಾಸ್ಪದ ಮತ್ತು ಪ್ರಶ್ನಾರ್ಥಕವಾದ ವಿಷಯವಾಗಿತ್ತು. ಆದರೆ ಫ್ರೆಂಚ್ ಕ್ರಾಂತಿ, ಕೈಗಾರಿಕಾ ಕ್ರಾಂತಿ ಮತ್ತು ವೈಜ್ಞಾನಿಕ ಕ್ರಾಂತಿ ತಮ್ಮತಮ್ಮ ವೈಯಕ್ತಿಕ ರೀತಿಯಲ್ಲಿ ಜನಸಾಮಾನ್ಯರಿಗೆ ಜ್ಞಾನಪಡೆಯುವ ಹಂಬಲದ ಕುಡಿಯೊಡೆಯಿಸಿತು. ಫ್ರೆಂಚ್ ಕ್ರಾಂತಿ ಸಾಮಾನ್ಯರು ರಾಜಕೀಯ ಮತ್ತು ಸಾಮಾಜಿಕ ಸ್ವಾತಂತ್ರ್ಯಗಳನ್ನು ಪಡೆಯುವುದು ಅವರ ಹಕ್ಕೆಂದು ಘೋಷಿಸಿ ಅವರ ಆತ್ಮಸಾಕ್ಷಿಯನ್ನು ಚೇತರಿಸಿತು; ಕೈಗಾರಿಕಾ ಕ್ರಾಂತಿ ಉತ್ಪತ್ತಿ ಹೆಚ್ಚಿಸುವ ಹೊಸ ಮತ್ತು ಸುಲಭ ಪ್ರಯೋಗಗಳನ್ನು ತಿಳಿಯಹೇಳಿತು; ಮತ್ತು ವೈಜ್ಞಾನಿಕ ಕ್ರಾಂತಿ ವಿಜ್ಞಾನದಿಂದ ಮಾನವ ತನ್ನ ಪ್ರಗತಿಯನ್ನು ಬೇರೆಬೇರೆ ದಿಕ್ಕುಗಳಲ್ಲಿ ಹೇಗೆ ತೀವ್ರವಾಗಿ ಸಂಘಟಿಸಬಹುದು ಎಂದು ಸಾರಿತು. ಸಾರ್ವಜನಿಕ

ಶಾಲೆಗಳು, ಕೈಗಾರಿಕಾ ಕೇಂದ್ರಗಳು, ಉಚ್ಚ ಶಿಕ್ಷಣ ಕಾಲೇಜು ಮತ್ತು ವಿಶ್ವವಿದ್ಯಾನಿಲಯಗಳು ಈ ದೇಶಗಳಲ್ಲಿ ಸಾವಧಾನವಾಗಿ ಬೆಳೆಯುತೊಡಗಿದುವು. ಹತ್ತೊಂಬತ್ತನೆಯ ಶತಮಾನದ ಕೊನೆಯಲ್ಲಿ ಇವೆಲ್ಲದರ ಪರಿಣಾಮವಾಗಿ ಶಿಕ್ಷಣ ಸಾರ್ವಜನಿಕರ 'ಹಕ್ಕು' ಎಂದು ಪರಿಗಣಿಸಲಾಯಿತು. ಶತಮಾನಗಳಿಂದ ನಿದ್ದೆಹೋದ ಸಮಾಜ ಎಚ್ಚೆತ್ತಿತು. ಸಾಮಾನ್ಯರು ಜ್ಞಾನ ದೊರಕಿಸಿಕೊಳ್ಳುವುದರಲ್ಲಿ ಸತತವಾಗಿ ಶ್ರಮಿಸಬೇಕಾಗುವ ಆವಶ್ಯಕತೆ ಬಂತು.

ಶೈಕ್ಷಣಿಕ ಸಂಸ್ಥೆಗಳು ಒಬ್ಬ ಕೈಗಾರಿಕಾ ಮನುಷ್ಯನ ಜ್ಞಾನ ಬೇಡಿಕೆಗಳನ್ನು ಪೂರೈಸದಾದವು; ಅವನಿಗೆ ಹೆಚ್ಚಾಗಿ ಏನಾದು ಕಲಿಯುವಂತಾಗಿ ಅವನು ಹೊಸ ಜ್ಞಾನ ಪಡೆಯುವ ಹಂಬಲ ತೋರಿಸಿದ; ಅವಿದ್ಯಾವಂತರು ಅವಿದ್ಯಾವಂತರಾಗಿ ಕರೆಯಲ್ಪಡುವ ಭಾವನೆಯಿಂದ ಮುಕ್ತಿ ತೋರಿಸದಾದರು; ವೃದ್ಧರು ತಮ್ಮ ಸುತ್ತುಮುತ್ತು ನಡೆಯುತ್ತಿದ್ದ ಕ್ರಾಂತಿಕಾರಕ ಜೀವನವನ್ನು ನೋಡಿ ಅವಾಕ್ಕಾದರು. ಇವೆಲ್ಲ ಸಮಸ್ಯೆಗಳನ್ನು ಪರಿಹರಿಸುವುದು ಆಗಿನ ಸಮಾಜದ ಕರ್ತವ್ಯವಾಯಿತು. ಸಾರ್ವಜನಿಕ ಗ್ರಂಥಾಲಯ ಈ ಕಾರ್ಯತತ್ಪರತೆಗಳ ಸೂಚಕವಾಯಿತು.

ಈಗ ನಾವು 'ಸಾರ್ವಜನಿಕ ಗ್ರಂಥಾಲಯ' ಎಂಬ ಪದದ ನಿಜಾರ್ಥ ತಿಳಿದುಕೊಳ್ಳುವುದು ಉಚಿತ.

ಗ್ರಂಥಪಾಲಕರು ಆಗಾಗ್ಗೆ 'ಸಾರ್ವಜನಿಕ ಗ್ರಂಥಾಲಯ'ದ ವಿವಿಧ ವ್ಯಾಖ್ಯೆಗಳನ್ನು ಕೊಟ್ಟಿದ್ದಾರೆ. ಎಲ್ಲರ ಮನ್ನಣೆ ಪಡೆದ ವ್ಯಾಖ್ಯೆಯೆಂದರೆ: (1) ಸಾರ್ವಜನಿಕ ಬೊಕ್ಕಸದಿಂದ ಬಹುತೇಕ ಹಣ ಪಡೆಯುವ; (2) ಜಾತಿ, ಮತ, ಲಿಂಗಭೇದವಿಲ್ಲದೆ ಎಲ್ಲರಿಗೂ ತೆರೆದಿರುವ, ಓದುಗರಿಗೆ ಯಾವುದೇ ಶುಲ್ಕ ವಿಧಿಸದ; (3) ಸಾಮಾಜಿಕ ಶಿಕ್ಷಣವಾಗಬೇಕೆಂದು ಉದ್ದೇಶಿಸಲಾದ ಮತ್ತು ಸ್ವಯಂ ಶಿಕ್ಷಣದ ಅನಂತಸಾಧನವಾಗಿರುವ; (4) ವಾಚಕರ ಆಸಕ್ತಿಗಳನ್ನು ತಣಿಸಬಲ್ಲ, ಆದಷ್ಟು ವಿಸ್ತೃತ ವೈವಿಧ್ಯಪೂರಿತ ವಿಷಯಗಳ ಬಗ್ಗೆ, ಯಾವ ಪಕ್ಷಪಾತವಾಗಲಿ ಪೂರ್ವಾಗ್ರಹವಾಗಲಿ ಇಲ್ಲದೆ, ಉಚಿತವಾಗಿ, ಸಂಪೂರ್ಣವಾದಂಥ ಶೈಕ್ಷಣಿಕ ಮತ್ತು ವಿನೋದರೂಪಕ ಸಾಮಗ್ರಿಗಳನ್ನೊಳಗೊಂಡಿರುವ ಗ್ರಂಥಾಲಯವದು.

ಈ ವ್ಯಾಖ್ಯೆಯಿಂದ ವೇದ್ಯವಾಗುವ ಮುಖ್ಯಾಂಶಗಳಿವು: ಪ್ರಪ್ರಥಮವಾಗಿ ಸಾರ್ವಜನಿಕ ಗ್ರಂಥಾಲಯ ಶುಲ್ಕ ವಿಧಿಸದೆ ಎಲ್ಲರಿಗೂ ಮೀಸಲಾದ ಒಂದು ಸಂಸ್ಥೆ. ಗ್ರಂಥಾಲಯ ಇತಿಹಾಸ ಪ್ರಾಚೀನ ಮತ್ತು ಮಧ್ಯಯುಗಗಳಲ್ಲಿ ಶೈಕ್ಷಣಿಕ ಕೇಂದ್ರಗಳು ವಿಜ್ಞಾನಭಾಂಡಾರಗಳಾಗಿದ್ದುವೆಂದು ಸ್ಪಷ್ಟಿಸುತ್ತದೆ. ಆದರೆ ಅವು ಕೇವಲ ಆರಿಸಿದ ಕೆಲವರಿಗಾಗಿ ಮೀಸಲಾಗಿದ್ದುವು. ಮತ್ತಿತರ ಇಂಥ ಭಂಡಾರಗಳನ್ನು ಸಾರ್ವಜನಿಕರು ಬಳಸಬಹುದಾಗಿತ್ತು. ಆದರೆ 'ಶುಲ್ಕ' ಅಥವಾ 'ವಂತಿಗೆ' ಕೊಟ್ಟ ಪಕ್ಷದಲ್ಲಿ. ಜ್ಞಾನ ಕೆಲವರ ಸೊತ್ತಾಗಿತ್ತು. ಹೀಗಾಗಿ ಬಹುಸಂಖ್ಯಾತ ಅನಕ್ಷರಸ್ಥರು ಮತ್ತು ಅವಿದ್ಯಾವಂತರು ಅದೇ ರೀತಿಯಲ್ಲಿ ವರ್ಷಾನುವರ್ಷ ಜೀವನ ಸಾಗಿಸಬೇಕಾಗಿತ್ತು.

ಸಾರ್ವಜನಿಕ ಗ್ರಂಥಾಲಯ ಪ್ರಜಾಪ್ರಭುತ್ವದ ತಳಹದಿಯ ಮೇಲೆ ಕಟ್ಟಲಾದ ಒಂದು ಸಂಸ್ಥೆ. ಏಕೆಂದರೆ ಇದು ಸಾಮಾಜಿಕ ಆತಂಕಗಳಾದ ಜಾತಿ ಮತ್ತು ಧರ್ಮ, ವಯಸ್ಸು ಮತ್ತು ಲಿಂಗ, ನೀತಿ ಮತ್ತು ರೀತಿಗಳನ್ನೆಣಿಸದೆ ಎಲ್ಲರನ್ನೂ ತನ್ನೆಡೆಗೆ ಬರಮಾಡಿಕೊಳ್ಳುತ್ತದೆ. ಅಲ್ಲದೆ ಇದು ಭೌಗೋಲಿಕ ಸೀಮಾಬಂಧನಗಳನ್ನು ಸಹ ಕಡೆಗಣಿಸುತ್ತದೆ. ಸಾರ್ವಜನಿಕ ಗ್ರಂಥಾಲಯ ಒಬ್ಬ ಓದುಗನಿಗೆ ಗ್ರಂಥ ಮತ್ತು ಮತ್ತಿತರ ಸಲಕರಣೆಗಳ ರೂಪವಾಗಿ ಎಲ್ಲ ಮಾನವ ಜನಾಂಗದ—ಗತಿಸಿದ ಮತ್ತು ಈಗಿನ—ಅನುಭವವನ್ನು ಅವನ ಮುಂದಿಡುತ್ತದೆ. ಇದನ್ನು ಓದಿ ಅವನು ತನ್ನ ಭವಿಷ್ಯತ್ತನ್ನು ಉತ್ತಮವಾಗಿ ರೂಪಿಸಬಲ್ಲನಲ್ಲದೆ, ರಾಷ್ಟ್ರದ ಹಾಗೂ ಜಗತ್ತಿನ ಸುಖ-ಶಾಂತಿಗಳಿಗಾಗಿ ಹೋರಾಡಬಹುದು. ಸಾರ್ವಜನಿಕ ಗ್ರಂಥಾಲಯದ ಈ ಮುಖ್ಯ ಮತ್ತು ಅತ್ಯಗತ್ಯ ಕಾರ್ಯವನ್ನು ಗೆರಾಲ್ಡ್ ಡಬ್ಲ್ಯು. ಜಾನ್ಸನ್ ಹೀಗೆ ಸಾರುತ್ತಾನೆ: "ಸಾರ್ವಜನಿಕರ ದೃಷ್ಟಿಯಿಂದ ನೋಡುವದಾದರೆ, ಇವೆಲ್ಲಕ್ಕೂ ಮೂಲಭೂತವಾಗಿ, ಇವಕ್ಕೆಲ್ಲ ಪೋಷಕವಾಗಿರುವ ಒಂದು ಕಾರ್ಯಭಾರವುಂಟು. ಅದನ್ನು ಹೆಸರಿಸುವುದು ಸುಲಭ. ಆದರೆ ಅದನ್ನು ಹಲವು ಬಗೆಯಾಗಿ—ಗ್ರಂಥಾಲಯಕ್ಕೆ ಎಷ್ಟು ಮಂದಿ ಪೋಷಕರಿದ್ದಾರೋ ಅಷ್ಟು ಬಗೆಯಾಗಿ—ಅರ್ಥೈಸಬಹುದು. 'ತೆರೆದ ಬಾಗಿಲು' ಎಂಬುದೇ ಆ ಕಾರ್ಯಭಾರ……ಬಾಗಿಲು ತೆರೆದಿಡುವುದು. ಅದನ್ನು ಪ್ರವೇಶಿಸುವವರಿಗೆ ಯಾವ ಆತಂಕಗಳೂ ಇಲ್ಲವಂತೆ ನೋಡಿಕೊಳ್ಳುವುದು

ಸಾರ್ವಜನಿಕ ಗ್ರಂಥಪಾಲಕನ ಕೆಲಸ. ಈ ಗುರಿಗೆ ಸಾಧಕವಾದ್ದೆಲ್ಲ ಒಳ್ಳೆಯ ಗ್ರಂಥಾಲಯ ಪದ್ಧತಿ; ಇದಕ್ಕೆ ಅಡ್ಡಿಯಾಗುವದೆಲ್ಲ ಕೆಟ್ಟದ್ದು. ನಿಯಮಾವಳಿ ಏನು ಹೇಳುತ್ತದೆಯೆನ್ನುವುದು ಮುಖ್ಯವಲ್ಲ."1

'ವಂತಿಗೆಯಿಲ್ಲದೆ' ಎಂಬುದು ಸಾರ್ವಜನಿಕ ಗ್ರಂಥಾಲಯ ನಿರೂಪಣೆಯ ಎರಡನೆಯ ಅಂಶ. ಬೇರೆ ಗ್ರಂಥಾಲಯಗಳಾದ ಶೈಕ್ಷಣಿಕ. ವಿಶೇಷ ಮತ್ತು ವಂತಿಗೆ ಮುಂತಾದವುಗಳಿಂದ ಇದನ್ನು ಬೇರ್ಪಡಿಸುವ ಅಂಶವಿದು. ಈ ಗ್ರಂಥಾಲಯಗಳು ಒಂದು ವಿಶೇಷ ಗುಂಪಿನ ಜನರಿಗೆ ಸೇವೆಸಲ್ಲಿಸುತ್ತವೆ. ಈ ಜನ ಒಂದಾನೊಂದು ರೀತಿಯಲ್ಲಿ ಸೇವೆಸಲ್ಲಿಸುವ ಫಲವಾಗಿ ಆ ಗ್ರಂಥಾಲಯಗಳಿಗೆ ನಿರ್ದಿಷ್ಟ ಚಂದಾವನ್ನು ಅವಕ್ಕೆ ಕೊಡುತ್ತಾರೆ. ಆದರೆ ಸಾರ್ವಜನಿಕ ಗ್ರಂಥಾಲಯ ಯಾವುದೇ ರೀತಿಯ ವಂತಿಗೆಯನ್ನು ತನ್ನ ಸೇವೆಗಾಗಿ ಸಾರ್ವಜನಿಕರಿಂದ ಪಡೆಯುವುದಿಲ್ಲ. ಓದುಗ ಆ ಗ್ರಂಥಾಲಯದ ಕ್ಷೇತ್ರದಲ್ಲಿ ವ್ಯಾಪಿಸಿದರೆ ಸಾಕು, ಅವನು ಆ ಗ್ರಂಥಾಲಯದ ಎಲ್ಲ ಸೌಲಭ್ಯಗಳನ್ನೂ ಪಡೆಯಬಹುದು.

'ಎಲ್ಲರ ಉಪಯೋಗಕ್ಕಾಗಿ' ಮತ್ತು 'ವಂತಿಗೆಯಿಲ್ಲದೆ'– ಈ ಎರಡು ಅಂಶಗಳು ಇದನ್ನು ಸಾಮಾಜಿಕ ಸಂಸ್ಥೆಯೆಂದು ಸೂಚಿಸುತ್ತವೆ. ಈ ಸಂಸ್ಥೆ ಸಾರ್ವಜನಿಕರ ಸರ್ವತೋಮುಖವಾದ ಏಳ್ಗೆಗೆ ಮಾರ್ಮಿಕವಾಗಿ ತನ್ನ ಕಾರ್ಯ ಸಾಗಿಸುತ್ತದೆ. ಇದು ನಮಗೆ ಮಿತ ವರ್ತನೆ ಮತ್ತು ತಾಳ್ಮೆ ಕಲಿಸಿಕೊಡುತ್ತದೆ. ಈ ಗುಣಗಳು ಈ ಕ್ಲಿಷ್ಟಮಯವಾದ ಜೀವನದಲ್ಲಿ ಮತ್ತೊಬ್ಬ ಮಾನವನನ್ನು ತಿಳಿದುಕೊಳ್ಳುವ ಶಕ್ತಿಯನ್ನು ಕೊಡುತ್ತವೆ. ಪ್ರಖ್ಯಾತ ಫ್ರೆಂಚ್ ಲೇಖಕನಾದ ಆಂದ್ರೆ ಮಾರ್ವ ಈ ಬಗ್ಗೆ ಹೀಗೆ ಹೇಳುತ್ತಾನೆ:– "ಪ್ರತಿಯೊಂದು ಗ್ರಂಥಾಲಯವೂ ಅಂತರರಾಷ್ಟ್ರೀಯ ತಿಳಿವಳಿಕೆಯ ಕೇಂದ್ರ. ಸಾರ್ವಜನಿಕ ಗ್ರಂಥಾಲಯ ಪ್ರಚಾರರಹಿತವಾಗಿ ಮತ್ತು ತನ್ನ ಯಾವದೇ ಸ್ವಾರ್ಥ ಇಲ್ಲದೆ ಕೇವಲ ತನ್ನ ಅಸ್ತಿತ್ವದಿಂದಲೇ ಶಾಂತಿಯನ್ನೂ ಪ್ರಜಾಪ್ರಭುತ್ವವನ್ನೂ ಸೇವಿಸುತ್ತದೆ"2.

ಮೇಲೆ ಹೇಳಿದ ವ್ಯಾಖ್ಯೆಯ ಎರಡನೆಯ ಅಂಶ ಗ್ರಂಥಾಲಯದ ಹಣಕಾಸನ್ನು ಕುರಿತದ್ದು. ಸಾರ್ವಜನಿಕ ಗ್ರಂಥಾಲಯ ಶುಲ್ಕವಿಲ್ಲದೆ ನಡೆಯುವ ಸಂಸ್ಥೆಯಾಗಿದ್ದರೆ, ಅದರ ಸ್ಥಾಪನೆಗೆ, ನಿರ್ವಹಣೆಗೆ ಮತ್ತು ಬೆಳವಣಿಗೆಗೆ ಬೇಕಾಗುವ ಬಂಡವಾಳ ದೊರಕಿಸುವದು ಹೇಗೆ? ಇದು ಸಾಮಾನ್ಯರು ಕೇಳುವ ವ್ಯಾವಹಾರಿಕ ಪ್ರಶ್ನೆ. ಇದರ ಉತ್ತರವಿಷ್ಟೆ: ಸಾರ್ವಜನಿಕ ಗ್ರಂಥಾಲಯ ಸಾರ್ವಜನಿಕರಿಂದ ಗ್ರಂಥಾಲಯತೆರಿಗೆಯ ರೂಪವಾಗಿ ಸರ್ಕಾರದ ಬೊಕ್ಕಸಕ್ಕೆ ಬರುವ ಹಣದಿಂದ ಪ್ರೋತ್ಸಾಹ ಪಡೆಯುತ್ತದೆ. ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರ ಒಂದು ನಿಗದಿಯಾದ ಪ್ರಮಾಣದಲ್ಲಿ ಈ ಸಂಗ್ರಹಕ್ಕೆ ಹಣ ಕೊಡುತ್ತದೆ. ಹೀಗಾಗಿ ಈ ಕಾರ್ಯದಲ್ಲಿ ಸಾರ್ವಜನಿಕರು ತಮ್ಮ ಹೊಣೆಗಾರಿಕೆಯನ್ನರಿತು ಈ ಸಾಮಾಜಿಕ ಸಂಸ್ಥೆಯನ್ನು ಕಟ್ಟಲಿಕ್ಕೆ ಮುಂಬರಬೇಕಾಗುತ್ತದೆ. ಇದರಿಂದ ಸಾರ್ವಜನಿಕರು ಈ ಸಂಸ್ಥೆಯೊಂದಿಗೆ ನಿಕಟವಾದ ಸಂಬಂಧ ಹೊಂದುತ್ತಾರೆ. ಸಾರ್ವಜನಿಕ ಹಣದಿಂದ ಸ್ಥಾಪನೆಗೊಳ್ಳುವ ಗ್ರಂಥಾಲಯ ಅಧಿಕಾರಿಗಳು ಕಾರ್ಯನಿರತರಾಗುತ್ತಾರೆ. ಇದರಿಂದಾಗಿ ಗ್ರಂಥಾಲಯದ ಆಡಳಿತಗಾರರ ಮತ್ತು ಸಮಾಜದ ನಡುವೆ ಮೈತ್ರೀಯುತ ಸಂಬಂಧ ಉಂಟಾಗಿ, ಒಂದು ಆದರ್ಶ ಸ್ಥಿತಿಯಲ್ಲಿ ಒಂದು ಪಕ್ಷ ಮತ್ತೊಂದಕ್ಕಿಂತ ಹೆಚ್ಚಾಗಿ ಸಹಾಯ ಮಾಡಲಿಕ್ಕೆ ಸ್ಪರ್ಧಿಸುವುದರಿಂದ ಸಾರ್ವಜನಿಕ ಗ್ರಂಥಾಲಯಗಳ ಬೆಳವಣಿಗೆ ಸುಗಮವಾಗಿ ಸಾಗುತ್ತದೆ.

ಹಣಕಾಸಿನಲ್ಲಿ ಸಾರ್ವಜನಿಕರ ಕೊಡುಗೆಯ ಮೊತ್ತ ಹೆಚ್ಚಾದ್ದರಿಂದ, ಗ್ರಂಥಾಲಯ ಸ್ವತಂತ್ರವಾಗಿ ಹಾಗೂ ಸ್ವಾವಲಂಬಿಯಾಗಿ ನಿಲ್ಲಬಹುದು. ಸರ್ಕಾರದ ಹತೋಟಿಗೆ ಒಳಪಟ್ಟ ಸಂಸ್ಥೆಗಳು ಸರ್ಕಾರಿ ಅಧಿಕಾರಿಗಳ ವಾತಾವರಣದಲ್ಲಿ ಬೆಳೆಯುವುದರಿಂದ ಗ್ರಂಥಾಲಯದ ಪ್ರಜಾಪ್ರಭುತ್ವಮನೋಭಾವಕ್ಕೆ ಕುಂದು ತರುತ್ತವೆ.

---

1 A.L.A.: *Public library service: A guide to evaluation with minimum standards*, Chicago, A.L.A., 1956; pp. vii–ix

2 Maurois A.: *Public libraries and their mission*; Paris, Unesco, p. 13

ಸಾರ್ವಜನಿಕ ಗ್ರಂಥಾಲಯ ಒಂದು ಸ್ಥಳೀಯ ಸಂಸ್ಥೆಯೂ ಅಹುದು. ಇದು ಸ್ಥಳೀಯ ಮಂಡಳಿಯಿಂದ ಸ್ಥಳೀಯ ಮಹಾಜನರು ಕೂಡಿಸಿದ ಹಣದಿಂದ ಸ್ಥಳೀಯ ಜನರ ಉದ್ಧಾರಕ್ಕಾಗಿ ನಡೆಯುವ ಸಂಸ್ಥೆ. ಈ ಭಾವನೆಯನ್ನು ಅಂತರರಾಷ್ಟ್ರೀಯ ಗ್ರಂಥಾಲಯ ಸಂಸ್ಥೆಗಳ ಮಂಡಳಿ (ಇಂಟರ್‌ನ್ಯಾಷನಲ್ ಫೆಡರೇಷನ್ ಆಫ್ ಲೈಬ್ರರಿ ಅಸೋಸಿಯೇಷನ್) 'ದಿ ಡೆವೆಲಪ್‌ಮೆಂಟ್ ಆಫ್ ಲೈಬ್ರರಿ ಸರ್ವಿಸಸ್' ಎಂಬ ತನ್ನ ಜ್ಞಾಪಕಪತ್ರದಲ್ಲಿ ಹೀಗೆ ವ್ಯಕ್ತಪಡಿಸಿದೆ: "ಸ್ಥಳೀಯ ಸಂಸ್ಥೆಗಳಿಂದಲ್ಲದೆ ಸರ್ಕಾರ ನೀಡಿದ ಗ್ರಂಥಾಲಯಸೇವೆಗಳು ಪ್ರಮಾಣಬದ್ಧವಾಗಬಹುದಾಗಿದೆ. ಸ್ಥಳೀಯ ಸೇವೆಗಳು ಶಿಷ್ಟತೆ ಮತ್ತು ಚಟುವಟಿಕೆಗಳಲ್ಲಿ ವ್ಯಾಪಕವಾಗಿಯೂ ಅಪೇಕ್ಷಣೀಯ ವೈವಿಧ್ಯಗಳಿಂದಲೂ ಕೂಡಿದ್ದು ಫಲಪ್ರದ ಪ್ರಯೋಗ ಮತ್ತು ಸೌಲಭ್ಯ ವಿಸ್ತರಣಗಳಲ್ಲಿ ನಿರತವಾಗುವ ಸಂಭವವುಂಟು"[3]. ಮೇಲಾಗಿ ಪೂರ್ತಿ ಸರಕಾರವೇ ನೀಡುವ ಗ್ರಂಥಾಲಯ ಸೇವೆಗಳು ಅನಪೇಕ್ಷಿತ ರಾಜಕೀಯ ಒತ್ತಡಗಳಿಗೆ ಒಳಪಡುವ ಮತ್ತು ಆರ್ಥಿಕ ಬಿಕ್ಕಟ್ಟಿನ ಸಮಯದಲ್ಲಿ ವಿಪತ್ತಿಗೆ ಗುರಿಯಾಗುವ ಸಂಭವವಿರುತ್ತದೆ. ಸ್ಥಳೀಯ ಮಂಡಳಿಗಳು ಇದ್ದಲ್ಲಿ, ರಾಜ್ಯದ ಗ್ರಂಥಾಲಯ ಇಲಾಖೆ ಸ್ಥಳೀಯ ರಾಜಕೀಯ ಒತ್ತಡಗಳಿಗೆ ಸಂರಕ್ಷಣೋಪಾಯಗಳನ್ನು ಕೈಕೊಳ್ಳಬಹುದು."[4]

ಸಾರ್ವಜನಿಕ ಗ್ರಂಥಾಲಯದ ಮತ್ತೊಂದು ಮಹತ್ತರವಾದ ಲಕ್ಷಣವೆಂದರೆ ಅದು ಸ್ವಯಂ ಶಿಕ್ಷಣದ ಒಂದು ಉಪಾಯ. ಹೆಚ್ಚಾಗಿ ನಿರಕ್ಷರತಾ ಸ್ಥಿತಿಯಲ್ಲಿರುವ ಭಾರತೀಯರಿಗೆ ಇದರ ಸೂಚನೆ ಅತಿ ವಿಸ್ತಾರವಾದದ್ದಾಗಿದೆ. ಸುಮಾರು ಹದಿನೆಂಟು ವರ್ಷಗಳ ಹಿಂದೆ ಬಹುತರ ರಾಜ್ಯಸರ್ಕಾರಗಳು ಶುಲ್ಕವಿಲ್ಲದೆ ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಜಾರಿಗೆ ತಂದುವು. ಆದಾಗ್ಯೂ ನಾವು ಅಕ್ಷರತೆಯ ಸೀಮೆಗಳನ್ನು ವಿಸ್ತರಿಸಿಲ್ಲ. ಇದಕ್ಕೆ ಒಂದು ಮುಖ್ಯ ಕಾರಣವೆಂದರೆ ಸಾಕ್ಷರತೆ ಪಡೆದ ಜೀವಿಗೆ ಈಗಿನ ವಿದ್ಯಾಪದ್ಧತಿ ತನ್ನ ಸಾಕ್ಷರತೆಯನ್ನು ಕಾಪಾಡಿಕೊಳ್ಳಲಿಕ್ಕೆ ಅವನಿಗೆ ಓದುವ ಸಾಮಾಗ್ರಿಗಳನ್ನು ಪೂರೈಸಿಲ್ಲ. ಮುಂದುವರಿದ ದೇಶಗಳು ಸಾರ್ವಜನಿಕ ಗ್ರಂಥಾಲಯಕ್ಕೆ ಸ್ವಯಂ ಶಿಕ್ಷಣದಲ್ಲಿ ಕೊಟ್ಟ ಪಾತ್ರವನ್ನು ಅದಕ್ಕೆ ಕೊಡಲಿಲ್ಲ. ನೂತನ ಸಾರ್ವಜನಿಕ ಗ್ರಂಥಾಲಯ ತನ್ನ ಬಗೆಬಗೆಯ ಸೇವೆಸಲ್ಲಿಸುವ ಪಾತ್ರಗಳಿಂದ ನಿರಕ್ಷರತೆಯನ್ನು ನಿರ್ಮೂಲ ಮಾಡದಿದ್ದರೂ ಅದನ್ನು ತಡೆಗಟ್ಟುವ ಕೆಲಸವನ್ನಾದರೂ ನಿಸ್ಸಂಕೋಚವಾಗಿ ಈಡೇರಿಸಬಹುದು. ಅದು ಅನಕ್ಷರಸ್ಥ ಜನಾಂಗದ ಬೇಡಿಕೆಗಳನ್ನು ಚಿತ್ರ, ಚಲನಚಿತ್ರ, ಪ್ರಸಾರ, ಪ್ರದರ್ಶನ ಮುಂತಾದವುಗಳ ಮುಖಾಂತರ ಪೂರೈಸಬಹುದು. ಈ ಪಾತ್ರವನ್ನು ಸಾರ್ವಜನಿಕ ಗ್ರಂಥಾಲಯಗಳಿಗೆ ಕೊಡುವುದರಿಂದ ಆಗುವ ಇನ್ನೊಂದು ಅನುಕೂಲವೆಂದರೆ, ಒಬ್ಬ ಮನುಷ್ಯ ಯಾವುದೇ ವಯಸ್ಸಿನವನಿರಲಿ, ಎಲ್ಲಿಯಾದರೂ ವಾಸಿಸಲಿ ಅವನಿಗೆ ಸ್ವಯಂ ಶಿಕ್ಷಣ ಹೊಂದಲಿಕ್ಕೆ ಸುಸಂಧಿಯನ್ನು ಒದಗಿಸಿದಂತಾಗುತ್ತದೆ. ಶಿಕ್ಷಣ ಕ್ಷೇತ್ರದ ಕಟ್ಟುಪಾಡುಗಳನ್ನು ಸಾರ್ವಜನಿಕ ಗ್ರಂಥಾಲಯ ತೊಡೆದುಹಾಕಿ ಅವನಿಗೆ ತನ್ನ ಐಚ್ಛಿಕ ವಿಷಯಗಳಲ್ಲಿ ಸ್ವತಂತ್ರವಾಗಿ ಶಿಕ್ಷಣ ಪಡೆಯಲು ಅನುಕೂಲ ಮಾಡಿಕೊಡುತ್ತದೆ. ಹೀಗೆ ಅತ್ಯಲ್ಪ ಹಣ ವಿನಿಯೋಗಿಸಿ ಮಾನವ ಜನಾಂಗ ಶೇಖರಿಸಿದ ಅಮೂಲ್ಯ ವಿದ್ಯೆಯ ಸೌಲಭ್ಯಗಳನ್ನು ಪಡೆಯುವ ಅವಕಾಶ ಇನ್ನಾವ ಸಮಾಜಕ್ಕೂ ಇರಲಿಲ್ಲ.

ಮೇಲೆ ಕೊಟ್ಟಿರುವ ವ್ಯಾಖ್ಯೆಯಲ್ಲಿ 'ಸಹಾಯಕ ಶಿಕ್ಷಣ' ಎಂಬ ಮಾತನ್ನು ಗಮನಿಸಬೇಕು. ಸಾರ್ವಜನಿಕ ಗ್ರಂಥಾಲಯಗಳು ಶಾಲೆಕಾಲೇಜುಗಳಿಗೆ. ವಯಸ್ಕರ ಶಿಕ್ಷಣಸಂಸ್ಥೆಗಳಿಗೆ ಅಥವಾ ಸಾಮಾಜಿಕ ಉದ್ಧಾರ ಕೇಂದ್ರಗಳಿಗೆ ಪ್ರತಿಸ್ಪರ್ಧಿಯಾಗಿ ವರ್ತಿಸುವುದಿಲ್ಲ. ಪಾಶ್ಚಾತ್ಯ ದೇಶಗಳಲ್ಲಿ ಈ ಸಂಸ್ಥೆಗಳು ಸಾರ್ವಜನಿಕ ಗ್ರಂಥಾಲಯಗಳ ಕೂಡ ನಿಕಟವಾಗಿ ಕೆಲಸಮಾಡಿ. ಗ್ರಂಥಾಲಯವನ್ನು ತಮ್ಮವನ್ನಾಗಿ ಮಾಡಿಕೊಂಡಿವೆ. ಈ ಎಲ್ಲ ಸಾಮಾಜಿಕ ಸಂಸ್ಥೆಗಳ ಸಾಮೂಹಿಕ ಕಾರ್ಯತತ್ಪರತೆ ಈ ದೇಶಗಳನ್ನು ಪ್ರಗತಿಪರ ರಾಷ್ಟ್ರಗಳಾಗಿ ಮಾಡಿವೆ. ಅವರ ಈ ಅನುಭವವನ್ನು ಕಣ್ಣಾರೆ ಕಂಡು ಕಲಿತುಕೊಳ್ಳಲಿಕ್ಕಾಗದ ಮೂಢ ಜನರೇನು ನಾವು?

---

3 Clause E 2(d) of the Memorandum in Annexure. pp. 139 of the Report of the Advisory Committee for Libraries: 1960

4 Op. Cit. Clause E2 (e)

ವ್ಯಾಖ್ಯೆಯ ಕೊನೆಯ ಭಾಗವನ್ನು ಪರೀಕ್ಷಿಸಿದಲ್ಲಿ, ಸಾರ್ವಜನಿಕ ಗ್ರಂಥಾಲಯ ಓದುಗರಿಗೆ ಉಪಯುಕ್ತವಾಗುವ ಜೀವಂತ ಸಂಗ್ರಹವೆನ್ನಿಸುವ ಓದುವ ಸಾಮಗ್ರಿಗಳನ್ನು ಪಡೆಯಬೇಕೆಂದು ಸೂಚಿಸುತ್ತದೆ. ಯಾವ ವಿಷಯಗಳ ಸಾಮಗ್ರಿಗಳನ್ನು ಕಲೆಹಾಕಬೇಕು ಎಂದು ಯಾವ ಕಟ್ಟುನಿಟ್ಟುಗಳೂ ಇಲ್ಲ. ಒಂದು ನೂತನ ಗ್ರಂಥಾಲಯ ಜ್ಞಾನಸಂಪಾದನೆಗೆ ಬೇಕಾಗುವ ಪುಸ್ತಕಗಳು, ನಿಯತಕಾಲಿಕೆಗಳು ಮಾತ್ರವಲ್ಲದೆ. ಜ್ಞಾನಾರ್ಜನೆಗೆ ಬೇಕಾಗುವ ಪರಾಮರ್ಶಕ ಗ ಂಥಗಳು, ಗ್ರಾಮೋಫೋನ್ ಧ್ವನಿಮುದ್ರಿಕೆಗಳು. ಚಿತ್ರಗಳು, ಶೈಕ್ಷಣಿಕ ಚಲನಚಿತ್ರಗಳು, ವಿವಿಧ ರೀತಿಯ ಸೂಕ್ಷ್ಮಚಿತ್ರಗಳು ಮತ್ತು ದೃಕ್‌ಶ್ರವಣ ಸಾಮಗ್ರಿಗಳನ್ನು ಒದಗಿಸುತ್ತದೆ. ಇದಲ್ಲದೆ ಅದು ಸಾರ್ವಜನಿಕ ಸಭೆ ಮತ್ತು ಚರ್ಚಾಕೂಟಗಳನ್ನು ಏರ್ಪಡಿಸಿ ದೇಶದ ಮತ್ತು ಅಂತರರಾಷ್ಟ್ರೀಯ ಸಮಸ್ಯೆಗಳ ಬಗ್ಗೆ ವಿಚಾರಿಸುವ ಸುಸಂಧಿಯನ್ನು ನೀಡುತ್ತದೆ. ಸಂಕ್ಷಿಪ್ತವಾಗಿ ಹೇಳಬೇಕಾದರೆ ಅದು ಜ್ಞಾನಾರ್ಜನೆಯ ಸಲುವಾಗಿ ಎಲ್ಲ ಸಂಪರ್ಕಮಾಧ್ಯಮಗಳನ್ನೂ ಕಾರ್ಯರೂಪಕ್ಕೆ ತರುತ್ತದೆ.

ಇಲ್ಲಿ ಇನ್ನೊಂದು ಅಂಶವನ್ನು ಗಮನಿಸಬೇಕಾಗಿದೆ. ಇಂಥ ಕಲೆಹಾಕಿದ ಶೈಕ್ಷಣಿಕ ಸಾಮಗ್ರಿಗಳನ್ನು ಎಲ್ಲರಿಗೂ ಯಾವುದೇ ಭೇದಭಾವವಿಲ್ಲದೆ ಇದು ದೊರಕಿಸುತ್ತದೆ. ಸಾರ್ವಜನಿಕ ಗ್ರಂಥಾಲಯ ಪ್ರಜಾಪ್ರಭುತ್ವದ ತಳಹದಿಯ ಮೇಲೆ ಕಟ್ಟಿದ್ದು ಎಂಬುದರ ದ್ಯೋತಕವಿದು. ಇದರ ಉಪಯೋಗವನ್ನು ಎಲ್ಲರೂ ಸಮನಾಗಿ ಪಡೆದುಕೊಳ್ಳಬಹುದು. ಇದಕ್ಕೆ ಇರುವ ಮಿತಿ ಒಂದೇ ಒಂದು. ಅದು ಓದುಗನ ದೈಹಿಕ ಮತ್ತು ಮಾನಸಿಕ ಶಕ್ತಿ.

ಸಾರ್ವಜನಿಕ ಗ್ರಂಥಾಲಯ ಇಂದಿನ ಭಾರತಕ್ಕೆ ಅತ್ಯಾವಶ್ಯಕವಾದ ಸಂಸ್ಥೆಯೆಂಬುದು ಈ ವಿಚಾರಗಳಿಂದ ಸ್ಪಷ್ಟವಾಗುತ್ತದೆ. 'ಸಾರ್ವಜನಿಕ ಗ್ರಂಥಾಲಯಗಳು ಬಡವರ ಅರಮನೆಗಳು' ಎಂದು ಒಬ್ಬ ಲೇಖಕ ಬರೆದಿರುವ ಮಾತು ಅರ್ಥಪೂರ್ಣವಾಗಿದೆ.

ಪುಸ್ತಕ ಭಂಡಾರವೆಂಬುದು ನಾವು ಬದುಕುವ, ಚಲಿಸುವ. ನಮಗೆ ಅಸ್ತಿತ್ವ ನೀಡುವ ಈ ಸಾಕ್ಷರ ಪ್ರಪಂಚದ ಸೃಷ್ಟಿಯೆ? ಅಥವಾ ಈ ಸಾಕ್ಷರ ಪ್ರಪಂಚವೇ ಅದರಿಂದ ಸೃಷ್ಟಿಯಾದದ್ದೋ? ಎರಡೂ ನಿಜ. ಮನಸ್ಸಿನ ಕೃತಿಗಳ ಸಂಚಿತಶಕ್ತಿಯ ದ್ಯೋತಕವೇ ಗ್ರಂಥಪಾಲನ; ಸಸ್ತನಿ ಪ್ರಾಣಿಗೆ ಹೃದಯ ಬಡಿತ ಹೇಗೋ ಹಾಗೆ ನಮ್ಮ ನಾಗರಿಕತೆಗೆ ಮನಸ್ಸಿನ ಕೃತಿಗಳೇ ಆಧಾರ. ಯಾವುದೇ ನಾಗರಿಕತೆಯೂ ಸದಾ ಬದಲಾವಣೆಯ ಪ್ರಕ್ರಿಯೆಗೆ ಒಳಗಾಗಿರುತ್ತದೆ. ನಮ್ಮ ನಾಗರಿಕತೆ ಕೆಲವು ರೀತಿಗಳಲ್ಲಿ ಬದಲಾವಣೆಯನ್ನು ವಿಸ್ತರಿಸುತ್ತದೆ. ಆದರೆ ನಾವು ಅನುಮೋದಿಸುವ ಬದಲಾವಣೆಗಳು ತರ್ಕದಿಂದ, ಬುದ್ಧಿಯಿಂದ ಸ್ವೀಕೃತವಾದಂಥವು. ಆದ್ದರಿಂದ, ಅಂಧ ಭಾವೋದ್ರೇಕ ಅಥವಾ ಅವಿಚಾರಿ ಸಂಪ್ರದಾಯವನ್ನೇ ಅವಲಂಬಿಸುವ ದಿಕ್ಕಿನಲ್ಲಿ ಗಡಿಯಾರವನ್ನು ಮನುಷ್ಯ ಹಿಂದಕ್ಕೆ ತಿರುಗಿಸುವ ಕಾಲ ಬರುವ ವರೆಗೂ ಗ್ರಂಥಾಲಯಗಳು ಈಗ ನಿರ್ವಹಿಸುತ್ತಿರುವ ಕಾರ್ಯಭಾರಗಳು ನಮ್ಮ ಸಮಾಜದ ಹೃದಯಸ್ಥಾನದಲ್ಲಿ ಮುಂದುವರಿಯುತ್ತವೆ. ಇದು ನಿಜವಾಗಿರುವವರೆಗೂ ಈ ಸೇವೆಗಳ ನಿರ್ವಹಣೆ ಸಮರ್ಪಕವಾಗಿರುವಂತೆ ನೋಡಿಕೊಳ್ಳುವ ಉತ್ಕೃಷ್ಟ ಸಾಮರ್ಥ್ಯ ಮತ್ತು ಉತ್ಕೃಷ್ಟ ತರಬೇತು ಪಡೆದ ಸ್ತ್ರೀಪುರುಷರು ನಮಗೆ ಅಗತ್ಯವಾಗಿರುತ್ತಾರೆ.*

---

* The Intertwined Destiny of Literature, Society and Librarianship; *Bases of Modern Librarianship;* White, Carl, M. (Ed.); Vol. I, 1969.

ಸಿ. ಎಲ್. ಪ್ರಭಾಕರ್

ಯಜುರ್ವೇದದಲ್ಲಿ ಮನೋರಂಜನೆ*

ಯಜುರ್ವೇದ ಸಾಮಾಜಿಕ ಸಮಾರಂಭವಾದ ಯಜ್ಞಕಾರ್ಯದಲ್ಲಿ ವಿಶಿಷ್ಟ ಸ್ಥಾನವನ್ನು ಗಳಿಸಿದೆ. ಈ ಯಜ್ಞದ ಯಶಸ್ಸು ಅನೇಕ ಜನರ ಸಹಕಾರವನ್ನು ಅವಲಂಬಿಸಿದೆ. ಇದನ್ನು 'ಸಂಭೂಯ ಸಮುತ್ಥಾನ' ಎಂದೂ ಕರೆಯುತ್ತಾರೆ. ಇದರ ಫಲವಾಗಿ. ಈ ಕಾಲಕ್ಕೆ ವಿನೋದದಂತೆ ಕಂಡುಬರುವ ಅನೇಕ ಶಾಸ್ತ್ರೋಕ್ತ ಕರ್ಮಗಳನ್ನು ನಾವು ಯಜುರ್ವೇದದಲ್ಲಿ ಕಾಣುತ್ತೇವೆ. ಯಜುರ್ವೇದದಲ್ಲಿ ಕಂಡುರುವ ಅನೇಕ ರೀತಿಯ ವಿನೋದಗಳ ಪರಿಶೀಲನೆಯ ಒಂದು ಚಿತ್ರವನ್ನು ಕೊಡುವುದಷ್ಟೇ ಅಲ್ಲದೆ, ಯಜುರ್ವೇದ ಸಂಪೂರ್ಣವಾಗಿ ಯಜ್ಞಕಾರ್ಯದಲ್ಲಿ ನಿರತರಾದ ಗಂಭೀರ ಪ್ರವೃತ್ತಿಯವರ ಸಮಾಜದ ಚಿತ್ರ ಮಾತ್ರವಾಗಿರಲಿಲ್ಲ ಎಂದು ತೋರಿಸುವುದೇ ಪ್ರಕೃತ ಲೇಖನದ ಉದ್ದೇಶ.

ಯಜ್ಞಕಾರ್ಯಗಳಲ್ಲಿ ನೋಡಬಹುದಾದ ಅನೇಕ ಮನೋರಂಜನೆಗಳಲ್ಲಿ ಯಜುರ್ವೇದ ಪರೋಕ್ಷವಾಗಿ ಎರಡು ರೀತಿಯ ಮನೋರಂಜನೆಯನ್ನು ಒದಗಿಸುತ್ತದೆ. ಅವು 1 ಬೌದ್ಧಿಕ ಮನೋರಂಜನೆಗಳು ಅಥವಾ ವಿನೋದಗಳು, 2 ಸಾರ್ವಜನಿಕ ಮನೋರಂಜನೆಗಳು ಅಥವಾ ವಿನೋದಗಳು (ಸಾರ್ವಜನಿಕರ ಕುತೂಹಲವನ್ನು ಕೆರಳಿಸುವ ವಿನೋದಗಳು). ಇವೆರಡರಲ್ಲಿ ಯಜುರ್ವೇದದಲ್ಲಿ ಎರಡನೆಯ ಬಗೆಯ ವಿನೋದಗಳಿಗೆ ಇರುವ ಅವಕಾಶ ಮೊದಲನೆಯ ಬಗೆಯ ವಿನೋದಗಳಿಗಿಲ್ಲ.

ಬೌದ್ಧಿಕ ಮನೋರಂಜನೆಗಳು: ಇವನ್ನು ಯಜ್ಞಕಾರ್ಯದಲ್ಲಿ ನೆರೆದಿರುವ ಸುಶಿಕ್ಷಿತ ಪ್ರೇಕ್ಷಕ ಚಿತ್ತಾಕರ್ಷಕವಾಗಿರುವ ವಿನೋದಗಳೆಂದು ತಿಳಿಯಬಹುದು. ಈ ಬಗೆಯ ಮನೋರಂಜನೆಗಳು ಯಜುರ್ವೇದದಲ್ಲಿ ಅಷ್ಟೊಂದು ಹೆಚ್ಚಾಗಿ ಕಂಡುಬರುವುದಿಲ್ಲ.

ಸೋಮಯಜ್ಞದ ಸಂದರ್ಭದಲ್ಲಿ ನಡೆಯುವ ಸದಸ್‌ನಲ್ಲಿ ಶಾಸ್ತ್ರಚರ್ಚೆ, ಮಂತ್ರ ಮತ್ತು ಶಾಸ್ತ್ರಗಳ ಕಂಠಪಾಠ—ಇವೇ ಮೊದಲಾದವು ಅಲ್ಲಿ ನೆರೆದಿರುವ ಜನಸಮೂಹಕ್ಕೆ ಆಸಕ್ತಿಯನ್ನುಂಟುಮಾಡುತ್ತಿದ್ದುವು. ಮಂತ್ರ ಮತ್ತು ಶಾಸ್ತ್ರಗಳನ್ನು ಪಠಿಸುವ ಧ್ವನಿ ಮತ್ತು ಕಠಿನ ಚರ್ಚೆಯನ್ನು ಬಿಟ್ಟರೆ ಇವುಗಳಲ್ಲಿ ಯಾವ ವಿಧದ ದೈಹಿಕ ಚಟುವಟಿಕೆಗಳಿಗೂ ಅವಕಾಶವಿರುತ್ತಿರಲಿಲ್ಲ.

ಅಶ್ವಮೇಧದಲ್ಲಿ ಬರುವ ಸಮಸ್ಯೆಗಳಿಗೆ (ಪ್ರಹೇಲಿಕ) ಅಶ್ಲೀಲವಾಗಿ ಮಾಡುವ ಚರ್ಚೆ ಅಲ್ಲಿರುವ ಸುಶಿಕ್ಷಿತ ಪ್ರೇಕ್ಷಕರಿಗೆ ಮತ್ತೊಂದು ಬಗೆಯ ಮನೋರಂಜನೆಯಾಗುತ್ತಿತ್ತು.

ಅಶ್ಲೀಲ ಭಾಷಣ (ಚರ್ಚೆ): ಪಟ್ಟಮಹಿಷಿ ಯಜ್ಞಪಶುವಿನ (ಕುದುರೆ) ಬಳಿಯಲ್ಲಿ ಮಲಗಿರುವಾಗ ಈ ಘಟನೆ 'ಅಶ್ವಮೇಧ'ದಲ್ಲಿ ನಡೆಯುತ್ತದೆ. ಯಜ್ಞದ ಯಜಮಾನನ ಪಟ್ಟಮಹಿಷಿ ಮತ್ತು ಇತರ ಸ್ತ್ರೀಯರೊಡನೆ ಋತ್ವಿಕರು (ಹೋತೃ, ಅಧ್ವರ್ಯು, ಉದ್ಗಾತೃ ಮತ್ತು ಬ್ರಹ್ಮನ್) ಮಾತನಾಡಲು ತೊಡಗುತ್ತಾರೆ. ಅವರು ಮಾತನಾಡುವ ವಿಷಯ ಅಶ್ಲೀಲವಾಗಿದ್ದು, ಲೈಂಗಿಕ ವಿಷಯಗಳಿಗೆ ಸಂಬಂಧ

---

* 1968ರಲ್ಲಿ ವಾರಾಣಸಿಯಲ್ಲಿ ನಡೆದ 24ನೆಯ ಅಖಿಲ ಭಾರತ ಪ್ರಾಚ್ಯ ಸಮ್ಮೇಳನದಲ್ಲಿ ಓದಿದ *Entertainment in the Yajurveda* ಎಂಬ ಪ್ರಬಂಧದ ಅನುವಾದ

ಪಟ್ಟಿರುತ್ತಿತ್ತು. ಸ್ತ್ರೀಯರು ಆಯಾ ಋತ್ವಿಕರುಗಳಿಗೆ ಕೊಡುತ್ತಿದ್ದ ಉತ್ತರಗಳು ನೇರವಾಗಿಯೂ ಚುರುಕಾಗಿಯೂ ಇರುತ್ತಿದ್ದುವು. ಈ ಸಂದರ್ಭದಲ್ಲಿ ಕೃಷ್ಣಯಜುರ್ವೇದ ಹಲವು ವಿಶೇಷಣಗಳನ್ನು ಪುರುಷರ ಅವಯವಗಳನ್ನು ಸೂಚಿಸುವಂತೆ ಸೇರಿಸುತ್ತದೆ. ಆದರೆ ಶುಕ್ಲ ಯಜುರ್ವೇದ ಇಂಥ ಒಂದೇ ಒಂದು ವಿಶೇಷಣವನ್ನು ಕೊಡುತ್ತದೆ.[1] ವಿಶೇಷವಾಗಿ ಈ ಯಜ್ಞಕರ್ಮ ಫಲೋತ್ಪಾದಕ ಮಂತ್ರಶಕ್ತಿಯನ್ನು ಗುರಿಯಾಗಿ ಉಳ್ಳದ್ದಾದ್ದರಿಂದ, ಅಧ್ವರ್ಯುಗಳಿಗೆ ಸ್ತ್ರೀಯರ ಜೊತೆಯಲ್ಲಿ ಸ್ವಚ್ಛಂದವಾಗಿ ಮತ್ತು ಬಹಿರಂಗವಾಗಿ ಮಾತನಾಡಲು ಒಂದು ಅವಕಾಶವನ್ನು ಒದಗಿಸುತ್ತದೆ. ವಾಸ್ತವಿಕವಾಗಿ ಇದು ಮನೋರಂಜನೆಯನ್ನು ಒದಗಿಸುವ ಒಂದು ಅಂಗ.

ಬ್ರಹ್ಮೋದ್ಯಾಸ್ (ಪಾರಮಾರ್ಥ ಸಮಸ್ಯೆಗಳು): ಇದು ದೇವತಾಖ್ಯಾನ, ಸಾಹಿತ್ಯ, ಯಾಜ್ಞಿಕ ವಿಧಿ—ಇತ್ಯಾದಿಗಳನ್ನು ವಸ್ತುವಾಗಿ ಒಳಗೊಂಡಿರುತ್ತದೆಯಾದ್ದರಿಂದ. ಈ ಬಗೆಯ ವಿಧಿ ಋತ್ವಿಕರಿಗೆ ಮತ್ತಿತರ ಸುಶಿಕ್ಷಿತರಿಗೆ ಜ್ಞಾನವನ್ನು ವೃದ್ಧಿಗೊಳಿಸುವ ಕ್ರೀಡೆಯಾಗಿತ್ತು.

ಕೆಲವು ಮಂತ್ರಗಳ ಪಠನ ಮಾಡುತ್ತಿದ್ದ ಶುಕ್ಲಯಜುರ್ವೇದದ ಈ ವಿಧಿಯಿಂದ ಋತ್ವಿಕರು ತಮ್ಮ ತಮ್ಮ ಜ್ಞಾನವನ್ನು ಹೆಚ್ಚೆಂದು ಪ್ರದರ್ಶಿಸಲು ಒಬ್ಬರೊಡನೊಬ್ಬರು ಸ್ಪರ್ಧಿಸುತ್ತಿದ್ದ(ಮನೋಭಾವದವ)ರೆಂಬುದನ್ನು ಇಲ್ಲಿ ಗಮನಿಸಬಹುದು. ಈ ಬಗೆಯ ಅಭಿವ್ಯಕ್ತಿಗೆ ಉದಾಹರಣೆಗೆ ಇವುಗಳನ್ನು ನೋಡಬಹುದು—

"ಪೃಚ್ಛಾಮಿ ತ್ವಾ...ದೇವಸಖ ಯದಿ ತ್ವಂ ಅತ್ರ ಮನಸಾ ಜಗಂಥ"2
ಪತತ್ವಂ ಬ್ರಹ್ಮನ್ನುಪಮಲ್ಲಾಮಸಿ......ಪ್ರತಿಮೋಚನ್ ಯತ್ರ"3
"ಪತತ್ವಾ ಅತ್ರ ಪ್ರತಿಮನ್ ವಾನೊ ಅಸ್ಮಿನ್ಮಾಯಯಾ ಭವಸ್ಯುತ್ತರೋಮತ್"4

ಈ ಬಗೆಯ ವಾದವಿವಾದದ ಸ್ಪರ್ಧೆ ಇಬ್ಬರ ವಾದದಲ್ಲಿ ಯಾರ ವಾದ ಹಿಂದೆ ಬೀಳುತ್ತದೆ ಎಂದು ತಿಳಿದುಕೊಳ್ಳುವ ಬಗ್ಗೆ ಪ್ರೇಕ್ಷಕರಲ್ಲಿ ಒಂದು ವಿಧವಾದ ಕುತೂಹಲವನ್ನುಂಟುಮಾಡುತ್ತಿತ್ತು. ಇದಕ್ಕಿಂತ ಹೆಚ್ಚಾಗಿ, ಋತ್ವಿಕರ ಜ್ಞಾನಪ್ರದರ್ಶನಕ್ಕೆ ಇದೊಂದು ಸದವಕಾಶವನ್ನು ಒದಗಿಸುತ್ತಿತ್ತು.

ಇಂಥ ಸಮಸ್ಯಾವಿಧಿಗಳು ಕೃಷ್ಣಯಜುರ್ವೇದದಲ್ಲಿ ಬಹಳ ಮಿತಸಂಖ್ಯೆಯಲ್ಲಿ ಕಂಡುಬಂದರೆ, ಶುಕ್ಲಯಜುರ್ವೇದದಲ್ಲಿ ಇವು ಹೆಚ್ಚಾಗಿ ಕಂಡುಬರುತ್ತವೆ. ಇದರ ಪರಿಣಾಮವಾಗಿ, ಶುಕ್ಲಯಜುರ್ವೇದ ಋತ್ವಿಕರಿಗೆ ಹೆಚ್ಚು ಕಾಲ ಮನೋರಂಜನೆಯನ್ನು ಒದಗಿಸುವ ಅವಕಾಶ ನೀಡುತ್ತಿತ್ತೆಂದು ತಿಳಿಯಬಹುದು[5]. ಋಗ್ವೇದದಲ್ಲಿ ಮೊದಲೇ ಇದ್ದ ಇಂಥ ಬ್ರಹ್ಮೋದ್ಯಾಸಗಳ ಜೊತೆಗೆ ಯಜುರ್ವೇದ ಮತ್ತಷ್ಟು ಹೊಸತನ್ನು ಈ ಪಟ್ಟಿಯಲ್ಲಿ ಸೇರಿಸಿರುವುದನ್ನು ಇಲ್ಲಿ ಗಮನಿಸಬಹುದು.

ಸಾರ್ವಜನಿಕ ಮನೋರಂಜನೆಗಳು: ಯಜ್ಞಕಾರ್ಯದಲ್ಲಿ ನಡೆಯುವ ಅನೇಕ ಬಗೆಯ ಯಾಜ್ಞಿಕ ಕರ್ಮಗಳು ಮಂತ್ರವಿದ್ಯೆಗೆ ಪ್ರಾಮುಖ್ಯ ಕೊಡುತ್ತವೆ. ಋತ್ವಿಕರೂ ಯಜ್ಞದ ಯಜಮಾನನೂ ಇದೇ ಅಭಿಪ್ರಾಯವನ್ನು ಹೊಂದಿದ್ದರು. ಹಾಗಿದ್ದರೂ ಯಜ್ಞಕರ್ಮಗಳ ಉದ್ದೇಶದಲ್ಲಿ ಆಸಕ್ತಿಯಿಲ್ಲದ ಪ್ರೇಕ್ಷಕನಿಗೆ ಈ ಯಜ್ಞ ಆನಂದದಾಯಕ ಹಾಗೂ ಮನೋರಂಜನೆಯನ್ನು ನೀಡುವ ದೃಶ್ಯ ಮಾತ್ರವಾಗಿತ್ತು. ಆಯಾ ಯಜ್ಞಕರ್ಮದಲ್ಲಿ ಮಾಡುತ್ತಿದ್ದ ಕೆಲವು ಮನೋರಂಜನೆಯ ಅಂಶಗಳನ್ನು ಈಗ ಪರಿಶೀಲಿಸಬಹುದು.

ಚಾತುರ್ಮಾಸದ ಶಾಕಮೇಧ ಪರ್ವದಲ್ಲಿ ಬರುವ ಒಂದು ಕರ್ಮದಲ್ಲಿ ಪುರುಷರು ಮತ್ತು

---

1 ತೈತ್ತರೀಯ ಸಂಹಿತ (7.4.19) ಮತ್ತು ವಾಜಸನೇಯ ಸಂಹಿತ (23.21)
2 ವಾಜಸನೇಯ ಸಂಹಿತ (23.49)
3 ಅದೇ (23.51)
4 ಅದೇ (23.52)
5 ತೈತ್ತರೀಯ ಸಂಹಿತ (7.4.18)

ಸ್ತ್ರೀಯರು ತಮ್ಮ ತೊಡೆಗಳನ್ನು ತಟ್ಟಿಕೊಂಡು ಅಗ್ನಿಯನ್ನು ಪ್ರದಕ್ಷಿಣೆ ಮಾಡುತ್ತಿದ್ದರು. ಕುಮಾರಿಯರು ಪ್ರತ್ಯೇಕವಾಗಿಯೇ ತಮ್ಮ ತೊಡೆಗಳನ್ನು ತಟ್ಟಿಕೊಂಡು ಅಗ್ನಿಯನ್ನು ಸುತ್ತುತ್ತಿದ್ದರು (ಪ್ರದಕ್ಷಿಣೆ). ಒಳ್ಳೆಯ ಗಂಡಂದಿರನ್ನು ಪಡೆಯುವುದೇ ಆ ಕುಮಾರಿಯರ (ಈ ಕೆಲಸದ) ಉದ್ದೇಶವಾಗಿತ್ತು.

ಸೋಮಯಜ್ಞದಲ್ಲಿ ನಡೆಯುವ ಒಂದು ಕರ್ಮದಲ್ಲಿ ಏಳು ಜನ ಋತ್ವಿಕರು ಒಬ್ಬರ ಹಿಂದೊಬ್ಬರು ಒಂದು ಪ್ರತ್ಯೇಕವಾದ ರೀತಿಯಲ್ಲಿ ಹೋಗುತ್ತಾರೆ. ಈ ದೃಶ್ಯ ತಲೆ ಬಗ್ಗಿಸಿಕೊಂಡು ಏನನ್ನೋ (ಯಾವುದನ್ನೋ) ಹತ್ತುತ್ತಿರುವಂತೆ ಭಾಸವಾಗುತ್ತದೆ. ಇದನ್ನು 'ಆಪಸ್ತಂಭ ಶ್ರೌತಸೂತ್ರ' ವರ್ಣಿಸುತ್ತದೆ. "ಸ್ವರಂತರ ಇವರೋಹಣಾ ಇವನ್ಯನ್ ಇವ ಶೀರ್ಷಾಣಿಕೃತ್ವಾಸಪರ್ಪಾಂತಿ"6

ವಾಜಪೇಯ ಯಜ್ಞದಲ್ಲಿ ಬರುವ ಕೆಲವು ಮುಖ್ಯ ವಿಧಿ(ಕರ್ಮ)ಗಳಲ್ಲಿ ಕೆಲವು ಕಡೆ ಮನೋರಂಜನೆ ಕಂಡುಬರುತ್ತದೆ. ಉದಾ: ಕೆಳಗಿನವುಗಳನ್ನು ನೋಡಬಹುದು.

ರಥಗಳ ಪಂದ್ಯ ಶುರುವಾಗುವುದಕ್ಕೆ ಮೊದಲು ಹದಿನೇಳು ದುಂದುಭಿಗಳನ್ನು ಸಾಲಾಗಿ ಇಟ್ಟಿರುತ್ತಾರೆ. ಪಂದ್ಯದ ಪ್ರಾರಂಭಕ್ಕೆ ಮುಂಚಿತವಾಗಿ ಅಥರ್ವಣವನ್ನು ಪ್ರತಿನಿಧಿಸುವ ಋತ್ವಿಕ್ ಬ್ರಹ್ಮ ಯಾವುದಾದರೂ ಒಂದು ದುಂದುಭಿಯನ್ನು ಬಾರಿಸುತ್ತಾನೆ. ಅನಂತರ ಉಳಿದವುಗಳನ್ನು ಒಂದೊಂದಾಗಿ ಬಾರಿಸುತ್ತಾರೆ. ಈಗ ಪಂದ್ಯ ಪ್ರಾರಂಭವಾಗುತ್ತದೆ. ಈ ದೃಶ್ಯ ಮತ್ತು ಶಬ್ದ ನಮ್ಮ ಗಮನವನ್ನು ಸೆಳೆಯುತ್ತವೆ7. ಬಿಲ್ಗಾರ ಯಜ್ಞವೇದಿಕೆಯ ಅಂಚಿನಿಂದ ಉತ್ತರದ ಕಡೆಗೆ ಹದಿನೇಳು ಬಾಣಗಳನ್ನು ಬಿಡುತ್ತಾನೆ.8 ಈ ಅಂಶವೂ ಕೂಡ ಪ್ರೇಕ್ಷಕರಲ್ಲಿ ಕುತೂಹಲವನ್ನುಂಟುಮಾಡುತ್ತಿತ್ತು.

ಒಂದು ಏಣಿಯನ್ನು ಯೂಪಸ್ತಂಭಕ್ಕೆ ಒರಗಿಸುತ್ತಾರೆ. ಯಜ್ಞದ ಯಜಮಾನ ತನ್ನ ಪತ್ನಿಯನ್ನು ಹತ್ತಿರ ಕರೆದು ಅವಳೊಂದಿಗೆ ಏಣಿಯನ್ನು ಹತ್ತಿ (ಜಾಯಾ ಏಹಿ ಸ್ವೋರುಹಾವ) ಯೂಪಸ್ತಂಭದ ಮೇಲೆ ಮೊದಲೇ ಇಟ್ಟಿರುವ ಗೋದಿಯನ್ನು ಮುಟ್ಟುತ್ತಾನೆ. ಅನಂತರ ಅಲ್ಲಿರುವ ಋತ್ವಿಕರು ಅವನ ಕಡೆಗೆ ಉಪ್ಪಿನ ಮೂಟೆಯನ್ನು ಎಸೆಯುತ್ತಾರೆ.9 ಇಂಥ ದೃಶ್ಯ ನಡೆಯುತ್ತಿರುವಾಗ ನೋಡಲು ಆಸಕ್ತಿಯನ್ನು ಕೆರಳಿಸುತ್ತದೆಯಲ್ಲವೆ?

ರಾಜಸೂಯದಲ್ಲಿಯೂ ನಡೆಯುವ ಕೆಲವು ಕರ್ಮಗಳು ನಮ್ಮ ಗಮನವನ್ನು ಸೆಳೆಯುತ್ತವೆ. ಅನೇಕ ಮೂಲಗಳಿಂದ ಶೇಖರಿಸಲ್ಪಟ್ಟ ಹದಿನೇಳು ವಿಧದ ಜಲದಿಂದ ರಾಜನಿಗೆ ಅಭಿಷೇಕ ಮಾಡುತ್ತಾರೆ. ನೀಳವಾದ ಕೂದಲುಳ್ಳ (ಕೇಶವ) ಮನುಷ್ಯನೊಬ್ಬ ತನ್ನ ಬಾಯಲ್ಲಿ ತಾಮ್ರದ ತುಂಡೊಂದನ್ನು ಕಚ್ಚಿಕೊಂಡು ಬಹಳ ಎಚ್ಚರಿಕೆಯಿಂದ ಒಂದು ಸಂಕೇತಸ್ಥಳವನ್ನು ಹತ್ತುತ್ತಾನೆ. ಅನಂತರ ಮಿತ್ರಾವರುಣರ ಧಿಷ್ಣೀಯದ (ಎತ್ತರವಾದ ಪೀಠ) ಮುಂಭಾಗದಲ್ಲಿ ಹಾಸಿರುವ ಹುಲಿಯ ಚರ್ಮದ ಹಿಂಭಾಗದಲ್ಲಿಟ್ಟಿರುವ ಸೀಸದ ತುಂಡೊಂದನ್ನು ಒದೆಯುತ್ತಾನೆ. ಇಲ್ಲಿಯೂ ರಥದ ಪಂದ್ಯ ನಡೆಯುತ್ತದೆ. ರಥದ ಮೇಲೆ ಕುಳಿತುಕೊಂಡಿರುವ ಯಜ್ಞದ ಯಜಮಾನ ಬಲನೊಗದ ಕುದುರೆಯನ್ನು ಚುಚ್ಚುಗೋಲಿನಿಂದ ಪ್ರಚೋದಿಸುತ್ತಾನೆ. ಅನಂತರ ಕುದುರೆಯನ್ನು ಹಸುಗಳ ಮಧ್ಯೆ ನಿಲ್ಲಿಸುತ್ತಾನೆ. ಮತ್ತು ಹಸುವನ್ನು ತನ್ನ ಬಿಲ್ಲಿನ ಕೊನೆಯಿಂದ ಮುಟ್ಟುತ್ತಾನೆ10. ಈ ದೃಶ್ಯಗಳು ಎದುರಿಗೆ ನೋಡಲು ಮನರಂಜನೀಯವಾಗಿರುತ್ತದೆ.

ಸೌತ್ರಮಣಿಯಲ್ಲಿ, ಒಂದು ಯಜ್ಞ ಸುರಾಪಾನ ಸೇವನೆಯಲ್ಲಿರುವ ಆನಂದವನ್ನು ವಿವರಿಸುತ್ತದೆ. ಇದರಲ್ಲಿ ಸುರಾಪಾನ ಮಾಡುವವರ ಅವಸ್ಥೆ ವರ್ಣಿತವಾಗಿದೆ. ಇದನ್ನು ನಾಟಕೀಯವಾಗಿ ಮಾಡಿದರೆ ಇದೂ ಅಲ್ಲಿ ನೆರೆದಿರುವ ಪ್ರೇಕ್ಷಕರಿಗೆ ವಿನೋದವನ್ನುಂಟುಮಾಡುತ್ತದೆ. ಕುಡಿದವನಿಗೆ ತಾನೇನು ಮಾತ

---

6 ಆಪಸ್ತಂಭ ಶ್ರೌತ ಸೂತ್ರ (12.17.3)
7 ಶತಪಥ ಬ್ರಾಹ್ಮಣ (5.1.4.3)
8 ಅದೇ (5.1. 5.13)
9 ಅದೇ (5.2.9)
10 ಅದೇ (5, 4, 3, 10)

ನಾಡುತ್ತಿರುವನೆಂಬುದರ ಅರಿವಿರುವುದಿಲ್ಲ. "ಸುರಾಯೈ ಬಭ್ರೈಮದೇ ಕಿಂವಸ್ತ್ವೋ ವದತಿಕಿಂವಸ್ತ್ವಃ"11 ಕೃಷ್ಣ ಯಜುರ್ವೇದದಲ್ಲಿ ಇದು ಅಪರೂಪ. ಮತ್ತೊಂದು ಅಂಶವೆಂದರೆ, ಯಜ್ಞದ ಯಜಮಾನನಿಗೆ ಎಲ್ಲ ಬಗೆಯ ಸುವಾಸನಾಯುಕ್ತವಾದ ಪದಾರ್ಥವನ್ನೂ ಲೇಪಿಸುತ್ತಾರೆ. ಅನಂತರ ಯಜ್ಞದ ಯಜಮಾನನ ತಲೆಯ ಮೇಲೆ ಮಾಂಸದಿಂದ ಹೊರಸೂಸುವ ರಸವನ್ನು ಚಿಮುಕಿಸುತ್ತಾರೆ. ಆಸನದಲ್ಲಿ ಕುಳಿತಿರುವ ಯಜಮಾನನನ್ನು ಮೊದಲು ಮೊಣಕಾಲಿನ ವರೆಗೆ, ಅನಂತರ ನಾಭಿಯ ವರೆಗೆ ಕೊನೆಯದಾಗಿ ಬಾಯಿಯ ವರೆಗೆ ಮೇಲುಮೇಲಕ್ಕೆ ಎತ್ತುತ್ತಾರೆ. ಈ ವಿಧಿಯೂ ಪ್ರೇಕ್ಷಕರಲ್ಲಿ ಆಸಕ್ತಿಯನ್ನುಂಟು ಮಾಡಲು ತಕ್ಕುದಾಗಿದೆ.

ಅಶ್ವಮೇಧದ ವರ್ಣನೆಯನ್ನು ನಾವು ಗಮನಿಸಿದರೆ. ಇಂಥ ಅನೇಕ ಘಟನೆ(ಸಂಗತಿ)ಗಳನ್ನು ಪಟ್ಟಿ ಮಾಡಬಹುದು. ಯಜ್ಞದ ಯಜಮಾನನ ಪತ್ನಿಯರು ಯಜ್ಞದ ಕುದುರೆಯನ್ನು ಅಲಂಕರಿಸುತ್ತಾರೆ. ಶುದ್ಧವಾದ ತುಪ್ಪವನ್ನು ಕುದುರೆಗೆ ಬಳಿಯುತ್ತಾರೆ. ಕುದುರೆಯ ಕೊರಳು ಮತ್ತು ಬಾಲವನ್ನು ಮುತ್ತಿನಿಂದ ಅದರ ಕೂದಲನ್ನು ಸೇರಿಸಿ ನೇಯುತ್ತಾರೆ. ಅಂದರೆ ಕುದುರೆಯನ್ನು ಮುತ್ತಿನ ಗೊಂಚಲಿನಿಂದ ಅಲಂಕರಿಸುತ್ತಾರೆ. ಈ ಯಜ್ಞದಲ್ಲಿಯೂ ಕೆಲವು ಅಪೂರ್ವ ದೃಶ್ಯಗಳಿವೆ. ಉದಾ: ರಾಜ ತನ್ನ ಮಹಾರಾಣಿಯ ತೊಡೆಯ ಮೇಲೆ ಮಲಗುತ್ತಾನೆ. ಆದರೆ ಅವಳನ್ನು ಆಲಿಂಗಿಸುವುದಿಲ್ಲ. ಅನಂತರ ಮಹಾರಾಣಿ ಬಲಿಗೊಡುವ ಕುದುರೆಯ ಪಕ್ಕದಲ್ಲಿ ಹೊದ್ದುಕೊಂಡು ಮಲಗುತ್ತಾಳೆ. ಇಂಥ ದೃಶ್ಯಗಳು ಪ್ರೇಕ್ಷಕರಲ್ಲಿ ಏನೋ ಒಂದು ವಿಧವಾದ ಭಾವನೆಯನ್ನುಂಟು ಮಾಡಿದರೂ ಈ ವಿಧಿಗಳ (ಕರ್ಮ) ಹಿಂದೆ ಸದುದ್ದೇಶವಿರುತ್ತಿತ್ತು.

ಯಜ್ಞಭೂಮಿಯ ಮುಂದುಗಡೆ ನಡೆಯುವ ಮೆರವಣಿಗೆ (ಪ್ರದರ್ಶನ) ಪ್ರೇಕ್ಷಕರಿಗೆ ಆನಂದವನ್ನು ನೀಡುತ್ತಿದ್ದ ಒಂದು ದೃಶ್ಯವಾಗಿತ್ತು. ಕುದುರೆಗಳನ್ನು ಹಿಡಿದುಕೊಂಡಿರುವ ಎರಡು ಸಾಲು ಪುರುಷರಿಂದಲೂ. ಕವಚಧಾರಿಗಳಾದ ನೂರು ಜನ ರಾಜಕುಮಾರರಿಂದಲೂ ಬಾಣಗಳಿಂದ ತುಂಬಿದ ಬತ್ತಳಿಕೆಯನ್ನು ಹೊಂದಿರುವ ನೂರು ಜನ ಸೂತರಿಂದಲೂ ಮುಖ್ಯಸ್ಥರಿಂದಲೂ ಬಿಡುಗಡೆ ಮಾಡಿದ ಕುದುರೆಯನ್ನು ಕಾಯಲು ನೂರು ಜನ ಅನುಚರರಿಂದಲೂ ಸಾರಥಿಗಳಿಂದಲೂ12 ಈ ಮೆರವಣಿಗೆ ಕೂಡಿರುತ್ತಿತ್ತು. ಈ ದೃಶ್ಯ ಮನೋಹರವಾಗಿಯೂ ಸುಂದರವಾಗಿಯೂ ಇರುತ್ತಿತ್ತೆಂಬುದರಲ್ಲಿ ಸಂಶಯವಿಲ್ಲ. ನಾನಾ ಬಗೆಯ ಯಜ್ಞಪಶುಗಳನ್ನು ಆಯಾ ಯೂಪಸ್ತಂಭಕ್ಕೆ ಕಟ್ಟಿಹಾಕುವುದಕ್ಕೆ ಮಾಡುತ್ತಿದ್ದ ಸಿದ್ಧತೆಗಳನ್ನು ನೋಡಿದರೆ ಆಶ್ಚರ್ಯಪಡುವಂತಿದೆ. ಈಗಿನ ರೀತಿಯಲ್ಲಿ ಇದನ್ನು ಹೇಳಬೇಕಾದರೆ ಯಜ್ಞಭೂಮಿಯ ಸಮೀಪದಲ್ಲಿ ತಾತ್ಕಾಲಿಕವಾಗಿ ನಿರ್ಮಿಸಿರುವ ದೊಡ್ಡ ಮೃಗಾಲಯದಂತೆ ಕಂಡುಬರುತ್ತಿತ್ತು.

ಪುರುಷಮೇಧದ ಕಡೆಗೆ ನಾವು ಕಣ್ಣು ಹಾಯಿಸಿದರೆ. ಅಶ್ವಮೇಧದಲ್ಲಿ ಕಂಡುಬರುವುದಕ್ಕಿಂತ ಭಿನ್ನವಾದ ಮತ್ತು ಅಪೂರ್ವವಾದ ದೃಶ್ಯವನ್ನು ಕಾಣುತ್ತೇವೆ. ಇಲ್ಲಿ ವಿಲಕ್ಷಣವಾದ ಅನೇಕ ಪುರುಷ ಯಜ್ಞಪಶುಗಳನ್ನು. ಅವುಗಳ ವಿಶಿಷ್ಟತೆಯನ್ನು ಸೂಚಿಸಲು ಅನುಕೂಲವಾಗುವಂತೆ. ಒಂದು ವಿಶೇಷ ಕ್ರಮದಲ್ಲಿ ಯೂಪಸ್ತಂಭಗಳಿಗೆ ಕಟ್ಟಿರುತ್ತಿದ್ದರು. ಈ ಅಂಶ ಪ್ರೇಕ್ಷಕರಿಗೆ ಆಕರ್ಷಣೀಯವಾಗಿದ್ದಿರಬೇಕು.

ಯಜುರ್ವೇದ ಪದ್ಧತಿಯ ಯಜ್ಞದಲ್ಲಿ ಬರುವ ಅನೇಕ ಸಂಗತಿಗಳನ್ನು ನಾವೀಗ ಸಂಗ್ರಹಿಸಬಹುದು. ಯಜ್ಞದ ಮೂಲಕ(ಮಾಧ್ಯಮ)ವಾಗಿ ಮಾನವ ಜೀವನಕ್ಕೆ ಸಂಬಂಧಿಸಿದಂತೆ ಮನೋರಂಜನೆಯ ಕಾರ್ಯಕ್ರಮವನ್ನು ಒದಗಿಸುವುದರಲ್ಲಿ ಯಜುರ್ವೇದ ಸಾಕಷ್ಟು ಸಮೃದ್ಧಿಯಾಗಿದೆ. ಇದಕ್ಕಿಂತ ಹೆಚ್ಚಾಗಿ. ರೂಪಕ(ನಾಟಕ)ದ ಮುಂದಿನ ರೂಪ (ದಶರೂಪಗಳು) ಅದರ ಮೂಲವನ್ನು ಯಜುರ್ವೇದದಲ್ಲಿ ಶೋಧಿಸುತ್ತದೆ. ಅಂದರೆ. ಯಾವುದೇ ದೃಶ್ಯಕಾವ್ಯದಲ್ಲಿ ಪ್ರಮುಖ ಸ್ಥಾನ ಗಳಿಸಿರುವ ಅಭಿನಯ ಮೂಲತಃ ಯಜುರ್ವೇದವನ್ನು ಪ್ರತಿನಿಧಿಸುವ ಅಧ್ವರ್ಯುಗಳ (ಋತ್ವಿಕರ) ಸ್ವತ್ತಾಗಿದೆ. ಅಭಿನಯದ ಮೂಲ (ಉಗಮ) ಯಜುರ್ವೇದದಿಂದಾಗಿದೆ ಎನ್ನಬಹುದು. ಅಧ್ವರ್ಯು ಯಜ್ಞಕಾರ್ಯ

---

11 ವಾಜಸನೇಯ ಸಂಹಿತ (20.18)

12 ಅದೇ (9, 14)

ನಡೆಯುವಾಗ ಆಲಸಿಯಾಗಿರದೆ, ಅಲ್ಲಿ ಹೇಳುವ (ಪಠಿಸುವ) ಅನೇಕ ಮಂತ್ರಗಳಿಗೆ ಹೊಂದಿಕೆಯಾಗುವಂತೆ ಆಹುತಿ ಕೊಡುವುದು, ವರ್ಘ ವಿಸ್ತರಣವೇ ಮೊದಲಾದ ಅಭಿನಯವನ್ನು ಮಾಡುವುದರಲ್ಲಿ ತೊಡಗಿರುತ್ತಿದ್ದ. ಮನೋರಂಜನೆಯ ಸಾಧನವಾದ ರೂಪಕದ ಮುಂದಿನ ಸಂಪೂರ್ಣ ಬೆಳವಣಿಗೆಗೆ ಉತ್ತೇಜನ ನೀಡಿದ ಕೀರ್ತಿ ಅಧ್ವರ್ಯುವಿನ ಆಗಿನ ಅಭಿನಯಕ್ಕೆ ಸೇರುತ್ತದೆ ಎಂಬುದು ನಿರ್ವಿವಾದ.

ಮನೋರಂಜನೆಯ ಕಾರ್ಯಕ್ರಮದಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದ ಕ್ರೀಡೆ, ಆಟ, ನೃತ್ಯ. ಸಂಗೀತ ಮೊದಲಾದವನ್ನು ನಾವು ಈಗ ಗಮನಿಸಬಹುದು. ಯಜುರ್ವೇದ ಇವುಗಳಿಗೂಮೂಲವಾಗಿದೆ.

ಕ್ರೀಡೆಗಳು (ಹೊರಾಂಗಣ)

ಮೇಲೆ ಹೇಳಿರುವ ಮನೋರಂಜನೆಯ ಅಂಗಗಳ ವಿಷಯ ಯಜ್ಞದ ಗ್ರಂಥಗಳಲ್ಲಿ ದೊರೆಯುವುದರಿಂದ ಇಲ್ಲಿ ಅವುಗಳ ಪ್ರಸ್ತಾಪ ಮಾಡುವುದು ಉಚಿತವೆನಿಸುತ್ತದೆ.

ಕ್ರೀಡೆ ಎಂಬ ಪದ ಆಟ ಎಂಬ ಅರ್ಥದಲ್ಲಿ ಯಜುರ್ವೇದದಲ್ಲಿ ಆಗಾಗ್ಗ ಕಂಡುಬರುತ್ತದೆ ಯಾದ್ದರಿಂದ ಕ್ರೀಡೆಯೂ ಮನೋರಂಜನೆಯ ವಸ್ತುಗಳಲ್ಲಿ ಒಂದಾಗಿತ್ತು ಎಂದು ನಾವು ಊಹಿಸಬಹುದು.

ರಥದ ಪಂದ್ಯ ಯಜುರ್ವೇದದಲ್ಲಿ ನೇರವಾಗಿ ಪ್ರಸ್ತಾಪಿಸಿರುವ ಕ್ರೀಡೆಗಳಲ್ಲಿ ಒಂದೆಂದು ಹಿಂದೆಯೇ ಗಮನಿಸಿದ್ದೇವೆ. ಕುದುರೆಗಳ ವೇಗದ ವರ್ಣನೆ* ಪಂದ್ಯದ ಚುರುಕುತನ ಮತ್ತು ಅಚ್ಚುಕಟ್ಟುತನವನ್ನು ಸೂಚಿಸುತ್ತದೆ. ವಿಶೇಷವಾಗಿ ತೈತ್ತರೀಯ ಬ್ರಾಹ್ಮಣ ಮಗು ಆಟದಲ್ಲಿ ತೋರುವ ಚಟುವಟಿಕೆಯನ್ನು ಉಲ್ಲೇಖಿಸುತ್ತದೆ ಮತ್ತು ಅದನ್ನು ಹೋಲಿಕೆಯಾಗಿ ಕೊಡುತ್ತದೆ. "ಶಿಶು ಕ್ರೀಡಂತೌ ಪರ್ಯತೋ ಅಧ್ವರಂ"13 ಮಹಾವ್ರತದಲ್ಲಿ ಋತ್ವಿಕರು ವಿಧಿಯುಕ್ತವಾಗಿ ಆಡುವ ಉಯ್ಯಾಲೆ ಆಟದ ಪ್ರಸ್ತಾಪವಿದೆ.14 ಇದರಿಂದ ಉಯ್ಯಾಲೆಯೂ ಕ್ರೀಡೆಯ ಉಲ್ಲಾಸದ ಒಂದು ಭಾಗವಾಗಿತ್ತೆಂದು ಯಜುರ್ವೇದದಿಂದ ಮನವರಿಕೆಯಾಗುತ್ತದೆ. ಇಂಥ ಕೆಲವು ವಿಶೇಷ ರೀತಿಯ ಕರ್ಮಗಳ ಜೊತೆಗೆ ಪ್ರೇಕ್ಷಕರಿಗೆ ಆಹ್ಲಾದವನ್ನುಂಟುಮಾಡುತ್ತಿದ್ದ ಇನ್ನೂ ಕೆಲವು ಬೇರೆ ಬೇರೆ ಅಂಗಗಳು ಇದ್ದುವೆಂದು ಸೂಚಿತವಾಗುತ್ತದೆ. ಯಜುರ್ವೇದದಲ್ಲಿ ನಾವು ಕಾಣುವ ಮೋದ. ಪ್ರಮೋದ. ಆನಂದ. ನರ್ಮ ಇತ್ಯಾದಿ ಶಬ್ದಗಳು ಪ್ರೇಕ್ಷಕರು ಅನುಭವಿಸುತ್ತಿದ್ದ ಆನಂದದ (ಮನೋ)ಭಾವವನ್ನು ಪ್ರತಿಬಿಂಬಿಸುತ್ತವೆ. (ಪುರುಷ ಮೇಧದ ಶ್ಲೋಕಗಳನ್ನು ನೋಡಿ.) ಜನರಲ್ಲಿ ಇಂಥ ಚುರುಕುತನವನ್ನು ಉದ್ದೀಪನಗೊಳಿಸುವ ಸಲುವಾಗಿ, ಯಜುರ್ವೇದದಲ್ಲಿ ಪ್ರಸ್ತಾಪಿಸಿರುವ ಗಣಿಕೆಯರು (ವೇಶ್ಯೆ). ವಿಟರು, ಕುಮಾರಿಯರ ಪುತ್ರರು, ಸ್ತ್ರೀಸಖರು ಮೊದಲಾದವರು ಸಾರ್ವಜನಿಕರಿಗೆ ಮನೋರಂಜನೆಯನ್ನು ಒದಗಿಸುವುದರಲ್ಲಿ ಸಹಕರಿಸುತ್ತಿದ್ದರು. ಈ ವಿಷಯದ ವಿವರದ ಬಗ್ಗೆ ಯಜುರ್ವೇದ ಮುಂದೆ ಏನನ್ನೂ ತಿಳಿಸುವುದಿಲ್ಲವಾದ್ದರಿಂದ ಮೇಲೆ ಹೇಳಿದ ವರ್ಗದ ಸದಸ್ಯರು ಅನೇಕ ಬಗೆಯ ಮನೋರಂಜನೆಯನ್ನು ಜನರಿಗೆ ನೀಡುತ್ತಿದ್ದರೆಂದು ಊಹಿಸಬಹುದು. ಸುರ ಮತ್ತು ಸೋಮರಸಗಳ ಪಾನದಿಂದ ಜನರುಮದೋನ್ಮತ್ತರಾಗಿ ಪ್ರೇಕ್ಷಕರನ್ನು ಮತ್ತಷ್ಟು ಆನಂದಗೊಳಿಸುತ್ತಿದ್ದರು (ಮಹಾಯರಸಃ ಚ್ಯುತಃ).

ಮನೆಯೊಳಗಿನ ಆಟಗಳು

ಜೂಜಾಡುವುದು (ಪಗಡೆ, ಅಕ್ಷಕ್ರೀಡೆ) ಯಜುರ್ವೇದದಲ್ಲಿ ಕಂಡು ಬರುವ ಪ್ರಮುಖವಾದ ವಿನೋದಗಳಲ್ಲಿ ಒಂದಾಗಿದೆ. ಈ ಆಟ ಜನಗಳಲ್ಲಿ ತಡೆಯಲಾಗದ ಮೋಹವನ್ನುಂಟುಮಾಡುತ್ತಿತ್ತು. ಅಂದರೆ,

---

* ನೋಡಿ: ವಾಜಸನೇಯ ಸಂಹಿತ (9.14)

13 ತೈತ್ತರೀಯ ಬ್ರಾಹ್ಮಣ (2.7.12.30)

14 ನೋಡಿ: Keith Hos V. 18 ; pp. (xxxi)

ಜನರು ಈ ಆಟಕ್ಕೆ ಮನಸೋಲುತ್ತಿದ್ದರು. 'ಸಭಾಸ್ಥಾಣು'ಗಳೆಂದು ಪ್ರಸಿದ್ಧರಾದ ಕೆಲವರಂತೂ ಪಂದ್ಯ ನಡೆಯುವ ಸ್ಥಳಕ್ಕೆ ಆಗಾಗ್ಗೆ ಧಾವಿಸುತ್ತಿದ್ದರು ಮತ್ತು ಅಲ್ಲಿ ತಮ್ಮ ಶಾಶ್ವತವಾದ ಸದಸ್ಯತ್ವವನ್ನು ಸ್ಥಾಪಿಸಿದ್ದರು. ಕಲಿ, ಕೃತ, ತ್ರೇತಾ, ದ್ವಾಪರ ಮತ್ತು ಅಸ್ಕಂದ—ಇವೇ ಮೊದಲಾದ ಅಕ್ಷಗಳ (ಪಗಡೆಗಳ) ಹೆಸರುಗಳನ್ನು ಯಜುರ್ವೇದ ನೇರವಾಗಿ ಪ್ರಸ್ತಾಪಿಸುತ್ತದೆ. ಜೂಜಿನ ಮುಖ್ಯಸ್ಥನನ್ನು (ಅಕ್ಷರಾಜ) ಮತ್ತು ಜೂಜಿನ ಮನೆಯ (ಕಟ್ಟೆ) ವ್ಯವಸ್ಥಾಪಕನನ್ನು ಯಜುರ್ವೇದ ಹೆಸರಿಸುತ್ತದೆ. ಜೂಜಾಡುವವರು ಜೂಜಾಡದವರನ್ನು "ಜೀವನದಲ್ಲಿ ಶಾಂತಿ ಇಲ್ಲದ ಜನಗಳೆಂದು" ಕಡೆಗಣಿಸುತ್ತಿದ್ದರು. ಅಂದರೆ, ಆ ಕಾಲಕ್ಕೆ ಜೂಜಾಡುವುದರಿಂದ ಮನಸ್ಸಿಗೆ ಶಾಂತಿಯನ್ನೂ ಆನಂದವನ್ನೂ ಪಡೆಯುತ್ತಿದ್ದರು. ಬ್ರಾಹ್ಮಣದ ಕಡೆಗೆ ನಾವು ತಿರುಗಿದರೆ, ರಾಜಸೂಯದಲ್ಲಿ ಪಗಡೆಯಾಡುವ ಸಮಯಸಂದರ್ಭವನ್ನು ವಿವರಿಸಿದೆ15. ಯಜ್ಞದ ಯಜಮಾನ ಗಂಜಿಯನ್ನು ತಯಾರಿಸಲು ಬೇಕಾದ ವೇಧುಕ ಧಾನ್ಯವನ್ನು ಅಕ್ಷವಾಳ(ಪಗಡೆಯ ದಾಳ)ವನ್ನು ಹೊಂದಿರುವವನ ಮನೆಯಿಂದ ತರಬೇಕು. ಜೂಜಾಟದಲ್ಲಿ 'ಕಲಿ' ಎಂಬ ಪಗಡೆಯ ದಾಳ ಬಹಳ ಹೆಸರುವಾಸಿಯಾಗಿತ್ತು. 'ಅಭಿಭೂರಸಿ'16 ಯಜ್ಞಕಾರ್ಯ ನಡೆಯುವ ಸಂದರ್ಭದಲ್ಲಿ ಅಧ್ವರ್ಯು ಐದು (೫) ಪಗಡೆಯ ದಾಳಗಳನ್ನು ಕೆಳಗೆ ಹಾಕುತ್ತಾನೆ. ಈ ಕಾರ್ಯದ ವಿಶೇಷಾರ್ಥವನ್ನು ಶತಪಥಬ್ರಾಹ್ಮಣ ಹೀಗೆ ವಿವರಿಸುತ್ತದೆ. "ಆಟವಾಡುವ ಸ್ಥಳ ವಿಪುಲವಾದ ಅಗ್ನಿಯಂತೆ. ಪಗಡೆಯು (ಅಕ್ಷ) ಕಲ್ಲಿದ್ದಲಿನಂತೆ. ಪಗಡೆಯನ್ನು ಕೆಳಗೆ ಎಸೆಯುವುದರಿಂದ ಅಧ್ವರ್ಯು ಅಗ್ನಿಯನ್ನು ಸಂತೋಷ(ತೃಪ್ತಿ)ಪಡಿಸುತ್ತಾನೆ" (ಋಗ್ವೇದ ನಾಲ್ಕು ಅಕ್ಷದ (ಪಗಡೆ) ದಾಳದ ಆಟವನ್ನು ಸೂಚಿಸಿದರೆ, ಯಜುರ್ವೇದ ಐದು ಅಕ್ಷದ (ದಾಳ) ಆಟವನ್ನು ಸೂಚಿಸುತ್ತದೆ17.

ಯಜುರ್ವೇದದಲ್ಲಿ ಕಂಡುಬರುವ ಮೇಲಿನ ಆಧಾರಗಳಿಂದ, ಜೂಜಾಟ ಯಜ್ಞಕಾರ್ಯದಲ್ಲಿ ಪ್ರಮುಖ ಸ್ಥಾನವನ್ನು ಪಡೆದಿತ್ತೆಂದೂ ಮಹತ್ವರವಾದ ಯಜ್ಞಕರ್ಮವಾಗಿತ್ತೆಂದೂ ಸ್ಪಷ್ಟವಾಗುತ್ತದೆ. ಆದರೂ, ಯಜುರ್ವೇದ ಈ ಆಟವನ್ನು ಆಡುವ ವಿಧಾನವನ್ನು ವಿವರಿಸಿಲ್ಲ. ಅನಂತರದ ದಿನಗಳಲ್ಲಿ ಜೂಜಾಟವನ್ನು ಯಜ್ಞದ ಪ್ರಕರಣದಿಂದ ಬೇರ್ಪಡಿಸಿ, ಮುಂದೆ ಇದನ್ನು ಆನಂದದಾಯಕವಾದ ಆಟವನ್ನಾಗಿ ಪರಿವರ್ತಿಸಿದರು18.

ನೃತ್ಯ: ನೃತ್ತ (ಕುಣಿತ) ಎಂಬ ಪದ ನೃತ್ಯವನ್ನು ಸೂಚಿಸುತ್ತದೆ. ಇದು ಯಜುರ್ವೇದದಲ್ಲಿ ಪ್ರಸ್ತಾಪವಾಗಿ, ಮನೋರಂಜನೆಯ ಪ್ರಮುಖ ಅಂಗವೆಂದು ಸೂಚಿತವಾಗಿದೆ. ಸಾರ್ವಜನಿಕರನ್ನು ಆನಂದಪಡಿಸುತ್ತಿದ್ದ ನರ್ತಕರಲ್ಲಿ ಶೈಲೂಷ ಎಂಬ ಹೆಸರು ನಮೂದಿತವಾಗಿದೆ. ನರ್ತಕರ ಜಾಣ್ಮೆ ಮೆಚ್ಚುವಂತಿತ್ತು ಮತ್ತು ನರ್ತನ ಅಚ್ಚುಕಟ್ಟಾಗಿರುತ್ತಿತ್ತು. ಕಷ್ಟಕರವಾದ ವಂಶದ ನರ್ತನವನ್ನು (ಬೊಂಬಿನ ಮೇಲೆ ಮಾಡುತ್ತಿದ್ದ ನರ್ತನ) ಕೂಡ ಅಭ್ಯಾಸ ಮಾಡುತ್ತಿದ್ದರು. ಯಜುರ್ವೇದದಲ್ಲಿ ಯಾವಾಗಲೂ ನರ್ತನ ಮಾಡುತ್ತಿದ್ದವರೆಲ್ಲ ಹೆಚ್ಚಾಗಿ ಪುರುಷರು. ಆದರೆ ಋಗ್ವೇದದಲ್ಲಿ ಇದಕ್ಕೆ ಪ್ರತಿಯಾಗಿ ಯಾವಾಗಲೂ ನರ್ತನ ಮಾಡುತ್ತಿದ್ದವರು ಹೆಚ್ಚಾಗಿ ಸ್ತ್ರೀಯರು ಅದರಲ್ಲೂ ಕುಮಾರಿಯರು.

ತೈತ್ತರೀಯ ಬ್ರಾಹ್ಮಣದಲ್ಲಿ ಬರುವ 'ದಿವಾನೃತ್ಯಕೆ'19 ಎಂಬುದನ್ನು ಭಟ್ಟಭಾಸ್ಕರನೆಂಬ ಭಾಷ್ಯಕಾರ "ಗಾತ್ರಾಣಿ ವಿನಾಮಯೇತ್" ಎಂದು ವಿವರಿಸುತ್ತಾನೆ. ಅದೇ ಕಡೆಯಲ್ಲಿ "ಪ್ರೇವ ಚಲೇತ್" ಎಂದೂ ಇದೆ. ಇದನ್ನು ಪುನಃ ಅದೇ ಭಾಷ್ಯಕಾರ " ಪ್ರಮಾಣಾರ್ಥಿತವ್ ಇವಾ ಪದವಿನ್ಯಾಸವ್ ಕುರ್ಯಾತ್" ಎಂದು ವಿವರಿಸುತ್ತಾನೆ. ಈ ಕೆಲವು ಆಧಾರಗಳಿಂದ ಅಗಿನವರಿಗೆ ನೃತ್ಯಕಲೆಯ ತಂತ್ರದ ಬಗ್ಗೆ ಎಷ್ಟು ಪರಿಶ್ರಮವಿತ್ತೆಂಬುದರ ಅರಿವಾಗುತ್ತದೆ.

ಸಂಗೀತ: ಯಜುರ್ವೇದ ಕೆಲವು ಸಂಗೀತವಾದ್ಯಗಳನ್ನು ಉಲ್ಲೇಖಿಸುತ್ತದೆ. ಚರ್ಮದಿಂದ

---

15 ಶತಪಥ ಬ್ರಾಹ್ಮಣ (5.3.1.10)

16 ವಾಜಸನೇಯ ಸಂಹಿತ (10.28); ಶತಪಥ ಬ್ರಾಹ್ಮಣ (5.4.4.7)

17 ನೋಡಿ: 'ಕುಂಜನ್ನಿರಾಜ' ವೇದ ಸಮೀಕ್ಷೆ, ಪು. 95

18 ನೋಡಿ: ವಾಜಸನೇಯ ಸಂಹಿತ (30ನೆಯ ಅಧ್ಯಾಯ)

19 Macdonell: A History of Sanskrit Literature pp. 170

ತಯಾರಿಸಿರುವ ದುಂದುಭಿ, ನಗಾರಿಗಳು (ತಮಟೆ). ಪನಿಷ್ನ; ಲೋಹದಿಂದ ಮಾಡಿರುವ ತಾಳಗಳು; ಮರ ಮತ್ತು ತಂತಿಗಳಿಂದ ತಯಾರಿಸಿರುವ ಶಂಖ ಮತ್ತು ತುನ—ಇವೇ ಮೊದವಲಾದ ಸಂಗೀತ ವಾದ್ಯಗಳನ್ನು ಈ ವೇದ ಹೆಸರಿಸುತ್ತದೆ. "ಯುದ್ಧ ಮತ್ತು ಶಾಂತಿಯ ಕಾಲದಲ್ಲಿ ದುಂದುಭಿಯನ್ನು ಬಳಸುತ್ತಿದ್ದರು. ಬಾಯಿ ಹಾಡುಗಾರಿಕೆ ಮತ್ತು ವಾದ್ಯಸಂಗೀತ ವೇದಗಳ ಕಾಲದಲ್ಲಿ ವಿನೋದಕಾರಿ ಹವ್ಯಾಸಗಳಾಗಿದ್ದುವು. ದುಂದುಭಿಯ ಸಿಂಹಧ್ವನಿಯಿಂದ ಶತ್ರುಪಕ್ಷದವರಿಗೆ ಸೋಲನ್ನು ಕೋರುತ್ತಿದ್ದರು. ಹೀಗೆ ದುಂದುಭಿ ಸಂಗೀತವಾದ್ಯ ಮಾತ್ರವಾಗಿರದೆ ಯುದ್ಧಗಳಲ್ಲಿ ಜಯವನ್ನು ಘೋಷಿಸುವ ವಾದ್ಯವೂ ಆಗಿತ್ತು. ಈ ವಾದ್ಯಗಳೇ ಅಲ್ಲದೆ, ಭೂಮಿ ದುಂದುಭಿ, ಆಡಂಬರ, ಆಘಾತಿ, ಕರ್‌ಕರಿ, ಬಿಂಡ ವೀಣಾ, ಸಂದಿ, ಬಕುರ, ವಾನಾ—ಮೊದಲಾದ ವಾದ್ಯಗಳನ್ನು ವೇದಗಳು ಪ್ರಸ್ತಾಪಿಸುತ್ತವೆ. ಮೇಲೆ ನಮೂದಿಸಿರುವ ಕೆಲವು ವಾದ್ಯಗಳನ್ನು ನುಡಿಸುತ್ತಿದ್ದ ನಿಪುಣ ಕಲೆಗಾರರ ಬಗ್ಗೆ ಯಜುರ್ವೇದ ತಿಳಿಸುತ್ತದೆ. ವಾದ್ಯಸಂಗೀತ ವೇದಕಾಲದ ವಿನೋದಕಾರಿ ಹವ್ಯಾಸವಾಗಿದ್ದಿತು.

ಬ್ರಾಹ್ಮಣ ಮತ್ತು ಕ್ಷತ್ರಿಯ ವರ್ಣದವರು ವೀಣೆಯನ್ನು ನುಡಿಸುತ್ತಿದ್ದರೆಂದು ಯಜುರ್ವೇದ ಬ್ರಾಹ್ಮಣ ತಿಳಿಸುತ್ತದೆ (ವೀಣಾಗಾತಿನೌ).

ವೀಣೆ, ಕೊಳಲು ಮತ್ತು ದುಂದುಭಿ—ವಾದ್ಯಗಳಲ್ಲಿ ಕೇಳಿಬರುತ್ತಿದ್ದ ಸ್ವರ (ಧಾಟಿ) ವಾಕ್ ಮಾತ್ರವಾಗಿತ್ತೆಂದು ತೈತ್ತರೀಯ ಸಂಹಿತದಲ್ಲಿ ಒಂದು ಹೇಳಿಕೆಯಿದೆ20. ಈ ವಾದ್ಯಗಳನ್ನು ಬಿಟ್ಟರೆ ಇತರ ಯಾವ ಸಂಗೀತವಾದ್ಯಗಳ ವಿಸ್ತಾರವಾದ ಪ್ರಸ್ತಾಪವೂ ಯಜುರ್ವೇದದಲ್ಲಿ ಕಂಡುಬರುವುದಿಲ್ಲ.

ತೌಲವ (ಸಂಗೀತಗಾರ), ಸುವಾಚ (ಉತ್ತಮ ಗಾಯಕ), ಸ್ತೋತ್ರ (ಗಾಯಕ)—ಇವೇ ಮೊದಲಾದ ಶಬ್ದಗಳಿಂದ ಯಜುರ್ವೇದದಲ್ಲಿ ಬಾಯಿ ಹಾಡುಗಾರಿಕೆಯೂ ರೂಢಿಯಲ್ಲಿತ್ತೆಂದು ತಿಳಿಯಬಹುದು. 'ಗೀತ' ಎಂಬುದು 'ಹಾಡುಗಾರಿಕೆ'ಯ ಪಾರಿಭಾಷಿಕ ಪದವಾಗಿ ಯಜುರ್ವೇದದಲ್ಲಿ ಮಾತ್ರ ಬಳಕೆಯಲ್ಲಿತ್ತು21. ಋಗ್ವೇದದಲ್ಲಿ ಇದನ್ನು ಹೇಳಿಲ್ಲ. ಬಾಯಿ ಹಾಡುಗಾರಿಕೆಯ ವಿಷಯವಾಗಿ ಅಪರೂಪದ ಇಂಥ ಕೆಲವು ಸಂಗತಿಗಳನ್ನು ಬಿಟ್ಟರೆ, ಈಗಿನಂತೆ ಆಗ ಜನರ ವಿರಾಮವೇಳೆಯನ್ನು ಕಳೆಯಲು ಸಾಧನವಾಗಿದ್ದಂಥ 'ಬಾಯಿ ಹಾಡುಗಾರಿಕೆ'ಯ ನೇರವಾದ ಉಲ್ಲೇಖ ಯಜುರ್ವೇದದಲ್ಲಿ ಕಾಣಿಸುವುದಿಲ್ಲ. ಹೀಗಿದ್ದರೂ, ಈ ಪ್ರದರ್ಶನಗಳ ಹಿಂದಿದ್ದ ಉದ್ದೇಶವನ್ನು ನಾವು ಅಲ್ಲಗಳೆಯುವಂತಿಲ್ಲ. ಆ ಕಾಲದಲ್ಲಿ ಸಂಗೀತಗಾರರು ಬಹಳ ಮೆಚ್ಚಿಗೆಯನ್ನು ಗಳಿಸಿದ್ದರು. ಅದರಲ್ಲೂ, ಯಾರು ಹಾಡುತ್ತಿದ್ದರೋ ಅವರನ್ನು ಸ್ತ್ರೀಯರು ಪ್ರೀತಿಸುತ್ತಿದ್ದರೆಂದು ಯಜುರ್ವೇದ ತಿಳಿಸುತ್ತದೆ.22

"ಯಾರು ಹಾಡುತ್ತಾರೋ ಅವರಿಗೆ ಅಥವಾ ಕುಟುಂಬದಲ್ಲಿ ಒಬ್ಬರಾದರೂ ಸಂಗೀತಗಾರರು ಇರುವ ಮನೆಗೆ ತಮ್ಮ ಹೆಣ್ಣುಮಕ್ಕಳನ್ನು ಕೊಡುವ" ಪದ್ಧತಿ ಇತ್ತೆಂದು ಯಜುರ್ವೇದದಿಂದ ತಿಳಿದು ಬರುತ್ತದೆ. ಇವುಗಳಿಂದ ಆ ಕಾಲದಲ್ಲಿ ಜನರಿಗೆ ಸಂಗೀತದ ಮೇಲಿದ್ದ ವಿಶೇಷ ಪ್ರೀತಿಯನ್ನೂ ಸಂಗೀತಗಾರರಿಗೆ ಅದರ ಫಲವಾಗಿ ಸಿಗುತ್ತಿದ್ದ ಲಾಭವೆಂತಹದೆಂಬುದನ್ನೂ ಗಮನಿಸಬಹುದು.

ವಿಶೇಷವಾಗಿ ಯಜ್ಞಕಾರ್ಯಗಳಿಂದ (ಯಾಜ್ಞಿಕ) ಕೂಡಿದ್ದರೂ, ಮಾನವಜೀವನದಲ್ಲಿ ಮನೋರಂಜನೆಯ ದೃಷ್ಟಿಯನ್ನೂ ಗಮನದಲ್ಲಿಟ್ಟುಕೊಂಡಿದೆ. ವೈದಿಕ ಸಮಾಜದ ಸಾಂಸ್ಕೃತಿಕ ಚಟುವಟಿಕೆಗಳ ಮೇಲೆ ಕೃಷ್ಣಯಜುರ್ವೇದಕ್ಕಿಂತ ಶುಕ್ಲ ಯಜುರ್ವೇದ ಸ್ವಲ್ಪ ಹೆಚ್ಚು ತೀಕ್ಷ್ಣವಾದ ಬೆಳಕನ್ನು ಚೆಲ್ಲಿದೆ ಎಂಬ ಅಂಶ ಮೇಲಿನ ಹೇಳಿಕೆಯಿಂದ ಸ್ಪಷ್ಟವಾಗುತ್ತದೆ. ಕಡೆಯದಾಗಿ, ಆ ಕಾಲದ ಜನರು ತಮ್ಮ ವಿರಾಮದ ವೇಳೆಯನ್ನು ಉಪಯುಕ್ತವಾಗಿ ಕಳೆಯುತ್ತಿದ್ದರೆಂಬುದು ಇದರಿಂದ ವೇದ್ಯವಾಗುತ್ತದೆ.

(ಅನುವಾದ : ಎನ್. ವಿ. ವಿಮಲ)

---

20 ತೈತ್ತರೀಯ ಸಂಹಿತ (6.1.4)
21 ವಾಜಸನೇಯ ಸಂಹಿತ (30.6)
22 ತೈತ್ತರೀಯ ಸಂಹಿತ (6.1.5)

ಭಾರತದ ರಾಜಕೀಯ ಹಾಗೂ ಪೌರಾಡಳಿತ ವ್ಯವಸ್ಥೆಯಂತೆ ಭಾರತದ ಸಾಮಾಜಿಕ ವ್ಯವಸ್ಥೆಗೂ ಜನಕಲ್ಯಾಣವೇ ಪರಮ ಧರ್ಮವೆಂಬ, ಇಂದ್ರಿಯಭೋಗಗಳ ಜೀವನಕ್ಕಿಂತ ನೈತಿಕ ಪಾರಮಾರ್ಥಿಕ ಜೀವನವೇ ಉತ್ತಮವೆಂಬ, ಪ್ರಗತಿಯನ್ನು ನಿಯಮದೊಂದಿಗೆ ಹೊಂದಿಸಬಲ್ಲ ಸೂತ್ರಗಳೇ ಆಧಾರವಾಗಿದ್ದುವು. ಪ್ರಭುತ್ವದ ಹಕ್ಕುಬಾಧ್ಯತೆಗಳೂ, ಪ್ರಭುತ್ವಕ್ಕೂ ಪ್ರಜೆಗಳಿಗೂ ನಡುವಣ ಸಂಬಂಧಗಳೂ ಮಾತ್ರವೇ ಧರ್ಮವೆನಿಸಿಕೊಳ್ಳುವುದಿಲ್ಲ. ಪ್ರತಿ ವ್ಯಕ್ತಿಯ, ಒಟ್ಟಿನಲ್ಲಿ ಎಲ್ಲ ವ್ಯಕ್ತಿಗಳ, ಹಕ್ಕುಗಳೂ ಕರ್ತವ್ಯಗಳೂ ಇದರಲ್ಲಿ ಸೇರಿವೆ. ರಾಜಕೀಯ ಜೀವನದಂತೆ, ಅಥವಾ ಪೌರಾಡಳಿತ ಜೀವನದಂತೆ, ಸಾಮಾಜಿಕ ಜೀವನ ಕೂಡ ಬಾಳಿನ ಪರಮಗುರಿಯಲ್ಲ. ಸ್ವಧರ್ಮವೇ ಅದರ ಮುಖ್ಯ ಆಧಾರ. ಅದಕ್ಕೆ ಹಕ್ಕುಗಳಿಗಿಂತ ಕರ್ತವ್ಯಗಳೇ ತಳಹದಿ. ಪ್ರಜೆಗಳು ನಿಷ್ಕಾಮಕರ್ಮ ಮನೋಧರ್ಮದಿಂದ ವೈಯಕ್ತಿಕ ಹಾಗೂ ಸಾಮಾಜಿಕ ಕರ್ತವ್ಯಗಳನ್ನು ನಿರ್ವಹಿಸಬೇಕೆಂಬುದು ರಾಜಕೀಯ ಹಾಗೂ ಪೌರಾಡಳಿತದಷ್ಟೇ ಮುಖ್ಯವಾದದ್ದು. ಇವೆರಡೂ ಒಂದಕ್ಕೊಂದು ಪೂರಕ. ಅಷ್ಟೇ ಅಲ್ಲ, ಇದೇ ಸ್ವತಃ ದೇವರ ಆರಾಧನೆ. ಇದೂ ಒಂದು ಮೋಕ್ಷಸಾಧನ. ಸುಸಂಬದ್ಧವೂ ಸುವ್ಯವಸ್ಥಿತವೂ ಆದ ಇಂಥ ಸಮಾಜವು ಅಭ್ಯುದಯದಲ್ಲೂ ನಿಃಶ್ರೇಯಸದಲ್ಲೂ ಪರಿಣಮಿಸುತ್ತದೆ. ವ್ಯಕ್ತಿಯ, ಗೃಹದ, ಸಮಾಜದ ಕರ್ತವ್ಯಗಳಲ್ಲಿ ನಾನಾ ಬಗೆಯ ಸಂಸ್ಕಾರಗಳೇ ಅಲ್ಲದೆ, ವ್ಯಕ್ತಿಗೂ ಗೃಹಕ್ಕೂ ಸಮಾಜಕ್ಕೂ ಸಂಬಂಧಿಸಿ ನಾನಾ ನೈತಿಕ ಆಚರಣೆಗಳೂ ಸೇರಿವೆ. ರಾಜಕೀಯ ಹಾಗೂ ಪೌರಾಡಳಿತ ಕ್ಷೇತ್ರಗಳಂತೆ ವ್ಯಕ್ತಿಯ ಸಂಸಾರದ ಹಾಗೂ ಸಮಾಜದ ಕರ್ತವ್ಯಗಳ ವಿಚಾರದಲ್ಲಿ ದೊರೆಯು ಆಜ್ಞೆಗಳ ಮೂಲಕವೂ, ಸ್ವತಃ ಅವನ್ನು ಆಚರಿಸಿ ತೋರಿಸುವುದರ ಮೂಲಕವೂ ಸದಾ ಜಾಗ್ರತೆಯಿಂದಿರಬೇಕೆಂಬ ನಿಯಮವಿತ್ತು. ಕಾಳಿದಾಸನ 'ರಘುವಂಶ'ದಲ್ಲಿ ದಿಲೀಪ ಮಹಾರಾಜನ ದೃಷ್ಟಾಂತದಿಂದ ಈ ವಿಚಾರ ಸ್ಪಷ್ಟವಾಗಿದೆ. ಅವನ ಪ್ರಜೆಗಳು ಸಾರಥಿಯ ನಿರ್ದೇಶನದಂತೆ ಚಲಿಸುವ ರಥದ ಚಕ್ರಗಳಂತೆ, ಮನುವು ಹಾಕಿಕೊಟ್ಟು ಹಲವರು ಅನುಸರಿಸಿದ ಮಾರ್ಗವನ್ನು ಬಿಟ್ಟು ಒಂದು ಗೆರೆಯೂ ಆಚೀಚೆ ಹೋಗುತ್ತಿರಲಿಲ್ಲವೆಂದು ಹೇಳಿದೆ. ಹೀಗೆ ರಾಜ್ಯತಂತ್ರವೂ ಸಮಾಜತಂತ್ರವೂ ಒಂದನ್ನೊಂದು ಆಧರಿಸಿದ್ದುವು, ಒಂದಕ್ಕೆ ಇನ್ನೊಂದು ಶಕ್ತಿ ನೀಡುತ್ತಿದ್ದುವು[1].

ಸಿ. ಪಿ. ರಾಮಸ್ವಾಮಿ ಅಯ್ಯರ್

---

1 ಯುಗಯಾತ್ರೀ ಭಾರತೀಯ ಸಂಸ್ಕೃತಿ, ಸಂಪುಟ 2, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಪು. 378–9

ಡಾ. ಬಿ. ಜಿ. ಎಲ್. ಸ್ವಾಮಿ

ಕೊಡುಂಬಾಳೂರಿನಲ್ಲಿ ಕನ್ನಡ

1

ಈಗ ಒಂದು ಸಣ್ಣ ಗ್ರಾಮವಾಗಿ ಕುಗ್ಗಿರುವ ಕೊಡುಂಬಾಳೂರು (ತಿರುಚಿನಾಪಳ್ಳಿಯಿಂದ ಸುಮಾರು 30 ಮೈಲಿ) ಶತಮಾನಗಳ ಹಿಂದಿನ ಕಾಲದಲ್ಲಿ ಒಂದು ರಾಜಧಾನಿಯಾಗಿತ್ತು. ಈಗ ಅಲ್ಲಿ ಕಾಣುವ ಗತವೈಭವಗಳಲ್ಲಿ 'ಮೂವರ್ ಕೋಯಿಲ್' ಎಂದು ಬಳಕೆಯಾಗಿರುವ ಮೂರು ಸಣ್ಣ ದೇವಾಲಯಗಳ ಸಮೂಹವೂ ಅದರ ಸುತ್ತುಮುತ್ತಲಿನಲ್ಲಿರುವ ಕೊಳವೂ ಮುಖ್ಯವಾದವು. 'ಮೂರು ದೇವಾಲಯಗಳು' ಒಂದರ ಪಕ್ಕದಲ್ಲೊಂದಿವೆ. ಎರಡು ಮಾತ್ರ ಇದುವರೆಗೂ ಉಳಿದುಕೊಂಡಿವೆ. ಮೂರನೆಯದನ್ನು ಅಸ್ತಿಭಾರದಿಂದ ಮಾತ್ರ ಗುರುತಿಸಬಹುದಾಗಿದೆ.

ಈ ದೇವಾಲಯಗಳಲ್ಲೊಂದರಲ್ಲಿ ಸಂಸ್ಕೃತ ಭಾಷೆಯ ಶಿಲಾಶಾಸನವೊಂದಿದೆ. 1908ರಲ್ಲಿ ಇದನ್ನು ಮೊಟ್ಟಮೊದಲು ಶಾಸನ ಇಲಾಖೆಯವರು ಸಂಪಾದಿಸಿ ಇದರ ತಾತ್ಪರ್ಯವನ್ನು ಒದಗಿಸಿ ಕೊಟ್ಟರು.[1] ಭೂತಿವಿಕ್ರಮಕೇಸರಿ ಎಂಬವನು ಈ ಶಾಸನದ ದಾತೃ. ಇವನು ತನ್ನ ಇಬ್ಬರು ಹೆಂಡತಿಯರ ಹೆಸರಿನಲ್ಲೂ ತನ್ನ ಹೆಸರಿನಲ್ಲೂ ಮೂರು ದೇವಾಲಯಗಳನ್ನು ಕಟ್ಟಿಸಿದ್ದಲ್ಲದೆ. ದೊಡ್ಡ ಮಠವೊಂದನ್ನು ನಿರ್ಮಿಸಿ ಅದನ್ನು ಕಾಳಾಮುಖ–ಶೈವಗುರುವಾದ ವಿದ್ಯಾರಾಶಿಯ ಶಿಷ್ಯ ಮಲ್ಲಿಕಾರ್ಜುನನೆಂಬವನಿಗೆ ದಾನಮಾಡಿದ ವಿವರವನ್ನು ಈ ಶಾಸನ ತಿಳಿಸುತ್ತದೆ. ಈ ಸಂಗತಿಗಳನ್ನು ಹೇಳುವ ಸಂದರ್ಭದಲ್ಲಿ ಭೂತಿವಿಕ್ರಮಕೇಸರಿಯ ತಲೆಮಾರಿನ ಏಳು ಪೂರ್ವಜರನ್ನು ಕುರಿತ ಸಂಕ್ಷಿಪ್ತ ಪ್ರಸ್ತಾಪವೂ ಲಿಖಿತವಾಗಿದೆ. ಪೀಳಿಗೆಯ ಪಟ್ಟಿಯನ್ನು ಮುಂದಿನ ಪುಟದಲ್ಲಿ ಕೊಟ್ಟಿದೆ.

2

ಈ ಪೀಳಿಗೆಯ ವಿಷಯವಾಗಿ ಸಾಕಾದಷ್ಟು ಚರ್ಚೆ ನಡೆದಿದೆ. ವೆಂಕಯ್ಯನವರ ಪ್ರಕಾರ ಕೊಡುಂಬಾಳೂರಿನ ಈ ಅರಸರು ಮರವವಂಶದಲ್ಲಿ ಜನಿಸಿದವರು.[2] ಇವರು 'ಇರುಕ್ಕುವೇಳ್' ಕುಲಕ್ಕೆ ಸೇರಿದವರೆಂಬ ಅಭಿಪ್ರಾಯವೂ ಕೆಲವರಲ್ಲಿದೆ.[3] ಮುತ್ತರೈಯರ್ ಪೀಳಿಗೆಯೊಂದಿಗೂ ಇವರ ಬಾಂಧವ್ಯವನ್ನು ಸೂಚಿಸಲಾಗಿದೆ. ನೀಲಕಂಠ ಶಾಸ್ತ್ರಿ, ವೆಂಕಟಸ್ವಾಮಿ. ಗೋವಿಂದ ಸ್ವಾಮಿ ಮೊದಲಾದವರ ಪ್ರಕಾರ

---

1 *ARIE*,1908, part ii

2 *Ibid.* Para 91

3 *Ibid.*, 1936–37, part ii, para 73; Arokia swamy, M.: A short history of the Vellar basin; Balasubramanyam, S. R.: Early Chola temples

ಗಜಸೈನ್ಯವನ್ನು ಸಂಹರಿಸಿದವನು
(ಹೆಸರು ತಿಳಿಯದು)
|
1 ಪರವೀರಜಿತ್
|
2 ವರತುಂಗ
|
3 ಅತಿವೀರ ಅನುಪಮ
|
4 ಸಂಘಕೃತ್
|
5 ನೃಪಕೇಸರಿ
|
6 ಪರದುರ್ಗಮರ್ದನ
(ವಾತಾಪಿಜಿತ್)
|
7 ಸಮರಾಭಿರಾಮ
(ಯದುವಂಶಕೇತು)
|
8 ಭೂತಿವಿಕ್ರಮಕೇಸರಿ
|
ಪರಾಂತಕವರ್ಮ — ಆದಿತ್ಯವರ್ಮ

ಇವರು 'ವೇಳೀರ್' ವಂಶಕ್ಕೆ ಸೇರಿದವರು.4 ನೀಲಕಂಠಶಾಸ್ತ್ರಿಗಳು 'ಕಳ್ವರ್' ಕುಲದೊಂದಿಗೂ ಇವರ ಸಂಬಂಧವಿರಬಹುದೆಂದು ಸೂಚಿಸಿದ್ದಾರೆ. ಭೂತಿವಿಕ್ರಮಕೇಸರಿಯ ವಂಶಜರಿಗೆ ಹಿಂದೆ ಕೊಡುಂಬಾಳೂರನ್ನು ಆಳುತ್ತಿದ್ದ ರಾಜರಿಗೆ ಈ ನಂಟುಗಳಲ್ಲೊಂದು ಅನ್ವಯವಾಗಬಹುದು. ಅಥವಾ ಇವನಿಂದ ಈಚೆಗೆ ಆಳಿದ ಅರಸುಪೀಳಿಗೆಗಳಲ್ಲೊಂದಕ್ಕೆ ಅನ್ವಯವಾಗಬಹುದು. ಆದರೆ ಭೂತಿವಿಕ್ರಮಕೇಸರಿಗೂ ಈ ಶಾಸನದಲ್ಲಿ ಕಾಣಿಸಿರುವ ಅವನ ಪೂರ್ವಿಕರಿಗೂ ಇದುವರೆಗೆ ಸೂಚಿತವಾಗಿರುವ ನಂಟುಗಳು ಸಮಂಜಸವಾಗಿವೆಯೆ ಎಂಬುದನ್ನು ಇನ್ನೂ ಆಲೋಚಿಸಬೇಕಾಗಿದೆ.

ಈ ಶಾಸನದ ಕಾಲವೂ ಇನ್ನೂ ನಿಷ್ಕರ್ಷೆಯಾಗಬೇಕಾಗಿದೆ. ವೆಂಕಯ್ಯನವರ ಗಣನೆಯಂತೆ ಇದು 10ನೆಯ ಶತಮಾನದ್ದು. ಶಾಸನವನ್ನು ಪರಿಷ್ಕರಿಸಿ. ಅದಕ್ಕೊಂದು ಟಿಪ್ಪಣಿ ಬರೆದು. ಇಂಗ್ಲಿಷ್ ಭಾಷಾಂತರವನ್ನು ಒದಗಿಸಿದ ನೀಲಕಂಠ ಶಾಸ್ತ್ರಿಗಳ ಅಭಿಪ್ರಾಯವೂ ಇದೇ ಆಗಿದೆ. ಇವರ ಹೇಳಿಕೆಗನುಸಾರವಾಗಿ ಶಾಸನದ ಲಿಪಿ 9–10ನೆಯ ಶತಮಾನಗಳಿಗೆ ಸೇರಿದ್ದು: ಭೂತಿವಿಕ್ರಮಕೇಸರಿ ಚೋಳರಸ

---

4 Satyanatha Iyer : *Dynasties of South India in Classical Age*
Nilakantha Sartri, K. A.: *Journal of Oriental Research*, Vol.7 pp.1–10
Venkataswamy: *Narasimhavarman* (*Tamil*)
Govindaswamy: *The role of feudatories in Pallava History*

ನಾದ ಎರಡನೆ ಪರಾಂತಕ(ಸುಂದರ ಚೋಳ)ನ ಸಮಕಾಲಿಕ (ಕ್ರಿ.ಶ. 956–70). ಗೋವಿಂದಸ್ವಾಮಿ ಇದೇ ಅಭಿಪ್ರಾಯವನ್ನು ಎತ್ತಿಹಿಡಿದಿದ್ದಾರೆ.

ಸುಬ್ರಹ್ಮಣ್ಯ ಅಯ್ಯರ್ ಮತ್ತು ವೈದ್ಯನಾಥನ್[5] ಭೂತಿವಿಕ್ರಮಕೇಸರಿಯ ಈಚಿನ ವಂಶಜರ ವೃತ್ತಾಂತವನ್ನು ಪ್ರಸ್ತಾಪ ಮಾಡುವ ಸಂದರ್ಭದಲ್ಲಿ, ಈ ಅರಸನ ಆಳ್ವಿಕೆಯಲ್ಲಿ ಎರಡು ಹಂತಗಳನ್ನು ಗಮನಿಸಿದ್ದಾರೆ : ಯುವರಾಜತ್ವ (ಕ್ರಿ.ಶ. 883–97) ಮತ್ತು ಸ್ವತಂತ್ರ ಆಳ್ವಿಕೆ (ಕ್ರಿ.ಶ. 898–913), ಎಂದರೆ ಭೂತಿವಿಕ್ರಮಕೇಸರಿಯ ಜೀವಿತಕಾಲ ನೀಲಕಂಠ ಶಾಸ್ತ್ರಿಗಳ ಗಣನೆಗಿಂತ ಸುಮಾರು 60 ವರ್ಷ ಹಿಂದೆ ತಳ್ಳಿಹೋಗುತ್ತದೆ. ಭೂತಿವಿಕ್ರಮಕೇಸರಿ ವಿಡೇಲ್ವಿಡುಗು ಮುತ್ತರೈಯನ ಸಮಕಾಲಿಕನೆಂದೂ ಇವನ ಕಾಲ ಕ್ರಿ.ಶ. ಸುಮಾರು 800 ಎಂದೂ ತಿಳಿದಿರುವುದರಿಂದ ಭೂತಿವಿಕ್ರಮಕೇಸರಿಯೂ ಇದೇ ಶತಕದ ಸುಮಾರಿನಲ್ಲಿದ್ದಿರಬೇಕೆಂದೂ ಹೇಳಿದ ರಂಗಸ್ವಾಮಿ ಸರಸ್ವತಿಯವರ[6] ಊಹೆಯನ್ನು ನೀಲಕಂಠಶಾಸ್ತ್ರಿಗಳು ತಳ್ಳಿಹಾಕಿದ್ದಾರೆ.

ಈ ಪಂಡಿತರಾರೂ ಭೂತಿವಿಕ್ರಮಕೇಸರಿಯ ಪೂರ್ವಜರನ್ನು ಕುರಿತ ವಿಚಾರಗಳಿಗೆ ಕೈಹಾಕಿಲ್ಲ. ಮೊಟ್ಟಮೊದಲಿಗೆ ಈ ವಿಷಯವನ್ನು ಚರ್ಚೆಗೆ ಒಳಪಡಿಸಿದವರು ಶರ್ಮನ್ (1924). ಈ ವಂಶದ ಪರದುರ್ಗಮರ್ದನನೂ ಚಾಲುಕ್ಯ ಎರಡನೆಯ ಪುಲಕೇಶಿಯೂ ಪಲ್ಲವ ಮೊದಲನೆ ನರಸಿಂಹ ವರ್ಮನೂ ಸಮಕಾಲಿಕರಾಗಿರಬೇಕೆಂದೂ, ಪರದುರ್ಗಮರ್ದನ ಪಲ್ಲವರಿಗೆ ನೆರವಾಗಿ ನಿಂತು ವಾತಾಪಿ (ಬಾದಾಮಿ) ಯುದ್ಧದಲ್ಲಿ ಅವರ ವಿಜಯಕ್ಕೆ ಕಾರಣನಾದುದರ ಪ್ರಯುಕ್ತ ಇವನಿಗೆ 'ವಾತಾಪಿ ಜಿತ್' ಎಂಬ ಬಿರುದು ದತ್ತವಾಗಿರಬೇಕೆಂದೂ ಅಭಿಪ್ರಾಯಪಟ್ಟರು. ಅಲ್ಲದೆ, ಭೂತಿವಿಕ್ರಮಕೇಸರಿಯಿಂದ ದಾನಪಡೆದ ಕಾಳಾಮುಖ ಮಲ್ಲಿಕಾರ್ಜುನನ ಗುರುವಾದ ವಿದ್ಯಾರಾಶಿಯೂ ತಗಡೂರು ಶಾಸನದಲ್ಲಿ[7] ಪ್ರಸ್ತಾಪಿತನಾಗಿರುವ ಅದೇ ಹೆಸರಿನ ಗುರುವೂ ಒಂದೇ ಎಂದು ಗಣಿಸಿ, ತಗಡೂರಿನ ಶಾಸನ 8ನೆಯ ಶತಮಾನದ್ದಾದುದರಿಂದ ಭೂತಿವಿಕ್ರಮಕೇಸರಿಯ ಕಾಲವೂ ಇದೇ ಆಗಿರಬೇಕೆಂದು ಸೂಚಿಸಿದರು.

ಈ ಅಭಿಪ್ರಾಯಗಳ ಅರಿವಿಲ್ಲದೆಯೋ ಅಥವಾ ಅರಿವಿದ್ದೂ ಅವನ್ನು ನಿರ್ಲಕ್ಷಿಸಿಯೋ ಹೀರಸ್ ಅವರು ಪರದುರ್ಗಮರ್ದನನನ್ನೂ ಇವನ ಮಗ ಸಮರಾಭಿರಾಮನನ್ನೂ ಪಲ್ಲವ ಮೊದಲನೆಯ ನರಸಿಂಹವರ್ಮನ ಸಮಕಾಲಿಕರನ್ನಾಗಿ ಎಣಿಸಿ ಈ ಮೂವರೂ ವಾತಾಪಿಯುದ್ಧದ ವಿಜಯಕ್ಕೆ ಕಾರಣರಾದರೆಂದು ಪ್ರತಿಪಾದಿಸಿದರು.[8] ಆದುದರಿಂದ ಈ ತಲೆಮಾರಿನಲ್ಲಿ ಹುಟ್ಟಿದ ಭೂತಿವಿಕ್ರಮಕೇಸರಿ ಕ್ರಿ.ಶ. 7ನೆಯ ಶತಕದಲ್ಲಿ ಜೀವಿಸಿದ್ದಿರಬೇಕೆಂದು ಒತ್ತಿಹೇಳಿದರು.

ವೆಂಕಟಸ್ವಾಮಿಯವರ ಸಂಶೋಧನೆಯಿಂದ ಪರದುರ್ಗಮರ್ದನನ ತಂದೆಯಾದ ನೃಪಕೇಸರಿಯ ವಿಷಯವೂ ಸ್ವಲ್ಪ ತಿಳಿದುಬಂದಿದೆ. ಸಂಘಕೃತ್ (ಜೀಳಿಗೆ ಪಟ್ಟಿ, ನಂ. 4 ನೋಡಿ) ಪಲ್ಲವರೊಂದಿಗೆ ಸ್ನೇಹ ಬೆಳೆಸಿದ್ದನೆಂದೂ ಪಲ್ಲವ ಮೊದಲನೆ ಮಹೇಂದ್ರವರ್ಮನ ಆಶ್ರಯದಲ್ಲಿ ತನ್ನ ಮಗನಾದ ನೃಪಕೇಸರಿಯನ್ನು ಬೆಳೆಯಬಿಟ್ಟಿದ್ದನೆಂದೂ ತರ್ಕಿಸಿದ್ದಾರೆ.

ಇಷ್ಟಾದರೂ ಶಾಸನೋಕ್ತವಾಗಿರುವ ಭೂತಿವಿಕ್ರಮಕೇಸರಿಯ ಪೂರ್ವಿಕರು ಕೊಡುಂಬಾಳೂರಿನಲ್ಲಿಯೇ ಆಳಿದ ತಮಿಳು ವಂಶದವರೆ, ಅಥವಾ ಹೊರನಾಡಿನಿಂದ ಬಂದು ನೆಲಸಿದ ಇತರ ಭಾಷೆಯವರೆ ಎಂಬ ವಿಚಾರಗಳನ್ನು ಯಾರೂ ಅಧ್ಯಯನಕ್ಕೆ ಅರಿಸಿಕೊಂಡಿಲ್ಲ. 'ಮೂವರ್ ಕೋಯಿಲಿನ' ಶಾಸನವನ್ನು ಕುರಿತು ಚರ್ಚೆ ಮಾಡಿರುವವರೆಲ್ಲರೂ ಭೂತಿವಿಕ್ರಮಕೇಸರಿಯನ್ನೂ ಅವನ ಈಚಿನ ಸಂತತಿಯನ್ನೂ ತಮಿಳು ಸಂತತಿಯವರೆಂದೇ ಪ್ರಥಮತಃ ಭಾವಿಸಿರುವವರಾದ್ದರಿಂದ ಅವರ ಪೂರ್ವೋತ್ತರಗಳನ್ನು

---

5 *Quarterly Journal of the Mythic Society*, Vol. 43, pp. 79–94

6 *Journal of Oriental Research*, Vol. 7, pp. 1–10

7 S II. Vol. VII, No. 535

8 The victory of Bhutivikramakesari over the Pallavas, *Journal of Roy. Asiatic Society* (*Lond.*), pp. 33–44

ಕುರಿತ ಚರ್ಚೆ ಅನಾವಶ್ಯಕವೆಂದು ಅಭಿಪ್ರಾಯಪಟ್ಟಿದ್ದಾರೆಯೋ ಏನೋ. ಆದರೆ ದಕ್ಷಿಣ ಭಾರತದ ಚರಿತ್ರೆಯ ದೃಷ್ಟಿಯಿಂದ ಇದು ಬಹು ಮುಖ್ಯವಾದ ವಿಚಾರ. ಈ ಶಾಸನದಲ್ಲೆಲ್ಲಿಯೂ ಭೂತಿವಿಕ್ರಮ ಕೇಸರಿಯಾಗಲಿ, ಅದರಲ್ಲಿ ಉಕ್ತರಾಗಿರುವ ಅವನ ಪೂರ್ವಿಕರಾಗಲಿ ಕೊಡುಂಬಾಳೂರಿನಲ್ಲಿಯೇ ಇದ್ದವರೆಂಬ ಹೇಳಿಕೆಯೂ ಇಲ್ಲ. ಇದಕ್ಕನುಗುಣವಾದಂಥ ಸೂಚನೆಗಳೂ ಇಲ್ಲ. ಪ್ರತಿಯಾಗಿ "ವಿಕ್ರಮ ಕೇಸರಿ ಕೊಡುಂಬಾಳೂರಿನ ದುರ್ಗವನ್ನು ಹೊಕ್ಕನು" ಎಂದು ಸ್ಪಷ್ಟವಾಗಿ ಹೇಳಲಾಗಿದೆ. ಹೀಗಾಗಿ ಭೂತಿವಿಕ್ರಮಕೇಸರಿ ಎಲ್ಲಿಯವನು, ಅವನ ಪೂರ್ವಿಕರ ಕುಲವೃತ್ತಾಂತಗಳೇನು ಎಂಬ ಪ್ರಶ್ನೆಗಳಿಗೆ ಸಮಾಧಾನವೀಯಬೇಕಾಗಿದೆ.

3

ಕೊಡುಂಬಾಳೂರನ್ನು ಕುರಿತ ಇನ್ನೊಂದು ಸಂಗತಿಯನ್ನೂ ಇಲ್ಲಿ ಗಮನಿಸಬೇಕು. ಮುಚುಕುಂದೇಶ್ವರನ ದೇವಾಲಯ ಗತವೈಭವದ ಕುರುಹುಗಳಲ್ಲಿ ಇನ್ನೊಂದು. ಇದರೆದುರಿಗೆ ಕೊಳವೊಂದಿದೆ: ಕಲ್ಲಿನ ಮೆಟ್ಟಿಲುಗಳಿರುವಲ್ಲಿ ಶಾಸನದ ಬಿಡಿತುಣುಕುಗಳು ಕಂಡುಬಂದಿವೆ. ಲಿಪಿ ಕನ್ನಡದ್ದು ಎಂದು ಒಪ್ಪಿಕೊಳ್ಳಲಾಗಿದೆ. ಈ ತುಣುಕುಗಳಲ್ಲೊಂದು 'ಅತ್ರಿ' ಎಂಬ ಪದವನ್ನೂ9 ಇನ್ನೊಂದು 'ಕೊಡುಂಬಾಳೂರು', '[ವಿಕ್ರಮ] ಕೇಸರೀಶ್ವರ' ಎಂಬ ಪದಗಳನ್ನೂ ಒಳಗೊಂಡಿದೆ10. ಮೊದಲನೆಯ ಪದ ಯಾವುದೋ ಶಾಸನದ ಆರಂಭವಾಗಿರಬೇಕು, ಇಲ್ಲವೆ ಕಾಳಾಮುಖಗುರುವಾದ ಮಲ್ಲಿಕಾರ್ಜುನನ ಗೋತ್ರವನ್ನು ಕುರಿತು ಹೇಳುವ ಪ್ರಸಂಗಕ್ಕೆ ಸಂಬಂಧಿಸಿರಬೇಕು. ಈತ 'ಅತ್ರಿ' ಗೋತ್ರದವನೆಂದು ಭೂತಿಕ್ರಮ ಕೇಸರಿಯ ಸಂಸ್ಕೃತ ಶಾಸನದಿಂದ ವ್ಯಕ್ತವಾಗಿದೆ. ಎರಡನೆಯದು ಭೂತಿವಿಕ್ರಮಕೇಸರಿ ಕೊಡುಂಬಾಳೂರಿನಲ್ಲಿ ಕಟ್ಟಿಸಿದ 'ಮೂವರ್ ಕೋಯಿಲ್'ನದೋ ಇಲ್ಲವೆ ಬೇರೊಂದು ದೇವಾಲಯದ್ದೋ ಹೆಸರಾಗಿರಬೇಕು. ಇವನ ಸಂಸ್ಕೃತ ಶಾಸನಕ್ಕೂ ಈ ಎರಡು ಕನ್ನಡ ಶಾಸನದ ತುಣುಕುಗಳಿಗೂ ಪರಸ್ಪರ ಸಂಬಂಧವಿರಬಹುದೆಂಬುದನ್ನು ಗಮನದಲ್ಲಿಟ್ಟುಕೊಳ್ಳತಕ್ಕದ್ದು.

4

ಕಾಳಾಮುಖವೆಂಬ ಶೈವಮತಶಾಖೆ 10ರಿಂದ 13ನೆಯ ಶತಕಗಳ ವರೆಗೆ, ಮುಖ್ಯವಾಗಿ ಕನ್ನಡದೇಶದಲ್ಲಿ, ಪ್ರಾಬಲ್ಯದಲ್ಲಿದ್ದ ಸಮಯ. ಆದರೆ ಈ ಮತದ ಅಂಕುರಗಳು 8–9ನೆ ಶತಕಗಳಲ್ಲಿಯೇ ಇದ್ದಿರಬೇಕೆಂಬುದಕ್ಕೆ ಶಾಸನಕುರುಹುಗಳೂ ಸಾಹಿತ್ಯಕುರುಹುಗಳೂ ಸಾಕಷ್ಟಿವೆ. ಆದರೆ ಇದಕ್ಕೂ ಹಿಂದೆಯೇ—ಎಂದರೆ, ಬಾದಾಮಿಯ ಚಾಳುಕ್ಯರ ಕಾಲದಲ್ಲಿಯೇ—ಈ ಮತ ಪಾಶುಪತದಿಂದ ಕವಲೊಡೆದಿದ್ದಿರಬೇಕೆಂಬ ಊಹೆಗೆ ಅವಕಾಶವಿದೆ. ಭೂತಿವಿಕ್ರಮಕೇಸರಿಯಿಂದ ಬೃಹನ್ಮಠವೊಂದನ್ನು, 50 ಸಂನ್ಯಾಸಿಗಳ ಆಹಾರಭೋಗಕ್ಕಾಗಿ 11 ಗ್ರಾಮಗಳನ್ನು ದಾನವಾಗಿ ಪಡೆದ ಮಲ್ಲಿಕಾರ್ಜುನ ಕನ್ನಡ ನಾಡಿನಲ್ಲಿ ಹುಟ್ಟಿ ಬೆಳೆದ ಕಾಳಾಮುಖ ಸಮಯದ ಆಚಾರ್ಯನಾಗಿದ್ದನೆಂಬುದನ್ನು ಮರೆಯತಕ್ಕದ್ದಲ್ಲ.

5

'ಮೂವರ್ ಕೋಯಿಲ್'ನ ಸಂಸ್ಕೃತಶಾಸನದಲ್ಲಿ ಉಕ್ತವಾಗಿರುವ ರಾಜರ ಹೆಸರುಗಳು (ಬಹುಶಃ ಭೂತಿವಿಕ್ರಮಕೇಸರಿಯೊಬ್ಬನನ್ನುಳಿದು) ಅವರವರ ವೈಯಕ್ತಿಕ ಹೆಸರುಗಳಲ್ಲವೆಂಬುದೂ ಅವು ಅವರ ಅನ್ವಯನಾಮಗಳೆಂಬುದೂ ಶಾಸನದ ರೀತಿನೀತಿವೈಶಿಷ್ಟ್ಯಗಳಿಂದ ಸ್ಪಷ್ಟವಾಗುತ್ತದೆ. ಪಶ್ಚಿಮ (ತಲಕಾಡು) ಗಂಗವಂಶದ ಭೂವಿಕ್ರಮ (ಕ್ರಿ.ಶ. 669–679) ವಿಲಂದೆ ಎಂಬ ಊರಿನಲ್ಲಿ ಪಲ್ಲವರನ್ನು ಎದುರಿಸಿ ಹೋರಾಡಿ ಶತ್ರುವನ್ನು ಅವನ ಕೋಟೆಯೊಳಕ್ಕೆ ದೂಡಿ, ಅವನ ಸ್ತ್ರೀಪರಿವಾರವನ್ನು ಸೆರೆಹಿಡಿದು—ಬಹುಶಃ ಸ್ವಲ್ಪ ಕಾಲಾನಂತರ ಬಿಡುಗಡೆ ಮಾಡಿ—ಅವನ ರಾಜ್ಯವನ್ನು ಆಕ್ರಮಿಸಿ

---

9 *Inscriptions from Pudukottai State*, No. 1087

10 *Ibid*. No. 1086

ಕೊಂಡ11. ಈ ಕದನ ಯಾವ ವರ್ಷದಲ್ಲಿ ನಡೆಯಿತೆಂದು ನಿರ್ಣಯಿಸುವುದು ಸದ್ಯಕ್ಕೆ ಸಾಧ್ಯವಿಲ್ಲ. ಆದರೆ ಗಂಗರು ಚಾಳುಕ್ಯರಿಗೆ ಅಧೀನರಾಗಿದ್ದ ಕಾಲದಲ್ಲಿ ಇದು ನಡೆದಿರಬಹುದಾಗಿದೆ. ಗದ್ವಾಲ ತಾಮ್ರ ಪತ್ರಗಳು12 ಮೊದಲನೆಯ ವಿಕ್ರಮಾದಿತ್ಯ ಚೋಳನಾಡಿನ ಉರಗಪುರದಲ್ಲಿ (ಈಗಿನ ಉರೈಯೂರು ತಿರುಚಿನಾಪಳ್ಳಿ ಜಿಲ್ಲೆ) ಕ್ರಿ.ಶ. 674ರಲ್ಲಿ ಬೀಡುಬಿಟ್ಟಿದ್ದನೆಂದೂ ಆಗ ಪಲ್ಲವರೊಂದಿಗೆ ಹೋರಾಟ ನಡೆಸುತ್ತಿದ್ದನೆಂದೂ ತಿಳಿಸುತ್ತವೆ. ಭೂವಿಕ್ರಮ ಮೊದಲನೆಯ ವಿಕ್ರಮಾದಿತ್ಯನಿಗೆ ಅನುವಾಗಿ ನಿಂತು ಪಲ್ಲವ ಈಶ್ವರ ಪೋತವರ್ಮನನ್ನು (ಮೊದಲನೆಯ ಪರಮೇಶ್ವರ ವರ್ಮ) ವಿಲಂದೆಯ ಕದನದಲ್ಲಿ ಗೆಲ್ಲಲು ಸಹಾಯ ಮಾಡಿದ್ದಿರಬೇಕು. ಕೊಡುಂಬಾಳೂರಿನ ಶಿಲಾಲೇಖನದಲ್ಲಿ ಉಕ್ತವಾಗಿರುವ ಪ್ರಸ್ತಾಪ ಈ ಕದನವನ್ನು ಕುರಿತದ್ದಾಗಿರಬೇಕು: "ಪಲ್ಲವರ ಸೈನ್ಯದ ರಕ್ತದಿಂದ ಕಾವೇರಿಯ ನೀರು ಕೆಂಪಾಯಿತು."

ಭೂತಿವಿಕ್ರಮಕೇಸರಿ. ವೀರಪಾಂಡ್ಯನೆಂಬೊಬ್ಬನನ್ನು ಕದನದಲ್ಲಿ ಸೋಲಿಸಿದನೆಂದೂ, ವಂಜಿಯ ಅರಸನನ್ನು ಕೊಂದನೆಂದೂ ಕೊಡುಂಬಾಳೂರಿನ ಶಾಸನ ತಿಳಿಸುತ್ತದೆ. ಈ ಘಟನೆಗಳೂ ಮೇಲೆ ಹೇಳಿದ ಪಲ್ಲವರಿಗೆದುರಾಗಿ ಹೂಡಿದ ಕದನವೂ ಭೂತಿವಿಕ್ರಮಕೇಸರಿ ಕೊಡುಂಬಾಳೂರನ್ನು ಆಕ್ರಮಿಸಿ ಕೊಳ್ಳುವ ಮುನ್ನವೇ ನಡೆದಿರಬೇಕು. ಭೂತಿವಿಕ್ರಮನ ಪಾಂಡ್ಯಶತ್ರು ಯಾರಿದ್ದಿರಬಹುದು ಎಂಬು ದನ್ನು ನಿರ್ಣಯಿಸುವುದು ಕಷ್ಟ. ಚೋಳರಸ ಎರಡನೆಯ ಆದಿತ್ಯನೊಂದಿಗೆ ಯುದ್ಧ ಮಾಡಿದ ವೀರ ಪಾಂಡ್ಯನೇ ಇವನಿದ್ದಿರಬೇಕೆಂದು ವೆಂಕಯ್ಯ13 ಸೂಚಿಸಿದರು; ನೀಲಕಂಠಶಾಸ್ತ್ರಿ ಇದನ್ನು ಅನು ಮೋದಿಸಿದ್ದಾರೆ.14 ಈ ವೀರಪಾಂಡ್ಯ "ಮೂರನೆಯ ರಾಜಸಿಂಹನ ಪೂರ್ವಜನಾಗಿದ್ದಿರಬೇಕು, ಇಲ್ಲವೆ ಸಮಕಾಲಿಕನಾಗಿದ್ದಿರಬೇಕು" ಎಂಬುದು ಸುಬ್ರಹ್ಮಣ್ಯ ಅಯ್ಯರ್ ಮತ್ತು ವೈದ್ಯನಾಥನ್ ಅವರ ಅಭಿಪ್ರಾಯ.15 ಈ ಪಂಡಿತರೆಲ್ಲರೂ 'ವೀರಪಾಂಡ್ಯ' ಎಂಬ ಹೆಸರನ್ನು ಪಾಂಡ್ಯರಸನೊಬ್ಬನ ವೈಯಕ್ತಿಕ ನಾಮವೆಂಬ ಕಲ್ಪನೆಯಿಂದ ತಮ್ಮ ತಮ್ಮ ತೀರ್ಮಾನಗಳನ್ನು ಸೂಚಿಸಿದ್ದಾರೆ. ಆದರೆ ಈ ಕಲ್ಪನೆಗೆ ತಳಹದಿಯಿಲ್ಲ. 'ವೀರಪಾಂಡ್ಯ' ಎಂಬ ಪದಕ್ಕೆ 'ವೀರನಾದ ಪಾಂಡ್ಯ' ಎಂದು ತಾತ್ಪರ್ಯಮಾಡು ವುದು ಈ ಸಂದರ್ಭದಲ್ಲಿ ಉಚಿತವಾಗಿದೆ. ಹೀಗಿಟ್ಟುಕೊಂಡರೆ, ಸುಬ್ರಹ್ಮಣ್ಯ ಅಯ್ಯರವರೂ ವೈದ್ಯ ನಾಥನ್ ಅವರೂ ಹೇಳುವಂತೆ, ಈ ಪಾಂಡ್ಯ "ಪಾಂಡ್ಯರ ಉಪಶಾಖೆಗಳಲ್ಲೊಂದಕ್ಕೆ ಸೇರಿದವನೋ, ಇಲ್ಲವೆ ಮುಖ್ಯ ಕಾಂಡಕ್ಕೆ ಸೇರಿದ ಸಾಮಂತಕರಲ್ಲೊಬ್ಬನೋ ಆಗುತ್ತಾನೆ." ಇವನ ಆಳ್ವಿಕೆಯ ವಿಸ್ತಾರ ದಿಂಡಿಗಲ್ಲಿನ (ಮಧುರೆ ಜಿಲ್ಲೆ) ಉತ್ತರ ದಿಕ್ಕಿನ ಸ್ವಲ್ಪ ಭಾಗವನ್ನು ಒಳಗೊಂಡಿದ್ದು, ಚಾಲುಕ್ಯರ ಯುದ್ಧ ಭೂಮಿಯ ಸರಹದ್ದಿನಲ್ಲಿ ಸಿಕ್ಕಿಕೊಂಡಿದ್ದಿರಬೇಕು.

ಭೂತಿವಿಕ್ರಮ ವಂಜಿಯ ಅರಸನೊಬ್ಬನನ್ನು ಕೊಂದನೆಂದು ಶಾಸನ ಹೇಳುತ್ತದೆಯಷ್ಟೆ ? ಈ ವಂಜಿಯೇ ಈಗಿನ ಕರೂರು. ಚಾಳುಕ್ಯರು ಪಲ್ಲವರಿಗೆದುರಾಗಿ ಹೋರಾಟ ನಡೆಸಿದ ಹರವಿನಲ್ಲಿಯೋ —ಚೋಳಿಕ ವಿಷಯದಲ್ಲಿಯೋ—ಈ ಸ್ಥಳವೂ ಒಳಪಟ್ಟಿತ್ತು. ಪಲ್ಲವರ ಪರವಾಗಿ ಈ ಸ್ಥಳದಿಂದ ಮೇಲ್ವಿಚಾರಣೆಯನ್ನೋ ಆಳ್ವಿಕೆಯನ್ನೋ ನಡೆಸುತ್ತಿದ್ದ ಸಾಮಂತನೊಬ್ಬ ಭೂತಿವಿಕ್ರಮನ ಕತ್ತಿಗೆ ತುತ್ತಾಗಿರಬೇಕು.

ಗಂಗರ ವಂಶಾವಳಿಯಲ್ಲಿ ಭೂತಿವಿಕ್ರಮನ ತಂದೆ ಶ್ರೀವಿಕ್ರಮ. ಈ ಮನೆತನದ ಶಾಸನಗಳಿಂದ ಇವನು ಚೋಳವಂಶದ ಹೆಣ್ಣನ್ನು ಮದುವೆಯಾಗಿದ್ದನೆಂದು ತಿಳಿಯುತ್ತದೆ. ಇದೇ ನಂಟನ್ನು ಭೂತಿ ವಿಕ್ರಮನ ತಂದೆಯಾದ 'ಸಮರಾಭಿರಾಮ'ನಿಗೂ ಕೊಡುಂಬಾಳೂರು ಶಾಸನ ಹೇಳುತ್ತದೆ. ಶ್ರೀ ವಿಕ್ರಮ ಅನೇಕ ಪ್ರದೇಶಗಳನ್ನು ಗೆದ್ದು ಅಗಣಿತ ಸಾಮಂತರಾಜರನ್ನು ತನ್ನ ಅಧೀನಕ್ಕೆ ಒಳಪಡಿಸಿ

---

11 *Ep. Carn.* vol. XII, Tm 23
12 *Ep. Indica.* Vol. X, No. 22
13 *S* II 1908, part ii, p. 85
14 *Journal of Oriental Research*, vol. 7, pp. 1-10
15 *Quarterly Journal of the Mythic Society*, vol. 43, pp. 79–94

ಕೊಂದಿದ್ದ[16]. 'ಸಮರಾಭಿರಾಮ'ನೆಂಬ ಅನ್ವಯವೂ ಈ ವೀರಕಾರ್ಯಗಳನ್ನೇ ಸೂಚಿಸುವುದಾಗಿದೆ. 'ಸಮರಾಭಿರಾಮ' 'ಚ[ಲು]ಕ್ಕಿ'ಯೊಬ್ಬನನ್ನು ಅಧಿರಾಜಮಂಗಲದ ಕದನದಲ್ಲಿ ಕೊಂದನೆಂದು ಕೊಡುಂಬಾಳೂರು ಶಾಸನ ತಿಳಿಸುತ್ತದೆ. ಈ ಶಾಸನಭಾಗದ ಲಿಪಿ ಸ್ಪಷ್ಟವಾಗಿಲ್ಲವೆಂಬುದನ್ನು ಮೊದಲು ಗಮನಿಸಬೇಕು. 'ಲು' ಅಕ್ಷರವನ್ನು ನೀಲಕಂಠಶಾಸ್ತ್ರಿಗಳು—ಸ್ವಲ್ಪ ಹಿಂಜರಿಕೆಯಿಂದಲೇ—ಪ್ರಕ್ಷೇಪ ಮಾಡಿಕೊಂಡಿದ್ದಾರೆ. ರಾಷ್ಟ್ರಕೂಟರು 9ನೆಯ ಶತಮಾನದಲ್ಲಿ ತಮಿಳುನಾಡನ್ನು ಆಕ್ರಮಿಸಿಕೊಂಡಿದ್ದಾಗ ಅಧಿರಾಜಮಂಗಲದ ಕದನ ನಡೆದಿರಬೇಕೆಂದೂ ಈ ಸಂದರ್ಭದಲ್ಲಿ ರಾಷ್ಟ್ರಕೂಟರು ಚಾಲುಕ್ಯ ವಂಶಕ್ಕೆ ಸೇರಿದವನೊಬ್ಬನನ್ನು ತಮ್ಮ ಕಡೆ ಸೇನಾನಿಯಾಗಿಟ್ಟುಕೊಂಡಿದ್ದಿರಬೇಕೆಂದೂ ಇವನೇ ಅಧಿರಾಜಮಂಗಲದ ಕದನದಲ್ಲಿ 'ಸಮರಾಭಿರಾಮ'ನಿಂದ ಹತನಾಗಿರಬೇಕೆಂದೂ ವಾದಿಸಿದ್ದಾರೆ. ಹೀರಸ್, ವೆಂಕಟಸಾಮಿ ಮೊದಲಾದವರು ಈ ವಾದಕ್ಕೆ ಆಧಾರವಿಲ್ಲವೆಂದು ಅದನ್ನು ನಿರಾಕರಿಸಿದ್ದಾರೆ.

ಈ ಸಂದರ್ಭದಲ್ಲಿ ಹತನಾದವನು ಚಾಳುಕ್ಯನೆಂಬ ಭಾವನೆ ಸರಿಯಾದುದೆಂದು ಗಣಿಸಿದರೂ, ಅಧಿರಾಜಮಂಗಲವಾವುದು ಎಂಬುದನ್ನು ವಿಚಾರಮಾಡಬೇಕಾಗಿದೆ. ತಿರುಚಿನಾಪಳ್ಳಿ ಜಿಲ್ಲೆಯಲ್ಲಿರುವ ಪೆರುಮಬಿನಲ್ಲೂರು ಅಧಿರಾಜಮಂಗಲದ ತಮಿಳು ಮೂಲವಿರಬೇಕೆಂದು ನನಗೆ ತೋರುತ್ತದೆ. ಚಾಳುಕ್ಯಪಲ್ಲವ ಕದನಗಳು ನಡೆಯುತ್ತಿದ್ದ ಪ್ರದೇಶ 'ಚೋಳಿಕ ವಿಷಯ'ವಾದುದರಿಂದ ಈ ಸೂಚನೆ ಸಮಂಜಸವಾಗಿದೆಯೆಂದು ನನ್ನ ಜಿಸ್ನ್ಯಪ. ಈ ಸಂದರ್ಭದಲ್ಲಿ ಚಾಳುಕ್ಯರು ಒಂದು ಕಡೆ ಪಲ್ಲವರಿಗೆದುರಾಗಿ ಯುದ್ಧ ಮಾಡುತ್ತಿದ್ದರಲ್ಲದೆ, ಇನ್ನೊಂದು ಕಡೆ 'ಚೋಳಿಕ ವಿಷಯ'ದ ಎಲ್ಲೆಯೊಳಕ್ಕೂ ನುಗ್ಗುವ ಸನ್ನಾಹದಲ್ಲಿದ್ದರೆಂಬುದನ್ನು ಮರೆಯಬಾರದು. 'ಸಮರಾಭಿರಾಮ' ಚೋಳ ವಂಶದ ಮಗಳಾದ ಅನುಪಮಾ ಎಂಬಾಕೆಯನ್ನು ವರಿಸಿದ್ದನಾದುದರಿಂದ, ಇವನು ಚೋಳರ ಪರವಾಗಿ ಚಾಳುಕ್ಯರನ್ನು ಎದುರಿಸಿ ಶತ್ರುಗಳಲ್ಲೊಬ್ಬನನ್ನು ಕೊಂದಿರಲು ಸಾಧ್ಯ.

'ಸಮರಾಭಿರಾಮ'ನ ತಂದೆಯಾದ 'ಪರದುರ್ಗಮರ್ದನ'ನನ್ನು 'ವಾತಾಪಿಜಿತ್' ಎಂದು ಕೊಡುಂಬಾಳೂರು ಶಾಸನ ವರ್ಣಿಸಿದೆ. ದಕ್ಷಿಣ ಭಾರತ ಚರಿತ್ರೆಯಲ್ಲಿ ಕಾಣಿಸಿಕೊಳ್ಳುವ ವಾತಾಪಿ (ಬಾದಾಮಿ) ಪಶ್ಚಿಮ ಚಾಳುಕ್ಯರ ರಾಜಧಾನಿ. ಇದು ಮೂರು ಸಲ ಕೈಬದಲಾವಣೆಗೊಳಗಾಯಿತು: ಮೊದಲನೆಯದಾಗಿ, ಪಲ್ಲವ ಮೊದಲನೆಯ ನರಸಿಂಹವರ್ಮ ಕ್ರಿ.ಶ. 643/4 ರಲ್ಲಿ ಆಕ್ರಮಿಸಿಕೊಂಡಾಗ: ಎರಡನೆಯದಾಗಿ, ಚಾಳುಕ್ಯ ಅರಸರು 10–12 ವರ್ಷಗಳ ಅನಂತರ ಅದನ್ನು ಹಿಂತಿರುಗಿಸಿಕೊಂಡಾಗ: ಮೂರನೆಯದಾಗಿ, ಕ್ರಿ.ಶ. ಸುಮಾರು 679ರಲ್ಲಿ ಪಲ್ಲವ ಪರಮೇಶ್ವರವರ್ಮ ಅದನ್ನು ಎರಡನೆಯ ಸಲ ಹಿಡಿದುಕೊಂಡಾಗ. 'ಪರದುರ್ಗಮರ್ದನ' ಈ ಸಂದರ್ಭಗಳೊಂದರಲ್ಲಿ ಮುಖ್ಯವಾದ ಹೊಣೆಯನ್ನು ಹೊತ್ತಿದ್ದನಾದುದರಿಂದ 'ವಾತಾಪಿಜಿತ್' ಎಂಬ ಬಿರುದನ್ನು ಗಳಿಸಿಕೊಂಡಿರಬೇಕು. ವಿಷಯ ಪರಿಸ್ಥಿತಿ ಹೀಗಿರುವುದರಿಂದ 'ಪರದುರ್ಗಮರ್ದನ'ನನ್ನು ವಾತಾಪಿ ಕದನಗಳ ಕಾಲಪರಿಧಿಯಿಂದ ಹೊರಗಿಡುವುದು ಸಾಧ್ಯವಿಲ್ಲ.

ಗಂಗರ ವಂಶಾವಳಿಯಲ್ಲಿ 'ಪರದುರ್ಗಮರ್ದನ'ನಿಗೆ ಸರಿಹೊಂದುವ ಅರಸು ಮುಷ್ಕರ. ಇಲ್ಲವೆ ಪೊಲವೀರ. ಇವರಿಬ್ಬರೂ ದುರ್ವಿನೀತನ ಮಕ್ಕಳೆಂಬ ವಿಷಯದಲ್ಲಿ ಅಭಿಪ್ರಾಯಭೇದಗಳಿಲ್ಲವಾದರೂ, ಹಿರಿಯನಾರು ಕಿರಿಯನಾರು ಎಂಬುದನ್ನು ನಿಶ್ಚಿತವಾಗಿ ನಿರ್ಣಯಿಸಲು ಅಗತ್ಯವಾದ ಆಧಾರಗಳು ನಮ್ಮಕ್ಕೆ ದೊರೆತಿಲ್ಲ. ಅಷ್ಟೇ ಅಲ್ಲದೆ, ಇವರಿಬ್ಬರ ತಾಯಿಂದಿರೂ ಒಬ್ಬಾಕೆಯೇ ಅಥವಾ ಬೇರೆಬೇರೆಯೇ ಎಂಬ ಸಂದೇಹವೂ ಉಳಿದುಕೊಂಡಿದೆ. ವಾತಾಪಿ ಪ್ರಸಂಗಕ್ಕೆ ಹೊಂದಿಕೊಳ್ಳುವ ಆಳ್ವಿಕೆ ಪೊಲವೀರನದಾಗಿರುವುದರಿಂದ, ಇದಕ್ಕೆ ಸಂಬಂಧಿಸಿದ ಕದನದಲ್ಲಿ ಮುಖ್ಯಪಾತ್ರವಹಿಸಿದವನು ಇವನೇ ಇರಬೇಕೆಂದು ಸಿದ್ಧವಾಗುತ್ತದೆ. ಅಲ್ಲದೆ, 'ಪೊಲವೀರ' ಮತ್ತು 'ಪರದುರ್ಗಮರ್ದನ' ಎಂಬೆರಡು ಹೆಸರುಗಳ ಅರ್ಥಸಾದೃಶ್ಯವನ್ನೂ ಗಮನಿಸಬೇಕು. ಕಾಡುವೆಟ್ಟಿಯೂ ಪಲ್ಲವನೂ ಪೊಲವೀರನಿಗೆ ಕೊಂಗಣಿ ಪಟ್ಟವನ್ನು ಕಟ್ಟಿದರು[17]. ವಾತಾಪಿ ಕದನದಲ್ಲಿ ಇವನು ವಹಿಸಿದ ಪಾತ್ರಕ್ಕೆ ಈ

---

16 *MAR*, 1933

17 *Ep. Carn*., vol. VI, ಚಿಕ್ಕಮಗಳೂರು 50

ಸನ್ಮಾನ ದೊರಕಿತೆಂದು ಬಗೆಯುವುದರಲ್ಲಿ ಅಭ್ಯಂತರವಿರಲಾರದೆಂದು ಎಣಿಸುತ್ತೇನೆ. ಅಥವಾ ಶಾಸನವನ್ನು ಬರೆದವನು ಎರಡು ತಲೆಮಾರುಗಳ ಹಿಂದೆ ಆಗಿಹೋದ ಸಂಗತಿಗಳನ್ನು ನೆನಪಿನಿಂದ ಬರೆಯುವಾಗ ಬಪ್ಪ ಪೂರ್ವಿಕನಿಗೆ ಸಲ್ಲಬೇಕಾದ್ದನ್ನು ಇನ್ನೊಬ್ಬನ ಹೆಸರಿಗೆ ಅದಲುಬದಲಾಯಿಸಿದ್ದರೂ ಇರಬಹುದು.

'ಪರದುರ್ಗಮರ್ದನ'ನ ತಂದೆ, 'ನೃಪಕೇಸರಿ', ತನ್ನ ಎಳೆತನವನ್ನು ಸರ್ಪಗಳೊಂದಿಗೆ ಕಳೆದನೆಂದು ಕೊಡುಂಬಾಳೂರು ಶಾಸನ ತಿಳಿಸುತ್ತದೆ. ಶಾಸನ ಪೂರ ಪದ್ಯರೂಪದಲ್ಲಿರುವುದರಿಂದ ಇದನ್ನೊಂದು ಕಾವ್ಯಾಲಂಕಾರವೆಂದು ಭಾವಿಸಬೇಕು. ವೆಂಕಟಸಾಮಿಯವರು ಇಲ್ಲಿ ಸರ್ಪಗಳೆಂದರೆ ಪಲ್ಲವರೆಂದೂ ಪಲ್ಲವರೂ ಕೊಡುಂಬಾಳೂರು ಅರಸರೂ 'ನೃಪಕೇಸರಿ'ಯ ಕಾಲದಲ್ಲಿ ಬಾಂಧವ್ಯದಿಂದಿದ್ದರೆಂದೂ ಹೀಗಿದ್ದುದರಿಂದ 'ನೃಪಕೇಸರಿ'ಯ ತಂದೆಯಾದ 'ಸಂಘಕೃತ್' ತನ್ನ ಎಳೆಯ ಮಗನನ್ನು ನಾಗಚಿಹ್ನೆಯನ್ನು ಹೊಂದಿದ್ದ ಪಲ್ಲವರ ಅರಮನೆಯಲ್ಲಿ ಬೆಳೆಯಬಿಟ್ಟಿದ್ದನೆಂದೂ. ಭೂತಿವಿಕ್ರಮಕೇಸರಿಯು ಪಲ್ಲವರೊಡನೆ ದ್ವೇಷದಿಂದಿದ್ದನೆಂದೂ. ಇದರಿಂದ ಪಲ್ಲವರನ್ನು ಹೆಸರಿನಿಂದ ಸಂಬೋಧಿಸದೆ ವ್ಯಂಗ್ಯವಾಗಿ ಸರ್ಪಗಳೆಂದು ಕರೆದಿರುವನೆಂದೂ ವಿಪರೀತಾರ್ಥ ಮಾಡಿದ್ದಾರೆ. ಈ ಸುತ್ತುಕಲ್ಪನೆ ಅನಾವಶ್ಯಕ. ಗಂಗರ ಚರಿತ್ರೆಯಲ್ಲಿ ನೇರವಾದ ವಿವರಣೆ ದೊರಕುತ್ತದೆ.

ಪ್ರೊಲವೀರ ಮತ್ತು ಮುಷ್ಕರರ ತಂದೆಯಾದ ದುರ್ವಿನೀತ ಪುನ್ನಾಡ ದೊರೆಯಾದ ಸ್ಕಂದವರ್ಮನ ಮಗಳು ಜ್ಯೇಷ್ಠಾದೇವಿಯ ಮಗ. ಗಂಗರ ಶಾಸನಗಳು ದುರ್ವಿನೀತನನ್ನು 'ಪುನ್ನಾಟಾಧಿಪತಿ' ಎಂದು ಕರೆದಿವೆ. 'ಪುನ್ನಾಟ', 'ಪುನ್ನಾಡ', ಎಂಬ ಪದಗಳಿಗೆ ಸರ್ಪಗಳ ನಾಡು ಎಂಬ ನೇರವಾದ ಅರ್ಥವಿದೆ. ಹೀಗಿರುವಾಗ ದುರ್ವಿನೀತ (='ನೃಪಕೇಸರಿ') ಬಾಲ್ಯವನ್ನು ತನ್ನ ತಾಯಿಯ ಮನೆಯಲ್ಲಿ ಕಳೆದದ್ದರಲ್ಲಿ ಆಶ್ಚರ್ಯವೇನಿದೆ? ವೆಂಕಟಸಾಮಿಯವರ ತರ್ಕ ಇನ್ನೊಂದು ದೃಷ್ಟಿಯಿಂದಲೂ ಸಮಂಜಸವಾಗಿಲ್ಲ. ದುರ್ವಿನೀತ (=ನೃಪಕೇಸರಿ) ಪಲ್ಲವರೊಂದಿಗೆ ಸ್ನೇಹದಿಂದ ನಡೆದುಕೊಂಡದ್ದಕ್ಕೆ ನಿದರ್ಶನಗಳಿಲ್ಲ; ಪ್ರತಿಯಾಗಿ. ದುರ್ವಿನೀತ ಅಪರಿಗೆಮುರಾಗಿ ಹೋರಾಡಿ ಆ ಕಾಡುವೆಟ್ಟಿಯಿಂದ ಕಾಂಚೀಪುರವನ್ನು ಸ್ವಾಧೀನಪಡಿಸಿಕೊಂಡಿದ್ದ18.

ನೃಪಕೇಸರಿಯ ತಂದೆಯಾದ ಸಂಘಕೃತ್‌ನ ವಿಷಯವಾಗಿ ಕೊಡುಂಬಾಳೂರು ಶಾಸನ ಯಾವ ವಿವರಗಳನ್ನೂ ಕೊಟ್ಟಿಲ್ಲ. ಇವನನ್ನು ಅವನೀತನೆಂದು ಪರಿಗಣಿಸುವುದಕ್ಕೆ ಗಂಗರ ಶಾಸನಗಳಲ್ಲೂ ಆಧಾರಗಳು ದೊರೆಯುವು. ಈ ಅರಸನ ಆಳ್ವಿಕೆಯ ಆರಂಭದ ವರ್ಷಗಳು ಸ್ವಾತಂತ್ರ್ಯಾಭಿಲಾಷೆಯಿಂದ ದಂಗೆಯೇಳುತ್ತಿದ್ದ ಮಾಂಡಲಿಕರ ಬಾಧೆಯನ್ನು ಅಡಗಿಸುವುದರಲ್ಲೂ, ಚಿಂದಿಚಿಂದಿಯಾಗಿ ಹೋಗುತ್ತಿದ್ದ ರಾಜ್ಯಭಾಗಗಳನ್ನು ತನ್ನ ಆಧಿಪತ್ಯಕ್ಕೆ ಒಳಪಡಿಸಿಕೊಂಡು ತನ್ಮೂಲಕ ಒಂದುಗೂಡಿಸುವುದರಲ್ಲೂ ಕಳೆದವು. ಪುನ್ನಾಟ ರಾಜ್ಯವನ್ನು ತನ್ನ ರಾಜ್ಯಕ್ಕೆ ಸೇರಿಸಿಕೊಂಡದ್ದೂ ಇದೇ ಕಾಲದಲ್ಲಿದ್ದಿರಬೇಕು. ಈ ಕಾರ್ಯಗಳಿಂದ ಇವನಿಗೆ 'ಸಂಘಕೃತ್' ಎಂಬ ಹೆಸರು ಅನ್ವಯವಾಗಿರಬೇಕು ಎಂದು ಭಾಸವಾಗುತ್ತದೆ.

ಸಂಘಕೃತುವಿಗೂ ಹಿಂದಿನ ಅರಸರನ್ನು ಗುರುತಿಸುವುದಕ್ಕೆ ಕೊಡುಂಬಾಳೂರು ಶಾಸನದಲ್ಲಿ ಕುರುಹುಗಳಿಲ್ಲ. ಈ ಕಾಲದ ಗಂಗರ ಚರಿತ್ರೆಯೂ ಇನ್ನೂ ಮಸಕು ಮಸಕಾಗಿಯೇ ಇದೆ.

6

ಮೇಲಿನ ವಿಚಾರಸರಣಿಯಿಂದ ಕೊಡುಂಬಾಳೂರು ವಂಶಾವಳಿಗೂ ತಲಕಾಡು ಗಂಗರ ವಂಶಾವಳಿಗೂ ಇರುವ ಸಾಮ್ಯವನ್ನು ಭೂತಿವಿಕ್ರಮಕೇಸರಿಯಿಂದ (ಭೂವಿಕ್ರಮ) ಹಿಂದೆ ಐದು ತಲೆಗಳವರೆಗೂ ಕ್ರಮಾನುಗತವಾಗಿ ಕಾಣಬಹುದಾಗಿದೆ:

ತಲಕಾಡು ಗಂಗರು	ಕೊಡುಂಬಾಳೂರು ಅರಸರು
ಅವನೀತ (ಕ್ರಿ.ಶ. 495–555)	ಸಂಘಕೃತ್
ದುರ್ವಿನೀತ (ಕ್ರಿ.ಶ. 555–605)	ನೃಪಕೇಸರಿ

18 *Ep. Carn.* vol. VII. ನಗರ 35

ಮುಷ್ಕರ [ಪೊಲವೀರ] (ಕ್ರಿ.ಶ. 605–620)	ಪರದುರ್ಗಮರ್ದನ
(ಬಹುಶಃ ಪೊಲವೀರನೇ) (ಕ್ರಿ.ಶ. 629–644)	
ಶ್ರೀವಿಕ್ರಮ (ಕ್ರಿ.ಶ. 644–669)	ಸಮರಾಭಿರಾಮ
ಭೂವಿಕ್ರಮ (ಕ್ರಿ.ಶ. 669–679)	ಭೂತಿವಿಕ್ರಮಕೇಸರಿ

ಭೂತಿವಿಕ್ರಮಕೇಸರಿ ಯಾದವವಂಶಸ್ಥನೆಂದು ಕೊಡುಂಬಾಳೂರು ಶಾಸನದಿಂದ ಅರಿಯುತ್ತೇವೆ. ಇವನ ಪೂರ್ವಿಕರಲ್ಲೊಬ್ಬನಾದ 'ಅತಿವೀರ ಅನುಪಮ'ನಿಗೂ ಇದೇ ಕುಲ ಸೂಚಿತವಾಗಿದೆ. ಗಂಗರೂ ಯಾದವವಂಶಸ್ಥರೆಂಬುದು ಅವರ ಶಾಸನಗಳಿಂದ ಕಂಡುಬರುತ್ತದೆ. ದುರ್ವಿನೀತನನ್ನು 'ವೃಷ್ಣಿಕುಲತಿಲಕ ಕೃಷ್ಣ'ನೆಂದು ಸಂಬೋಧಿಸಿರುವುದರ ತಾತ್ಪರ್ಯವೂ ಇದೇ.

7

ಗಂಗರ ವಂಶವೃಕ್ಷದಲ್ಲಿ ಶ್ರೀವಿಕ್ರಮನ ತರುವಾಯ ಒಂದು ಒಡಕು ಕಾಣಿಸಿಕೊಂಡಿದೆ.19 ಇವನ ಮೊದಲನೆಯ ಮಗ ಭೂವಿಕ್ರಮ ಕೆಲವು ವರ್ಷಗಳು ಆಳಿದ ಬಳಿಕ ರಾಜ್ಯಸೂತ್ರ ಎರಡನೆಯ ಮಗ ಒಂದನೆಯ ಶಿವಮಾರನ ಕೈಸೇರಿತು. ಶಿವಮಾರನನ್ನು ಕುರಿತ 'ಲಕ್ಷ್ಮ್ಯಾಂ ಸ್ವಯಂ ವೃತಪತಿ' ಎಂಬ ಶಾಸನೋಕ್ತಿಯಿಂದ ಇವನು 'ಭಾಗ್ಯತೆಯುಳ್ಳದ್ದರೂ ಸಿಂಹಾಸನಾರೂಢನಾದವನು' ಎಂಬ ಅರ್ಥ ಬರುತ್ತದೆ. ಈ ರಾಜ್ಯಸೂತ್ರದ ಬದಲಾವಣೆ ಏತಕ್ಕಾಗಿ ನಡೆಯಿತೆಂಬುದು ಸದ್ಯದಲ್ಲಿ ತಿಳಿಯದು. ಆದರೆ ಇದರಿಂದ ಕ್ರಮರೀತ್ಯ ನಡೆದುಬಂದಿದ್ದ ಗಂಗಪೀಳಿಗೆಯಲ್ಲಿ ಒಡಕುಂಟಾದ್ದು ಗಮನಾರ್ಹ. ಭೂವಿಕ್ರಮನ ಜೀವಿತ ಮುಗಿದ ತರುವಾಯ ಮೊದಲನೆಯ ಶಿವಮಾರ ರಾಜ್ಯಸೂತ್ರವನ್ನು ವಹಿಸಿಕೊಂಡಿರಬಹುದೆಂಬ ಊಹೆಗೆ ಆಧಾರವಿಲ್ಲ. ಲಕ್ಷ್ಮೀನಾರಾಯಣರಾಯರು ಮತ್ತು ಪಂಚಮುಖಿಯವರು ಭೂವಿಕ್ರಮನಿಗೆ ಸಂತಾನವಿದ್ದಿರಲಿಲ್ಲವಾದ್ದರಿಂದ ಗಂಗವಂಶ ಅನುಕ್ರಮವಾಗಿ ಮುಂದುವರಿಯುವುದು ಸಾಧ್ಯವಾಗಲಿಲ್ಲವೆಂದು ಅಭಿಪ್ರಾಯಪಟ್ಟಿದ್ದಾರೆ. ಕೊಡುಂಬಾಳೂರು ಶಾಸನಾಧ್ಯಯನದಿಂದ ಈ ಊಹೆಯೂ ಸರಿಯಲ್ಲವೆಂಬುದು ವಿದಿತವಾಗುತ್ತದೆ.

ಭೂವಿಕ್ರಮ (=ಭೂತಿವಿಕ್ರಮ) ಶ್ರೀವಿಕ್ರಮನ ಅನಂತರ ಸ್ವಲ್ಪ ಕಾಲವಾದರೂ ತನಗೆ ಹಕ್ಕಾಗಿ ಪರಂಪರೆಯಿಂದ ದತ್ತವಾಗಿದ್ದ ಗಂಗವಾಡಿಯನ್ನು ಆಳಿದ್ದಿರಲು ಸಾಧ್ಯ. ಆಂತರಿಕ ಕಲಹಗಳ ಕಾರಣದಿಂದಲೋ ಹೊರಗಿನವರ ಕೈವಾಡ ಕುಯುಕ್ತಿಗಳಿಂದಲೋ ಮೊದಲನೆಯ ಶಿವಮಾರ ಸಿಂಹಾಸನಾರೂಢನಾದ. ರಾಜ್ಯಸೂತ್ರವನ್ನು ಕಳೆದುಕೊಂಡ ಭೂವಿಕ್ರಮ (=ಭೂತಿವಿಕ್ರಮಕೇಸರಿ) ತನ್ನ ತಾಯಿಯ ತವರೂರಾದ ಚೋಳರಾಜ್ಯಕ್ಕೆ ಬಂದು ನೆಲೆಸಿದ್ದಿರಬೇಕು. ಇಷ್ಟೇ ಅಲ್ಲ. ಅಲ್ಲಿ ಚೋಳರಸಕುಮಾರಿಯೊಬ್ಬಳನ್ನೂ ಮದುವೆಯಾದ. ದಕ್ಷಿಣದಿಕ್ಕಿನಲ್ಲಿ ರಾಜ್ಯವಿಸ್ತಾರಕ್ಕೆ ಸನ್ನಿಹಿತರಾಗಿದ್ದ ಚಾಲುಕ್ಯರನ್ನು ಸೇರಿ ಅವರ ಪರವಾಗಿ ಕದನಗಳಲ್ಲಿ ಪಾಲುಗೊಂಡಿದ್ದಿರಬೇಕು. ಕ್ರಿ.ಶ. 674ರ ಸುಮಾರಿನಲ್ಲಿ ಮೊದಲನೆಯ ವಿಕ್ರಮಾದಿತ್ಯ ಕಾವೇರೀತೀರದಲ್ಲಿ ಬೀಡುಬಿಟ್ಟಿದ್ದಾಗ ಭೂವಿಕ್ರಮನನ್ನು ಅಲ್ಲಿ ಕಾಣುತ್ತೇವೆ. ಅಲ್ಲಿಂದ ಅವನು ಚಾಲುಕ್ಯರ ಪರವಾಗಿ ಪಲ್ಲವರನ್ನು ವಿಲಂದೆಯಲ್ಲಿ ಎದುರಿಸಿ ವಿಜಯಿಯಾದುದನ್ನು ಕಾಣುತ್ತೇವೆ. ಹೀಗೆಯೇ ವಂಜಿಯ ಹೆಗ್ಗಡೆಯೊಂದಿಗೂ ವೀರನಾದೊಬ್ಬ ಪಾಂಡ್ಯನೊಂದಿಗೂ ಹೋರಾಡಿ ಗೆದ್ದು, ವಿಜಯೋತ್ಸಾಹದಿಂದ ಪ್ರೇರೇಪಿತನಾಗಿ ಕೊಡುಂಬಾಳೂರು ದುರ್ಗವನ್ನು ಆಕ್ರಮಿಸಿಕೊಂಡುದನ್ನು 'ಮೂವರ್ ಕೋಯಿಲ್' ಶಾಸನದಲ್ಲಿ ಕಾಣುತ್ತೇವೆ.

ಭೂವಿಕ್ರಮ ಕೊಡುಂಬಾಳೂರಿನಲ್ಲಿ ಎಷ್ಟು ಕಾಲ ಆಳಿದ? ಅವನ ಸಂತತಿಯ ಸಂಗತಿಗಳೇನಾದರೂ ತಿಳಿದಿವೆಯೆ? ಅವರನ್ನು ಕುರಿತು ಪಂಡಿತರು ಇತ್ತಿರುವ ಅಭಿಪ್ರಾಯಗಳಿಗೆ ಮನ್ನಣೆ ಕೊಡಬಹುದೆ? ಇವೇ ಮೊದಲಾದ ಪ್ರಶ್ನೆಗಳನ್ನು ಬೇರೊಂದು ಅವಕಾಶದಲ್ಲಿ ಅಧ್ಯಯನಕ್ಕೆ ಎತ್ತಿಕೊಳ್ಳಲಾಗುತ್ತದೆ.

---

19 ಪಂಚಮುಖಿ ಮತ್ತು ಲಕ್ಷ್ಮೀನಾರಾಯಣರಾವ್: ಕರ್ಣಾಟಕ ಅರಸುಮನೆತನಗಳು

8

ಕೊಡುಂಬಾಳೂರು ಶಾಸನದಲ್ಲಿ ಉಕ್ತವಾಗಿರುವ ವಂಶಾವಳಿಗೂ ತಲಕಾಡು ಗಂಗರ ವಂಶಾವಳಿಗೂ ಕಾಣುವ ಸಾಮ್ಯಗಳನ್ನು ಇದುವರೆಗೂ ವಿವರಿಸಿದ್ದಾಯಿತು. ಅಲ್ಲಲ್ಲಿ ಒಂದೋ ಎರಡೋ ತಲೆಗಳ ಸಾಮ್ಯ ಮಾತ್ರ ಇದ್ದಿದ್ದರೆ ಆಕಸ್ಮಿಕ ಸಂಭವವೆಂದು ಬಿಟ್ಟುಬಿಡಬಹುದು. ಆದರೆ ಕ್ರಮರೀತಿಯಾದ ಐದಾರು ತಲೆಮಾರುಗಳ ನಿಕಟವಾದ ಹೋಲಿಕೆ ಅರ್ಥಹೀನವಾಗಿರಲಾರದು.

ಪ್ರಸ್ತುತ ಅಧ್ಯಯನದ ತೀರ್ಮಾನಗಳು ಒಪ್ಪಿತವಾಗುವಂತಿದ್ದರೆ, ತಲಕಾಡುಗಂಗರ ಚರಿತ್ರೆಯಲ್ಲಿ ಹೊಸದೊಂದು ಪ್ರಕರಣವನ್ನು ಇಲ್ಲಿ ಕಾಣಬಹುದಾಗಿದೆ. ಕೃಷ್ಣರಾಯರ ಕೃತಿ20 ಅಲ್ಲಲ್ಲಿ ಚದರಿಹೋಗಿದ್ದ ಗಂಗರ ಚರಿತ್ರೆಯ ಸಾಮಗ್ರಿಗಳನ್ನು ಒಂದೆಡೆ ಕೂಡಿಸುವ ಮೊದಲನೆಯ ಪ್ರಯತ್ನ. ಕರ್ತೃವಿನ ಉದ್ದೇಶ ವಿಶಾಲವಾಗಿದ್ದುದರಿಂದ ಅರಸರ ಕಾಲನಿರ್ಣಯಗಳಿಗೆ ಹೆಚ್ಚು ಗಮನಕೊಡಲು ಅವಕಾಶವಾಗಲಿಲ್ಲವೆಂದು ಭಾವಿಸಿಕೊಂಡಿದ್ದೇನೆ. ಲಕ್ಷ್ಮೀನಾರಾಯಣರಾಯರು ಮತ್ತು ಪಂಚಮುಖಿಯವರು 1930ರ ವರೆಗೂ ದೊರಕಿದ್ದ ಶಾಸನಸಾಹಿತ್ಯವನ್ನೇ ಮುಖ್ಯವಾದ ಆಧಾರವಾಗಿಟ್ಟುಕೊಂಡು ಗಂಗರ ರಾಜಕೀಯ ವೃತ್ತಾಂತವನ್ನು ಸಂಕ್ಷೇಪವಾಗಿ ಚಿತ್ರಿಸಿದ್ದಾರೆ.21 ಶ್ರೀಕಂಠಶಾಸ್ತ್ರಿಗಳ ಪೆಬ್ಬೆಟ್ಟ ತಾಮ್ರಶಾಸನವನ್ನು ಕುರಿತ ವಿಮರ್ಶೆಯಲ್ಲಿ ಗಂಗರಸರ ಕಾಲನಿಯತಿಗಳು ಹಿಂದಿನ ಪಂಡಿತರ ಎಣಿಕೆಯಿಂದ ಬೇರೆಯಾಗಿವೆ.22 ಈ ತೀರ್ಮಾನಗಳನ್ನು ಒಪ್ಪಿಕೊಳ್ಳುವುದಕ್ಕೆ ಇನ್ನೂ ನಿರ್ದಿಷ್ಟವಾದ ಪ್ರಮಾಣಗಳು ಬೇಕಾಗುತ್ತವೆಯೆಂಬುದು ನನ್ನ ಅಭಿಪ್ರಾಯ. ಆದುದರಿಂದ ಪ್ರಸ್ತುತ ಅಧ್ಯಯನಕ್ಕೆ ಲಕ್ಷ್ಮೀನಾರಾಯಣರಾಯರು ಮತ್ತು ಪಂಚಮುಖಿಯವರು ಇತ್ತಿರುವ ಕಾಲನಿಯತಿಗಳನ್ನು ತಾತ್ಕಾಲಿಕವಾಗಿ ಬಳಸಿಕೊಂಡಿದ್ದೇನೆ.

× × × ×

ತಲಕಾಡು ಗಂಗರದು ಅಚ್ಚಕನ್ನಡ ಮನೆತನ. ಆರಂಭಕಾಲದ ಗಂಗರಸರ ಮತದ ವಿಷಯದಲ್ಲಿ ಭಿನ್ನಾಭಿಪ್ರಾಯಗಳಿವೆ. ಅವರು ಜೈನಮತಾವಲಂಬಿಗಳೆಂಬ ಅಭಿಪ್ರಾಯಕ್ಕೆ ಆಧಾರಸಾಮಗ್ರಿಗಳು ದೊರಕುವುದೆಲ್ಲ ಮಧ್ಯಯುಗೀಯ ಶಾಸನಗಳಲ್ಲಿ. ಪ್ರಾಚೀನ ಗಂಗರಸರು, ಗಂಗವಾಡಿಯ ಪ್ರಜೆಗಳು ಸಾಮಾನ್ಯವಾಗಿ ಶೈವಮತವನ್ನವಲಂಬಿಸಿದವರೆಂದು ಗಣಿಸುವುದಕ್ಕೆ ಕಾರಣಗಳಿವೆ. 6–7ನೆಯ ಶತಕಗಳಲ್ಲಿಯೇ ಪಾಶುಪತ ಕವಲೊಡೆದು ಲಕುಲೀಶ–ಪಾಶುಪತ, ಕಾಳಾಮುಖ ಶಾಖೆಗಳಾಗಿ ದಕ್ಷಿಣ ಭಾರತದಲ್ಲಿ ಹರಡಿದ್ದುವು. ಭೂತಿವಿಕ್ರಮಕೇಸರಿ (=ಭೂವಿಕ್ರಮ) ಕಾಳಾಮುಖ ಶಾಖೆಯ ಗುರುವೊಬ್ಬನಿಗೆ ಮಠವನ್ನು ಕಟ್ಟಿಸಿಕೊಟ್ಟಿದ್ದರಲ್ಲಾಗಲಿ, ಮೂರು ಶಿವಾಲಯಗಳನ್ನು ಕಟ್ಟಿಸಿ ಅವುಗಳಲ್ಲಿ ತನ್ನ ಹೆಸರಿನಿಂದಲೂ ತನ್ನ ಇಬ್ಬರು ಹೆಂಡತಿಯರ ಹೆಸರಿನಿಂದಲೂ ಲಿಂಗಸ್ಥಾಪನೆಯನ್ನು ಮಾಡಿಸಿ, ಮಠಕ್ಕೂ ದೇಗುಲಕ್ಕೂ ದತ್ತಿಗಳನ್ನು ಬಿಟ್ಟಿದ್ದರಲ್ಲಾಗಲಿ ಆಶ್ಚರ್ಯವಿಲ್ಲ. ಕನ್ನಡ ರಾಜ್ಯದ ಅರಸೊಬ್ಬ ಕನ್ನಡ ರಾಜ್ಯದಲ್ಲಿ ಉದಿಸಿದ ಮತವನ್ನವಲಂಬಿಸಿ, ತಾನು ವಿಜಯಯಾತ್ರೆ ಮಾಡಿ ಆಕ್ರಮಿಸಿಕೊಂಡ ಸ್ಥಳದಲ್ಲಿಯೂ ತನ್ನ ಮತಕ್ಕೆ ಮನ್ನಣೆ ಮಾಡಿದ್ದರಲ್ಲಿ ಆಶ್ಚರ್ಯವೇನಿಲ್ಲ. ಆದರೆ 7ನೆಯ ಶತಕದಲ್ಲೇ ಗಂಗರಸರು ದೂರದ ದಕ್ಷಿಣದಲ್ಲಿದ್ದ ತಮಿಳುನಾಡಿನಲ್ಲಿ ತಮ್ಮ ಬಾವುಟವನ್ನು ನೆಟ್ಟದ್ದು ಕನ್ನಡ ನಾಡಿನ ಚರಿತ್ರೆಗೂ ಹೊಸದಾದ ಸಂಗತಿ, ತಮಿಳುನಾಡಿನ ಚರಿತ್ರೆಗೂ ಹೊಸದಾದ ಸಂಗತಿ.

ಆರಂಭಕಾಲದ ಗಂಗರ ರಾಜಕೀಯ ಭಾಷೆ ಸಂಸ್ಕೃತ, ನಾಡಿನ ಭಾಷೆ ಕನ್ನಡ. ಭೂವಿಕ್ರಮ ಕೊಡುಂಬಾಳೂರಿನಲ್ಲಿ ಈ ಎರಡು ಭಾಷೆಗಳಲ್ಲೂ ಶಾಸನಗಳನ್ನು ಕೊರೆಸಿಟ್ಟಿದ್ದಾನೆ.

× × × ×

ಕೊನೆಯದಾಗಿ ಒಂದು ಮಾತು. ತಲಕಾಡು ಗಂಗರ ಚರಿತ್ರೆ ಸಮರ್ಪಕವಾಗಿ ತಿಳಿದುಬಂದಿಲ್ಲ. ಅವರ ಆಳ್ವಿಕೆಯ ಒಂದೊಂದು ಹಂತದಲ್ಲೂ ಜಟಿಲವಾದ ಪ್ರಶ್ನೆಗಳೇಳುತ್ತವೆ. ಈಗ ಸಂಗ್ರಹವಾಗಿರುವ

---

20 *The Gangas of Talkad*

21 ಕರ್ಣಾಟಕದ ಅರಸರ ವರ್ತನೆಗಳು, ಸಂ. 1

22 *Journal of the Mythic Society*, vol. 44, pp. 117–139

ಮೂಲ ಸಾಮಗ್ರಿಗಳನ್ನು ವಿಮರ್ಶಾತ್ಮಕವಾಗಿ ಅಧ್ಯಯನ ಮಾಡಬೇಕಾದ ಕಾರ್ಯವಿನ್ನೂ ಆರಂಭವಾಗಬೇಕಾಗಿದೆ; ಇನ್ನೊಂದೆಡೆ ಹೊಸ ಮೂಲಸಾಮಗ್ರಿಗಳಿಗಾಗಿ ಅನ್ವೇಷಣೆ ನಡೆಯಬೇಕಾಗಿದೆ. ಈ ದೃಷ್ಟಿಯಿಂದ ಕೊಯಮತ್ತೂರು. ಸೇಲಂ. ಉತ್ತರ ಮತ್ತು ದಕ್ಷಿಣ ಆರ್ಕಾಟು ಜಿಲ್ಲೆಗಳಲ್ಲಿ ತೀವ್ರವಾದ ಅನ್ವೇಷಣೆ ಉಪಯುಕ್ತವಾದುದು; ಹಾಗೆಯೇ ಕೊಯಮತ್ತೂರು ಜಿಲ್ಲೆಗೆ ಪಶ್ಚಿಮ ಮತ್ತು ಉತ್ತರ ದಿಕ್ಕುಗಳಲ್ಲಿ ಹರಡಿರುವ ಪ್ರದೇಶಗಳನ್ನೂ ಆಳವಾಗಿ ಪರಿಶೀಲಿಸಬೇಕಾಗಿದೆ. ಈ ಸಾಧನೆಗಳಲ್ಲಿ ತೊಡಗುವವರು ಪ್ರಸ್ತುತ ಲೇಖನದ ತಾತ್ಪರ್ಯವನ್ನು ಗಮನದಲ್ಲಿರಿಸಿಕೊಂಡಾರೆಂದು ನಂಬಿದ್ದೇನೆ.

ಬಿ. ಎಂ. ಕುಮಾರಸ್ವಾಮಿ

ಕೌಟಿಲ್ಯನ ಆರ್ಥಿಕ ವಿವೇಚನೆ

ಪ್ರಾಚೀನ ಭಾರತದ ಶ್ರೇಷ್ಠ ಚಿಂತಕರಲ್ಲಿ ಕೌಟಿಲ್ಯನ ಸ್ಥಾನ ವಿಶಿಷ್ಟವಾದ್ದು. ಅದಕ್ಕೆ ಕಾರಣ, ಅವನ ಅಧ್ಯಯನ ಕ್ಷೇತ್ರ. ರಾಜಕಾರಣವೇ ಕೌಟಿಲ್ಯನ ಅಧ್ಯಯನ ಹಾಗೂ ಕಾರ್ಯಕ್ಷೇತ್ರ. ಅವನ ಮಹಾ ಗ್ರಂಥವಾದ 'ಅರ್ಥಶಾಸ್ತ್ರ' ಬೃಹತ್ ಸಾಮ್ರಾಜ್ಯವೊಂದರ ನಿರ್ಮಾಣ ಹಾಗೂ ಅದರ ಉತ್ತಮ ಆಡಳಿತದ ಸಮಸ್ಯೆಗಳ ಬಗ್ಗೆ ರಚಿತವಾದ, ಅತ್ಯಂತ ಸಂಕೀರ್ಣವಾದ, ಬಹುಶಃ ಪ್ರಪಂಚದಲ್ಲೇ ಅತ್ಯಂತ ಪುರಾತನವಾದ ಗ್ರಂಥವೆಂದು ಪಂಡಿತರಿಂದ ಪರಿಗಣಿತವಾಗಿದೆ. ಇದು ಹದಿನೈದು ಅಧಿಕರಣಗಳು ಮತ್ತು ನೂರ ಐವತ್ತು ಪರಿಚ್ಛೇದಗಳನ್ನೊಳಗೊಂಡ ದೊಡ್ಡ ಗ್ರಂಥ. ಕೌಟಿಲ್ಯನ 'ಅರ್ಥಶಾಸ್ತ್ರ'ವನ್ನು 1905ರಲ್ಲಿ ಸಂಶೋಧಿಸಿ, ಪ್ರಕಟಿಸಿ ಅದರ ಹಿರಿಮೆಯನ್ನು ಬೆಳಕಿಗೆ ತರಲು ಅಪಾರವಾಗಿ ಶ್ರಮಿಸಿದವರು ಮೈಸೂರಿನ ಶ್ರೇಷ್ಠ ವಿದ್ವಾಂಸರಾದ ಡಾ. ಆರ್. ಶಾಮಶಾಸ್ತ್ರಿಗಳು. ಪುರಾತನ ಭಾರತೀಯರು ಪ್ರಾಪಂಚಿಕ ಜೀವನವನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿ ಕೇವಲ ಪರಲೋಕ ಚಿಂತನೆಯಲ್ಲಿಯೇ ಮಗ್ನರಾಗಿದ್ದರೆಂಬ ತಪ್ಪು ಅಭಿಪ್ರಾಯ ಈ ಅರ್ಥಶಾಸ್ತ್ರದ ಪ್ರಕಟಣೆಯಿಂದ ದೂರವಾಯಿತು.

'ಅರ್ಥಶಾಸ್ತ್ರದ ಗ್ರಂಥಕರ್ತನಾದ ಕೌಟಿಲ್ಯನಿಗೆ ವಿಷ್ಣುಗುಪ್ತ, ಚಾಣಕ್ಯ ಎಂಬ ಹೆಸರುಗಳೂ ಇವೆ. ಇವನ ನಿಜವಾದ ಹೆಸರು ವಿಷ್ಣುಗುಪ್ತನೆಂದೂ ಇವನು 'ಕುಟಿಲ' ಗೋತ್ರದವನಾದುದರಿಂದ ಕೌಟಿಲ್ಯನೆಂದೂ 'ಚಣಕ' ಎಂಬ ಸ್ಥಳದಲ್ಲಿ ಹುಟ್ಟಿದುದರಿಂದ ಚಾಣಕ್ಯನೆಂದೂ ಇವನಿಗೆ ಹೆಸರು ಬಂದಿತೆಂಬುದು ಗಣಪತಿಶಾಸ್ತ್ರಿಗಳ ಅಭಿಪ್ರಾಯ. ಕೌಟಿಲ್ಯ ಒಬ್ಬ ಐತಿಹಾಸಿಕ ವ್ಯಕ್ತಿ. ಮೌರ್ಯ ಸಾಮ್ರಾಜ್ಯದ ಸಂಸ್ಥಾಪನಾಚಾರ್ಯ ಹಾಗೂ ಚಂದ್ರಗುಪ್ತ ಮೌರ್ಯನ ಪ್ರಧಾನ ಮಂತ್ರಿಯಾಗಿದ್ದನೆಂಬುದು ಬಹುಜನರ ಅಭಿಪ್ರಾಯ. ಕೌಟಿಲ್ಯನ ನಿಜವಾದ ಕಾಲದ ಬಗ್ಗೆ ಇತಿಹಾಸಕಾರರಲ್ಲಿ ಭಿನ್ನಾಭಿಪ್ರಾಯಗಳು ಇದ್ದರೂ ಅದನ್ನು ಕ್ರಿ.ಪೂ. 350ರಿಂದ ಕ್ರಿ.ಪೂ. 270 ಎಂದು ಸ್ಥೂಲವಾಗಿ ನಿರ್ಧರಿಸಲಾಗಿದೆ.

ಸರ್ಕಾರದ ರಚನೆ, ಆಡಳಿತ ವಿಧಾನಗಳು, ರಾಜನ ವಿದ್ಯಾಭ್ಯಾಸ, ಮಂತ್ರಿಗಳು ಮತ್ತು ಇತರ ಅಧಿಕಾರಿಗಳ ಕರ್ತವ್ಯ, ಯುದ್ಧನೀತಿ, ರಾಜತಂತ್ರ, ವಿದೇಶ ವ್ಯವಹಾರ ಮುಂತಾದ ಅನೇಕ ವಿಷಯಗಳನ್ನು ಕೌಟಿಲ್ಯನ ಅರ್ಥಶಾಸ್ತ್ರ ಒಳಗೊಂಡಿದ್ದರೂ ಸಂಪತ್ತಿನ ಉತ್ಪಾದನೆ ಮತ್ತು ವಿತರಣೆ, ಸಾರ್ವಜನಿಕರ ಆದಾಯ ಹಾಗೂ ವೆಚ್ಚ ಮುಂತಾದ ಅರ್ಥನೀತಿಗೆ ಸಂಬಂಧಿಸಿದ, ಸ್ಥೂಲವಾದ ಅಧ್ಯಯನವೇ ಈ ಗ ಂಥದ ಪ್ರಮುಖ ಉದ್ದೇಶ.

ರಾಜನೀತಿಯಲ್ಲಿ ಕೌಟಿಲ್ಯ ಅರ್ಥ ಅಥವಾ ಸಂಪತ್ತಿಗೆ ವಿಶೇಷವಾದ ಸ್ಥಾನವನ್ನಿತ್ತಿದ್ದಾನೆ. ಒಂದು ಸಾಮ್ರಾಜ್ಯದ ರಾಜಕೀಯ ಭದ್ರತೆ ಅಲ್ಲಿಯ ಆರ್ಥಿಕ ಭದ್ರತೆಯನ್ನೆ ಅವಲಂಬಿಸಿರುತ್ತದೆ—ಎಂಬುದು ಅವನ ಅಭಿಪ್ರಾಯ. ಸಂಪತ್ತೇ ಅತ್ಯಂತ ಪ್ರಮುಖವಾದ್ದು. ಏಕೆಂದರೆ, ಧರ್ಮ ಹಾಗೂ ಕಾಮದ ಪರಿಪೂರ್ಣತೆ ಸಂಪತ್ತಿನಿಂದ ಮಾತ್ರ ಸಾಧ್ಯ.

ಉತ್ತಮವಾದ ರಾಜ್ಯದ ಮುಖ್ಯ ಲಕ್ಷಣಗಳೆಂದರೆ ಬೊಕ್ಕಸ [ಕೋಶ] ಹಾಗೂ ಸೈನ್ಯ. ಬೊಕ್ಕಸದಿಂದಲೇ ಸೈನ್ಯ ಹಾಗೂ ರಾಜ್ಯ ಪ್ರಾಪ್ತವಾಗುತ್ತವೆ.

ತುಂಬಿ ತುಳುಕುವ ಬೊಕ್ಕಸವೇ ಪ್ರಬಲ ರಾಜನೀತಿಯ ಮೂಲಾಧಾರ. ಅದ್ದರಿಂದ ಬೊಕ್ಕಸದ ಕಡೆಗೆ ರಾಜನಾದವನು ಪ್ರಥಮತಃ ಗಮನ ಕೊಡಬೇಕು.

ಬಡಕಲು ಖಜಾನೆಯ ರಾಜ ತನ್ನ ಪ್ರಜೆಗಳಿಗೇ ಕಂಟಕಪ್ರಾಯನಾಗುತ್ತಾನೆ.

ಕೌಟಿಲ್ಯ ರಾಜನೀತಿಯಲ್ಲಿ ಸಂಪತ್ತಿಗೆ ಎಂಥ ಹಿರಿಯ ಸ್ಥಾನವನ್ನಿತ್ತಿದ್ದಾನೆಂಬುದನ್ನು ಈ ಕೆಲವು ಅಭಿಪ್ರಾಯಗಳು ಸಾರುತ್ತವೆ.

ಕೌಟಿಲ್ಯನ ಅಭಿಪ್ರಾಯದಲ್ಲಿ ರಾಷ್ಟ್ರ ಏಳು ಅಂಗಾಂಶಗಳನ್ನು ಒಳಗೊಂಡಿರುತ್ತದೆ. ಅವು ಸ್ವಾಮಿ, ಮಂತ್ರಿ, ಜನಪದ, ದುರ್ಗ, ಕೋಶ, ಸೈನ್ಯ ಮತ್ತು ಮಿತ್ರ. ಇವುಗಳಲ್ಲಿ ಕೋಶ ಮತ್ತು ಸೈನ್ಯ ಅತ್ಯಂತ ಪ್ರಮುಖವಾದವು. ಕಾಲ, ಸ್ಥಳ ಹಾಗೂ ಸಂದರ್ಭಗಳ ಬದಲಾವಣೆಯಿಂದ ಕೋಶ ಅಥವಾ ಸೈನ್ಯ ಹೆಚ್ಚು ಪ್ರಬಲವಾಗಬಹುದು. ಏಕೆಂದರೆ, ಕೆಲವು ವೇಳೆ ಸೈನ್ಯ ಕೋಶವನ್ನು ಪಡೆಯುವ ಸಾಧನವಾಗಬಹುದು. ಆದರೂ ಕೋಶವೇ ಯಾವಾಗಲೂ ಅತ್ಯಂತ ಪ್ರಧಾನವಾದುದು. ಏಕೆಂದರೆ, ಕೋಶವನ್ನೂ ಸೈನ್ಯವನ್ನೂ ಕೋಶದ ಸಹಾಯದಿಂದಲೇ ಪಡೆಯಬೇಕಾಗುತ್ತದೆ. ಸಾಮ್ರಾಜ್ಯದ ಎಲ್ಲ ಚಟುವಟಿಕೆಗಳೂ ಹಣಕಾಸನ್ನೇ ಅವಲಂಬಿಸಿರುವುದರಿಂದ ಹಣಕಾಸಿನ ತೊಂದರೆಗಳು ಕಠಿಣತಮವಾದವು. ಈ ರೀತಿ ರಾಜನೀತಿಯಲ್ಲಿ ಸಂಪತ್ತಿನ ಪ್ರಾಮುಖ್ಯದ ಬಗ್ಗೆ ಕೌಟಿಲ್ಯ ತನ್ನ ಅಭಿಪ್ರಾಯವನ್ನು ಸ್ಪಷ್ಟಪಡಿಸಿದ್ದಾನೆ.

ರಾಜನಾದವನ ಶಿಕ್ಷಣ ನಾಲ್ಕು ವಿಭಾಗಗಳಲ್ಲಿ ನಡೆಯಬೇಕೆಂದು ಕೌಟಿಲ್ಯ ಸೂಚಿಸುತ್ತಾನೆ. ಅವು ಆನ್ವೀಕ್ಷಿಕಿ, ತ್ರಯೀ, ವಾರ್ತಾ ಮತ್ತು ದಂಡನೀತಿ. ಆನ್ವೀಕ್ಷಿಕಿ ಅಥವಾ ತತ್ತ್ವಶಾಸ್ತ್ರದ ಅಧ್ಯಯನ ರಾಜನ ಚಿಂತನಶಕ್ತಿಯನ್ನು ತರ್ಕಬದ್ಧವನ್ನಾಗಿಯೂ ಹರಿತವನ್ನಾಗಿಯೂ ಮಾಡುತ್ತದೆ. ತ್ರಯೀ, ಋಗ್ವೇದ, ಯಜುರ್ವೇದ ಮತ್ತು ಸಾಮವೇದಗಳ ಅಧ್ಯಯನ ಧರ್ಮದ ಬಗ್ಗೆ ಅರಿವನ್ನುಂಟು ಮಾಡುತ್ತದೆ. ವಾರ್ತಾ ಎಂಬುದು ಸಂಪತ್ತು ಹಾಗೂ ಹಣಕಾಸಿನ ಆಡಳಿತಕ್ಕೆ ಸಂಬಂಧಿಸಿದುದು. ಇದು ವ್ಯವಸಾಯ, ಕೈಗಾರಿಕೆ, ಪಶುಪಾಲನೆ, ವ್ಯಾಪಾರ ಮುಂತಾದ ಸಂಪತ್ತಿನ ಉತ್ಪಾದನೆ ಹಾಗೂ ವಿತರಣೆಯ ನಾನಾ ಪ್ರಕಾರಗಳನ್ನು ಒಳಗೊಂಡಿರುತ್ತದೆ. ಇವರ ಗಾಢವಾದ ತಿಳಿವು, ಸಾಮ್ರಾಜ್ಯದಲ್ಲಿ ಆರ್ಥಿಕ ಉನ್ನತಿ ಹಾಗೂ ಸುಖಶಾಂತಿಗಳು ನೆಲಸುವಂತೆ ಮಾಡುವಲ್ಲಿ ರಾಜನಿಗೆ ಸಹಾಯಮಾಡುತ್ತದೆ. ಕೊನೆಯದಾಗಿ ದಂಡನೀತಿಯಿಂದ ಸಾಮ್ರಾಜ್ಯದ ನಿರ್ಮಾಣ, ಸರ್ಕಾರದ ರಚನೆ, ಆಡಳಿತ, ಯುದ್ಧನೀತಿ ಮುಂತಾದ ವಿಷಯಗಳ ಜ್ಞಾನ ಉಂಟಾಗುತ್ತದೆ. ಅಂದರೆ, ಒಂದು ಸಾಮ್ರಾಜ್ಯದ ಸಫಲ ಆಡಳಿತದ ಕ್ರಮದಲ್ಲಿ ಸಂಪತ್ತಿನ ಸ್ಥಾನ ಹಿರಿದಾದ್ದು ಹಾಗೂ ಅದಕ್ಕೆ ಕ್ರಮಬದ್ಧವಾದ ಶಿಕ್ಷಣ ಅಗತ್ಯವೆಂಬುದನ್ನು ಮನಗಂಡು, ರಾಜನ ಶಿಕ್ಷಣ ಕ್ರಮದಲ್ಲಿ ವಾರ್ತಾ ಅಥವಾ ಸಂಪತ್ತಿನ ಶಾಸ್ತ್ರಕ್ಕೆ ಕೌಟಿಲ್ಯ ಪ್ರಮುಖವಾದ ಸ್ಥಾನವನ್ನಿತ್ತಿದ್ದಾನೆ.

ಕೌಟಿಲ್ಯನ ತೆರಿಗೆ ನೀತಿ

ಇಂದಿನ ಅರ್ಥಶಾಸ್ತ್ರಜ್ಞರಂತೆಯೇ ಕೌಟಿಲ್ಯನೂ ಸಾರ್ವಜನಿಕ ಆದಾಯವನ್ನು ತೆರಿಗೆಮೂಲವಾದ ಆದಾಯ ಮತ್ತು ತೆರಿಗೆಗಳಲ್ಲದ ಆದಾಯ ಎಂದು ಎರಡು ಮುಖ್ಯ ಭಾಗಗಳಾಗಿ ವಿಂಗಡಿಸುತ್ತಾನೆ. 'ತೆರಿಗೆ' ಎಂಬ ಪದಕ್ಕೆ ಕೌಟಿಲ್ಯ ಕೊಡುವ ವಿವರಣೆಯೇ ವಿಶಿಷ್ಟವಾದ್ದು ಹಾಗೂ ಇಂದು ಬಳಕೆಯಲ್ಲಿರುವ ಪಾಶ್ಚಾತ್ಯ ಅರ್ಥಕ್ಕಿಂತ ಪ್ರತ್ಯೇಕವಾದ್ದು. "ಸರ್ಕಾರದ ಸಾಮಾನ್ಯ ವೆಚ್ಚಕ್ಕಾಗಿ, ಯಾವ ನಿರ್ದಿಷ್ಟ ಪ್ರತಿಫಲದ ಆಕಾಂಕ್ಷೆಯೂ ಇಲ್ಲದೆ, ಪ್ರಜೆಗಳು ಕಡ್ಡಾಯವಾಗಿ ಕೊಟ್ಟ ಕೊಡಿಗೆಯೇ ತೆರಿಗೆ" ಎಂಬುದು ಇಂದು ಬಳಕೆಯಲ್ಲಿರುವ ಪಾಶ್ಚಾತ್ಯ ಅರ್ಥ. ಈ ವಿವರಣೆಯ ಪ್ರಕಾರ ತೆರಿಗೆದಾರ ತಾನು ತೆತ್ತ ತೆರಿಗೆಗೆ ಪ್ರತಿಯಾಗಿ ಯಾವ ನಿರ್ದಿಷ್ಟ ಫಲವನ್ನೂ ಅಪೇಕ್ಷಿಸುವಂತಿಲ್ಲ.

ಇದಕ್ಕೆ ಪ್ರತಿಯಾಗಿ ತೆರಿಗೆ ಎಂಬ ಪದಕ್ಕೆ ಕೌಟಿಲ್ಯನ ಅರ್ಥವಿವರಣೆ ಹೀಗಿದೆ: ತಮ್ಮ ಪ್ರಾಣ ಹಾಗೂ ಆಸ್ತಿಪಾಸ್ತಿಗಳ ರಕ್ಷಣೆಗಾಗಿ ಮತ್ತು ಪಾಲನೆಗೆ ಪ್ರತಿಯಾಗಿ, ಪ್ರಜೆಗಳು ರಾಜನಿಗೆ ಕೊಡುವ ಸಂಭಾವನೆಯೇ ತೆರಿಗೆ. ಅಂದರೆ ತೆರಿಗೆ ರಾಜನನ್ನು ಪ್ರಜೆಗಳೊಂದಿಗೆ ಸೇರಿಸುವ ಒಂದು ಪವಿತ್ರವಾದ ಒಪ್ಪಂದ ಅಥವಾ ಕರಾರು. ತೆರಿಗೆಯನ್ನು ಪಡೆದುಕೊಂಡದ್ದಕ್ಕೆ ಪ್ರತಿಯಾಗಿ ಪ್ರಜಾಪಾಲನೆ ಮಾಡ

ಬೇಕಾದುದು ರಾಜನ ಪ್ರಥಮ ಕರ್ತವ್ಯ. ಒಂದು ಪಕ್ಷ ರಾಜನಿಂದ ತನ್ನ ಆಸ್ತಿಪಾಸ್ತಿಗೆ ಸಾಕಷ್ಟು ರಕ್ಷಣೆ ದೊರೆಯುತ್ತಿಲ್ಲವೆಂದು ಯಾವನಿಗಾದರೂ ಅನಿಸಿದಲ್ಲಿ ಅವನು ತೆರಿಗೆ ಕೊಡುವುದಕ್ಕೆ ನಿರಾಕರಿಸಬಹುದು. ಹಾಗೂ ಶತ್ರುರಾಜ್ಯಕ್ಕೆ ವಲಸೆ ಹೋಗಲೂ ಸ್ವತಂತ್ರನಾಗಿರುತ್ತಾನೆ.. ಹೀಗೆ, ಕೌಟಿಲ್ಯ ತೆರಿಗೆಯ ಮೂಲಕ ರಾಜ ಮತ್ತು ಪ್ರಜೆಗಳನ್ನು ಪವಿತ್ರವಾದ ಜವಾಬ್ದಾರಿಯ ಬಂಧನದಲ್ಲಿ ತೊಡಗಿಸುತ್ತಾನೆ.

ಒಂದು ಉತ್ತಮವಾದ ತೆರಿಗೆ ಪದ್ಧತಿಯಲ್ಲಿ ನಾಲ್ಕು ಮುಖ್ಯ ಲಕ್ಷಣಗಳಿರಬೇಕೆಂದು ಆಡಂ ಸ್ಮಿತ್ ಎಂಬ ಪಾಶ್ಚಾತ್ಯ ಅರ್ಥಶಾಸ್ತ್ರಜ್ಞ ವಿಧಿಸಿದ್ದಾನೆ. ಅವುಗಳಿವು: (1) ಕರಭಾರದ ಸಮಾನತೆ, (2) ನಿರ್ದಿಷ್ಟತೆ. (3) ಅನುಕೂಲತೆ ಮತ್ತು (4) ಮಿತವ್ಯಯ. ಕ್ರಿ.ಪೂ. 4ನೆಯ ಶತಮಾನದ ಗ್ರಂಥವಾದ ಅರ್ಥಶಾಸ್ತ್ರದಲ್ಲೂ ಕೌಟಿಲ್ಯ ಈ ಲಕ್ಷಣಗಳನ್ನೇ ವಿವರಿಸಿರುವುದು ಗಮನಾರ್ಹವಾದ ಸಂಗತಿ. ಕೌಟಿಲ್ಯ ತನ್ನ ತೆರಿಗೆ ಪದ್ಧತಿಯಲ್ಲಿ ಕರಭಾರದ ಸಮಾನತೆ ಹಾಗೂ ನ್ಯಾಯಕ್ಕೆ ಹೆಚ್ಚು ಗಮನವನ್ನಿತ್ತಿರುವುದು ಸ್ಪಷ್ಟವಾಗಿದೆ.

ಸರ್ಕಾರದ ಸಾಮಾನ್ಯ ವೆಚ್ಚಕ್ಕಾಗಿ ಪ್ರತಿಯೊಬ್ಬ ಪ್ರಜೆಯೂ ತನ್ನ ಆದಾಯಕ್ಕೆ ಅನುಗುಣವಾದ ಪ್ರಮಾಣದಲ್ಲಿ ತೆರಿಗೆಯನ್ನು ಕೊಡಬೇಕು ಎಂದು ಕೌಟಿಲ್ಯ ಪ್ರತಿಪಾದಿಸುತ್ತಾನೆ. ಅಂದರೆ, ಕರಭಾರದಲ್ಲಿ ಸಮಾನತೆ ದೊರಕಬೇಕಾದರೆ ಆದಾಯಕ್ಕೆ ಅನುಗುಣವಾಗಿ ತೆರಿಗೆಯೂ ಹೆಚ್ಚಾಗಬೇಕು.

ತೆರಿಗೆ ಪದ್ಧತಿಯಲ್ಲಿ ನಿರ್ದಿಷ್ಟತೆಗೆ ಕೌಟಿಲ್ಯ ವಿಶೇಷ ಗಮನವನ್ನಿತ್ತಿದ್ದಾನೆ. ತೆರಿಗೆಯನ್ನು ವಸೂಲು ಮಾಡುವ ಕಾಲ ಹಾಗೂ ಮೊತ್ತವನ್ನು ತೆರಿಗೆದಾರರಿಗೆ ಸ್ಪಷ್ಟವಾಗಿ ಮುಂಚಿತವಾಗಿ ತಿಳಿಸಬೇಕು. ಮನಬಂದಂತೆ ಹಾಗೂ ಮನಬಂದಷ್ಟು ತೆರಿಗೆಯನ್ನು ವಸೂಲು ಮಾಡುವ ಪದ್ಧತಿಯನ್ನು ಕೌಟಿಲ್ಯ ಧಿಕ್ಕರಿಸುತ್ತಾನೆ. ಅಂಥ ಅಧಿಕಾರಿಗಳಿಗೆ ಕ್ರೂರ ದಂಡನೆಯನ್ನು ವಿಧಿಸುತ್ತಾನೆ.

ತೆರಿಗೆಗಳ ವಸೂಲಿಯ ಕಾಲ ಹಾಗೂ ಕ್ರಮ ಪ್ರಜೆಗಳಿಗೆ ಅನುಕೂಲಕರವಾಗಿರಬೇಕೆಂಬುದು ಕೌಟಿಲ್ಯನ ಆಗ್ರಹ. ಜಾಣಾಕ್ಷನಾದ ತೋಟಗಾರ ಗಿಡಗಳಲ್ಲಿ ಹಣ್ಣು ಚೆನ್ನಾಗಿ ಮಾಗಿದಮೇಲೆ ಮಾತ್ರ ಯಾವ ರೀತಿ ಕೊಯ್ಯುತ್ತಾನೋ ಅದೇ ರೀತಿ ಪ್ರಜೆಗಳಿಗೆ ಅನನುಕೂಲವಾಗದ ರೀತಿಯಲ್ಲಿ ತೆರಿಗೆಯನ್ನು ವಸೂಲು ಮಾಡಬೇಕು. ಹಾಗೂ ತೆರಿಗೆಗಳು ಪ್ರಜೆಗಳಿಗೆ ಹೊರೆಯಾಗದ ರೀತಿಯಲ್ಲಿ ಅವನು ರೂಪಿಸಬೇಕೆಂದು ಅಭಿಪ್ರಾಯಪಡುತ್ತಾನೆ.

ಇದೇ ರೀತಿ ತೆರಿಗೆ ಪದ್ಧತಿಯಲ್ಲಿ ಮಿತವ್ಯಯಕ್ಕೂ ಕೌಟಿಲ್ಯ ಹೆಚ್ಚು ಗಮನವಿತ್ತಿದ್ದಾನೆ. ಪ್ರಜೆಗಳಿಗೆ ಪೀಡನೆಯಾಗದ ರೀತಿಯಲ್ಲಿ ರಾಜ್ಯದ ಆದಾಯವನ್ನು ಹೆಚ್ಚಿಸುವ ಅಧಿಕಾರಿಗಳಿಗೆ ಬಹುಮಾನಗಳನ್ನು ಕೊಟ್ಟು ಉತ್ತೇಜಿಸಬೇಕು. ಆದರೆ ರಾಜಾದಾಯವನ್ನು ಹೆಚ್ಚಿಸುವ ಭರದಲ್ಲಿ ಪ್ರಜಾಪೀಡನೆಗೆ ಅವಕಾಶ ಕೊಟ್ಟ ಅಧಿಕಾರಿಗಳನ್ನು ದಂಡಿಸಲೂ ಬೇಕು. ಅದೇ ರೀತಿ ತೆರಿಗೆ ವಸೂಲಿಗಾಗಿ ತಗಲುವ ವೆಚ್ಚದ ಮೇಲೆ ತೀವ್ರವಾದ ಹತೋಟಿ ಅಗತ್ಯ. ಅಧಿಕಾರಿಗಳು ರಾಜಾದಾಯ ಅಧಿಕವಾಗುವಂತೆಯೂ ಖರ್ಚು ಕಡಿಮೆಯಾಗುವಂತೆಯೂ ವರ್ತಿಸಬೇಕೆಂದು ಕೌಟಿಲ್ಯ ಅಭಿಪ್ರಾಯಪಡುತ್ತಾನೆ.

ಕೌಟಿಲ್ಯನ ತೆರಿಗೆ ಪದ್ಧತಿಯ ಮತ್ತೊಂದು ವಿಶೇಷವೆಂದರೆ. ತೆರಿಗೆಗಳನ್ನು ನಾನಾ ವಿಧಾನಗಳಲ್ಲಿ ಕೊಡುವ ಸೌಲಭ್ಯವಿದ್ದಿತು. ತೆರಿಗೆಗಳನ್ನು ಚಿನ್ನ, ನಾಣ್ಯಗಳು, ಜಾನುವಾರುಗಳು, ಧಾನ್ಯ, ಕಚ್ಚಾವಸ್ತುಗಳು. ವೈಯಕ್ತಿಕ ಸೇವೆ ಮುಂತಾದ ಅನೇಕ ರೀತಿಗಳಲ್ಲಿ ಕೊಡಬಹುದಾಗಿತ್ತು. ಕೆಲವು ಹಳ್ಳಿಗಳು ತೆರಿಗೆಗೆ ಬದಲಾಗಿ ಸೈನಿಕರನ್ನು ಒದಗಿಸುತ್ತಿದ್ದರೆ ಮತ್ತೆ ಕೆಲವು ಶ್ರಮದಾನವನ್ನೂ ಹಾಲುಮೊಸರುಗಳನ್ನೂ ಒದಗಿಸುತ್ತಿದ್ದುವು. ಈ ಪದ್ಧತಿಯಿಂದ ಸರ್ಕಾರಕ್ಕೆ ಅನುಕೂಲವಾದರೂ ಪ್ರಜೆಗಳಿಗೆ ಹೆಚ್ಚಿನ ಅನುಕೂಲವಾಗುತ್ತಿತ್ತು.

ತೆರಿಗೆ ಪದ್ಧತಿಯಲ್ಲಿ ನ್ಯಾಯವಾದ ಸಾಧನೆಗಾಗಿ ಕೌಟಿಲ್ಯ ಯೋಗ್ಯವಾದ ಅನೇಕ ತೆರಿಗೆ ವಿನಾಯಿತಿಗಳನ್ನೂ (ಅನುಗ್ರಹಪರಿಹಾರ) ಸೂಚಿಸುತ್ತಾನೆ. ತೆರಿಗೆ ವಿನಾಯಿತಿಯನ್ನು ಕೊಡಬೇಕಾದಲ್ಲಿ ರಾಜನ ಬೊಕ್ಕಸವನ್ನು ತುಂಬುವಂಥ ವಿನಾಯಿತಿಗಳನ್ನು ಮಾತ್ರ ಕೊಡಬೇಕು ಹಾಗೂ ಬೊಕ್ಕಸವನ್ನು ಬರಿದು ಮಾಡುವಂಥ ವಿನಾಯಿತಿಗಳನ್ನು ತಪ್ಪಿಸಬೇಕು ಎಂದು ಕೌಟಿಲ್ಯ ಎಚ್ಚರಿಕೆ ನೀಡುತ್ತಾನೆ.

1 ಹೊಸದಾಗಿ ನಿರ್ಮಿಸಿದ ಕೆರೆಕಟ್ಟೆ, ಕಾಲುವೆಗಳ ಅಚ್ಚುಕಟ್ಟಿನಲ್ಲಿರುವ ಜಮೀನುಗಳಿಗೆ ಐದು ವರ್ಷಗಳ ಕಾಲ ಕಂದಾಯವನ್ನು ಮನ್ನಾ ಮಾಡಬೇಕು. (ಪಂಚವಾರ್ಷಿಕಃ ಪರಿಹಾರಃ)

2 ನಿರ್ಲಕ್ಷಿಸಲ್ಪಟ್ಟ ಕೆರೆಕಟ್ಟೆಗಳ ದುರಸ್ತಿಯ ಸಂದರ್ಭದಲ್ಲಿ ನಾಲ್ಕು ವರ್ಷಗಳ ವರೆಗೆ ಕಂದಾಯದ ವಿನಾಯಿತಿ ಕೊಡಬೇಕು.

3 ಸಾಗುವಳಿಯಿಲ್ಲದ ಭೂಮಿಯನ್ನು ಕ್ರಯ ಅಥವಾ ಭೋಗ್ಯದ ಮೂಲಕ ಸಾಗುವಳಿ ಮಾಡುವ ಸಂದರ್ಭದಲ್ಲಿ ಎರಡು ವರ್ಷಗಳ ಕಂದಾಯವಿನಾಯಿತಿ ದೊರೆಯಬೇಕು.

ಇಷ್ಟಲ್ಲದೆ ಋತ್ವಿಕರು, ಆಚಾರ್ಯರು, ಪುರೋಹಿತರು, ಶ್ರೋತ್ರಿಯರು ಮುಂತಾದವರಿಗೆ ತೆರಿಗೆಗಳ ವಿನಾಯಿತಿ ಕೊಡಬೇಕು.

ವಿವಾಹದ ಪ್ರಯುಕ್ತ ತರಲಾದ ಪದಾರ್ಥಗಳು, ವಧು ತನ್ನ ತೌರಿನಿಂದ ಗಂಡನ ಮನೆಗೆ ತಂದ ಪದಾರ್ಥಗಳು, ಬಹುಮಾನ, ದಾನ, ಧರ್ಮ, ಹಾಗೂ ಯಜ್ಞಾರ್ಥವಾದ ಪದಾರ್ಥಗಳಿಗೆ ಸುಂಕದ ವಿನಾಯಿತಿಯನ್ನು ಕೊಡಬೇಕು.

ಈ ರೀತಿ ಅನೇಕ ಅರ್ಹವಾದ ಸಂದರ್ಭಗಳಲ್ಲಿ ತೆರಿಗೆ ವಿನಾಯಿತಿಯನ್ನು ಕೊಡುವುದರ ಮೂಲಕ ಕೌಟಿಲ್ಯ ತೆರಿಗೆ ಪದ್ಧತಿಯಲ್ಲಿ ಪ್ರಜೆಗಳಿಗೆ ಹೆಚ್ಚು ನ್ಯಾಯವನ್ನೊದಗಿಸಲು ಪ್ರಯತ್ನಿಸುತ್ತಾನೆ.

ಸಾರ್ವಜನಿಕ ಆದಾಯ

ಮೌರ್ಯ ಸಾಮ್ರಾಜ್ಯದ ಆದಾಯವನ್ನು ಕೌಟಿಲ್ಯ ಆದಾಯದ ಉತ್ಪತ್ತಿಯ ಮೂಲಕ್ಕೆ ಅನುಗುಣವಾಗಿ ಅನೇಕ ಭಾಗಗಳಾಗಿ ವಿಂಗಡಿಸಿದ್ದಾನೆ:

(1) ದುರ್ಗಗಳು : ಈ ಶಿರೋನಾಮೆಯ ಅಡಿಯಲ್ಲಿ ಬರುವ ಮುಖ್ಯ ವರಮಾನ ಮೂಲಗಳೆಂದರೆ : ಸುಂಕ, ಮಾರ್ಗಶುಲ್ಕ ಮತ್ತು ಆಮದು ತೆರಿಗೆ.

ಜರಿಮಾನೆಗಳು : ಅಳತೆ ಮತ್ತು ತೂಕ, ಟಂಕಸಾಲೆ, ಮದ್ಯಪಾನೀಯಗಳ ಮೇಲಿನ ಅಬ್ಕಾರಿ ಸುಂಕ, ಮಾಂಸಗೃಹಗಳು, ನೂಲು, ತೈಲಗಳು, ತುಪ್ಪ, ಸಕ್ಕರೆ, ರಾಜ್ಯದ ಉಗ್ರಾಣ, ವೇಶ್ಯೆಯರು, ಕಟ್ಟಡಗಳು ಹಾಗೂ ನಿವೇಶನಗಳ ಮೇಲಿನ ತೆರಿಗೆ (ವಾಸ್ತುಕ), ಕುಶಲಕರ್ಮಿಗಳ ವೃತ್ತಿಸಂಘಗಳು (ಕಾರುಶಿಲ್ಪಿಗಣಾಃ), ದೇವತಾಧ್ಯಕ್ಷ.

(2) ಗ್ರಾಮೀಣ ಪ್ರದೇಶಗಳು (ರಾಷ್ಟ್ರ) : ಈ ವಿಭಾಗದಲ್ಲಿ ಬರುವ ವರಮಾನ ಮೂಲಗಳಿವು : ರಾಜನ ಭೂಮಿಯಿಂದ ಬರುವ ಉತ್ಪನ್ನ, ಭೂಕಂದಾಯ (ಭಾಗ), ವ್ಯಾಪಾರಿಗಳು, ನಾವಾಧ್ಯಕ್ಷರು, ಪಟ್ಟಣಗಳು, ಹುಲ್ಲುಗಾವಲು, ಮಾರ್ಗಶುಲ್ಕ (ವಾರ್ತಾನಿ).

(3) ಗಣಿಗಳು : ಚಿನ್ನ, ಬೆಳ್ಳಿ, ವಜ್ರಗಳು, ರತ್ನಗಳು, ಮುತ್ತು, ಹವಳ, ಇತರ ಲೋಹಗಳು, ಉಪ್ಪು.

(4) ನೀರಾವರಿ : ಹೂದೋಟಗಳು, ಹಣ್ಣಿನ ತೋಟಗಳು, ತರಕಾರಿ ತೋಟಗಳು, ನೀರಾವರಿ ಸೌಕರ್ಯವಿರುವ ಜಮೀನುಗಳು.

(5) ಅರಣ್ಯಗಳು : ಬೇಟೆಯರಣ್ಯಗಳು, ಮರಮುಟ್ಟಿನ ಅರಣ್ಯಗಳು, ಆನೆಗಳ ಅರಣ್ಯಗಳು.

(6) ಜಾನುವಾರುಗಳು : ಹಸುಗಳು, ಎಮ್ಮೆಗಳು, ಆಡುಗಳು, ಕುರಿಗಳು, ಕತ್ತೆಗಳು, ಒಂಟೆಗಳು, ಕುದುರೆಗಳು.

(7) ವ್ಯಾಪಾರ ಮಾರ್ಗಗಳು : ಭೂಮಾರ್ಗಗಳು ಹಾಗೂ ಜಲಮಾರ್ಗಗಳು.

ಕೆಲವು ಪ್ರಮುಖ ಆದಾಯ ಮೂಲಗಳು

ಕೌಟಿಲ್ಯನ 'ಅರ್ಥಶಾಸ್ತ್ರ'ದಲ್ಲಿ ಮೌರ್ಯ ಸಾಮ್ರಾಜ್ಯದ ಬೊಕ್ಕಸಕ್ಕೆ ಆದಾಯ ತರುತ್ತಿದ್ದ ಅನೇಕ ತೆರಿಗೆಗಳು ಹಾಗೂ ಇತರ ಮೂಲಗಳ ಬಗ್ಗೆ ವಿವರಣೆ ಇದೆ. ಅವುಗಳಲ್ಲಿ ಬಹುಮುಖ್ಯವಾದ ಕೆಲವು ಆದಾಯಮೂಲಗಳ ಬಗ್ಗೆ ಸ್ಥೂಲವಾದ ವಿವರಣೆ ಉಪಯುಕ್ತವಾದ್ದು.

ಭೂಕಂದಾಯ

ಇಂದಿನ ಭಾರತ ಸರ್ಕಾರಕ್ಕೆ ಹೇಗೋ ಹಾಗೆಯೇ ಮೌರ್ಯ ಸಾಮ್ರಾಜ್ಯಕ್ಕೂ ಭೂಕಂದಾಯ ಆದಾಯದ ದೃಷ್ಟಿಯಿಂದ ಅತ್ಯಂತ ಪ್ರಮುಖವಾದ ತೆರಿಗೆಯಾಗಿದ್ದುದಾಗಿ 'ಅರ್ಥಶಾಸ್ತ್ರ'ದಿಂದ ತಿಳಿದು ಬರುತ್ತದೆ. ಜಮೀನಿನಿಂದ ಸರ್ಕಾರಕ್ಕೆ ಬರುತ್ತಿದ್ದ ಆದಾಯವನ್ನು ರಾಜಭೂಮಿಯ ಉತ್ಪನ್ನ ಹಾಗೂ ಖಾಸಗಿ ಜಮೀನುಗಳಿಂದ ಕಂದಾಯ ರೂಪದಲ್ಲಿ ಬರುತ್ತಿದ್ದ ಆದಾಯ ಎಂದು ಎರಡು ಭಾಗಗಳಾಗಿ ವಿಂಗಡಿಸಬಹುದು. ಭೂಕಂದಾಯವನ್ನು ಉತ್ಪನ್ನದ ರೂಪದಲ್ಲೇ ವಸೂಲು ಮಾಡಲಾಗುತ್ತಿತ್ತು. ಸಾಧಾರಣವಾಗಿ ವಾರ್ಷಿಕ ಉತ್ಪನ್ನದ ಆರನೆಯ ಒಂದು ಭಾಗವನ್ನು ಭೂಕಂದಾಯವಾಗಿ ಕೊಡಬೇಕಿತ್ತು (ಧಾನ್ಯಷಡ್ಭಾಗ). ನೀರಾವರಿ ಸೌಕರ್ಯವನ್ನು ಒದಗಿಸಿಕೊಡುವ ಹೊಣೆ ರಾಜನ ಮೇಲೆ ಇದ್ದುದರಿಂದ ಭೂಕಂದಾಯದೊಂದಿಗೆ ನೀರಾವರಿ ಕ್ರಯವನ್ನೂ ಕೊಡಬೇಕಿತ್ತು (ಉದಕಭಾಗ). ಆದರೆ ಪ್ರಾಕೃತಿಕ ಜಲಮೂಲಗಳಾದ ನದಿ. ಸರೋವರ ಮುಂತಾದವುಗಳಿಂದ ವ್ಯವಸಾಯಕ್ಕಾಗಿ ನೀರನ್ನು ಹಾಯಿಸಿಕೊಂಡಾಗಲೂ ನೀರಾವರಿ ಕ್ರಯವನ್ನು ಹೇರಲಾಗುತ್ತಿತ್ತು. ಸಾಮ್ರಾಜ್ಯದ ಸಕಲ ಭೂ ಹಾಗೂ ಜಲ ಸಂಪತ್ತಿಗೆ ರಾಜನೇ ಒಡೆಯನೆಂಬುದು ಇದಕ್ಕೆ ಕೌಟಿಲ ಕೊಡುವ ಸಮರ್ಥನೆ.

ಬಳಸುವ ನೀರಿನ ಮೊತ್ತಕ್ಕನುಗುಣವಾಗಿ ನೀರಿನ ಕ್ರಯವನ್ನು ನಾಲ್ಕು ಮಟ್ಟದಲ್ಲಿ ವಿಧಿಸಲಾಗುತ್ತಿತ್ತು: 1 ಶರೀರಶ್ರಮದಿಂದ ನೀರನ್ನು ಹಾಯಿಸಿಕೊಳ್ಳುವ ರೈತರಿಂದ ಉತ್ಪನ್ನದ ಐದನೆಯ ಒಂದು ಭಾಗವನ್ನು ವಸೂಲು ಮಾಡಲಾಗುತ್ತಿತ್ತು. ಅತಿ ಕಡಿಮೆ ನೀರು ಬೇಕಾಗುವ ಬೆಳೆಗಳಿಗೆ ಮಾತ್ರ ಈ ರೀತಿ ಶರೀರಶ್ರಮದಿಂದ ನೀರು ಹಾಯಿಸಿಕೊಳ್ಳಲಾಗುವುದರಿಂದ ಕನಿಷ್ಠ ಕ್ರಯವನ್ನು ವಿಧಿಸಲಾಗುತ್ತಿತ್ತು. 2 ಹೆಗಲಿನ ಮೇಲೆ ಹೊತ್ತು ನೀರನ್ನು ಹಾಯಿಸಿಕೊಳ್ಳುವ ಕ್ರಮ: ಅಂದರೆ ಎತ್ತುಗಳ ಸಹಾಯದಿಂದ ನೀರೆತ್ತಿ ನೀರಾವರಿ ಮಾಡುವವರಿಗೆ ನೀರಿನ ಶುಲ್ಕ, ಉತ್ಪನ್ನದ ನಾಲ್ಕನೆಯ ಒಂದು ಭಾಗ. ಮೇಲಿನ ಕ್ರಮಕ್ಕಿಂತ ಈ ಕ್ರಮದಲ್ಲಿ ಹೆಚ್ಚು ನೀರು ಬಳಸಲಾಗುವುದರಿಂದ ಶುಲ್ಕವೂ ಅಧಿಕ. 3 ಕಾಲುವೆಗಳು ಅಥವಾ ಮತ್ಯಾವ ಯಾಂತ್ರಿಕ ಸಾಧನದ ಮೂಲಕ ನೀರು ಹಾಯಿಸಿಕೊಳ್ಳುವವರು ಅತ್ಯಧಿಕ ನೀರನ್ನು ಉಪಯೋಗಿಸುವ ಕಾರಣ ಅತ್ಯಧಿಕ ಶುಲ್ಕ, ಅಂದರೆ ಮೂರನೆಯ ಒಂದು ಭಾಗ ಉತ್ಪನ್ನವನ್ನು, ಹಾಕಲಾಗುತ್ತಿತ್ತು. 4 ನದಿ, ಸರೋವರ ಮುಂತಾದ ಪ್ರಾಕೃತಿಕ ಜಲಮೂಲಗಳಿಂದ ನೀರೆತ್ತಿ ಹಾಯಿಸಿಕೊಳ್ಳುವವರಿಂದಲೂ ರಾಜ ಸಕಲ ಜಲಸಂಪತ್ತಿನ ಒಡೆಯನೆಂಬ ಕಾರಣದಿಂದ ಉತ್ಪನ್ನದ ನಾಲ್ಕನೆಯ ಒಂದು ಭಾಗವನ್ನು ನೀರಿನ ಶುಲ್ಕವನ್ನಾಗಿ ವಸೂಲು ಮಾಡಲಾಗುತ್ತಿತ್ತು.

ಸುಂಕ, ಮಾರ್ಗಶುಲ್ಕ ಹಾಗೂ ಆಮದು ತೆರಿಗೆ

ಒಂದು ಜಿಲ್ಲೆ ಅಥವಾ ನಗರದ ಎಲ್ಲೆಯೊಳಕ್ಕೆ ಹೊರಗಿನಿಂದ ಬರುವ ಪದಾರ್ಥಗಳ ಮೇಲೆ ಹಾಕುವ ತೆರಿಗೆಗೆ ಸುಂಕವೆನ್ನಬಹುದು.

ಸರ್ಕಾರದ ಭೂ ಹಾಗೂ ಜಲಮಾರ್ಗಗಳನ್ನು ಉಪಯೋಗಿಸಿದುದಕ್ಕೆ ಹಾಕುವ ತೆರಿಗೆ ಮಾರ್ಗ ಶುಲ್ಕ (ಟೋಲ್).

ವಿದೇಶಗಳಿಂದ ಆಮದು ಮಾಡಿಕೊಂಡ ಪದಾರ್ಥಗಳು ರಾಜ್ಯದ ಗಡಿಯನ್ನು ಪ್ರವೇಶಿಸುವಾಗ ಹಾಕುವ ತೆರಿಗೆಗೆ ಆಮದು ತೆರಿಗೆ (ಕಸ್ಟಮ್ಸ್) ಎಂದು ಹೆಸರು.

ಆದರೆ, ಕೌಟಿಲ್ಯನ 'ಅರ್ಥಶಾಸ್ತ್ರ'ದಲ್ಲಿ ಸುಂಕ ಹಾಗೂ ಆಮದು ತೆರಿಗೆಗಳನ್ನು ಪ್ರತ್ಯೇಕಿಸದೆ ಎರಡನ್ನೂ ಶುಲ್ಕ ಎಂಬ ಪದದಿಂದಲೇ ಕರೆಯಲಾಗುತ್ತದೆ ಎಂಬುದನ್ನು ಗಮನಿಸಬೇಕು.

ಮೌರ್ಯ ಸಾಮ್ರಾಜ್ಯದಲ್ಲಿ ವಿದೇಶಿ ವ್ಯಾಪಾರ ಅತಿ ಬಿರುಸಿನಿಂದ ನಡೆದಿತ್ತೆಂಬುದು 'ಅರ್ಥಶಾಸ್ತ್ರ'ದಿಂದ ತಿಳಿದುಬರುತ್ತದೆ. ಚೀನದ ರೇಷ್ಮೆಬಟ್ಟೆಗಳು, ಮಧುರೆಯ ಹತ್ತಿಬಟ್ಟೆಗಳು, ಪಾಂಡ್ಯ, ಕೇರಳ, ಪರ್ಷಿಯ ಮತ್ತು ಸಿಂಹಳದ ಹವಳ, ಮುತ್ತುಗಳು, ಶಂಖ ಮುಂತಾದವು ಮೌರ್ಯ ಸಾಮ್ರಾಜ್ಯಕ್ಕೆ ಅಧಿಕವಾಗಿ ರಫ್ತಾಗುತ್ತಿದ್ದುವು.

ಯಾವ ವಿದೇಶಿ ಸರಕಾಗಲಿ ಸಾಮ್ರಾಜ್ಯದ ಎಲ್ಲೆಯನ್ನು ಪ್ರವೇಶಿಸುವಾಗ 'ವಾರ್ತಾ' ಎಂಬ

ತೆರಿಗೆಯನ್ನು ಕೊಡಬೇಕಿತ್ತು. ಇದು ರಾಜಮಾರ್ಗದ ಬಳಕೆಗಾಗಿ ವಸೂಲು ಮಾಡುತ್ತಿದ್ದ ಮಾರ್ಗ ಶುಲ್ಕವೆಂಬುದಾಗಿ ಅಭಿಪ್ರಾಯಪಡಲಾಗಿದೆ. ರಾಜ್ಯದ ಗಡಿ ಅಧಿಕಾರಿ 'ಅಂತಪಾಲ'ನೆಂಬುವನು ಈ ರೀತಿ ಸಾಮ್ರಾಜ್ಯವನ್ನು ಪ್ರವೇಶಿಸಿದ ಸರಕುಗಳನ್ನು ಪರೀಕ್ಷಿಸಿ ರಾಜಮುದ್ರೆಯನ್ನೊತ್ತಿ ಸುಂಕದ ವಸೂಲಿಗಾಗಿ ಸುಂಕದ ಕಟ್ಟೆಗೆ (ಶುಲ್ಕಶಾಲಾ) ಕಳಿಸಿಕೊಡುತ್ತಿದ್ದ. ನಗರ ಪ್ರವೇಶ ಮಾಡುವ ಎಲ್ಲ ಪದಾರ್ಥಗಳನ್ನೂ 1 ಬಾಹ್ಯ (ಗ್ರಾಮೀಣ ಪ್ರದೇಶಗಳಿಂದ ಬಂದವು). 2 ಅಭ್ಯಂತರ (ಕೋಟೆಗಳೊಳಗೇ ತಯಾರಾದವು) ಮತ್ತು 3 ಅತಿಥ್ಯ (ವಿದೇಶಗಳಿಂದ ಬಂದವು) ಎಂಬುದಾಗಿ ಮೂರು ಭಾಗಗಳನ್ನಾಗಿ ಮಾಡಲಾಗುತ್ತಿತ್ತು. ನಗರದ ಮಹಾದ್ವಾರವನ್ನು ಪ್ರವೇಶಿಸುವಾಗ ಹಾಗೂ ಬಿಡುವಾಗ ಎಲ್ಲ ಪದಾರ್ಥಗಳೂ ಸುಂಕವನ್ನು ತೆರಬೇಕಿತ್ತು. ಇವರಲ್ಲಿ ದೇಶೀಯ ವಸ್ತುಗಳು ಹಾಗೂ ವಿದೇಶೀಯ ವಸ್ತುಗಳೆಂದು ತಾರತಮ್ಯ ಮಾಡುತ್ತಿರಲಿಲ್ಲ. ಆಯುಧಗಳು. ಲೋಹಗಳು. ರಥಗಳು. ಅಮೂಲ್ಯವಾದ ರತ್ನಾದಿಗಳು. ಆಹಾರಧಾನ್ಯಗಳು ಮತ್ತು ಜಾನುವಾರುಗಳು—ಇವನ್ನು ನಗರದೊಳಕ್ಕೆ ತರುವುದನ್ನು ನಿಷೇಧಿಸಲಾಗುತ್ತಿತ್ತು. ಆದರೆ ಕೆಲವು ಬಹಿಷ್ಕೃತ ಪದಾರ್ಥಗಳನ್ನೂ ನಗರದ್ವಾರದ ಹೊರಗಡೆ ಸುಂಕವನ್ನು ಕೊಡದೆ ವ್ಯಾಪಾರ ಮಾಡಲು ಅವಕಾಶ ಕೊಡಲಾಗುತ್ತಿತ್ತು.

ರೇವುಪಟ್ಟಣಗಳಲ್ಲಿಯೂ ಬಂದರು ಕಟ್ಟೆಯನ್ನು ಪ್ರವೇಶಿಸುವ ಸರಕುಗಳ ಮೇಲೆ ಸುಂಕವನ್ನು ಹೇರಲಾಗುತ್ತಿತ್ತು. ಮಾರ್ಗಮಧ್ಯದಲ್ಲಿ ಸಾಮ್ರಾಜ್ಯದ ಬಂದರಿನಲ್ಲಿ ತಂಗುವ ಹಡಗುಗಳೂ ಸುಂಕವನ್ನು ತೆರಬೇಕಿತ್ತು.

ನಗರಪ್ರವೇಶ ಮಾಡುವ ಸರಕುಗಳು ಸುಂಕದ ಜೊತೆಗೆ ಸುಂಕದ ಶೇ. 20ರಷ್ಟು ಪ್ರವೇಶ ಶುಲ್ಕವನ್ನೂ (ದ್ವಾರಾದೇಯ) ಕೊಡಬೇಕಿತ್ತು.

ವಿದೇಶ ವ್ಯಾಪಾರದಲ್ಲಿ ನಿರತರಾದ ವ್ಯಾಪಾರಿಗಳಿಗೆ ಸಾಕಷ್ಟು ಲಾಭ ಬರುವ ರೀತಿಯಲ್ಲಿ ಅನೇಕ ತೆರಿಗೆ ವಿನಾಯಿತಿಗಳು ಹಾಗೂ ಇತರ ಸೌಲಭ್ಯಗಳನ್ನು ಕೊಡಲಾಗುತ್ತಿತ್ತು. ಸಾಮ್ರಾಜ್ಯದ ಎಲ್ಲೆಯನ್ನು ಪ್ರವೇಶಿಸಿದ ಸರಕುಗಳಿಗೆ ಕಳ್ಳತನ ಅಥವಾ ಮತ್ತಾವುದಾದರೋ ಕಾರಣದಿಂದ ನಷ್ಟ ಉಂಟಾದಲ್ಲಿ. ಗಡಿರಕ್ಷಕ ಅಥವಾ ಅಂತಪಾಲ ಆ ನಷ್ಟವನ್ನು ತುಂಬಿಕೊಡಬೇಕಿತ್ತು. ಈ ರೀತಿ ರಾಜ್ಯದ ಎಲ್ಲೆಯನ್ನು ಪ್ರವೇಶಿಸಿದ ಎಲ್ಲ ಸರಕುಗಳನ್ನೂ ಸರ್ಕಾರ ತಾನಾಗಿಯೇ ಯಾವ ಕಂತನ್ನೂ ತೆಗೆದುಕೊಳ್ಳದೆ ವಿಮೆ ಮಾಡುತ್ತಿತ್ತು.

ರಾಜ್ಯದ ಜಲಮಾರ್ಗಗಳನ್ನು ಬಳಸುವ ವ್ಯಾಪಾರಿಗಳು ಹಾಗೂ ಪ್ರಯಾಣಿಕರಿಂದ ಸರ್ಕಾರದ ಹಡಗುಗಳು. ದೋಣಿಗಳು. ಹಾಗೂ ತೆಪ್ಪಗಳನ್ನು ಬಳಸಿದುದಕ್ಕಾಗಿ ದೋಣಿಶುಲ್ಕವನ್ನೂ ವಸೂಲು ಮಾಡಲಾಗುತ್ತಿತ್ತು. ಭೂಮಾರ್ಗದಲ್ಲಿ ಇದ್ದಂತೆಯೇ ಜಲಮಾರ್ಗದಲ್ಲಿಯೂ ಪದಾರ್ಥಗಳು ಕಳ್ಳಕಾಕರಿಗೆ ತುತ್ತಾಗಿ ನಷ್ಟವಾದ ಪಕ್ಷದಲ್ಲಿ, ಸರ್ಕಾರ ಆ ನಷ್ಟವನ್ನು ತುಂಬಿಕೊಡುತ್ತಿತ್ತು. ಇಂಥ ಸಾಗಾಣಿಕೆಯ ವಿಮೆ ವ್ಯವಸ್ಥೆ ಮೌರ್ಯ ಸಾಮ್ರಾಜ್ಯದ ಕಾಲದಲ್ಲಿತ್ತು.

ಮಾರ್ಗಶುಲ್ಕವನ್ನು ಕೊಡಲು ತಪ್ಪಿದರೆ ಅದರ ಎಂಟು ಪಟ್ಟು ದಂಡವನ್ನು ವಿಧಿಸಲಾಗುತ್ತಿತ್ತು. ಹಾಗೂ ಕೆಲವು ವೇಳೆ ಸರಕನ್ನು ಸರ್ಕಾರ ಮುಟ್ಟುಗೋಲು ಹಾಕಿಕೊಳ್ಳಲೂ ಬಹುದಿತ್ತು.

ಅಬ್ಕಾರಿ ಸುಂಕ

ಯಾವುದೇ ಪದಾರ್ಥದ ತಯಾರಿಕೆಯ ಮೇಲೆ ಹಾಕಲಾಗುವ ತೆರಿಗೆಯೇ ಅಬ್ಕಾರಿ ಸುಂಕ. ಯಾವುದೇ ವೃತ್ತಿಯನ್ನನುಸರಿಸಲು. ಪದಾರ್ಥಗಳನ್ನು ಹೊಂದಿರಲು ಹಾಗೂ ಇತರ ಸಂದರ್ಭಗಳಲ್ಲಿ ಅಗತ್ಯವಾದ ಪರವಾನಗಿಯನ್ನು ಪಡೆಯಲು ಕೊಡಬೇಕಾದ ತೆರಿಗೆಯನ್ನೂ ಅಬ್ಕಾರಿ ಎಂದೇ ವ್ಯವಹರಿಸಲಾಗುತ್ತದೆ.

ಮೌರ್ಯ ಸಾಮ್ರಾಜ್ಯದಲ್ಲಿ ವೇಶ್ಯಾವೃತ್ತಿ ಸರ್ಕಾರದ ನಿಯಂತ್ರಣ ಹಾಗೂ ರಕ್ಷಣೆಗೆ ಒಳಪಟ್ಟಿತ್ತು. ಆದರೆ ರಾಜನ ನೇರವಾದ ರಕ್ಷಣೆಗೆ ಒಳಪಡದೆ. ಖಾಸಗೀ ವ್ಯಕ್ತಿಯೊಬ್ಬನ ರಕ್ಷಣೆಯಲ್ಲಿದ್ದ ವೇಶ್ಯೆಯಿಂದಲೂ ಪರೋಕ್ಷವಾಗಿ ಸರ್ಕಾರಿ ನಿಯಂತ್ರಣವನ್ನು ಏರ್ಪಡಿಸಲು ತಿಂಗಳಿಗೆ ಒಂದೂಕಾಲು ಪಣಗಳನ್ನು ತೆರಿಗೆಯ ರೂಪದಲ್ಲಿ ವಸೂಲು ಮಾಡಲಾಗುತ್ತಿತ್ತು. ಇದೇ ರೀತಿ ನಟರು. ನರ್ತಕರು.

ಗಾಯಕರು ಮುಂತಾದವರಿಂದಲೂ ಐದು ಪಣಗಳಷ್ಟು ವೃತ್ತಿತೆರಿಗೆಯನ್ನು ವಸೂಲುಮಾಡಲಾಗುತ್ತಿತ್ತು.

ಕುಶಲಕರ್ಮಿಗಳು ಹಾಗೂ ವೃತ್ತಿಸಂಘಗಳಿಂದಲೂ ಪರವಾನಗಿ ಶುಲ್ಕವನ್ನು ವಸೂಲು ಮಾಡಲಾಗುತ್ತಿತ್ತು.

ಅಬ್ಕಾರಿ ಸುಂಕಗಳಲ್ಲಿ ಬಹಳ ಪ್ರಮುಖವಾಗಿದ್ದುದು ಮಾದಕ ಪಾನೀಯಗಳ ತಯಾರಿಕೆ ಹಾಗೂ ಮಾರಾಟದ ಮೇಲೆ ವಿಧಿಸಲಾಗುತ್ತಿದ್ದ ಸುಂಕ. ಮೌರ್ಯ ಸಾಮ್ರಾಜ್ಯದಲ್ಲಿ ಮಾದಕ ಪಾನೀಯಗಳ ತಯಾರಿಕೆ ಸರ್ಕಾರದ ಏಕಸ್ವಾಮ್ಯದಲ್ಲಿತ್ತು. ಸರ್ಕಾರದ ಅನುಮತಿ ಇಲ್ಲದೆ ಯಾವ ಖಾಸಗಿ ವ್ಯಕ್ತಿಯೂ ಮಾದಕ ಪಾನೀಯಗಳನ್ನು ತಯಾರಿಸುವಂತಿರಲಿಲ್ಲ. ಆದರೆ ಹಬ್ಬಹರಿದಿನಗಳು, ಜಾತ್ರೆಗಳು ಮುಂತಾದ ಸಂದರ್ಭಗಳಲ್ಲಿ ಗೃಹಸ್ಥರಿಗೆ ಶ್ವೇತಸುರೆ ಹಾಗೂ ಇತರ ಕೆಲವು ನಿರ್ದಿಷ್ಟ ಮಾದಕದ್ರವ್ಯಗಳನ್ನು ತಯಾರಿಸಲು ಅನುಮತಿ ನೀಡಲಾಗುತ್ತಿತ್ತು. ಅದಕ್ಕಾಗಿ ಪರವಾನಗಿ ಶುಲ್ಕವನ್ನು ವಸೂಲು ಮಾಡಲಾಗುತ್ತಿತ್ತು. ವಿದೇಶಿ ಮದ್ಯಗಳನ್ನು ಮಾರಾಟ ಮಾಡುವ ವ್ಯಾಪಾರಿಗಳಿಂದ ವಸೂಲು ಮಾಡುತ್ತಿದ್ದ ಶೇ. 5ರ ತೆರಿಗೆ ಹಾಗೂ ಕೆಲವು ನಿರ್ದಿಷ್ಟ ಮಾದಕ ದ್ರವ್ಯಗಳ ಮಾರಾಟಕ್ಕಾಗಿ ಕೊಡಬೇಕಾಗಿದ್ದ ವೈಧಾರಣವೆಂಬ ತೆರಿಗೆ ಇವು ಇನ್ನು ಕೆಲವು ಆದಾಯಮೂಲಗಳಾಗಿದ್ದುವು.

ಉಪ್ಪಿನ ತೆರಿಗೆ

ಉಪ್ಪಿನ ಉತ್ಪಾದನೆ ಹಾಗೂ ಮಾರಾಟ ಮೌರ್ಯ ಸರ್ಕಾರದ ಏಕಸ್ವಾಮ್ಯವಾಗಿತ್ತು. ಆದ್ದರಿಂದ ಸರ್ಕಾರದ ಅನುಮತಿ ಪಡೆದವರು ಮಾತ್ರ ಉಪ್ಪಿನ ತಯಾರಿಕೆಯಲ್ಲಿ ತೊಡಗಬಹುದಾಗಿತ್ತು. ಇದಕ್ಕೆ ಪ್ರತಿಯಾಗಿ ಒಂದು ನಿರ್ದಿಷ್ಟ ಪ್ರಮಾಣದ ಉಪ್ಪು ಅಥವಾ ಹಣವನ್ನು ಕಂದಾಯವನ್ನಾಗಿ ವಸೂಲು ಮಾಡಲಾಗುತ್ತಿತ್ತು. ಮೌರ್ಯ ಸಾಮ್ರಾಜ್ಯಕ್ಕೆ ಉಪ್ಪು ಮೂರು ರೀತಿಯಲ್ಲಿ ದೊರೆಯುತ್ತಿತ್ತು:

1 ಸಾಮ್ರಾಜ್ಯದ ಗಣಿಗಳಿಂದ ತೆಗೆದದ್ದು
2 ಸಮುದ್ರದ ಉಪ್ಪು
3 ಆಮದು ಮಾಡಿಕೊಂಡ ಉಪ್ಪು

ಆಮದು ಮಾಡಿಕೊಂಡ ಉಪ್ಪಿನ ಮೇಲೆ ಆರನೆಯ ಒಂದು ಭಾಗ ಸುಂಕವನ್ನು ವಿಧಿಸಲಾಗುತ್ತಿತ್ತು. ಇದರೊಂದಿಗೆ ಆಮದು ಮಾಡಿಕೊಂಡ ಉಪ್ಪಿನ ವ್ಯಾಪಾರದಿಂದ ಸರ್ಕಾರದ ಉಪ್ಪಿನ ವ್ಯಾಪಾರಕ್ಕೆ ಆಗುತ್ತಿದ್ದ ನಷ್ಟವನ್ನು ತುಂಬುವುದಕ್ಕಾಗಿ ವೈಧಾರಣವೆಂಬ ಇನ್ನೊಂದು ತೆರಿಗೆಯನ್ನೂ ವಸೂಲು ಮಾಡಲಾಗುತ್ತಿತ್ತು.

ಇವುಗಳೊಂದಿಗೆ ಉಪ್ಪಿನ ಬಳಕೆದಾರರ ಮೇಲೂ ತೆರಿಗೆ ಹಾಕಲಾಗುತ್ತಿತ್ತು. ಆದರೆ ವೇದ ಪಾರಂಗತರು. ಕೂಲಿಕಾರರು ಮುಂತಾದವರಿಗೆ ಉಪ್ಪಿನ ತೆರಿಗೆಯ ವಿನಾಯಿತಿ ಕೊಡಲಾಗಿತ್ತು.

ಆದಾಯ ತೆರಿಗೆ ಹಾಗೂ ಅಧಿಕ ಲಾಭ ತೆರಿಗೆ

ಕೌಟಿಲ್ಯನ 'ಅರ್ಥಶಾಸ್ತ್ರ'ದಲ್ಲಿ ಆದಾಯ ತೆರಿಗೆಯ ವಿವರಣೆಯನ್ನೂ ಕಾಣಬಹುದು. ನಟರು. ನರ್ತಕರು. ಗಾಯಕರು. ವ್ಯಭಿಚಾರಿಣಿಯರು ಮುಂತಾದವರಿಂದ ಆದಾಯ ತೆರಿಗೆಯನ್ನು ವಸೂಲು ಮಾಡಲಾಗುತ್ತಿತ್ತೆಂದು ತಿಳಿದುಬರುತ್ತದೆ. ಆದರೆ ಮೌರ್ಯ ವಿತ್ತವ್ಯವಸ್ಥೆಯಲ್ಲಿ ಆದಾಯ ತೆರಿಗೆ ಇಂದಿನಷ್ಟು ಪ್ರಾಮುಖ್ಯ ಪಡೆದಿದ್ದಂತೆ ಕಂಡುಬರುವುದಿಲ್ಲ.

ಆದಾಯ ತೆರಿಗೆ ಮಾತ್ರವೇ ಅಲ್ಲದೆ 'ಅರ್ಥಶಾಸ್ತ್ರ'ದಲ್ಲಿ ಇಂದು ಹೆಚ್ಚು ಪ್ರಚಾರದಲ್ಲಿರುವ ಅಧಿಕ ಲಾಭ ತೆರಿಗೆಯ ಉಲ್ಲೇಖವನ್ನೂ ಕಾಣಬಹುದು. ದೇಶೀಯ ಹಾಗೂ ಆಮದಾದ ಪದಾರ್ಥಗಳೆರಡರ ವಿಷಯದಲ್ಲೂ ತೀವ್ರವಾದ ಬೆಲೆ ನಿಯಂತ್ರಣದ ಅಗತ್ಯವನ್ನು ಕೌಟಿಲ್ಯ ಒತ್ತಿಹೇಳುತ್ತಾನೆ. ಬೆಲೆ

ಗಳನ್ನು ತೀವ್ರವಾಗಿ ಏರಿಸಿ ಬಳಕೆದಾರರ ಪೀಡನೆಯ ಮೂಲಕ ವ್ಯಾಪಾರಿಗಳು ಅತಿಯಾದ ಲಾಭಗಳಿಸುವುದನ್ನು ನಿಷ್ಕರುಣೆಯಿಂದ ಮಟ್ಟಹಾಕಬೇಕೆನ್ನುತ್ತಾನೆ. ಲಾಭಕೋರತನದಿಂದ ಕೃತಕವಾದ ಅಭಾವ ಉಂಟುಮಾಡುವ ವ್ಯಾಪಾರಿಗಳಿಗೆ ಹಾಗೂ ವ್ಯಾಪಾರಿ ಸಂಘಗಳಿಗೆ ಕಠಿಣ ಶಿಕ್ಷೆಯನ್ನು ವಿಧಿಸಲಾಗಿದೆ. ಈ ರೀತಿ ಮೌರ್ಯ ಸಾಮ್ರಾಜ್ಯದಲ್ಲಿ ಉತ್ತಮವಾದ ಬೆಲೆ ಹಾಗೂ ಲಾಭನಿಯಂತ್ರಣ ಪದ್ಧತಿ ಜಾರಿಯಲ್ಲಿದ್ದುದು ತಿಳಿದುಬರುತ್ತದೆ. ಸ್ವದೇಶಿ ಸರಕುಗಳ ಮೇಲೆ ನಿಗದಿಯಾದ ಬೆಲೆಗಿಂತ ಶೇ. 5ರಷ್ಟು ಮತ್ತು ಆಮದಾದ ಸರಕುಗಳ ಮೇಲೆ ಶೇ. 10ರಷ್ಟು ಮಾತ್ರ ಲಾಭವನ್ನು ಪಡೆಯಬಹುದಾಗಿತ್ತೆಂದು ತಿಳಿದುಬರುತ್ತದೆ.

ಜೂಜುಗಾರಿಕೆ

ಜೂಜುಗಾರಿಕೆಯ ಬಗ್ಗೆ ನ್ಯಾಯಶಾಸ್ತ್ರಕಾರರ ಅಭಿಮತವೇನೇ ಇರಲಿ. ಶುದ್ಧ ಕಾರ್ಯವಾದಿಯಾದ ಕೌಟಿಲ್ಯ ಅದನ್ನು ಸರ್ಕಾರದ ನಿಯಂತ್ರಣದಲ್ಲಿ ಉತ್ತೇಜಿಸಿ ರಾಜ್ಯಕ್ಕೆ ಪ್ರಮುಖ ಆದಾಯಮೂಲವನ್ನಾಗಿ ಬಳಸಿಕೊಂಡಿದ್ದ. ಸರ್ಕಾರದ ಮೂಲಕ ಜೂಜುಕಟ್ಟೆಗಳನ್ನು ನಿರ್ಮಿಸಿ, ಅಲ್ಲಿ ಜೂಜುಕಾರರಿಗೆ ಪಗಡೆ, ದಾಳಗಳು, ಅನ್ನಪಾನೀಯಗಳು ಮುಂತಾದ ಸೌಲಭ್ಯಗಳನ್ನೆಲ್ಲ ಒದಗಿಸಲಾಗುತ್ತಿತ್ತು. ಜೂಜಿನ ಕಾರಣಕ್ಕಾಗಿ ತಮ್ಮ ಆಸ್ತಿಪಾಸ್ತಿಗಳನ್ನು ಮಾರಾಟ ಮಾಡುವವರಿಗೆ ಸರ್ಕಾರದಿಂದ ಮಾರಾಟದ ವ್ಯವಸ್ಥೆಯನ್ನೂ ಮಾಡಲಾಗುತ್ತಿತ್ತು. ಈ ಸೇವೆಗಳಿಗೆ ಪ್ರತಿಯಾಗಿ ಅನೇಕ ರೀತಿಯ ಆದಾಯಗಳೂ ಸರ್ಕಾರಕ್ಕೆ ಇದ್ದುವು. ಅವೆಂದರೆ: 1 ಪರವಾನೆ ಶುಲ್ಕ. 2 ಪಣವನ್ನು ಗೆದ್ದವರಿಂದ ವಸೂಲು ಮಾಡುತ್ತಿದ್ದ ಶೇ. 5ರ ತೆರಿಗೆ. 3 ಪಾಸು, ದಾಳ ಮುಂತಾದ ಆಟೋಪಕರಣಗಳ ಪೂರೈಕೆಗಾಗಿ ಬಾಡಿಗೆ. 4 ನೀರು ವಸತಿ ಮುಂತಾದವುಗಳ ಪೂರೈಕೆಗಾಗಿ ಬಾಡಿಗೆ. 5 ಜುಲ್ಮಾನೆಗಳು ಮತ್ತು 6 ಪದಾರ್ಥಗಳ ಮಾರಾಟ ಹಾಗೂ ಅಡವಿನ ವ್ಯವಸ್ಥೆಗಾಗಿ ಶುಲ್ಕ.

ಅರಣ್ಯಗಳು

ಅರಣ್ಯಗಳು ಸರ್ಕಾರದ ಏಕಸ್ವಾಮ್ಯಕ್ಕೆ ಸೇರಿದ್ದುವು. ಅವುಗಳನ್ನು ಉತ್ಪಾದಕ ಅರಣ್ಯಗಳು ಹಾಗೂ ನಿರುತ್ಪಾದಕ ಅರಣ್ಯಗಳೆಂದು ವಿಭಾಗಿಸಲಾಗಿತ್ತು. ನಿರುತ್ಪಾದಕ ಅರಣ್ಯಗಳನ್ನು ಮುಖ್ಯವಾಗಿ ಬೇಟೆಗಾಗಿ ಬಳಸಲಾಗುತ್ತಿತ್ತು. ಉತ್ಪಾದಕ ಅರಣ್ಯಗಳು ಪ್ರತ್ಯೇಕವಾದ ಅರಣ್ಯ ಇಲಾಖೆಯ ಮೇಲ್ವಿಚಾರಣೆಯಲ್ಲಿದ್ದುವು. ಅರಣ್ಯಗಳಿಂದ ಬರುತ್ತಿದ್ದ ಉತ್ಪನ್ನಗಳು ಮುಖ್ಯವಾಗಿ ಮೂರು ರೀತಿಯವು: 1. ಆನೆಗಳು. 2 ಮರಮುಟ್ಟುಗಳು ಹಾಗೂ 3 ಇತರ ಅರಣ್ಯೋತ್ಪಾದನೆಗಳು.

ಅರಣ್ಯೋತ್ಪನ್ನಗಳನ್ನು ಸೂಕ್ತವಾದ ರೀತಿಯಲ್ಲಿ ಬಳಸುವುದಕ್ಕಾಗಿ ಅರಣ್ಯಗಳ ಸಮೀಪದಲ್ಲಿ ಕಾರ್ಖಾನೆಗಳನ್ನು ನಿರ್ಮಿಸಲಾಗುತ್ತಿತ್ತು. ಬಣ್ಣಗಳು, ಕಾಡುಬೀಜಗಳಿಂದ ಎಣ್ಣೆ, ಬಿದಿರು ಹಾಗೂ ಬೆತ್ತದ ಪದಾರ್ಥಗಳು ಮುಂತಾದವು ಕೆಲವು ತಯಾರಿಕೆಗಳಾಗಿದ್ದುವು. ಅರಣ್ಯಗಳಿಗೆ ನಷ್ಟ ಉಂಟುಮಾಡುವವರನ್ನು ಉಗ್ರವಾಗಿ ಶಿಕ್ಷಿಸಲಾಗುತ್ತಿತ್ತು.

ಗಣಿಗಳು

ಗಣಿಗಳು ಸಾಮ್ರಾಜ್ಯದ ಆದಾಯದಲ್ಲಿ ಮುಖ್ಯ ಸ್ಥಾನ ಪಡೆದಿದ್ದುವು. ಗಣಿಗಳು ಬೊಕ್ಕಸದ ಮೂಲ. ಬೊಕ್ಕಸದಿಂದಲೇ ಸಾಮರ್ಥ್ಯ ಸಿದ್ಧಿಯಾಗುವುದು. ಖಜಾನೆಯೇ ಭೂಷಣವಾಗುಳ್ಳ ಸಾಮ್ರಾಜ್ಯ ಪ್ರಾಪ್ತಿಯಾಗುವುದು ಬೊಕ್ಕಸ ಹಾಗೂ ಸಾಮರ್ಥ್ಯದಿಂದ ಮಾತ್ರ. ಈ ರೀತಿ ರಾಜ್ಯದ ಹಣಕಾಸಿನ ವ್ಯವಸ್ಥೆಯಲ್ಲಿ ಗಣಿಗಳ ಸ್ಥಾನವನ್ನು ಕೌಟಿಲ್ಯ ಒತ್ತಿಹೇಳಿದ್ದಾನೆ. ಗಣಿಗಳು ಸರ್ಕಾರದ ಏಕಸ್ವಾಮ್ಯಕ್ಕೆ ಸೇರಿದ್ದುವು. ಸರ್ಕಾರವೇ ನೇರವಾಗಿ ಕೆಲವು ಗಣಿಗಳನ್ನು ನಡೆಸುತ್ತಿದ್ದರೂ ಕೆಲವು ವೇಳೆ ಖಾಸಗಿ ಸಂಸ್ಥೆಗಳೊಡನೆ ಸೇರಿ ನಡೆಸುತ್ತಿತ್ತು. ಸರ್ಕಾರದ ಅನುಮತಿಯ ಮೇರೆಗೆ ಖಾಸಗಿ ಸಂಸ್ಥೆಗಳೇ ಗಣಿ

ಗಳನ್ನು ನಡೆಸುತ್ತಿದ್ದ ಸಂದರ್ಭಗಳೂ ಇದ್ದುವು. ಮೂಲ, ಭಾಗ, ಪರಿಘ, ಅತ್ಯಾಯಶುಲ್ಕ, ವ್ಯಾಜೀ, ವೈಧಾರಣ ಮುಂತಾದವು ಗಣಿಯಿಂದ ರಾಜ್ಯಕ್ಕೆ ಬರುತ್ತಿದ್ದ ಕೆಲವು ಆದಾಯಗಳು.

ಇಷ್ಟಲ್ಲದೆ ತಾಮ್ರ, ಪಿತ್ತಾಳೆ, ಸತು ಮುಂತಾದ ಲೋಹಗಳಿಂದ ಆಯುಧ, ಪಾತ್ರೆ, ರಥ ಮುಂತಾದವುಗಳನ್ನು ತಯಾರಿಸುವುದರ ಮೂಲಕವೂ ರಾಜ್ಯದ ಆದಾಯವನ್ನು ಅಧಿಕಗೊಳಿಸಲಾಗುತ್ತಿತ್ತು.

ರಾಜಭೂಮಿ

ಮೌರ್ಯ ಸರ್ಕಾರ ತನ್ನದೇ ಆದ ವ್ಯವಸಾಯ ಭೂಮಿಯನ್ನು ಹೊಂದಿತ್ತು. ಇದನ್ನು ರಾಜಭೂಮಿಯೆಂದು ಕರೆಯಲಾಗುತ್ತಿತ್ತು. ರಾಜಭೂಮಿಯ ವ್ಯವಸಾಯವನ್ನು ಸರ್ಕಾರ ತನ್ನ ವ್ಯವಸಾಯ ಇಲಾಖೆಯ ಮೂಲಕ ನಡೆಸುತ್ತಿತ್ತು. ಸೀತಾಧ್ಯಕ್ಷ ಈ ಇಲಾಖೆಯ ಮುಖ್ಯಸ್ಥ. ಇವನು ಸಾಮ್ರಾಜ್ಯದ ಒಟ್ಟು ವ್ಯವಸಾಯದ ಮೇಲ್ವಿಚಾರಣೆಯನ್ನು ಮಾಡುವುದೇ ಅಲ್ಲದೆ, ರಾಜಭೂಮಿಯ ವ್ಯವಸಾಯವನ್ನೂ ಮಾಡಬೇಕಾಗಿತ್ತು. ಅಕ್ಕಿ, ಗೋದಿ, ಬಾರ್ಲಿ ಮುಂತಾದವು ರಾಜಭೂಮಿಯ ಪ್ರಮುಖ ಉತ್ಪನ್ನಗಳಾಗಿದ್ದುವು. ರಾಜಭೂಮಿ ಬಹಳ ವಿಸ್ತಾರವಾಗಿದ್ದು, ಹಲವು ವೇಳೆ ಸ್ವತಃ ವ್ಯವಸಾಯ ಮಾಡಿಸಲು ಸರ್ಕಾರಕ್ಕೆ ಅಸಾಧ್ಯವಾಗಿದ್ದುದರಿಂದ ಖಾಸಗಿ ರೈತರಿಗೆ ಗುತ್ತಿಗೆಗೆ ಕೊಡಲಾಗುತ್ತಿತ್ತು. ತನ್ನ ಬಂಡವಾಳವನ್ನೇ ಬಳಸಿ ರಾಜಭೂಮಿಯನ್ನು ವ್ಯವಸಾಯ ಮಾಡುವವನಿಗೆ ಸೇಕಡ 50 ಪಾಲನ್ನೂ ಸರ್ಕಾರದ ಬಂಡವಾಳವನ್ನುಪಯೋಗಿಸಿ ವ್ಯವಸಾಯ ಮಾಡುವವನಿಗೆ ಉತ್ಪನ್ನದ ನಾಲ್ಕನೆಯ ಒಂದು ಅಥವಾ ಐದನೇ ಒಂದಂಶವನ್ನೂ ಬಿಡಲಾಗುತ್ತಿತ್ತು. ಖಾಸಗಿ ವ್ಯವಸಾಯಗಾರರಿಂದ ತೆರಿಗೆ ರೂಪದಲ್ಲಿ ಪಡೆದ ಉತ್ಪನ್ನವಲ್ಲದೆ ಮೌರ್ಯ ಸಾಮ್ರಾಜ್ಯಕ್ಕೆ ರಾಜಭೂಮಿಯ ಉತ್ಪನ್ನದಿಂದಲೂ ವಿಶೇಷವಾದ ಆದಾಯ ಬರುತ್ತಿತ್ತು.

ರಾಜ್ಯದ ವರಮಾನದ ವಸೂಲಿಯ ಬಗ್ಗೆ ಅಧಿಕಾರಿಗಳು ಅತ್ಯಂತ ಸೂಕ್ಷ್ಮವಾದ ಹತೋಟಿಯನ್ನಿಡುವ ಬಗ್ಗೆ ಕೌಟಿಲ್ಯ ಒತ್ತಿಹೇಳುತ್ತಾನೆ. ಸರ್ಕಾರದ ವರಮಾನಕ್ಕೆ ಅಧಿಕಾರಿಗಳಿಂದಾಗಲಿ ಪ್ರಜೆಗಳಿಂದಾಗಲಿ ಯಾವ ರೀತಿಯ ಮೋಸವೂ ಆಗದಂತೆ ಎಚ್ಚರ ವಹಿಸುವುದಕ್ಕಾಗಿ ಗೂಢಚಾರರ ಒಂದು ದೊಡ್ಡ ಪಡೆಯೇ ಇತ್ತು. ಸಾಮ್ರಾಜ್ಯದ ನಾನಾ ಮಟ್ಟಗಳ ಅಧಿಕಾರಿಗಳಾದ ಸಮಾಹರ್ತ, ಸ್ಥಾನಿಕ, ಗೋಪ, ರಜ್ಜುಕ, ಪ್ರಾದೇಶಿಕ ಮುಂತಾದವರ ಸಹಾಯದಿಂದ ರಾಜಬೊಕ್ಕಸ ಸದಾ ತುಂಬಿರುವಂತೆ ಎಚ್ಚರ ವಹಿಸಲಾಗುತ್ತಿತ್ತು. ಏಕೆಂದರೆ ಇಡೀ ಸಾಮ್ರಾಜ್ಯದ ಸ್ಥೈರ್ಯ ಹಾಗೂ ಸಾಮರ್ಥ್ಯ ರಾಜಬೊಕ್ಕಸವನ್ನೇ ಅವಲಂಬಿಸಿತ್ತು.

ಸಾರ್ವಜನಿಕ ವೆಚ್ಚ

ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಸಾರ್ವಜನಿಕ ಆದಾಯದಷ್ಟೇ ಪ್ರಾಮುಖ್ಯ ಸಾರ್ವಜನಿಕ ವೆಚ್ಚಕ್ಕೂ ಕೊಡಲಾಗಿದೆ ಎಂಬುದು ಸ್ಪಷ್ಟವಾದ ವಿಚಾರ. ಶುದ್ಧವಾದ ಖಾಸಗಿ ಉದ್ಯಮದ ಅರ್ಥವ್ಯವಸ್ಥೆಯಲ್ಲಿ ಕೌಟಿಲ್ಯ ನಂಬಿಕೆ ಇಟ್ಟವನಲ್ಲ. ಅವನೊಬ್ಬ ದೊಡ್ಡ ಸಮಾಜವಾದಿ. ಪ್ರಜಾಸಮುದಾಯದ ಸಾಮಾಜಿಕ, ಆರ್ಥಿಕ, ಬೌದ್ಧಿಕ ಮುಂತಾದ ಸರ್ವಾಂಗೀಣ ಪ್ರಗತಿ ಸರ್ಕಾರದ ಹಿರಿಯ ಜವಾಬ್ದಾರಿ ಎಂಬುದು ಅವನ ವಾದ. ಪ್ರಜೆಗಳ ಶಾಂತಿ, ಸುಖ ಹಾಗೂ ಮುನ್ನಡೆಯ ದೃಷ್ಟಿಯಿಂದ ಸರ್ಕಾರ ಯಾವ ಕ್ಷೇತ್ರದಲ್ಲಿ ಬೇಕಾದರೂ ಪ್ರವೇಶಿಸಬಹುದು ಹಾಗೂ ಯಾವ ಚಟುವಟಿಕೆಗಳನ್ನಾದರೂ ನಿಯಂತ್ರಿಸಬಹುದು. ಈ ವಿಚಾರದಲ್ಲಿ ಸರ್ಕಾರಕ್ಕೆ ಯಾದ ಅಪ್ರತಡೆಯೂ ಇರಲಾಗದು, ಭಾರತೀಯ ಪರಂಪರೆಗೆ ಅನುಸಾರವಾಗಿ, ರಾಜನಾದವನ ಎಲ್ಲ ಚಟುವಟಿಕೆಗಳ ಪರಮೋದ್ದಿಶ್ಯ ಹಾಗೂ ರಾಜತ್ವದ ಸಾರ್ಥಕ್ಯ ಪ್ರಜೆಗಳ ಪಾಲನೆಯೇ ಎಂಬುದು ಕೌಟಿಲ್ಯನ ಸ್ಪಷ್ಟ ಅಭಿಪ್ರಾಯ. ಈ 'ಪಾಲನ' ಭಾವ ಭಾರತೀಯ ರಾಜನೀತಿ ಹಾಗೂ ಅರ್ಥನೀತಿಯ ವೈಶಿಷ್ಟ್ಯವಾಗಿ ಬೆಳೆದು ಕೌಟಿಲ್ಯನ 'ಅರ್ಥಶಾಸ್ತ್ರ'ದಲ್ಲಿ ಸ್ಪಷ್ಟವಾಗಿ ಒಡೆದು ಮೂಡಿದೆ. ಪ್ರಜಾಪಾಲನಕಾರ್ಯದಲ್ಲಿ ಉದಾಸೀನತೆ ತೋರಿಸುವ ರಾಜ ಕಳ್ಳನಿಗಿಂತ ಅಧಮನಾಗುತ್ತಾನೆ. ಆದರೆ ತನ್ನ ಜವಾಬ್ದಾರಿಯನ್ನರಿತು ನಡೆಯುವ ಪ್ರಭು ಪ್ರಜೆಗಳಿಗೆ ಮಾತಾಪಿತೃಗಳ

ಸ್ಥಾನದಲ್ಲಿ ನಿಲ್ಲುತ್ತಾನೆ! ಈ ವಿಶಾಲ ದೃಷ್ಟಿಯಿಂದ ನೋಡಿದಲ್ಲಿ ಮೌರ್ಯ ಸಾಮ್ರಾಜ್ಯದ ಅರ್ಥವ್ಯವಸ್ಥೆಯಲ್ಲಿ ಸಾರ್ವಜನಿಕ ವೆಚ್ಚದ ಪ್ರಾಮುಖ್ಯ ಎಷ್ಟು ಹಿರಿದಾಗಿತ್ತೆಂಬುದು ಸ್ಪಷ್ಟವಾಗುತ್ತದೆ.

ಸಾಮ್ರಾಜ್ಯದಲ್ಲಿ ವ್ಯವಸಾಯದ ಪ್ರಗತಿಗೆ ಎಲ್ಲ ರೀತಿಯ ಬೆಂಬಲ ನೀಡುವುದು ರಾಜನ ಕರ್ತವ್ಯವೆಂದು ಕೌಟಿಲ್ಯ ಭಾವಿಸುತ್ತಾನೆ. ರೈತರಿಗೆ ಉತ್ತಮವಾದ ಬೀಜಗಳನ್ನು ಒದಗಿಸುವುದು, ಅಗತ್ಯವಾದ ಮುಂಗಡ ಧನಸಹಾಯ ಮಾಡುವುದು ರಾಜನ ಕರ್ತವ್ಯ. ವ್ಯವಸಾಯದ ಪ್ರಗತಿಯಲ್ಲಿ ನೀರಾವರಿಯ ಪಾತ್ರ ಹಿರಿದಾದುದರಿಂದ ಕೆರೆ, ಕಟ್ಟೆ ಮತ್ತು ಕಾಲುವೆಗಳನ್ನು ನಿರ್ಮಿಸಿ ರೈತರಿಗೆ ನೀರಾವರಿ ಸೌಕರ್ಯವನ್ನೊದಗಿಸಿಕೊಡುವುದು ಹಾಗೂ ಅವುಗಳ ನಿರ್ಮಾಣಕ್ಕೆ ತಾವಾಗಿಯೇ ಮುಂದೆ ಬರುವ ಜನಗಳಿಗೆ ಮರಮುಟ್ಟುಗಳು ಹಾಗೂ ಇತರ ಅಗತ್ಯ ಸಾಮಗ್ರಿಗಳನ್ನು ಒದಗಿಸಿಕೊಡುವುದು ಸರ್ಕಾರದ ಜವಾಬ್ದಾರಿಯಾಗಿತ್ತು. ಕ್ರೂರಮೃಗಗಳು, ಕಳ್ಳರು, ಮದಾಂಧ ಅಧಿಕಾರಿಗಳು, ಅತಿಯಾದ ತೆರಿಗೆ ಹೊರೆ ಮುಂತಾದವುಗಳಿಂದ ವ್ಯವಸಾಯಗಾರರಿಗೆ ತೊಂದರೆಯಾಗದಂತೆ ರಕ್ಷಣೆ ನೀಡುವುದೂ ರಾಜನ ಕರ್ತವ್ಯವೆಂಬುದು ಕೌಟಿಲ್ಯನ ಅಭಿಪ್ರಾಯ.

ವ್ಯವಸಾಯದ ಅನಂತರ ಸಾರ್ವಜನಿಕ ವೆಚ್ಚದ ಮತ್ತೊಂದು ಪ್ರಮುಖ ಅಂಶವೆಂದರೆ ಗಣಿಗಾರಿಕೆ. ರಾಜಾದಾಯದ ಪ್ರಮುಖ ಮೂಲವಾದ ಗಣಿಗಾರಿಕೆಯ ಯೋಗಕ್ಷೇಮದ ಜವಾಬ್ದಾರಿಯೂ ಸರ್ಕಾರಕ್ಕೆ ಸೇರಿತ್ತು. ನಾನಾ ಲೋಹಗಳ ನಿಕ್ಷೇಪಗಳನ್ನು ಕಂಡುಹಿಡಿಯುವುದು, ಹೊಸ ಗಣಿಗಳ ಪ್ರಾರಂಭ ಹಾಗೂ ಹಳೆಯ ಗಣಿಗಳ ಲಾಭದಾಯಕ ಆಡಳಿತ ಇವೆಲ್ಲವೂ ಸರ್ಕಾರದ ವೆಚ್ಚಕ್ಕೆ ಕಾರಣವಾಗಿದ್ದುವು. ಇಷ್ಟು ಮಾತ್ರವಲ್ಲದೆ ನಾನಾ ಲೋಹಗಳ ಮೂಲಕ ಆಭರಣಗಳು, ಪಾತ್ರೆಪದಾರ್ಥಗಳು, ಆಯುಧಗಳು, ರಥಗಳು ಮುಂತಾದ ವಸ್ತುಗಳನ್ನು ತಯಾರಿಸುವುದಕ್ಕಾಗಿ ಕರ್ಮಾಗಾರಗಳನ್ನು ಸ್ಥಾಪಿಸುವುದು ಹಾಗೂ ಅವನ್ನು ಲಾಭದಾಯಕವಾಗಿ ನಡೆಸಿಕೊಂಡು ಹೋಗುವುದು ಸರ್ಕಾರದ ಜವಾಬ್ದಾರಿಯಾಗಿತ್ತು. ಇದಕ್ಕಾಗಿ ಅನೇಕ ಲೋಹಾಧ್ಯಕ್ಷರನ್ನು ನೇಮಕ ಮಾಡುತ್ತಿದ್ದುದಾಗಿ 'ಅರ್ಥಶಾಸ್ತ್ರ'ದಿಂದ ತಿಳಿದುಬರುತ್ತದೆ.

ಆಂತರಿಕ ಹಾಗೂ ವಿದೇಶಿ ವ್ಯಾಪಾರದ ಅಭಿವೃದ್ಧಿಯ ಸಲುವಾಗಿ ಉತ್ತಮವಾದ ಭೂಮಾರ್ಗಗಳು ಹಾಗೂ ಜಲಮಾರ್ಗಗಳ ನಿರ್ಮಾಣ, ಮೇಲ್ವಿಚಾರಣೆ ಹಾಗೂ ರಕ್ಷಣೆ ಸಾರ್ವಜನಿಕ ವೆಚ್ಚದ ಮತ್ತೊಂದು ಮುಖ್ಯ ಅಂಶವಾಗಿತ್ತು. 'ಅರ್ಥಶಾಸ್ತ್ರ'ದಲ್ಲಿ ನಾನಾರೀತಿಯ ರಸ್ತೆಗಳ ವಿವರಣೆ ಬರುತ್ತದೆ. ವ್ಯಾಪಾರದ ಸಲುವಾಗಿಯೇ ಇದ್ದ ಹೆದ್ದಾರಿಗಳು (ವಾಣಿಜ್ಯಪಥ) ದ್ರೋಣಮುಖ, ಸ್ಥಾನೀಯ ಹಾಗೂ ಇತರ ಗ್ರಾಮೀಣ ಪ್ರದೇಶಗಳೊಂದಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳು ಮುಂತಾದವು. ಕಳ್ಳಕಾಕರು ಹಾಗೂ ದರೋಡೆಕೋರರ ಭಯವಿಲ್ಲದೆ ಸರಕುಗಳ ಸಾಗಾಟ ಸುರಕ್ಷಿತವಾಗಿ ನಡೆಯುವುದರ ಅಗತ್ಯವನ್ನು ಕೌಟಿಲ್ಯ ಚೆನ್ನಾಗಿ ಮನಗಂಡಿದ್ದ. ಆದಕ್ಕಾಗಿ ವ್ಯಾಪಾರಮಾರ್ಗಗಳಲ್ಲಿ ರಕ್ಷಣೆಯ ವ್ಯವಸ್ಥೆಯ ಬಗ್ಗೆ ದೀರ್ಘವಾದ ವಿವರಣೆಯನ್ನೇ ಅರ್ಥಶಾಸ್ತ್ರದಲ್ಲಿ ಕಾಣಬಹುದು.

ಮೌರ್ಯ ಸಾಮ್ರಾಜ್ಯದ ವಾಣಿಜ್ಯದಲ್ಲಿ ಜಲಮಾರ್ಗಗಳು ಭೂಮಾರ್ಗಗಳಷ್ಟೇ ಪ್ರಧಾನವಾಗಿದ್ದುವು. ಯೋಗ್ಯವಾದ ಜಲಮಾರ್ಗಗಳು ಮತ್ತು ಬಂದರುಕಟ್ಟೆಗಳ ನಿರ್ಮಾಣ ಹಾಗೂ ಮೇಲ್ವಿಚಾರಣೆ ಮಾತ್ರವಲ್ಲದೆ ಸರಕು ಮತ್ತು ಪ್ರಯಾಣಿಕರ ಸಾಗಾಣಿಕೆಗಾಗಿ ಹಡಗುಗಳು, ದೋಣಿಗಳು, ತೆಪ್ಪಗಳು—ಮುಂತಾದವನ್ನು ನಡೆಸುವುದೂ ಸರ್ಕಾರಕ್ಕೆ ಸೇರಿದ ಜವಾಬ್ದಾರಿಯೇ ಆಗಿತ್ತು. ಜಲಮಾರ್ಗಗಳ ಆಡಳಿತಕ್ಕೆ ನಾವಾಧ್ಯಕ್ಷನೆಂಬ ಹಿರಿಯ ಅಧಿಕಾರಿ ಇರುತ್ತಿದ್ದ.

ವಾಣಿಜ್ಯಕ್ಕೆ ಉತ್ತೇಜನ ನೀಡುವ ಸಲುವಾಗಿ ತೂಕ ಮತ್ತು ಅಳತೆಗಳ ಸೂಕ್ಷ್ಮ ನಿಯಂತ್ರಣವನ್ನು ಕೌಟಿಲ್ಯ ಒತ್ತಿಹೇಳುತ್ತಾನೆ. ಸರ್ಕಾರ ನಿಗದಿಪಡಿಸಿದ ಆದರ್ಶ ತೂಕ ಮತ್ತು ಅಳತೆಸಾಧನಗಳನ್ನೇ ವ್ಯಾಪಾರಿಗಳು ಬಳಸುವಂತೆ ಕಡ್ಡಾಯಪಡಿಸುವುದು ಮತ್ತು ಖೋಟಾ ಅಳತೆ ಮತ್ತು ತೂಕಗಳ ಬಳಕೆಯ ಪ್ರಕರಣಗಳನ್ನು ಬೆಳಕಿಗೆ ತಂದು ತಪ್ಪಿತಸ್ಥರಿಗೆ ಉಗ್ರಶಿಕ್ಷೆ ವಿಧಿಸುವುದು—ಇವುಗಳಿಗಾಗಿ ಪ್ರತ್ಯೇಕವಾದ ತೂಕ ಮತ್ತು ಅಳತೆಯ ಇಲಾಖೆಯೇ ರಚಿತವಾಗಿತ್ತು. ಇದು ಸಾರ್ವಜನಿಕ ವೆಚ್ಚದ ಒಂದು ಮುಖ್ಯ ಅಂಶವಾಗಿತ್ತು.

ಇಷ್ಟಲ್ಲದೆ, ಸರ್ಕಾರದ ಕ್ಷೇತ್ರಕ್ಕೆ ಸೇರಿದ ನಾನಾ ರೀತಿಯ ಕೈಗಾರಿಕೆಗಳ ವಿವರಣೆಯನ್ನೂ ಅರ್ಥ

ಶಾಸ್ತ್ರದಲ್ಲಿ ಕಾಣಬರುವುದು. ಅವುಗಳಲ್ಲಿ ಮುಖ್ಯವಾದುದು ಬಟ್ಟೆ ಕೈಗಾರಿಕೆ. ನೂಲುವ ಹಾಗೂ ನೇಯುವ ಕಾರ್ಖಾನೆಗಳನ್ನು ಸರ್ಕಾರ ವ್ಯವಸ್ಥೆಗೊಳಿಸಿ ನಡೆಸುತ್ತಿತ್ತು. ಈ ಕೈಗಾರಿಕೆಯ ಪೂರ್ಣ ಜವಾಬ್ದಾರಿ ಸೂತ್ರಾಧ್ಯಕ್ಷನೆಂಬ ಅಧಿಕಾರಿಗೆ ಸೇರಿತ್ತು. ಇದೇ ರೀತಿ ಆಯುಧಗಳು ಹಾಗೂ ಇತರ ಲೋಹೋಪಕರಣಗಳು. ಅನುಭೋಗವಸ್ತುಗಳಾದ ಎಣ್ಣೆ, ತುಪ್ಪ, ಸಕ್ಕರೆ ಮುಂತಾದವುಗಳ ತಯಾರಿಕೆ ಸರ್ಕಾರದ ಜವಾಬ್ದಾರಿಗೆ ಸೇರಿತ್ತು. ಈ ಎಲ್ಲಾ ಪದಾರ್ಥಗಳ ಉತ್ಪಾದನೆಯಲ್ಲಿ ತೀವ್ರವಾದ ಗುಣನಿಯಂತ್ರಣದ ಅಗತ್ಯವನ್ನು ಕೌಟಿಲ್ಯ ಒತ್ತಿ ಹೇಳುತ್ತಾನೆ.

ಸಾರ್ವಜನಿಕ ವೆಚ್ಚದ ಪ್ರಮುಖ ಅಂಶಗಳಲ್ಲಿ ಸೇನಾಬಲ ಹಾಗೂ ಆಡಳಿತ ವೆಚ್ಚ ಪ್ರಮುಖವಾಗಿದ್ದುವು. 'ಅರ್ಥಶಾಸ್ತ್ರ'ದಲ್ಲಿ ಕಂಡುಬರುವಂಥ ಅತಿವಿಸ್ತಾರವಾದ ಹಾಗೂ ಅತಿಸೂಕ್ಷ್ಮವಾದ ಕೇಂದ್ರೀಕೃತ ಆಡಳಿತವ್ಯವಸ್ಥೆ ದಕ್ಷರಾದ ಹಾಗೂ ನಿಷ್ಠರಾದ ಅಧಿಕಾರಿ ವರ್ಗದ ಬೃಹತ್ ಸಮೂಹದಿಂದ ಮಾತ್ರ ಸಾಧ್ಯವಾಗಿತ್ತು. ಅಧಿಕಾರಿವರ್ಗದವರ ನಿಷ್ಠೆ ಹಾಗೂ ಪ್ರಾಮಾಣಿಕತೆಯೇ ಬೃಹತ್ ಮೌರ್ಯ ಸಾಮ್ರಾಜ್ಯದ ಆಡಳಿತವ್ಯವಸ್ಥೆಯ ಜೀವಾಳವೆಂಬುದು ಕೌಟಿಲ್ಯನಿಗೆ ಸ್ಪಷ್ಟವಾಗಿತ್ತು. ಆದ್ದರಿಂದಲೇ ಸರ್ಕಾರಿ ಅಧಿಕಾರಿಗಳಿಗೆ ಅವರು ಲಂಚಕ್ಕೆ ಕೈ ಒಡ್ಡದಂತೆ ಉತ್ತಮವಾದ ಸಂಬಳವನ್ನು ಕೊಡಬೇಕೆಂಬುದು ಕೌಟಿಲ್ಯನ ಆದೇಶ. ಅದಕ್ಕಾಗಿ ಸಾಮ್ರಾಜ್ಯದ ಒಟ್ಟು ವಾರ್ಷಿಕ ಆದಾಯದಲ್ಲಿ ನಾಲ್ಕನೆಯ ಒಂದು ಭಾಗವನ್ನು ಆಡಳಿತ ವರ್ಗದ ಸಂಬಳಕ್ಕಾಗಿ ಮೀಸಲಾಗಿಡಬೇಕೆಂದು ಕೌಟಿಲ್ಯ ಸ್ಪಷ್ಟವಾಗಿ ತಿಳಿಸುತ್ತಾನೆ. ಮೌರ್ಯ ಸಾಮ್ರಾಜ್ಯದಲ್ಲಿ ಅತ್ಯಂತ ಹೆಚ್ಚು ಸಂಬಳ ಪಡೆಯುವ ಅಧಿಕಾರಿ ಮಂತ್ರಿ. ಅವನ ಸಂಬಳ ನಲವತ್ತೆಂಟು ಸಾವಿರ ಪಣಗಳು ಎಂದು ಕೌಟಿಲ್ಯ ನಿಗದಿಮಾಡಿದ್ದಾನೆ.

ಕೌಟಿಲ್ಯನ 'ಅರ್ಥಶಾಸ್ತ್ರ'ದಲ್ಲಿ ಕಂಡುಬರುವ ಪ್ರಮುಖ ಸಾರ್ವಜನಿಕ ವೆಚ್ಚಮೂಲಗಳು (ವ್ಯಯಶರೀರು) ಈ ಕೆಳಕಂಡವು ;

1 ಆಡಳಿತ ವೆಚ್ಚ. 2 ಧಾರ್ಮಿಕ ಸಮಾರಂಭಗಳು. 3 ದಾನಧರ್ಮಾದಿಗಳು. 4 ಅಂತಃಪುರ, 5 ಪಾಕಶಾಲೆ. 6 ದೂತಾವಾಸ. 7 ಉಗ್ರಾಣ. 8 ಆಯುಧಾಗಾರ, 9 ಕಚ್ಚಾಸಾಮಗ್ರಿಗಳ ಸಂಗ್ರಹಾಲಯ. 10 ಸರ್ಕಾರಿ ಉದ್ಯಮಗಳು. 11. ಚತುರಂಗಬಲ, 12 ಸಾರ್ವಜನಿಕ ಉದ್ಯಾನವನಗಳು.

ಸಾಮ್ರಾಜ್ಯದ ಆದಾಯಕ್ಕಿಂತ ವೆಚ್ಚ ಅಧಿಕವಾಗಿ ಆ ಮೂಲಕ ಕೋಶಕ್ಷಯಕ್ಕೆ ಅವಕಾಶವಾಗದಂತೆ ಮತ್ತು ಆರ್ಥಿಕಸ್ಥಿತಿಯನ್ನು ದುರ್ಬಲಗೊಳಿಸದಂತೆ ವಿಶೇಷ ಎಚ್ಚರಿಕೆ ವಹಿಸುವುದು ಅಗತ್ಯವೆಂದು ಕೌಟಿಲ್ಯ ಅರಿತಿದ್ದ. ರಾಜ್ಯದ ಆದಾಯ ವೆಚ್ಚಗಳ ಮೇಲೆ ತೀವ್ರವಾದ ನಿಯಂತ್ರಣಹೊಂದುವುದಕ್ಕಾಗಿ ಕೌಟಿಲ್ಯ ಪ್ರತಿವರ್ಷಾಂತ್ಯದಲ್ಲೂ ಎಲ್ಲ ಇಲಾಖೆಗಳ ಗಾಣನಿಕ್ಯರು (ಅಕೌಂಟೆಂಟ್ಸ್) ತಮ್ಮ ಲೆಕ್ಕಪತ್ರಗಳನ್ನು ಲೆಕ್ಕಶೋಧಕರಿಗೆ ಒಪ್ಪಿಸಬೇಕೆಂದು ವಿಧಿಸಿದ್ದಾನೆ. ಲೆಕ್ಕಶೋಧನೆಗಾಗಿ ಹಾಗೂ ತನ್ಮೂಲಕ ಸಾಮ್ರಾಜ್ಯದ ಆದಾಯ ವೆಚ್ಚಗಳ ಮೇಲೆ ತೀವ್ರನಿಯಂತ್ರಣ ಹೊಂದುವುದಕ್ಕಾಗಿ ಸಾಮ್ರಾಜ್ಯದಲ್ಲಿ ಪ್ರತ್ಯೇಕವಾದ ಲೆಕ್ಕಶೋಧನ ಇಲಾಖೆಯೇ ಇದ್ದುದಾಗಿ 'ಅರ್ಥಶಾಸ್ತ್ರ'ದಿಂದ ತಿಳಿದು ಬರುತ್ತದೆ.

ಅಪವ್ಯಯದಿಂದ ರಾಜ್ಯದ ಆದಾಯ ನಾಶಹೊಂದೀತೆಂಬುದನ್ನು ಕೌಟಿಲ್ಯ ಚೆನ್ನಾಗಿ ಅರಿತಿದ್ದ. ಸಂಪತ್ತಿನ ವಿಚಾರದಲ್ಲಿ ಮನುಷ್ಯನ ದೌರ್ಬಲ್ಯವನ್ನು ಕೌಟಿಲ್ಯ ಅರ್ಥಮಾಡಿಕೊಂಡಿದ್ದ. ನಾಲಗೆಯ ತುದಿಗೆ ಹತ್ತಿದ ಜೇನನ್ನಾಗಲಿ ವಿಷವನ್ನಾಗಲಿ ರುಚಿ ನೋಡದಿರುವುದು ಯಾರಿಗಾಗಲಿ ಹೇಗೆ ಅಸಾಧ್ಯವೋ ಅದೇ ರೀತಿ ಸರ್ಕಾರಿ ಅಧಿಕಾರಿಗಳಿಗೆ ರಾಜನ ಆದಾಯದಲ್ಲಿ ಕೊಂಚ ಭಾಗವನ್ನು ನುಂಗಿ ಹಾಕದಿರುವುದು ಅಸಾಧ್ಯವೆಂದು ಕೌಟಿಲ್ಯ ಅಭಿಪ್ರಾಯಪಡುತ್ತಾನೆ. ನೀರಿನಲ್ಲಿ ಈಜುವ ಮೀನು ನೀರನ್ನು ಕುಡಿಯುವುದೋ ಇಲ್ಲವೋ ಎಂದು ಹೇಳುವುದು ಹೇಗೆ ಅಸಾಧ್ಯವೋ, ಆಕಾಶದಲ್ಲಿ ಹಾರುತ್ತಿರುವ ಪಕ್ಷಿಯ ಚಲನೆಯನ್ನು ಅರಿಯುವುದು ಹೇಗೆ ಕಷ್ಟಸಾಧ್ಯವೋ ಹಾಗೆಯೇ ಸರ್ಕಾರಿ ನೌಕರರು ರಾಜದ್ರವ್ಯವನ್ನು ಕಬಳಿಸುವುದನ್ನು ಕಂಡುಹಿಡಿಯುವುದು ಕಷ್ಟಸಾಧ್ಯವೆಂಬುದು ಕೌಟಿಲ್ಯನ ಅಭಿಮತ.

ರಾಜದ್ರವ್ಯದ ಅಪವ್ಯಯದ ಬಗ್ಗೆ ಇಷ್ಟು ಸಮಾಧಾನವನ್ನು ವ್ಯಕ್ತಪಡಿಸಿದರೂ ಅವರ ನಿಯಂತ್ರಣಕ್ಕಾಗಿ ಕೌಟಿಲ್ಯ ಕಠೋರವಾದ ಶಿಕ್ಷೆ ವಿಧಿಸಿದ್ದಾನೆ. ರಾಜದ್ರವ್ಯದ ಅಪವ್ಯಯದ ಸಂದರ್ಭದಲ್ಲಿ ಸಂಬಂಧಪಟ್ಟ ಅಧಿಕಾರಿಯಿಂದ ಅಪಮಾರ್ಗದಲ್ಲಿ ಗಳಿಸಿದ ಸರ್ವ ಸಂಪತ್ತನ್ನೂ ಸರ್ಕಾರ ಮುಟ್ಟುಗೋಲು

ಹಾಕಿಕೊಳ್ಳಬೇಕೆಂದು ವಿಧಿಸಿದ್ದಾನೆ. ಅಷ್ಟಲ್ಲದೆ ಅಂಥ ಅಧಿಕಾರಿಗಳನ್ನು ಮತ್ತೆ ರಾಜ್ಯದ್ರವ್ಯದ ಅಪವ್ಯಯ ಮಾಡದಂತೆ ಹಾಗೂ ಗಳಿಸಿದ ದ್ರವ್ಯವನ್ನು ವಮನ ಮಾಡುವಂತೆ ಇಲಾಖೆಯಿಂದ ಇಲಾಖೆಗೆ ವರ್ಗಾವಣೆ ಮಾಡುತ್ತಿರಬೇಕೆಂದೂ ಸೂಚಿಸಿದ್ದಾನೆ.

ಕಾರ್ಮಿಕರ ನಿಯಂತ್ರಣ ಹಾಗೂ ಹಿತರಕ್ಷಣೆ

ಕಾರ್ಮಿಕರ ಸಂಬಳಸಾರಿಗೆಗಳು, ಉದ್ಯೋಗದ ಸ್ಥಿತಿಗತಿಗಳು, ಅವರ ಹಿತರಕ್ಷಣೆ ಮುಂತಾದ ವಿಷಯಗಳಿಗೆ ಸಂಬಂಧಿಸಿದಂತೆ ಅತಿಸೂಕ್ಷ್ಮವೂ ವಿಸ್ತಾರವೂ ಆದ ವಿವರಣೆ ಕೌಟಿಲ್ಯನ 'ಅರ್ಥಶಾಸ್ತ್ರ'ವನ್ನು ಜೀವಂತವಾಗಿರಿಸಿರುವ ಅಂಶಗಳಲ್ಲೊಂದಾಗಿದೆ. ಕಾರ್ಮಿಕ ವರ್ಗದವರಿಗೆ ದುಡಿಮೆಗೆ ತಕ್ಕಂಥ ವೇತನ ಪಡೆಯುವ ಹಕ್ಕನ್ನು ಕೌಟಿಲ್ಯ ಎತ್ತಿಹಿಡಿದಿದ್ದಾನೆ.

ನೂಲುವ ಹಾಗೂ ನೇಯುವ ಕೈಗಾರಿಕೆ ಸರ್ಕಾರಿ ಕ್ಷೇತ್ರಕ್ಕೆ ಸೇರಿದ್ದಿತ್ತಷ್ಟೆ? ನೂಲುವವರು ಸೂತ್ರಾಧ್ಯಕ್ಷನೆಂಬ ಅಧಿಕಾರಿಯ ಆಡಳಿತಕ್ಕೆ ಒಳಪಟ್ಟವರಾಗಿರುತ್ತಿದ್ದರು. ನೂಲುವ ಕಾರ್ಮಿಕರ ಬಗ್ಗೆ ಬರೆಯುತ್ತ, ನೂಲುವವರು ಉತ್ಪಾದಿಸಿದ ನೂಲಿನ ಮೊತ್ತ ಹಾಗೂ ಗುಣವನ್ನನುಸರಿಸಿ ಅವರ ವೇತನವನ್ನು ನಿಗದಿಪಡಿಸಬೇಕು ಎಂದು ಕೌಟಿಲ್ಯ ಅಭಿಪ್ರಾಯಪಡುತ್ತಾನೆ. ಇತರರಿಗಿಂತ ಹೆಚ್ಚು ನೂಲನ್ನು ಉತ್ಪಾದಿಸಿದವರಿಗೆ ಹಾಗೂ ಇತರರಿಗಿಂತ ಉತ್ತಮ ಮಟ್ಟದ ನೂಲನ್ನು ಉತ್ಪಾದಿಸುವ ಕುಶಲ ಕಾರ್ಮಿಕರಿಗೆ ಪ್ರೋತ್ಸಾಹಾರ್ಥವಾಗಿ ಎಣ್ಣೆ, ಸುಗಂಧದ್ರವ್ಯಗಳು, ಹಾರ, ಹೆಚ್ಚಿನ ವೇತನ ಮುಂತಾದವನ್ನು ಕೊಡಬೇಕು. ಇದರಿಂದ ಕುಶಲ ಕಾರ್ಮಿಕರನ್ನು ಪ್ರೋತ್ಸಾಹಿಸಿದಂತೆ ಆಗುವುದಲ್ಲದೆ, ಇತರ ಕಾರ್ಮಿಕರಿಗೂ ತಮ್ಮ ಉತ್ಪಾದನೆಯ ಗುಣಮಟ್ಟವನ್ನು ಹೆಚ್ಚಿಸಿಕೊಳ್ಳುವುದಕ್ಕೆ ಪ್ರೇರಕವಾಗುತ್ತವೆ ಎಂಬುದು ಕೌಟಿಲ್ಯನ ಅಭಿಮತ. ಈ ಪದ್ಧತಿಯನ್ನೇ ಇಂದಿನ ಕೈಗಾರಿಕಾ ವ್ಯವಸ್ಥೆಯಲ್ಲಿ ಉತ್ತೇಜಕ ವೇತನ (ಇನ್ಸೆಂಟಿವ್ ವೇಜಸ್) ಎಂದು ಕರೆಯುತ್ತಾರೆ.

ರಜಾದಿನಗಳು ಹಾಗೂ ಹಬ್ಬಹರಿದಿನಗಳಲ್ಲಿ ಕೆಲಸ ಮಾಡಿದಂಥವರಿಗೆ ವಿಶೇಷ ವೇತನವನ್ನು ಕೊಡಬೇಕೆಂಬುದು ಕೌಟಿಲ್ಯನ ಮತ್ತೊಂದು ಸಲಹೆ. ಕಾರ್ಮಿಕರಿಗೆ ವೇತನದ ಹಕ್ಕನ್ನು ಒದಗಿಸಿಕೊಡುವುದರ ಜೊತೆಗೆ ಕಾರ್ಮಿಕರ ಬಾಧ್ಯತೆಯನ್ನೂ ವಿವರಿಸಿದ್ದಾನೆ. ಕಚ್ಚಾಸಾಮಗ್ರಿಯ ಗುಣಮಟ್ಟ ಉತ್ತಮವಾಗಿದ್ದಾಗ್ಯೂ, ಉತ್ಪನ್ನ ಕೆಳದರ್ಜೆಯದಾಗಿದ್ದು ಮೊತ್ತವೂ ಕಡಿಮೆಯಾಗಿದ್ದಲ್ಲಿ ಅಂಥ ಕಾರ್ಮಿಕರ ವೇತನವನ್ನು ಕಡಿತಮಾಡಬೇಕೆಂದಿದ್ದಾನೆ.

ಸ್ತ್ರೀಕಾರ್ಮಿಕರ ಬಗ್ಗೆ ಕೌಟಿಲ್ಯ ಹೆಚ್ಚಿನ ಎಚ್ಚರಿಕೆ ವಹಿಸಿದ್ದಾನೆ. ಸೂತ್ರಾಧ್ಯಕ್ಷನಾದವನು ಸ್ತ್ರೀ ಕಾರ್ಮಿಕರ ಮೇಲೆ ವಕ್ರದೃಷ್ಟಿ ಬೀರಿದ್ದೇ ಆದರೆ ಅಥವಾ ಅನಗತ್ಯವಾದ ಮಾತುಕತೆಗಳಲ್ಲಿ ತೊಡಗಿದ್ದೇ ಆದರೆ ಅವನಿಗೆ ಇಪ್ಪತ್ತರಿಂದ ಐನೂರು ಪಣಗಳ ವರೆಗೆ ಜುಲ್ಮಾನೆ ಹಾಕಬೇಕೆಂದು ವಿಧಿಸಿದ್ದಾನೆ. ಅರ್ಧ ಕೆಲಸ ಮಾಡಿದ ಸ್ತ್ರೀಕಾರ್ಮಿಕರಿಗೆ ಸೂತ್ರಾಧ್ಯಕ್ಷನಾದವನು ಪೂರ್ತಿ ಕೆಲಸದ ಸಂಬಳವನ್ನು ಕೊಟ್ಟಾಗಲೂ ಇದೇ ಶಿಕ್ಷೆಯನ್ನು ಅನುಭವಿಸಬೇಕು. "ವೇತನ ಕೊಡುವುದು ಮಾಡಿದ ಕೆಲಸಕ್ಕಾಗಿಯೇ ಹೊರತು ಮಾಡದ ಕೆಲಸಕ್ಕಲ್ಲ" ಎಂಬುದು ಕೌಟಿಲ್ಯನ ಹೇಳಿಕೆ. ಯಾವ ಮಾಲೀಕ ಕೆಲಸಗಾರನಿಂದ ಅರ್ಧಕೆಲಸ ಮಾಡಿಸಿ, ಇನ್ನರ್ಧವನ್ನು ಕಾರ್ಮಿಕ ಮಾಡಲು ಸಿದ್ಧನಾಗಿದ್ದಾಗ್ಯೂ ಮಾಡಗೊಡುವುದಿಲ್ಲವೋ, ಅಂಥ ಸಂದರ್ಭದಲ್ಲಿ ಉಳಿದರ್ಧ ಕೆಲಸವನ್ನೂ ಮಾಡಲಾಗಿದೆಯೆಂದೇ ತಿಳಿದು ವೇತನ ನಿರ್ಣಯ ಮಾಡತಕ್ಕದ್ದು ಎಂಬ ಹೇಳಿಕೆಯಲ್ಲಿ ಕೌಟಿಲ್ಯನ ನ್ಯಾಯಭಾವ ಪ್ರದರ್ಶಿತವಾಗುತ್ತದೆ.

ಈ ರೀತಿ ಕೌಟಿಲ್ಯ ಕಾರ್ಮಿಕ ಹಾಗೂ ಮಾಲೀಕರಿಬ್ಬರ ಹಿತರಕ್ಷಣೆಯನ್ನೂ ಮಾಡುತ್ತಾನೆ. ಪ್ರಾಮಾಣಿಕವಾಗಿ ಮಾಡಿದ ಕೆಲಸಕ್ಕಾಗಿ ಸೂಕ್ತ ವೇತನ ಪಡೆಯುವುದು ಕಾರ್ಮಿಕರ ಹಕ್ಕು. ಆದರೆ ಒಪ್ಪಿಕೊಂಡ ಕೆಲಸವನ್ನು ನಿಷ್ಠೆಯಿಂದ ಮಾಲೀಕರ ಮನ ಒಪ್ಪುವಂತೆ ಮಾಡುವುದು ಅವರ ಬಾಧ್ಯತೆ.

ಯಜ್ಞಯಾಗಾದಿಗಳಲ್ಲಿ ನಿರತರಾದ ಪುರೋಹಿತ ವರ್ಗದವರನ್ನೂ ಕೌಟಿಲ್ಯ ಕಾರ್ಮಿಕರೆಂದು ಪರಿಗಣಿಸಿ ಇತರ ಎಲ್ಲ ವರ್ಗಗಳ ಕಾರ್ಮಿಕರಿಗೆ ಅನ್ವಯವಾಗುವ ಕಾಯಿದೆಗಳು ಅವರಿಗೂ ಅನ್ವಯವಾಗುತ್ತವೆ ಎನ್ನುತ್ತಾನೆ. ಇದೆಲ್ಲಕ್ಕಿಂತ ಅತ್ಯಂತ ಮಾನವೀಯವಾದ ಅಂಶವೆಂದರೆ, ಕಾರ್ಯನಿರತರಾಗಿದ್ದಾಗ ಮರಣಕ್ಕೀಡಾದಂಥ ಅಧಿಕಾರಿಗಳ ಪತ್ನಿ, ಪುತ್ರರು ಹಾಗೂ ಇತರ ಆಶ್ರಿತರಿಗೆ ಸರ್ಕಾರ ಸೂಕ್ತವಾದ

ಜೀವನಾಂಶ ಕೊಡಬೇಕೆಂದು ಕೌಟಿಲ್ಯ ವಾದಿಸುತ್ತಾನೆ. ಸಾಮ್ರಾಜ್ಯದ ಹಿತಾಸಕ್ತಿಗೆ ಹಾಗೂ ಕಾನೂನಿಗೆ ವಿರುದ್ಧವಾಗಿ ನಡೆಯುವವರ ಬಗ್ಗೆ ಕೌಟಿಲ್ಯ ಎಷ್ಟು ಕಠಿಣನೋ ಸಾಮ್ರಾಜ್ಯದ ಏಳಿಗೆಗೆ ದುಡಿಯುವ ನಿಷ್ಠಾವಂತ ಪ್ರಜೆಗಳ ಬಗ್ಗೆ ಅಷ್ಟೇ ಕರುಣಾಮಯ ಹಾಗೂ ಧಾರಾಳಿಯೂ ಆಗಿದ್ದ.

ತುರ್ತು ಪರಿಸ್ಥಿತಿಯಲ್ಲಿ ವಿತ್ತನೀತಿ

ಶಾಂತಿಕಾಲದಲ್ಲಿ ಅನುಸರಿಸಬೇಕಾದ ಸಾರ್ವಜನಿಕ ಹಣಕಾಸಿನ ಕ್ರಮಗಳನ್ನಷ್ಟೇ ಅಲ್ಲದೆ ಯುದ್ಧ, ಪಿತೂರಿ ಮುಂತಾದ ಕಾರಣಗಳಿಂದ ಸಾಮ್ರಾಜ್ಯಕ್ಕೆ ಒದಗುವ ಮುಗ್ಗಟ್ಟಿನ ಸಂದರ್ಭಗಳಲ್ಲಿ ಅನುಸರಿಸ ಬೇಕಾದ ಕ್ರಮಗಳನ್ನೂ ಅರ್ಥಶಾಸ್ತ್ರದಲ್ಲಿ ವಿವರಿಸಲಾಗಿದೆ.

ಯುದ್ಧ, ಪಿತೂರಿ ಅಥವಾ ಇತರ ಯಾವುದೇ ಬಗೆಯ ಆಂತರಿಕ ಅಥವಾ ಬಾಹ್ಯ ಕಾರಣ ಗಳಿಂದಾಗಿ ರಾಜ್ಯದ ಖಜಾನೆ ಬರಿದಾಗಿ, ಆ ಮೂಲಕ ತೀವ್ರವಾದ ಆರ್ಥಿಕ ಮುಗ್ಗಟ್ಟು ಒದಗಬಹುದು. ಸಾಮ್ರಾಜ್ಯದ ಸ್ಥಿರತೆ ಖಜಾನೆಯನ್ನೇ ಅವಲಂಬಿಸಿದೆಯಾದ್ದರಿಂದ ಆರ್ಥಿಕ ಮುಗ್ಗಟ್ಟನ್ನು ಎದುರಿಸಿ ಸಾಮ್ರಾಜ್ಯವನ್ನು ಕಾಪಾಡುವುದಕ್ಕೋಸ್ಕರ ಅಸಾಧಾರಣವಾದ ಆದಾಯ ಕ್ರಮಗಳನ್ನು ರಾಜ ನಾದವನು ಅನುಸರಿಸಬೇಕಾಗುತ್ತದೆ. ಬರಿದಾದ ಖಜಾನೆಯನ್ನು ತೀವ್ರವಾಗಿ ಭರ್ತಿ ಮಾಡುವುದಕ್ಕಾಗಿ ಕೌಟಿಲ್ಯ ಅನೇಕ ತುರ್ತು ಕ್ರಮಗಳನ್ನು ಸೂಚಿಸಿದ್ದಾನೆ.

ವ್ಯವಸಾಯ ಮೌರ್ಯ ಸಾಮ್ರಾಜ್ಯದ ಆದಾಯದ ಪ್ರಮುಖ ಮೂಲವಾಗಿದ್ದರಿಂದ, ಕೌಟಿಲ್ಯನ ಗಮನ ಮೊದಲು ವ್ಯವಸಾಯದ ಕಡೆಗೆ ಹರಿದಿದೆ. ತುರ್ತು ಕ್ರಮದ ಅಂಗವಾಗಿ, ವ್ಯವಸಾಯ ಸಮೃದ್ಧಿ ಇರುವ ಪ್ರದೇಶಗಳ ರೈತರಿಂದ ರಾಜ ಉತ್ಪನ್ನದ ಮೂರನೆಯ ಒಂದು ಅಥವಾ ನಾಲ್ಕನೆಯ ಒಂದು ಭಾಗವನ್ನು ವಸೂಲು ಮಾಡಬೇಕು. ಮತ್ತೊಂದು ವಿಧಾನವೆಂದರೆ, ರೈತವರ್ಗದವರಿಂದ ಬೀಜ ಹಾಗೂ ಆಹಾರದ ಅಗತ್ಯಕ್ಕಾಗಿ ಒಂದು ಪಾಲನ್ನು ಮೀಸಲಿಟ್ಟು, ಮಿಕ್ಕ ಉತ್ಪನ್ನದ ನಾಲ್ಕನೆಯ ಒಂದಂಶವನ್ನು ಚಿನ್ನವನ್ನು ಕೊಟ್ಟು ಕೊಂಡುಕೊಳ್ಳುವುದು. ಈ ಕ್ರಮಗಳು ಸಾಕಾಗದಿದ್ದಲ್ಲಿ ವ್ಯವಸಾಯ ಅಧಿಕಾರಿಗಳು ಬೇಸಗೆ ಬೆಳೆಯನ್ನು ಬೆಳೆಯುವಂತೆ ರೈತರನ್ನು ಒತ್ತಾಯಪಡಿಸಬಹುದು. ಇಷ್ಟಲ್ಲದೆ ರೈತವರ್ಗದವರಿಂದ ತುರ್ತು ಪರಿಸ್ಥಿತಿಗಳಲ್ಲಿ ಹತ್ತಿ, ಉಣ್ಣೆ, ರೇಷ್ಮೆ ಹಾಗೂ ಅರಣ್ಯೋತ್ಪನ್ನಗಳಾದ ಸೌದೆ, ಬೊಂಬು, ಮೇಣ, ಶ್ರೀಗಂಧ, ದಂತ, ಚರ್ಮ ಮುಂತಾದವುಗಳ ಆರನೆಯ ಒಂದು ಭಾಗ ವನ್ನೂ ವಸೂಲು ಮಾಡಬಹುದು.

ವಣಿಕವರ್ಗದವರನ್ನೂ ಇಂಥ ಸಂದರ್ಭಗಳಲ್ಲಿ ವಿಶೇಷ ತೆರಿಗೆಗೆ ಗುರಿಪಡಿಸಬೇಕು. ಚಿನ್ನ, ಬೆಳ್ಳಿ, ವಜ್ರ, ಮಾಣಿಕ್ಯ ಆನೆ, ಕುದುರೆ ಮುಂತಾದವುಗಳಲ್ಲಿ ವ್ಯವಹರಿಸುವ ವಣಿಕರು ಐನೂರು ಪಣಗಳನ್ನು ವಿಶೇಷ ತೆರಿಗೆಯಾಗಿ ಕೊಡಬೇಕು. ಹತ್ತಿಬಟ್ಟೆ, ಹಿತ್ತಾಳೆ, ತಾಮ್ರ, ಔಷಧಿ ಮುಂತಾದವುಗಳಲ್ಲಿ ವ್ಯವ ಹರಿಸುವವರು ನಾನೂರು ಪಣಗಳನ್ನು ಕೊಡಬೇಕು. ಸೌದೆ, ಬೊಂಬು, ಮಡಕೆ, ತರಕಾರಿ ಮುಂತಾದವು ಗಳ ವ್ಯಾಪಾರಿಗಳು ಐವತ್ತು ಪಣಗಳನ್ನು ಕೊಡಬೇಕು. ನಟರು ಹಾಗೂ ವೇಶ್ಯೆಯರು ತಮ್ಮ ವೇತನದ ಅರ್ಧಾಂಶವನ್ನು ಕೊಡಬೇಕು. ತುರ್ತು ಪರಿಸ್ಥಿತಿಗಳಲ್ಲಿ ಅಕ್ಕಸಾಲಿಗರ ಎಲ್ಲ ಆಸ್ತಿಪಾಸ್ತಿಗಳನ್ನೂ ಸರ್ಕಾರ ಮುಟ್ಟುಗೋಲು ಹಾಕಿಕೊಳ್ಳಬೇಕು. ಇತರ ಎಲ್ಲ ವರ್ಗದ ಜನಗಳ ವಿಷಯದಲ್ಲಿ ಉದಾರತೆ ಯನ್ನು ತೋರಿರುವ ಕೌಟಿಲ್ಯ, ಅಕ್ಕಸಾಲಿಗರ ವಿಷಯದಲ್ಲಿ ಮಾತ್ರ ಸಮರ್ಥನೆಗೆ ಮೀರಿದ ಕ್ರೌರ್ಯ ತೋರಿಸಿದ್ದಾನೆ.

ಇದೇ ರೀತಿ, ಪಶುಪಾಲಕರಿಂದಲೂ ವಿಶೇಷ ತೆರಿಗೆಗಳನ್ನು ವಸೂಲು ಮಾಡಬೇಕು. ಕೋಳಿ ಗಳು ಹಾಗೂ ಹಂದಿಗಳನ್ನು ಸಾಕುವವರು ಅರ್ಧ ಭಾಗದಷ್ಟು ಪ್ರಾಣಿಗಳನ್ನು ಕೊಡಬೇಕು. ಹಸುಗಳು, ಎಮ್ಮೆಗಳು ಮತ್ತು ಒಂಟೆಗಳನ್ನು ಸಾಕುವವರು ಒಟ್ಟು ಪ್ರಾಣಿಗಳ ಸೇಕಡ ಹತ್ತರಷ್ಟನ್ನು ಒಪ್ಪಿಸ ಬೇಕು.

ಈ ಕ್ರಮಗಳೂ ಪರಿಸ್ಥಿತಿಯನ್ನು ಹತೋಟಿಗೆ ತರದಿದ್ದಲ್ಲಿ ಕೊನೆಗಾಲದಲ್ಲಿ ಅನುಸರಿಸಬಹುದಾದ ಅಸಾಧಾರಣ ಹಾಗೂ ಕಪಟ ಮಾರ್ಗಗಳನ್ನು ಕೌಟಿಲ್ಯ ಸೂಚಿಸುತ್ತಾನೆ. ಧರ್ಮಕಾರ್ಯಗಳು ಅಥವಾ

ಇತರ ಯಾವುದಾದರೂ ವ್ಯವಹಾರ ಮಾಡುತ್ತೇನೆಂದು ಸುಳ್ಳು ಪ್ರಚಾರ ಮಾಡಿ ಸಮಾಪರ್ತ ಸಾರ್ವಜನಿಕರಿಂದ ಹಣ ವಸೂಲಿ ಮಾಡಿ ಖಜಾನೆಗೆ ಸೇರಿಸಬೇಕು. ತುರ್ತು ಪರಿಸ್ಥಿತಿಗಳಲ್ಲಿ, ಶ್ರೀಮಂತರು ಕೂಡಿಟ್ಟಿರುವ ಧನಕನಕಗಳನ್ನು ನಾನಾ ಉಪಾಯಗಳಿಂದ ವಸೂಲು ಮಾಡಬೇಕು. ಆದರೆ ತಾವಾಗಿಯೇ ಮುಂದೆ ಬಂದು ಉದಾರವಾಗಿ ಧನಕನಕಗಳನ್ನು ಸಲ್ಲಿಸಿದ್ದಾದರೆ ಅಂಥವರಿಗೆ ರಾಜ ಗೌರವಾರ್ಥವಾಗಿ ಚಿನ್ನದ ಕವಚ, ಛತ್ರಿ, ಆಸ್ಥಾನದಲ್ಲಿ ಸ್ಥಾನಮಾನಗಳು ಮುಂತಾದವನ್ನು ನೀಡುವುದರ ಮೂಲಕ ಗೌರವಿಸಬೇಕು.

ಕಪಟೋಪಾಯಗಳಲ್ಲಿ ಭಂಡಾರವನ್ನು ಭರ್ತಿ ಮಾಡುವಲ್ಲಿ ಗೂಢಚಾರರ ಪಾತ್ರವನ್ನು ಕೌಟಿಲ್ಯ ವಿವರಿಸಿದ್ದಾನೆ. ಶ್ರೋತ್ರಿಯರ ಹೊರತು ಇತರ ಜನಗಳು, ಅಂದರೆ ಕಪಟಿಗಳು, ಸಂಘಗಳು, ದೇವಸ್ಥಾನಗಳು ಮುಂತಾದವುಗಳ ಧನಸಂಪತ್ತನ್ನು ಗೂಢಚಾರರು ಕಪಟೋಪಾಯದಿಂದ ಅಪಹರಿಸಬೇಕು. ಗೂಢಚಾರರು ವರ್ತಕರ ಗುಂಪಿನೊಂದಿಗೆ ಸೇರಿಕೊಂಡು ಸಮಯ ಸಾಧಿಸಿ ಅವರ ದ್ರವ್ಯಾಪಹರಣ ಮಾಡಿ ಬೊಕ್ಕಸಕ್ಕೆ ಅರ್ಪಿಸಬೇಕು.

ದೇವತಾಧ್ಯಕ್ಷನಾದವನೂ ಕೋಶಕ್ಷಯದ ಸಂದರ್ಭದಲ್ಲಿ ಸರ್ಕಾರದ ಸಹಾಯಕ್ಕೆ ಬರಬೇಕು. ಅವನು ಶತ್ರುಗಳ ಆಕ್ರಮಣದ ಸುಳ್ಳು ಸುದ್ದಿಯನ್ನು ಹುಟ್ಟಿಸಿ ದುರ್ಗಗಳು ಹಾಗೂ ಗ್ರಾಮೀಣ ಪ್ರದೇಶಗಳ ಎಲ್ಲಾ ದೇವಾಲಯಗಳ ಧನಸಂಪತ್ತನ್ನು ಒಂದೆಡೆ ಸೇರಿಸುವಂತೆ ಮಾಡಿ, ಅದನ್ನು ಸರ್ಕಾರಕ್ಕೆ ತಂದೊಪ್ಪಿಸಬೇಕು; ಅಥವಾ ದೇವರ ಉತ್ಸವ, ಲೀಲೆ, ದೇವರ ದರ್ಶನ ಮುಂತಾದ ಕಪಟ ಸುದ್ದಿಗಳನ್ನು ಹಬ್ಬಿಸಿ, ಜಾತ್ರೆ, ಸೇವೆ, ದಕ್ಷಿಣೆ, ಕಾಣಿಕೆ ಮುಂತಾದ ರೀತಿಗಳಲ್ಲಿ ದ್ರವ್ಯಸಂಗ್ರಹ ಮಾಡಬೇಕು. ಈ ರೀತಿ ಜನಗಳ ಧಾರ್ಮಿಕ ನಂಬಿಕೆಯನ್ನು ಬಳಸಿಕೊಂಡು ದೇವತಾಧ್ಯಕ್ಷ ತುರ್ತು ಪರಿಸ್ಥಿತಿಯಲ್ಲಿ ಧನಸಂಗ್ರಹ ಮಾಡಬೇಕೆಂದು ಕೌಟಿಲ್ಯ ಸೂಚಿಸುತ್ತಾನೆ.

ಇಷ್ಟಲ್ಲದೆ ವೇಶ್ಯೆಯರು, ಗೂಢಚಾರರು, ಸನ್ಯಾಸಿಗಳು ಮುಂತಾದವರ ಮೂಲಕ ದುಷ್ಟರೂ ಕಪಟಿಗಳೂ ಆದ ಶ್ರೀಮಂತರಿಂದ ದ್ರವ್ಯವನ್ನು ಸುಲಿಗೆ ಮಾಡಬೇಕೆಂದು ಸೂಚಿಸುತ್ತಾನೆ.

ಕೋಶಕ್ಷಯವನ್ನು ತಡೆಗಟ್ಟಿ ಸಾಮ್ರಾಜ್ಯದ ಆರ್ಥಿಕ ಮುಗ್ಗಟ್ಟನ್ನು ಪರಿಹರಿಸುವುದಕ್ಕಾಗಿ ಕೌಟಿಲ್ಯ ಸೂಚಿಸಿರುವ ಕಪಟೋಪಾಯಗಳು ನ್ಯಾಯ ಹಾಗೂ ಧರ್ಮಕ್ಕೆ ವಿರುದ್ಧವಾಗಿರುವಂತೆ ಕಾಣಬಹುದು. ಆದರೆ ಕೌಟಿಲ್ಯನೇ ಇದಕ್ಕೆ ಸೂಕ್ತ ಸಮಾಧಾನವನ್ನು ಕೊಡುತ್ತಾನೆ. ತುರ್ತು ಪರಿಸ್ಥಿತಿಯಲ್ಲಿ ಕೋಶವನ್ನು ರಕ್ಷಿಸಿ ಸಾಮ್ರಾಜ್ಯದ ಸ್ಥಿರತೆಯನ್ನು ಕಾಪಾಡಿ ಆ ಮೂಲಕ ಪ್ರಜಾಪರಿಪಾಲನ ಕಾರ್ಯವನ್ನು ಸಾಧಿಸುವುದಕ್ಕೋಸ್ಕರ ಕೆಲವು ಸಂದರ್ಭಗಳಲ್ಲಿ ಕಪಟ ಮಾರ್ಗಗಳು ಅವಶ್ಯಕವಾಗುತ್ತವೆ. ನ್ಯಾಯಪರಿಪಾಲನೆಯ ಉದ್ದೇಶಕ್ಕಾಗಿ ಕೆಲವು ಸಂದರ್ಭಗಳಲ್ಲಿ ಅನ್ಯಾಯವೆನಿಸುವ ಕಾರ್ಯಗಳು ರಾಜನೀತಿಯಲ್ಲಿ ಅವಶ್ಯವಾಗುತ್ತವೆ. ಪ್ರಜಾಪರಿಪಾಲಕನಾದ ರಾಜ ವಿಶೇಷ ಸಂದರ್ಭಗಳಲ್ಲಿ ಕಪಟ ಮಾರ್ಗಗಳನ್ನು ಅನುಸರಿಸಿದರೂ ದಾರಿ ತೋರುವವನು ತನ್ನ ಮೈಗೆ ಹತ್ತಿದ ಮಣ್ಣನ್ನು ಬಾವಿಯಲ್ಲಿ ದೊರೆತ ನೀರಿನಲ್ಲಿ ತೊಳೆದುಕೊಂಡು ಅದರ ನೀರನ್ನೇ ಕುಡಿದು ಸಂತೋಷಪಡುವಂತೆ, ಕೆಲವು ಸಂದರ್ಭಗಳಲ್ಲಿ ಪರಿಸ್ಥಿತಿಗೆ ಮಣಿದು ಕಪಟೋಪಾಯಗಳ ಮೂಲಕ ಪ್ರಜೆಗಳ ದ್ರವ್ಯವನ್ನು ವಸೂಲಿ ಮಾಡಿದರೂ ಅನಂತರದ ನ್ಯಾಯ ಹಾಗೂ ಧರ್ಮಪರಿಪಾಲನೆಯ ಮೂಲಕ ಕ್ಷಣಿಕವಾದ ಅನ್ಯಾಯದ ಪಾಪದಿಂದ ಪರಿಹಾರ ಪಡೆಯುತ್ತಾನೆ—ಎಂಬುದು ಕೌಟಿಲ್ಯನ ಸಮರ್ಥನೆ.

ಇಂದಿನಂಥ ಅಂತರರಾಷ್ಟ್ರೀಯ ಸಹಕಾರ ಹಾಗೂ ಸಹಾಯದ ವ್ಯವಸ್ಥೆ ಯಾವುದೂ ಇಲ್ಲದ ಅಂದಿನ ಕಾಲದಲ್ಲಿ ಮೌರ್ಯ ಸಾಮ್ರಾಜ್ಯದಂಥ ಭಾರಿ ಸಾಮ್ರಾಜ್ಯದ ಆರ್ಥಿಕ ಮುಗ್ಗಟ್ಟನ್ನು ಬಗೆಹರಿಸುವ ಸಮಸ್ಯೆ ಎಷ್ಟು ಅಗಾಧವಾಗಿದ್ದಿರಬಹುದೆಂದು ಯೋಚಿಸಿದರೆ ಕೌಟಿಲ್ಯ ಸೂಚಿಸಿರುವ ಕಪಟೋಪಾಯಗಳು ಬಹುಶಃ ಅನಿವಾರ್ಯವೆನಿಸಿಯಾವು.

ಕಪಟಮಾರ್ಗಗಳ ಮೂಲಕ ಪ್ರಜೆಗಳಿಂದ ಹಣವನ್ನು ವಸೂಲು ಮಾಡುವ ಕ್ರಮ ಅತ್ಯಂತ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಮಾತ್ರ ಬಳಸಬಹುದಾದ ಕ್ರಮವೆಂಬುದನ್ನು ಕೌಟಿಲ್ಯ ಒತ್ತಿಹೇಳುತ್ತಾನೆ. ಅಂಥ ವಿಶೇಷ ಕ್ರಮಗಳನ್ನು ಒಂದು ಸಾರಿ ಅನುಸರಿಸಬಹುದೇ ವಿನಾ ಎರಡು ಬಾರಿಯಲ್ಲ. ಪದೇ ಪದೇ

ಅಂಥ ಕ್ರಮಗಳನ್ನು ಅನುಸರಿಸುವುದರಿಂದ ಸಾಮ್ರಾಜ್ಯದ ಆರ್ಥಿಕ ಪ್ರಗತಿಗೆ ಕುಂದುಂಟಾಗುತ್ತದೆ ಎಂದು ಕೌಟಿಲ್ಯ ಎಚ್ಚರಿಕೆ ನೀಡಿದ್ದಾನೆ.

ವಿಶೇಷ ಕ್ರಮಗಳ ಮೂಲಕ ದ್ರವ್ಯಸಂಗ್ರಹ ಮಾಡುವ ಕಠೋರ ನೀತಿಯನ್ನು ಸಾಧ್ಯವಾದ ಮಟ್ಟಿಗೆ ಪಾಷಂಡಿಗಳು, ಕಪಟಿಗಳು ಹಾಗೂ ದುಷ್ಟ ಜನರ ವಿಚಾರದಲ್ಲಿ ಅನುಸರಿಸಬೇಕು. ಸಜ್ಜನರನ್ನು ವಿನಾ ಕಾರಣ ಹಿಂಸೆಗೆ ಗುರಿಮಾಡಬಾರದೆಂದು ಕೌಟಿಲ್ಯ ಸಾರಿ ಹೇಳುತ್ತಾನೆ.

ಕೋಶಸಂಗ್ರಹದ ತುರ್ತು ಕ್ರಮಗಳನ್ನು ತಿಳಿಸುವುದರಲ್ಲಿ ಮಾತ್ರ ಕೌಟಿಲ್ಯ ತೃಪ್ತನಾಗದೆ ಅವುಗಳ ಸರಿಯಾದ ಆಚರಣೆಯ ಬಗ್ಗೆ ಹಾಗೂ ಸೂಕ್ತ ಸಂದರ್ಭಗಳಲ್ಲಿ ಕೊಡಬೇಕಾದ ವಿನಾಯಿತಿಗಳ ಬಗ್ಗೆಯೂ ದೀರ್ಘವಾದ ವಿವರಣೆ ನೀಡಿದ್ದಾನೆ.

ಕೋಶಸಂಗ್ರಹದ ತುರ್ತು ಕ್ರಮಗಳನ್ನು ಉಲ್ಲಂಘಿಸಿದ ಅಧಿಕಾರಿಗಳಿಗೆ ಹಾಗೂ ಅಸಹಕಾರ ತೋರಿದ ಪ್ರಜೆಗಳಿಗೆ ಕೌಟಿಲ್ಯ ಉಗ್ರಶಿಕ್ಷೆ ವಿಧಿಸಿದ್ದಾನೆ. ಆದರೆ ಅದೇ ಸಮಯದಲ್ಲಿ ಅಶಕ್ತರು ಹಾಗೂ ಪ್ರತಿಕೂಲ ಪರಿಸ್ಥಿತಿಯಲ್ಲಿರುವ ಪ್ರಜೆಗಳ ಬಗ್ಗೆ ಯಾವ ರೀತಿ ಕರುಣೆಯಿಂದ ನಡೆದುಕೊಳ್ಳಬೇಕೆಂದು ತಿಳಿಸಿರುವುದು ಪ್ರಶಂಸಾರ್ಹವಾಗಿದೆ. ಮಧ್ಯಮ ಹಾಗು ಕೆಳದರ್ಜೆಯ ಜಮೀನುಗಳಿರುವ ಭಾಗಗಳಲ್ಲಿ ವಾಸಿಸುತ್ತಿರುವ ಪ್ರಜೆಗಳು, ಕೋಟೆ ಕೊತ್ತಲಗಳು, ತೋಟಗಳು, ಕಟ್ಟಡಗಳು, ವಾಣಿಜ್ಯಮಾರ್ಗಗಳು ಮುಂತಾದವನ್ನು ನಿರ್ಮಿಸುವ ಕೆಲಸಗಾರರು, ಗಣಿಕೆಲಸಗಾರರು, ಅರಣ್ಯಗಳಲ್ಲಿ ಕೆಲಸ ಮಾಡುವವರು, ಸಾಮ್ರಾಜ್ಯದ ಗಡಿ ಪ್ರದೇಶಗಳಲ್ಲಿ ವಾಸಿಸುವವರು ಮತ್ತು ಜೀವನಾಧಾರಕ್ಕೂ ಗತಿಯಿಲ್ಲದವರು ಮುಂತಾದವರ ವರ್ಗಗಳನ್ನು ಕಠೋರವಾದ ದ್ರವ್ಯಸಂಗ್ರಹ ಕ್ರಮಗಳಿಂದ ಮುಕ್ತಗೊಳಿಸಬೇಕೆಂಬುದು ಕೌಟಿಲ್ಯನ ಆದೇಶ. ಅದೇ ರೀತಿ ವಸತಿ ಇಲ್ಲದ ಪ್ರದೇಶಗಳಲ್ಲಿ ವಾಸ ಮಾಡುವವರಿಗೆ ದನಕರುಗಳು, ದವಸ ಮುಂತಾದವನ್ನು ನೀಡಿ ಸಹಾಯ ಮಾಡಬೇಕು. ಅರಣ್ಯವಾಸಿಗಳು ಮತ್ತು ಶ್ರೋತ್ರಿಯರ ಆಸ್ತಿಪಾಸ್ತಿಗಳನ್ನು ರಾಜನಾದವನು ವಿಶೇಷ ಸಂದರ್ಭಗಳಲ್ಲೂ ಮುಟ್ಟಬಾರದೆಂದು ಸ್ಪಷ್ಟವಾದ ಆದೇಶ ನೀಡಿದ್ದಾನೆ.

ಸಮಾಹರ್ತನ ಆಜ್ಞೆಯಂತೆ ಬೇಸಗೆ ಬೆಳೆಯನ್ನು ಬೆಳೆಯಲು ನಿರಾಕರಿಸಿದ ರೈತರಿಗೆ ಎರಡರಷ್ಟು ಜುಲ್ಮಾನೆ ವಿಧಿಸುವುದಾಗಿ ಎಚ್ಚರಿಕೆ ನೀಡಬೇಕು. ಹಾಗೂ ರಾಜನಿಗೆ ಕೊಡಬೇಕೆಂದು ವಿಧಿಸಿದ ವಿಶೇಷ ಧಾನ್ಯಕಾಣಿಕೆಯನ್ನು ಒಪ್ಪಿಸಲು ತಪ್ಪಿದಲ್ಲಿ ಎಂಟು ಪಟ್ಟು ಜುಲ್ಮಾನೆ ವಿಧಿಸಬೇಕು. ಈ ರೀತಿ ಕೌಟಿಲ್ಯ ತಪ್ಪಿತಸ್ಥರಿಗೆ ಉಗ್ರಶಿಕ್ಷೆ ವಿಧಿಸುವುದರ ಮೂಲಕ ತುರ್ತು ಪರಿಸ್ಥಿತಿಯಲ್ಲಿ ದ್ರವ್ಯಸಂಗ್ರಹದ ಕ್ರಮಗಳ ಅಗತ್ಯವನ್ನು ಎತ್ತಿಹಿಡಿದಿದ್ದಾನೆ.

ಈ ಅಂಶಗಳ ಅಧ್ಯಯನದಿಂದ ಕೌಟಿಲ್ಯ ರಾಜನೀತಿಯಲ್ಲಿ ಕೋಶಸಂಪತ್ತಿಗೆ ಎಂಥ ಪ್ರಾಮುಖ್ಯ ಕೊಟ್ಟಿದ್ದನೆಂಬುದು ಸ್ಪಷ್ಟವಾಗುತ್ತದೆ. ಅಷ್ಟೇ ಅಲ್ಲದೆ ಕೌಟಿಲ್ಯ ಕೇವಲ ಸಿದ್ಧಾಂತ ರಚನೆಯಲ್ಲಿ ತೃಪ್ತನಾಗುವ ಆದರ್ಶವಾದಿಯಲ್ಲ. ಅವನೊಬ್ಬ ಪ್ರಯೋಗಶೀಲ ಹಾಗೂ ಕಾರ್ಯವಾದಿ ಎಂಬುದು ಸಹ ಸ್ಪಷ್ಟವಾಗುತ್ತದೆ. ಒಬ್ಬ ಸಫಲ ರಾಜತಂತ್ರಜ್ಞನಿಗೆ ಇರಬೇಕಾದ ಗುಣವೆಂದರೆ, ಯೋಗ್ಯ ಸಂದರ್ಭಗಳಲ್ಲಿ ಕರುಣೆ ಮತ್ತು ಅನುಕಂಪ ಮತ್ತು ಸಾಮ್ರಾಜ್ಯದ ಹಿತದೃಷ್ಟಿಯಿಂದ ಅಗತ್ಯವಾದಾಗ ತೋರಬೇಕಾದ ಕಠೋರತೆ. ಇವೆರಡರ ಸಮ್ಮಿಳನವನ್ನೂ ಕೌಟಿಲ್ಯನಲ್ಲಿ ಕಾಣಬಹುದಾಗಿದೆ.

ಕೌಟಿಲ್ಯನ ಕ್ಷಾಮನೀತಿ

ಭೀಕರವಾದ ಕ್ಷಾಮಡಾಮರಗಳು ಭಾರತಕ್ಕೆ ಅಪರಿಚಿತವೇನೂ ಅಲ್ಲ. ವೇದಗಳು ಮತ್ತು ರಾಮಾಯಣ ಮಹಾಭಾರತಗಳಲ್ಲಿ ಕ್ಷಾಮದ ಬಗ್ಗೆ ಉಲ್ಲೇಖಗಳಿವೆ. ಆದರೂ ಕೌಟಿಲ್ಯನ 'ಅರ್ಥಶಾಸ್ತ್ರ' ದುರ್ಭಿಕ್ಷಗಳನ್ನು ಎದುರಿಸಲು ಸಂಕೀರ್ಣವಾದ ಕ್ಷಾಮನೀತಿಯನ್ನು ರೂಪಿಸಿರುವ ಪ್ರಾಚೀನ ಗ್ರಂಥಗಳಲ್ಲಿ ಪ್ರಪ್ರಥಮವೆಂಬುದಾಗಿ ಗಣಿಸಲ್ಪಟ್ಟಿದೆ. ದುರ್ಭಿಕ್ಷಕಾಲದಲ್ಲಿ ರಾಜನಾದವನು ಏನು ಕಾರ್ಯಕ್ರಮಗಳನ್ನು ಅನುಸರಿಸಬೇಕೆಂಬುದರ ಬಗೆ ಕೌಟಿಲ್ಯ ದೀರ್ಘವಾದ ಮತ್ತು ಅತಿಸೂಕ್ಷ್ಮವಾದ ವಿವರಣೆಯನ್ನು ನೀಡಿದ್ದಾನೆ.

ದುರ್ಭಿಕ್ಷ ಕಾಲದಲ್ಲಿ ರಾಜನಾದವನು ತನ್ನ ಪ್ರಜೆಗಳಿಗೆ ಬೀಜಗಳು ಹಾಗೂ ದವಸಧಾನ್ಯಗಳನ್ನು ಒದಗಿಸುವುದರ ಮೂಲಕ ನೆರವು ನೀಡಬೇಕು. ಶಿಥಿಲವಾದ ಕಟ್ಟಡಗಳ ಪುನರ್ನಿರ್ಮಾಣ, ಹೊಸ ಕಟ್ಟಡಗಳ ರಚನೆ, ಕೆರೆಕಟ್ಟೆಗಳ ನಿರ್ಮಾಣ ಹಾಗೂ ದುರುಸ್ತಿ ಮುಂತಾದವನ್ನು ಕೈಕೊಂಡು ನಿರುದ್ಯೋಗಿಗಳಿಗೆ ಉದ್ಯೋಗವನ್ನು ಒದಗಿಸಬೇಕು. ತನ್ನ ಸಂಗ್ರಹದಲ್ಲಿರುವ ದವಸಧಾನ್ಯಗಳನ್ನು ಕ್ಷಾಮಪೀಡಿತರಿಗೆ ಹಂಚಬೇಕು; ಶ್ರೀಮಂತರಲ್ಲಿ ಸಂಗ್ರಹವಾಗಿರುವ ದವಸಧಾನ್ಯಗಳನ್ನೂ ವಸೂಲು ಮಾಡಿ ಪ್ರಜಾ ಜನರಿಗೆ ಹಂಚಬೇಕು.

ಶ್ರೀಮಂತರಲ್ಲಿ ಸಂಗ್ರಹವಾಗಿರುವ ದ್ರವ್ಯವನ್ನು ವಿಶೇಷ ತೆರಿಗೆಗಳ ಮೂಲಕ ವಮನ ಮಾಡಿಸಬೇಕು ಹಾಗೂ ಅದನ್ನು ಸಾರ್ವಜನಿಕ ಸೇವೆಗಾಗಿ ಬಳಸಬೇಕು ಎಂಬುದು ಕೌಟಿಲ್ಯನ ಸಮಾಜವಾದಿ ಸಲಹೆ.

ಇಷ್ಟಕ್ಕೂ ಮೀರಿದಲ್ಲಿ, ನದಿ ಹಾಗೂ ಸಮುದ್ರ ದಡಗಳಿಗೆ ಪ್ರಜಾಸಮೇತನಾಗಿ ವಲಸೆಹೋಗಬಹುದು. ನೀರು ದೊರೆತಲ್ಲೆಲ್ಲಾ ಪ್ರಜೆಗಳು ಗೆಡ್ಡೆಗೆಣಸು ತರಕಾರಿ ಹಣ್ಣುಗಳು ಮುಂತಾದವನ್ನು ಬೆಳೆಸಬೇಕು. ರಾಜನಾದವನು ಬೇಟೆಯಾಡುವುದರ ಮೂಲಕ ತನ್ನ ಪ್ರಜೆಗಳಿಗೆ ಕನಿಷ್ಠ ಪಕ್ಷ ಮಾಂಸಾಹಾರವನ್ನಾದರೂ ಒದಗಿಸುವ ಪ್ರಯತ್ನ ಮಾಡಬೇಕು. ಕೊನೆಗಾಲದಲ್ಲಿ ತನ್ನ ಪ್ರಜೆಗಳ ಸಮೇತನಾಗಿ ನೆರೆಯ ಮಿತ್ರರಾಜ್ಯಗಳಿಗೆ ವಲಸೆಹೋಗಬಹುದು.

ಈ ರೀತಿ, ಕ್ಷಾಮಪರಿಸ್ಥಿತಿಯನ್ನು ಸಫಲವಾಗಿ ನಿಯಂತ್ರಿಸುವ ನಾನಾ ರೀತಿಯ ಕ್ರಮಗಳನ್ನು ಕೌಟಿಲ್ಯ ಸೂಚಿಸಿದ್ದಾನೆ. ಅವುಗಳಲ್ಲಿ ಅನೇಕ ಕ್ರಮಗಳು ಇಂದಿಗೂ ಆಚರಣೆಯಲ್ಲಿರುವುದು ಕೌಟಿಲ್ಯನ ದೂರದೃಷ್ಟಿ ಹಾಗೂ ಅವನ ಗ್ರಂಥದ ಕಾಲಮಾನಕ್ಕೆ ಸಾಕ್ಷಿಯಾಗಿದೆ.

ಸಾಮಾಜಿಕ ಹಿತರಕ್ಷಣಕಾರ್ಯಗಳು

ಕೌಟಿಲ್ಯ ತನ್ನ 'ಅರ್ಥಶಾಸ್ತ್ರ'ದಲ್ಲಿ ಸುಖೀರಾಜ್ಯದ ಒಂದು ಅತ್ಯಂತ ಸುಂದರ ಚಿತ್ರಣವನ್ನೇ ನಿರ್ಮಿಸಿ ತೋರಿಸಿದ್ದಾನೆ. ಬಹುಶಃ ಪ್ರಾಚೀನ ಭಾರತದ, ಅಷ್ಟೇ ಏಕೆ, ಸಮಕಾಲೀನ ಪ್ರಪಂಚದ ಇತಿಹಾಸದಲ್ಲೇ ಕಲ್ಯಾಣರಾಜ್ಯದ ಚಿತ್ರಣ ದೊರೆಯುವುದು ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಮಾತ್ರವೆಂಬುದು ಅನೇಕ ವಿದ್ವಾಂಸರ ಅಭಿಮತ. ಕೌಟಿಲ್ಯನ ಅಭಿಪ್ರಾಯದಲ್ಲಿ ಸಾಮಾಜಿಕ ಆರ್ಥಿಕ ಹಾಗೂ ಧಾರ್ಮಿಕವಾಗಿ ಪ್ರಜಾಕೋಟಿಯ ಪ್ರಗತಿಯನ್ನು ಸಾಧಿಸುವುದು ಮಾತ್ರ ರಾಜನೀತಿಯ ಪರಮಗುರಿಯಾಗಿರಬೇಕೇ ವಿನಾ ಕೇವಲ ಸಿಂಹಾಸನದ ಭದ್ರತೆಯಲ್ಲ. ಪ್ರಜಾಕಲ್ಯಾಣದ ಉದ್ದಿಶ್ಯವೇ ಪರಮವಾದುದು. ಇತರ ಯಾವುದೇ ಉದ್ದಿಶ್ಯವೂ ಪ್ರಜಾಕಲ್ಯಾಣದ ಆದರ್ಶಕ್ಕೆ ಅಧೀನವಾದುದೆಂಬುದನ್ನು ಕೌಟಿಲ್ಯ ನಿಸ್ಸಂಶಯವಾಗಿ ಪ್ರಕಟಪಡಿಸಿದ್ದಾನೆ. ಪ್ರಜಾಕೋಟಿಯ ಕಲ್ಯಾಣದ ದೃಷ್ಟಿಯಿಂದ ಸರ್ಕಾರವನ್ನು ಸಾಮ್ರಾಜ್ಯದ ಸರ್ವೋತ್ಕೃಷ್ಟ ಸಂಸ್ಥೆಯನ್ನಾಗಿಸಿ ಅದಕ್ಕೆ ಅಪರಿಮಿತವಾದ ಅಧಿಕಾರಗಳನ್ನಿತ್ತಿದ್ದಾನೆ. ಸರ್ಕಾರ ದೈನಂದಿನ ಆಡಳಿತ ಕಾರ್ಯಗಳನ್ನಷ್ಟೇ ಅಲ್ಲದೆ ಹಲವು ಸಾಮಾಜಿಕ ಹಿತರಕ್ಷಣ ಕಾರ್ಯಗಳನ್ನೂ ಕೈಗೊಳ್ಳಬೇಕೆಂದು ಗೊತ್ತುಪಡಿಸಿದ್ದಾನೆ. ಅವುಗಳಲ್ಲಿ ಮುಖ್ಯವಾದವು: 1 ಗೃಹನಿರ್ಮಾಣಕ್ಕೆ ಸಂಬಂಧಿಸಿದ ಶಾಸನಗಳು ಹಾಗೂ ನಗರಯೋಜನೆಗಳು. 2 ಗೃಹಸ್ಥಜೀವನದ ಶಾಂತಿ ರಕ್ಷಣೆ, 3 ಸಾಮಾಜಿಕ ಜೀವನ, 4 ಸಾರ್ವಜನಿಕ ನೀತಿ ರಕ್ಷಣೆ: ಈ ದೃಷ್ಟಿಯಿಂದ (i) ಜೂಜುಗಾರಿಕೆಯ ನಿಯಂತ್ರಣ. (ii) ವೇಶ್ಯಾವೃತ್ತಿಯ ಹತೋಟಿ, (iii) ಅನೀತಿಯುತ ಕೃತ್ಯಗಳ ನಿಯಂತ್ರಣ (iv) ಅನಾಥ ರಕ್ಷಣಾಲಯಗಳು. 5 ಸಾರ್ವಜನಿಕ ಆರೋಗ್ಯಪಾಲನೆ: ಈ ದೃಷ್ಟಿಯಿಂದ (i) ವೈದ್ಯವೃತ್ತಿ ನಿಯಂತ್ರಣ. (ii) ಆಹಾರ ನಿಯಂತ್ರಣ: 6 ನೀರಾವರಿ ಕಾಮಗಾರಿಗಳು. 7 ಕಾರ್ಮಿಕ ನಿಯಂತ್ರಣ ಮತ್ತು ಸಾಮುದಾಯಿಕ ಯೋಜನೆಗಳು.

ಸಾರ್ವಜನಿಕ ಆರೋಗ್ಯ ರಕ್ಷಣೆ

ಕೌಟಿಲ್ಯನ ಕಲ್ಯಾಣ ರಾಜ್ಯದ ಸಾರ್ವಜನಿಕ ಹಿತದ ಕಾರ್ಯಗಳಲ್ಲಿ ಸಾರ್ವಜನಿಕ ಆರೋಗ್ಯ

ರಕ್ಷಣೆಗೆ ವಿಶೇಷ ಗಮನ ಕೊಡಲಾಗಿದೆ. ಈ ದೃಷ್ಟಿಯಿಂದ ವೈದ್ಯವೃತ್ತಿನಿಯಂತ್ರಣ ಹಾಗೂ ಆಹಾರ ನಿಯಂತ್ರಣಗಳ ಬಗ್ಗೆ ಕೌಟಿಲ್ಯನ ಅಭಿಪ್ರಾಯಗಳು ಅತ್ಯಂತ ಗಮನಾರ್ಹವಾಗಿವೆ.

'ರೆಡ್ ಕ್ರಾಸ್'ನಂಥ ಸೇವಾದಳವನ್ನು ಕುರಿತ ಅತ್ಯಂತ ಪ್ರಾಚೀನವಾದ ಉಲ್ಲೇಖವನ್ನು ಕೌಟಿಲ್ಯನ 'ಅರ್ಥಶಾಸ್ತ್ರ'ದಲ್ಲಿ ಕಾಣಬಹುದು. ಶಸ್ತ್ರಗಳು, ತೈಲಗಳು, ಹತ್ತಿ, ಔಷಧಗಳು ಮುಂತಾದವನ್ನು ಹಿಡಿದು ಸಿದ್ಧರಾದ ವೈದ್ಯ ಹಾಗೂ ದಾದಿಯರ ತಂಡ ಮೌರ್ಯ ಸೈನ್ಯದ ಒಂದು ಪ್ರಮುಖ ಅಂಗವಾಗಿತ್ತು. ಅವರು ಯುದ್ಧರಂಗದಲ್ಲಿ ಗಾಯಗೊಂಡ ಸೈನಿಕರಿಗೆ ವೈದ್ಯಕೀಯ ಸಹಾಯ ನೀಡುವುದರಲ್ಲಿ ಅಹೋರಾತ್ರಿ ನಿರತರಾಗಿರಬೇಕೆಂದು ಕೌಟಿಲ್ಯ ವಿಧಿಸಿದ್ದಾನೆ. ಪ್ರಜೆಗಳ ಆರೋಗ್ಯರಕ್ಷಣೆಗಾಗಿ ಸರ್ಕಾರಿ ಆಸ್ಪತ್ರೆಗಳು ಸಹ ಇದ್ದುವೆಂಬುದು ಅರ್ಥಶಾಸ್ತ್ರದಲ್ಲಿ ಸ್ಪಷ್ಟವಾಗಿ ತಿಳಿದುಬರುತ್ತದೆ. ಹಸು, ಎಮ್ಮೆ, ಕುದುರೆ ಮುಂತಾದ ಪ್ರಾಣಿಗಳಿಗಾಗಿಯೂ ಆಸ್ಪತ್ರೆಗಳು ಮೌರ್ಯ ಸಾಮ್ರಾಜ್ಯದಲ್ಲಿ ಇದ್ದುದು ಸ್ಪಷ್ಟವಾಗಿದೆ.

ಖಾಸಗಿ ವೈದ್ಯವೃತ್ತಿಯ ಬಗ್ಗೆ ಕೌಟಿಲ್ಯ ಅಪಾರವಾದ ಆಸಕ್ತಿಯನ್ನು ವ್ಯಕ್ತಪಡಿಸಿದ್ದಾನೆ. ಸಾಮ್ರಾಜ್ಯದ ಪ್ರತಿಯೊಬ್ಬ ಖಾಸಗಿ ವೈದ್ಯನೂ ತನ್ನ ವೃತ್ತಿಯನ್ನು ಪ್ರಾರಂಭಿಸುವ ಮೊದಲು ನಗರ ಪಾಲಕನಿಗೆ ತಿಳಿಸಿ ಅನುಮತಿ ಪಡೆಯಬೇಕು. ನಗರಪಾಲಕನ ಅನುಮತಿಯಿಲ್ಲದೆ ಖಾಸಗಿ ವೈದ್ಯ ವೃತ್ತಿಯನ್ನು ಅನುಸರಿಸಿದಲ್ಲಿ ಉತ್ತಮ ಸಾಹಸ ದಂಡನೆಗೆ ಅರ್ಹನಾಗುತ್ತಾನೆ.

ವೈದ್ಯನ ನಿರ್ಲಕ್ಷ್ಯದಿಂದಾಗಿ ರೋಗಿಯ ಮರಣವಾದಲ್ಲಿ ವೈದ್ಯನಿಗೆ ಮಧ್ಯಮ ಸಾಹಸ ದಂಡನೆಯಾಗಬೇಕು. ವೈದ್ಯನ ಕರ್ತವ್ಯಭ್ರಷ್ಟತೆಯಿಂದಾಗಿ ರೋಗಿಯ ರೋಗ ಪ್ರಬಲವಾದಲ್ಲಿ ಕೊಲೆಯ ಪ್ರಯತ್ನಕ್ಕೆ ಸಮನಾದ ಶಿಕ್ಷೆಯನ್ನು ವೈದ್ಯನಿಗೆ ವಿಧಿಸಬೇಕು.

ಗರ್ಭಪಾತವನ್ನು ಕೌಟಿಲ್ಯ ಮಹಾಪಾತಕವೆಂದು ಗಣಿಸಿದ್ದಾನೆ. ಗರ್ಭಪಾತಕ್ಕೆ ಪ್ರಯತ್ನಿಸಿದ ಹೆಂಗಸಿಗೆ ಕ್ರೂರರೀತಿಯ ಮರಣದಂಡನೆಯನ್ನು ಸೂಚಿಸಿದ್ದಾನೆ.

ಆಹಾರ ನಿಯಂತ್ರಣ

ಆಹಾರದ ಗುಣನಿಯಂತ್ರಣ ಸಾರ್ವಜನಿಕ ಆರೋಗ್ಯ ರಕ್ಷಣೆಯ ಒಂದು ಪ್ರಧಾನ ಅಂಗವಾಗಿತ್ತು. ಇದರ ಜವಾಬ್ದಾರಿ ಉಗ್ರಾಣದ ಅಧಿಕಾರಿಯಾದ ಕೋಷ್ಠಾಗಾರಾಧ್ಯಕ್ಷನಿಗೆ ಸೇರಿತ್ತು.

ಆಹಾರಸಾಮಗ್ರಿಗಳ ಕಲಬೆರಕೆ ಮಾಡುವುದು ಮಹಾಪರಾಧವೆಂದು ಕೌಟಿಲ್ಯ ಗಣಿಸಿದ್ದ. ಅಂಥ ಬೆರಕೆ ಆಹಾರಪದಾರ್ಥಗಳನ್ನು ತಯಾರಿಸುವವರಿಗೆ ಹಾಗೂ ಮಾರಾಟ ಮಾಡುವವರಿಗೆ ಉಗ್ರಶಿಕ್ಷೆ ಸೂಚಿಸಿದ್ದಾನೆ. ಅದರಲ್ಲೂ ಉಪ್ಪಿಗೆ ಕಲಬೆರಕೆ ಮಾಡುವುದು ತೀವ್ರ ರೀತಿಯ ಅಪರಾಧ. ಅಪ್ಪರಾಧ ಅದಕ್ಕೆ ಎಲ್ಲಕ್ಕಿಂತ ಹೆಚ್ಚಿನ ಶಿಕ್ಷೆ ಸೂಚಿಸಲ್ಪಟ್ಟಿದೆ.

ಇದೇ ರೀತಿ ಕಟುಕಗೃಹಗಳ ಮೇಲಧಿಕಾರಿ ಉತ್ತಮ ದರ್ಜೆಯ ಮಾಂಸ ಜನಗಳಿಗೆ ದೊರಕುವಂತೆ ಮಾಡಬೇಕು. ಕೊಳೆತ ಮಾಂಸದ ಮಾರಾಟ ನಿಷಿದ್ಧವಾದ್ದು. ಕೊಳೆತ ಮಾಂಸವನ್ನು ಮಾರಾಟ ಮಾಡಿದವರಿಗೆ ಹನ್ನೆರಡು ಪಣ ದಂಡ. ಧಾನ್ಯಗಳು, ಎಣ್ಣೆ, ಕ್ಷಾರಗಳು, ಸುಗಂಧದ್ರವ್ಯಗಳು ಹಾಗೂ ಔಷಧ ಪದಾರ್ಥಗಳ ಕಲಬೆರಕೆ ಮಾಡಿದಲ್ಲಿ ಹನ್ನೆರಡು ಪಣ ದಂಡ. ಈ ರೀತಿಯ ಜುಲ್ಮಾನೆಗಳನ್ನು ವಿಧಿಸಿ ವಸೂಲಿ ಮಾಡುವ ಕರ್ತವ್ಯ ವಾಣಿಜ್ಯಾಧಿಕಾರಿಯಾದ ಸಂಸ್ಥಾಧ್ಯಕ್ಷನಿಗೆ ಸೇರಿದುದು.

ಮೇಲೆ ಹೇಳಿದ ಕೆಲವು ಅಂಶಗಳಿಂದ ಕೌಟಿಲ್ಯನ ಕಲ್ಯಾಣ ರಾಜ್ಯ, ಪ್ರಜೆಗಳ ಸುಖಶಾಂತಿಯುತವಾದ ದೈನಂದಿನ ಜೀವನದ ಮೇಲೆ ಎಂಥ ಅಪಾರವಾದ ಪ್ರಭಾವ ಬೀರುತ್ತಿತ್ತೆಂಬುದು ಮನವರಿಕೆಯಾಗುತ್ತದೆ.

ಕೌಟಿಲ್ಯನ ಅರ್ಥನೀತಿಯಲ್ಲಿ ಅನೇಕ ವೇಳೆ ಕಾಠಿಣ್ಯಕ್ಕೆ ಹಾಗೂ ಅಸಾಧಾರಣ ಬೇಡಿಕೆಗಳಿಗೆ ಸ್ಥಾನವನ್ನು ಕಲ್ಪಿಸಲಾಗಿದೆ. ಆದರೆ ಇವೆಲ್ಲದರ ಪರಮೋದ್ದಿಶ್ಯ ಈ ಮೊದಲೇ ತಿಳಿಸಿದಂತೆ ಪ್ರಜಾಕಲ್ಯಾಣವೇ.

ಕೌಟಿಲ್ಯ ಸ್ಪಷ್ಟವಾಗಿ ತಿಳಿಸಿರುವಂತೆ ಧರ್ಮಪರಿಪಾಲನೆಯೇ ರಾಜನಾದವನ ಹಾಗೂ ರಾಜ

ನೀತಿಯ ಪರಮೋಚ್ಚ ಕರ್ತವ್ಯ. ಧರ್ಮಪರಿಪಾಲನೆಯಿಂದ ಮಾತ್ರ ರಾಜತ್ವ ಪ್ರಾಪ್ತಿಯಾಗುವುದೇ ಹೊರತು ಸ್ವಂತ ಸುಖದ ಸಾಧನೆಯಿಂದಲ್ಲ.

ಕಲ್ಯಾಣರಾಜ್ಯದ ಸಾಧನೆ 20ನೆಯ ಶತಮಾನದಲ್ಲೂ ಕೇವಲ ಆದರ್ಶವಾಗಿಯೇ ಉಳಿದಿರುವಲ್ಲಿ ಕ್ರಿ.ಪೂ. ನಾಲ್ಕನೆಯ ಶತಮಾನದಷ್ಟು ಹಿಂದೆಯೇ ಕೌಟಿಲ್ಯ ಚಿತ್ರಿಸಿದ ಸುಖೀರಾಜ್ಯದ ಚಿತ್ರಣ ಭವ್ಯವಾಗಿದೆ.

ಜಿ. ಎನ್. ಚಕ್ರವರ್ತಿ

'ಇತಿಹಾಸಪ್ರದೀಪ'ದಲ್ಲಿ ವಿಧಿ ಮತ್ತು ವಿವೇಕ

"ಇತಿಹಾಸದ ದೃಷ್ಟಿಯಿಲ್ಲದೆ, ಲೌಕಿಕಪ್ರಜ್ಞಾರಹಿತರಾಗಿ, ಪ್ರಗತಿಸಾಧಕವಾದ ಜೀವನಕ್ಕೆ ಸ್ಫೂರ್ತಿ ನೀಡದೆ ಅಂತರಿಕ್ಷಸಂಚಾರಿಯಾದ ಸಂಸ್ಕೃತಿಯನ್ನು ಬೆಳೆಸಿದ ರಾಷ್ಟ್ರ"1 ಎಂದು ಪಾಶ್ಚಾತ್ಯ ಇತಿಹಾಸ ತತ್ತ್ವಜ್ಞರ ಟೀಕೆಗೆ ಪಾತ್ರವಾದ ಭರತಖಂಡದ ಮಹಾಕಾವ್ಯವಾದ ಮಹಾಭಾರತ 'ಇತಿಹಾಸಪ್ರದೀಪ', 'ಸರ್ವಲೋಕಪ್ರಕಾಶಕ'2 ಎಂದು ಪ್ರಶಂಸಿತವಾಗಿದೆ. ಈ ಎರಡು ಅಭಿಪ್ರಾಯಗಳೂ ಪರಸ್ಪರ ವಿರುದ್ಧವಾದರೂ ಮೇಲಿನ ಟೀಕೆಯನ್ನು ಉಪೇಕ್ಷಿಸುವಂತಿಲ್ಲ. ಮಹಾಭಾರತದ ಪ್ರಶಂಸೆಯಲ್ಲೂ ಉತ್ಪ್ರೇಕ್ಷೆಯಿಲ್ಲ. ಇತಿಹಾಸದರ್ಶನ. ಅದರ ಲಕ್ಷಣ. ಇತಿಹಾಸದಲ್ಲಿ ಪುರುಷನ ಪ್ರಗತಿ. ಪ್ರಗತಿಸಾಧಕವಾದ ಪುರುಷಸಂಕಲ್ಪ ಮತ್ತು ಸ್ವಾತಂತ್ರ್ಯ. ಜೀವನದ ಅನುಭವ ಇವುಗಳನ್ನೆಲ್ಲ ವಿವರಿಸುವ ಕೃತಿಗಳು ಇತ್ಯಾದಿ ಮುಖ್ಯ ವಿಷಯಗಳಲ್ಲಿ ಪಾಶ್ಚಾತ್ಯರ ಅನ್ವೇಷಣಕ್ಷೇತ್ರ, ಶ್ರದ್ಧೆ ಮತ್ತು ಧ್ಯೇಯಗಳು ಭಾರತೀಯರ ಸಂಪ್ರದಾಯಕ್ಕಿಂತ ಭಿನ್ನವಾದುದರಿಂದ ಮೇಲಿನ ಟೀಕೆ ಅವರ ದೃಷ್ಟಿಯಿಂದ ಯುಕ್ತಿಯುಕ್ತವಾಗಿದೆ.

ಪಾಶ್ಚಾತ್ಯರ ದೃಷ್ಟಿಯಲ್ಲಿ ಇತಿಹಾಸವೆಂದರೆ ಸಾಹಸಪೂರ್ಣವಾದ ಮಾನವನ ವ್ಯವಹಾರ ಮತ್ತು ಅದರ ಶಾಸ್ತ್ರೀಯವಾದ ವಿವರಣೆ. ಪ್ರಕೃತಿಯ ಪ್ರವಾಹ ಅರ್ಥರಹಿತ ಮತ್ತು ಧ್ಯೇಯರಹಿತ. ಆದ್ದರಿಂದ ಅದು ಇತಿಹಾಸವೆನ್ನಿಸಿಕೊಳ್ಳುವುದಿಲ್ಲ. ಜಗದ್ವ್ಯವಹಾರಕ್ಕೆ ಅರ್ಥ ಕೊಡತಕ್ಕವನೆ ಮಾನವ.3

---

1 "It is no accident that in India..there has been no notable indigenous school of historians." A. J. Toynbee: A Study of History, XII (1961), P. 18

"There is no pure Indian astronomy, no Calendar, and therefore no history." —Oswald Spenglar: Decline of the West (1947), I.11

"World and life–negation, if consistently thought out and developed (as in India), does not produce ethics but reduces ethics to impotence."— Albert Schweitzer: ThePhilosophy of Civilization I (1950), P.288

2 "ಇತಿಹಾಸಪ್ರದೀಪೇನ ಮೋಹಾವರಣಘಾತಿನಾ।
ಲೋಕಗರ್ಭಗೃಹಂ ಕೃತ್ಸ್ನಂ ಯಥಾವತ್ ಸಂಪ್ರಕಾಶಿತಂ॥"—ಮ.ಭಾ., ಆ.ಪ. I–103

3 "Nature has no history."—Hegel

"The process of Nature can be described as sequences of mere events, but those of history are not....all history is the history of thought." — R. G. Collingwood: Idea of History (1949), P. 215

ಪ್ರಕೃತಿಯ ನಾನಾ ವಿಧವಾದ ಸವಾಲುಗಳನ್ನೆಲ್ಲ ಎದುರಿಸಿ ತನ್ನ ಧ್ಯೇಯಸಿದ್ಧಿಗಾಗಿ ಮಾನವ ಮಾಡುವ ಸಾಹಸದ ಉದ್ಯಮಗಳೇ ಇತಿಹಾಸ. ಮಾನವನ ಪ್ರಗತಿಯೆಲ್ಲ ಹೋರಾಟದ ಮೂಲಕ. ಸ್ವಾತಂತ್ರ್ಯಸಾಧಕವಾದ ಪ್ರಯತ್ನಗಳ ಸಿದ್ಧಿಯೆಲ್ಲ ಇವನ ಸಂಕಲ್ಪ. ಸಾಹಸ ಮತ್ತು ಶಕ್ತಿಗಳನ್ನವಲಂಬಿಸಿದೆ. ಈ ಹೋರಾಟಗಳ ವಿವರಣ ಸತ್ಯಾತ್ಮಕವಾಗಿಯೂ ನಿಷ್ಕೃಷ್ಟವಾಗಿಯೂ ಇರಬೇಕು. ಎಂಬ ಶ್ರದ್ಧೆಯುಳ್ಳ ಪಾಶ್ಚಾತ್ಯರ ದೃಷ್ಟಿಯಲ್ಲಿ ಕೋಟ್ಯಂತರ ವರ್ಷಗಳ ಆಯುಷ್ಯವುಳ್ಳ ಬ್ರಹ್ಮಾಂಡಗಳ ಹಿನ್ನೆಲೆಯೊಡನೆ ಅದೇ ಪ್ರಮಾಣಗಳಲ್ಲಿ ಮಾನವನ ಇತಿಹಾಸವನ್ನು ಕಾವ್ಯರೀತಿಯಲ್ಲಿ ವಿವರಿಸುವ ಭಾರತೀಯರ ಸಾಹಿತ್ಯ ಶಾಸ್ತ್ರೀಯವಾದ ಇತಿಹಾಸವೆನ್ನಿಸಿಕೊಳ್ಳುವುದಿಲ್ಲ4. ಎಲ್ಲವೂ ಈಶ್ವರಸಂಕಲ್ಪಾಧೀನವಾಗಿ. ಪುರುಷಸ್ವಾತಂತ್ರ್ಯಕ್ಕೆ ಹೆಚ್ಚು ಅವಕಾಶವೀಯದ ತತ್ತ್ವಶ್ರದ್ಧೆಯಲ್ಲಿ ಎಲ್ಲವೂ ಅಧೀನತ್ವ ಮತ್ತು ಅಧೀರತ್ವಗಳಲ್ಲಿ ಪರ್ಯವಸಾನ ಹೊಂದುತ್ತದೆ. ಪ್ರಗತಿಸಾಧಕವಾದ ಉತ್ಸಾಹಕ್ಕೂ ಅವಕಾಶವಿಲ್ಲ—ಪ್ರಗತಿಯೂ ಸಾಧ್ಯವಿಲ್ಲ ಎಂಬುದು ಅವರ ಆಕ್ಷೇಪ.

ಇತಿಹಾಸದರ್ಶನದಲ್ಲಿ ಪಾಶ್ಚಾತ್ಯರ ಸಂಕುಚಿತವಾದ ಕ್ಷೇತ್ರ ಮತ್ತು ದಿವ್ಯತ್ವವಿಲ್ಲದ ಧ್ಯೇಯ ಇವೆ ಇಂಥ ಆಕ್ಷೇಪಕ್ಕೆ ಕಾರಣ ಎಂಬ ಪ್ರತಿಕ್ರಿಯೆ ಭಾರತೀಯರದು ಮಾತ್ರವಲ್ಲ—ಭಾರತೀಯ ಸಂಪ್ರದಾಯವನ್ನರಿತ ಪಾಶ್ಚಾತ್ಯ ವಿದ್ವಾಂಸರ ಪ್ರತಿಕ್ರಿಯೆಯೂ ಆಗಿದೆ. ಸಮಸ್ತದೃಷ್ಟಿಯಿಂದ ಅಲ್ಲದೆ5 ಕೇವಲ ವ್ಯಕ್ತಿದೃಷ್ಟಿಯಿಂದಲೇ ಅಳೆಯುವ ಮಾನವನ ಆತ್ಮಚರಿತ ಅವರಲ್ಲೂ ಕೆಲವು ಪಾಶ್ಚಾತ್ಯ ನಾಯಕರ ನಾಯಕತ್ವಗಳ ಇತಿಹಾಸ ಎಂಬ ಅವಲೋಕನ ಬಹಳ ಸಂಕುಚಿತವಾದ ಆತ್ಮಾಭಿಮಾನಕ್ಕೂ ಸ್ವಾರ್ಥಕ್ಕೂ ಅವಕಾಶ ಮಾಡಿಕೊಟ್ಟಿದೆ. ಕೇವಲ ರೇಖಾತ್ಮಕ ಕಾಲಗತಿಯಲ್ಲಿ (Linear concept of time) ಶ್ರದ್ಧೆಯುಳ್ಳ ಅವರಿಗೆ ಚಕ್ರಾತ್ಮಕಗತಿಗಳುಳ್ಳ ಪ್ರಮಾಣ ಗಹನಾತೀತ. ಅನಾದ್ಯನಂತವಾದ ವಿಶ್ವವ್ಯವಹಾರಕ್ಕೂ ಮಾನವನ ವ್ಯವಹಾರಕ್ಕೂ ಇರುವ ಆಧ್ಯಾತ್ಮಿಕ ಮತ್ತು ನೈತಿಕ ಸಂಬಂಧದ ಅರಿವು ಇರಲೂ ಅವಕಾಶವಿಲ್ಲ ಎಂದು ಅವರ ಇತಿಹಾಸದರ್ಶನದ ಶಕ್ತಿಯನ್ನೇ ಪ್ರಶ್ನಿಸಿದೆ.6

ಕೋಟಿಕೋಟಿ ವರ್ಷಗಳ ನಡುವೆ ಕ್ಷಣಿಕಮಾತ್ರವಾದ ಮಾನವವ್ಯಕ್ತಿಜೀವನಕ್ಕೆ ಬೆಲೆಯೇನು ಎಂಬ ಪ್ರಶ್ನೆ ಸಹಜ. ಪಾಶ್ಚಾತ್ಯ ಸಂಸ್ಕೃತಿಗೆ ಈ ಕಲ್ಪನೆ ಅಗ್ರಾಹ್ಯ. ಖಗೋಳದರ್ಶನದ ಸಂಸ್ಕಾರ ಅನಂತವಾದ ಕಾಲಗಂಭೀರತೆಯನ್ನರಿಯಲು ಸಾಹಾಯ್ಯಕವಾದರೂ ವೈಯಕ್ತಿಕ ಜೀವನಕ್ಕೆ ಅದರ ಸ್ಫೂರ್ತಿಯೇನು ಎಂದರಿಯಲು ಸಾಹಾಯ್ಯಕವಾಗಿಲ್ಲ. ಆದರೆ, ಚಕ್ರಾತ್ಮಕ ಕಾಲಗತಿಪ್ರಮಾಣಗಳ (Cyclic Concept of time) ಸಂಸ್ಕೃತಿಯ ಹಿನ್ನೆಲೆಯಲ್ಲಿ ಜೀವ ಭಾರತೀಯರಿಗೆ ಮಹತ್ತ್ವವನ್ನರಿಯುವ ಅವಕಾಶ ಅಧಿಕ. ಕಾಲದೇಶಗಳ ವ್ಯಾಪ್ತಿ ಅನಂತವಾದರೂ ಈ ಅನಂತದ

---

4 ..produces a pseudo history.. romantic or poetic history whose true purpose is not to discover the truth about the past."
—R. G. Collingwood: Idea of History (1949). P.204

5 Is there, beyond all the casual and incalculable elements of the separate events, something that we may call a metaphysical structure? —Spenglar: Decline of the West, I, P. 3

6 "We of the West on the other hand, regard world history as the biography of mankind and in particular of accidental man ....We are unable, we are not prepared to fill the monstrous Yugas with life significance." —Zimmer: Myths and Symbols of India (1965), P. 21

"World history is *our* world picture and not all mankind's"
—Spenglar: Decline of the West, I, 15

ನಡುವೆ ಕ್ಷಣಿಕವಾದ ವ್ಯಕ್ತಿಜೀವನಕ್ಕೂ ಬೆಲೆಯುಂಟು, ಸಾರ್ಥಕ್ಯವಿದೆ ಎಂಬುದು ನಿರ್ವಿವಾದ. ವ್ಯಕ್ತಿಯ ಕರ್ತವ್ಯ ಮತ್ತು ಜೀವನದ ಪೌಷ್ಕಲ್ಯ ಇವುಗಳು ನಿಷೇಧಿತವಾಗಲವಕಾಶವಿಲ್ಲ7.

ಜಗತ್ತುಗಳ ಇತಿಹಾಸವೆಲ್ಲ ಈಶ್ವರಸಂಕಲ್ಪಪ್ರೇರಿತ. ಮಾನವನ ವ್ಯವಹಾರ ಅದರಲ್ಲಿ ಒಂದಂಶ ಮತ್ತು ಅದಕ್ಕೆ ಅಧೀನ ಎಂಬುದು ಭಾರತೀಯರ ಇತಿಹಾಸತತ್ತ್ವಪ್ರತಿಪಾದನ. ವಿಶ್ವವ್ಯಾಪಿಯಾದ ಈ ಕ್ಷೇತ್ರದಲ್ಲಿ ಜಗತ್ತುಗಳ ಸೃಷ್ಟಿಸ್ಥಿತಿಲಯಾದಿಗಳೆಲ್ಲ ಇತಿಹಾಸದ ವರ್ಣನೆಗೆ ವಿಷಯ8. ಸೂರ್ಯಾಚಂದ್ರಮರಾದಿ ಸಕಲ ಜ್ಯೋತಿರ್ಮಂಡಲಗಳನ್ನೂ ಒಳಗೊಂಡು ಅನಂತವೂ ಗಂಭೀರವೂ ಆದ ದ್ಯಾವಾಪೃಥಿವಿಗಳ ಅಸ್ತಿತ್ವಕ್ಕೂ ವಿಸ್ತೃತಿಗೂ ವಿಶ್ವಸಾಮರಸ್ಯಕಾರಕವಾದ ಮೂಲತತ್ತ್ವವೊಂದೆ ಆಧಾರ. ‘ಋತು’. ‘ಧರ್ಮ’ ಇತ್ಯಾದಿ ವಿಶೇಷಣಗಳಿಂದ ಪ್ರಶಂಸಿತವಾದ ವಿಶ್ವಪ್ರಭುತ್ವದ ನಿಯಮ ಸಕಲಜಗತ್ತನ್ನೂ ದೃಢವಾಗಿ ಧರಿಸಿದೆ9. ಪ್ರಕೃತಿ, ಪುರುಷ ಎರಡೂ ಪ್ರಾಣಾತ್ಮಕವಾದ ಒಂದೆ ಮೂಲತತ್ತ್ವದ ಅಂಶಗಳು10. ಮಾನವನೂ ವಿಶ್ವಪ್ರಭುತ್ವದ ನಿಯಮನಕ್ಕೆ ಒಳಪಟ್ಟುದರಿಂದ ಪ್ರಕೃತಿಯ ವಿರುದ್ಧ ಹೋರಾಡುವುದು ಅಜ್ಞಾನದ ಲಕ್ಷಣ. ದೇವಮಾನವಾದಿ ಪಂಚಜನರೂ ವಿಶ್ವನಿಯಮವನ್ನು ಗೌರವಿಸಿ ವಿಶ್ವಸಾಮರಸ್ಯಕಾರಕರಾಗಬೇಕು, ಇದೆ ಋತದ ನಿಯಮ11. ಋತಪಾಲಕನಿಗೆ ಪ್ರಕೃತಿಯ ಎಲ್ಲ ಅಂಶಗಳೂ ಹಿತಕರವಾಗಿರುತ್ತವೆ 12. ಧರ್ಮವನ್ನು ರಕ್ಷಿಸಿದರೆ ಅದು ತನ್ನ ರಕ್ಷಕನನ್ನು ಕಾಪಾಡುತ್ತದೆ13. ಇತ್ಯಾದಿ ಆಶ್ವಾಸನೆಗಳು ಭಾರತೀಯ ಇತಿಹಾಸತತ್ತ್ವಜ್ಞರ ಸಂದೇಶ.

ಇಂಥ ತತ್ತ್ವಜ್ಞರ ಶ್ರೇಣಿಗೆ ಮಾರ್ಗದರ್ಶಕರಾದ ವ್ಯಾಸರು ನಿತ್ಯಸತ್ಯಕ್ಕೂ ಇತಿಹಾಸಕ್ಕೂ ಇರುವ ಸಂಬಂಧವನ್ನರಿತು ವಿಶ್ವವ್ಯಾಪಿಯಾದ ಆಧ್ಯಾತ್ಮಿಕ ಮತ್ತು ನೈತಿಕಕ್ಷೇತ್ರದ ಹಿನ್ನೆಲೆಯಲ್ಲಿ ಮಾನವನ ಇತಿಹಾಸವನ್ನು ವರ್ಣಿಸಿ ‘ಇತಿಹಾಸಪ್ರದೀಪ’ವನ್ನು ಜಗತ್ತಿಗೆ ಅನುಗ್ರಹಿಸಿದ್ದಾರೆ 14. ಮಹಾಕಾವ್ಯಾತ್ಮಕವಾದ ‘ಇತಿಹಾಸಪ್ರದೀಪ’ ಸಕಲಲೋಕಗರ್ಭಪ್ರಕಾಶಕ, ಜಗತ್ತಿನ ಮೋಹನಾಶಕ ಮತ್ತು ಧರ್ಮ

---

7 "....we are taught to recognise the divine, the impersonal sphere of eternity, revolving ever and agelessly through time. But we are also taught to esteem the transient sphere of the duties and pleasures of individual existence, which is as real and as Vital to the living man as a dream of the sleeping man." —Zimmer, P. 22

8 ಶತಪಥ ಬ್ರಾಹ್ಮಣ

9 “ಋತಸ್ಯ ದೃಳ್ಹಾ ಧರುಣಾನಿ.........।
ಋತಾಯ ಪೃಥ್ವೀ ಬಹುಲೇ ಗಭೀರೇ ಋತಾಯ ಧೇನೂ ಪರಮೇ ದುಹಾತೇ॥”
(ಋಕ್ಸಂಹಿತಾ, IV. 23.9)
“ಭೀಷಾಸ್ಮಾದ್ವಾತಃ ಪವತೇ। ಭೀಷೋದೇತಿ ಸೂರ್ಯಃ” (ತೈ. ಉಪನಿಷತ್)

10 “ಸರ್ವಂ ಪ್ರಾಣ ಏಜತಿ ನಿಃಸೃತಮ್” (ಕಠ ಉಪನಿಷತ್)

11 “ವಿಶ್ವೇ ದೇವಾಃ ಸಮನಸಃ ಸಕೇತಾ ಏಕಂ ಕ್ರತುಮಭಿ ವಿ ಯನ್ತಿ ಸಾಧು॥”
(ಋ.ಸಂ., IV. 9.5)

12 “ಮಧು ವಾತಾ ಋತಾಯತೇ। ಮಧು ಕ್ಷರನ್ತಿ ಸಿಂಧವಃ॥” (ಋ.ಸಂ.)

13 “ಧರ್ಮೋ ರಕ್ಷತಿ ರಕ್ಷಿತಃ” (ಮಹಾಭಾರತ, ವ.ಪ.)

14 “ಪುಣ್ಯೇ ಹಿಮವತಃ ಪಾದೇ ಮೇಧ್ಯೇ ಗಿರಿಗುಹಾಲಯೇ।
ವಿಶೋಧ್ಯ ದೇಹಂ ಧರ್ಮಾತ್ಮಾ ದರ್ಭಸಂಸ್ತರಮಾಶ್ರಿತಃ॥
ಶುಚಿಃ ಸ ನಿಯಮೋ ವ್ಯಾಸಃ ಶಾನ್ತಾತ್ಮಾ ತಪಸಿ ಸ್ಥಿತಃ।
ಭಾರತಸ್ಯೇತಿಹಾಸಸ್ಯ ಧರ್ಮೇಣಾನ್ವೀಕ್ಷ್ಯ ತಾಂ ಗತಿಂ॥
ಇತಿಹಾಸಮಿಮಂ ಚಕ್ರೇ ಪುಣ್ಯಂ ಸತ್ಯವತೀಸುತಃ॥”
(ಮಹಾಭಾರತ, ಆ.ಪ. I, 38–40)

ಮಾರ್ಗಪ್ರವರ್ತಕ ಎಂದು ಪರಿಗಣಿತವಾಗಿದೆ. ವಿಶ್ವಧಾರಕವೂ ವಿಶ್ವಸಾಮರಸ್ಯಕಾರಕವೂ ಆದ ಧರ್ಮದ ಪ್ರಶಂಸೆಯೇ ಮಹಾಭಾರತದ ಮುಖ್ಯ ವಿಷಯ. 'ಧರ್ಮವೇ ಜಗದ್ಧಾರಕ. ಜೀವನದ ಪೌಷ್ಕಲ್ಯವನ್ನು ಸಂಪಾದಿಸುವ ಅರ್ಥ ಮತ್ತು ಕಾಮ ಎಂಬ ಪುರುಷಾರ್ಥಗಳ ಸಿದ್ಧಿಯೂ ಧರ್ಮಪಾಲನದಿಂದಲೆ ಸಾಧ್ಯ ಎಂಬ ಈ ಸಂದೇಶವನ್ನು ಎಲ್ಲರೂ ಆಲಿಸಿ ಧರ್ಮಸಂರಕ್ಷಕರಾಗಿರಿ' ಎಂದು ಎರಡು ಕೈಗಳನ್ನೂ ಮೇಲಕ್ಕೆತ್ತಿ ಘೋಷಿಸಿದರು. ಆದರೆ ಯಾರೂ ಆ ಸಂದೇಶವನ್ನು ಆಲಿಸಿದಂತೆ ಕಾಣಲಿಲ್ಲ. 'ನ ಚ ಕಶ್ಚಿಚ್ಛೃಣೋತಿ ಮೇ' ಎಂದು ತಮ್ಮ ಅಕ್ಷರವನ್ನೂ ವೇದನೆಯನ್ನೂ ವ್ಯಕ್ತಪಡಿಸಿದ್ದಾರೆ. ಈ ವೇದನೆ ಜೀವನದ ಪ್ರತ್ಯಕ್ಷ ಪರಿಸ್ಥಿತಿಯಲ್ಲಿ ನರಳುತ್ತಿರುವ ಜಗತ್ತಿನ ಮೇಲೆ ಅನುಕಂಪವೇ ವಿನಾ ಆಗ್ರಹವಲ್ಲ15.

ಸಾಮರಸ್ಯಾತ್ಮಕವಾದ ವಿಶ್ವತತ್ತ್ವದ ಸ್ವರೂಪ ಮತ್ತು ವೈರಸ್ಯಗಳಿಂದ ಛಿನ್ನವಾದ ಇತಿಹಾಸದ ಸ್ವರೂಪ ಇವೆರಡೂ ಪರಸ್ಪರ ವಿರುದ್ಧವಾಗಿದೆ. ವಿಶ್ವನಿಯಾಮಕದ ಗಭೀರತೆ ಮಾನವನ ಮನೋರಾಜ್ಯಕ್ಕೆ ಮೀರಿ ವಾಙ್ಮನಗೋಚರವಾಗಿರುವುದರಿಂದ ಜಗತ್ತಿಗೆ ಸಾಮರಸ್ಯಸಂದೇಶ ಅರ್ಥವಾಗುವುದು ಸುಲಭವಲ್ಲ. ಈ ಸತ್ಯವೇನನ್ನು ವ್ಯಾಸರು ಅರಿಯದೆ ಇಲ್ಲ. ಐತಿಹಾಸಿಕ ಸತ್ಯವನ್ನು ಗಮನಿಸದೆ ತತ್ತ್ವಪ್ರತಿಪಾದನ ಮಾಡುವುದಿಲ್ಲ. ನಿಗೂಢವಾದ ಜಗನ್ನಾಟಕದಲ್ಲಿ ಮಾನವನ ಸ್ಥಾನಮಾನಗಳೇನು, ಗುರಿಯೇನು ಎಂಬ ಪ್ರಶ್ನೆಗೆ ಉತ್ತರ ಸಿಕ್ಕದೆ ಪ್ರತಿಕ್ಷಣವೂ ವಿರಸವೈಷಮ್ಯಗಳೊಡಗೂಡಿ ಹೋರಾಡುತ್ತಿರುವ ಮಾನವಲೋಕದ ಅಶ್ರುವರ್ಷಗಳನ್ನು ಪ್ರತ್ಯಕ್ಷವಾಗಿ ಕಂಡು ತಮ್ಮ ಅನುಭವಗಳನ್ನು ಪ್ರಕಾಶಪಡಿಸಿದ್ದಾರೆ. ಆಧ್ಯಾತ್ಮಿಕ ತತ್ತ್ವದ ಆಧಾರದ ಮೇಲೆ ತ್ರಿಗುಣಸ್ವರೂಪವಾದ ಲೋಕಚರಿತ ಕಾವ್ಯಾತ್ಮಕವಾಗಿ ವರ್ಣಿತವಾಗಿದೆ16. ಜೀವನದ ಅನುಭವದ ಆಧಾರದ ಮೇಲೆ ಆಧ್ಯಾತ್ಮಿಕ ಮತ್ತು ನೈತಿಕ ಸಂದೇಶಗಳು ಪ್ರತಿಪಾದಿತವಾಗಿವೆ. ಕಾವ್ಯಾತ್ಮಕವಾದ ಇತಿಹಾಸ ಭಾವಗರ್ಭಿತವೂ ತತ್ತ್ವಗರ್ಭಿತವೂ ಆಗಿದೆ. ಧೀಶಕ್ತಿಯ ಆಧಾರದ ಮೇಲೆ ಭಾವಪ್ರಕಾಶನ ಸಂಯಮಪೂರಿತವೂ ಶಕ್ತಿಯುತವೂ ಆಗಿದೆ17. ಕವಿದರ್ಶನ ಭೂಮವಾಗಿದ್ದು ಈ ದರ್ಶನದ ವ್ಯಾಪಾರಲಿಂಗಕ್ಕೆ ಯಾವುದೂ ಹೊರಗಾಗಿಲ್ಲ. ಈ ಭೂಮದರ್ಶನದಿಂದ ಹೊರಹೊಮ್ಮಿದ ಕಾವ್ಯ ಜೀವನದ ಮಾರ್ಗದರ್ಶಕ ಜ್ಯೋತಿಯಾಗಿದೆ18. ಕವಿಯ ಲೋಕಾನುಭವ ಮತ್ತು ಸ್ವಕೀಯ ತತ್ತ್ವದರ್ಶನ ಎರಡೂ ಸಮರಸವಾಗಿ ಮಿಳಿತವಾಗಿರುವುದೆ ಮಹಾಭಾರತವೆಂಬ 'ಇತಿಹಾಸಪ್ರಬಂಧ'ದ ಅಸಾಧಾರಣವಾದ ವೈಶಿಷ್ಟ್ಯ.

2

"ಇತಿಹಾಸ ಈಶ್ವರನ ಲೀಲಾವಿಶೇಷ: ಈಶ್ವರಾಂಶ" ಎಂದು ಪ್ರಶಂಸಿತವಾಗಿದ್ದರೂ ಅದರ

---

15 "ಊರ್ಧ್ವಬಾಹುರ್ವಿರೌಮ್ಯೇಷ ನ ಚ ಕಶ್ಚಿಚ್ಛೃಣೋತಿ ಮೇ।
ಧರ್ಮಾದರ್ಥಶ್ಚ ಕಾಮಶ್ಚ ಸ ಧರ್ಮಃ ಕಿಂ ನ ಸೇವ್ಯತೇ॥"

(ಮ.ಭಾ. (XVII) ಸ್ವರ್ಗಾರೋಹಣ ಪರ್ವ, V. 62)

16 "Feelings about History, as well as thoughts about it, have inspired historical works, and similar feelings, evoked by similar facts, have also been expressed in imaginative works in the diverse genres of literature. There is, for expample, a lyrical genre, an epic genre, etc." —A. J. Toynbee, vol. X (1955), P. 113

17 "Even the least of his characters is an intellect and a personality. . . . It is this temperament, this dynamic force of intellectualism blended with heroic fire and a strong personality that gives its peculiar stamp to Vyasa's writings" —Sri Aurobindo: Vyasa and Valmiki (1956) P.p. 34–35

18 "ತ್ವಯಾ ಭಾರತಸೂರ್ಯೇಣ ನೃಣಾಂ ವಿನಿಹತಂ ತಮಃ" (ಮ.ಭಾ., ಆ.ಪ. I)

ವ್ಯವಹಾರ ನಿತ್ಯಸತ್ಯಕ್ಕೆ ವಿರುದ್ಧ. ನಿತ್ಯಸತ್ಯದಂತೆ ಮಾನವನ ಚರಿತ್ರೆ ಸ್ಥಿರವಲ್ಲ, ಸುಸಂಗತವಲ್ಲ. ಜೀವನದಲ್ಲಿ ಆದರ್ಶಕ್ಕೂ ಅನುಭವಕ್ಕೂ ಬಹುದೂರ. ಜೀವನದ ಆದರ್ಶ ಸಾಮರಸ್ಯಸೌಂದರ್ಯಗಳಾದರೆ, ಅನುಭವದಲ್ಲಿ ವೈರಸ್ಯ-ವಿಕಾರಗಳೇ ಅಧಿಕ. ನಿತ್ಯಸತ್ಯ ಅನಾದ್ಯನಂತವಾದರೆ, ಇತಿಹಾಸದ ಜೀವನ ಕ್ಷಣಿಕ: ಅಸ್ವತಂತ್ರ. ಸಾಮ್ರಾಜ್ಯಗಳೂ ಸಂಸ್ಕೃತಿಗಳೂ ತರಂಗಗಳಂತೆ ಕೊಂಚಕಾಲ ವೈಭವದಿಂದ ಮೆರೆದು ಅನಂತರ ಕಾಲಸಾಗರದಲ್ಲಿ ಲೀನವಾಗುತ್ತವೆ19. ಪುರುಷಕಾರ ದೈವದ ಪ್ರಭಾವವನ್ನು ಮೀರಿಸಲಾರದು20. ಭಾವಾಭಾವಗಳೂ ಸುಖದುಃಖಗಳೂ ಕಾಲವಶ. ಸೃಷ್ಟಿಸಂಹಾರಗಳೆಲ್ಲ ಕಾಲಾಧೀನ21. ಕಾಲಪ್ರವಾಹದಲ್ಲಿ ಎಲ್ಲರೂ ಕೊಚ್ಚಿಹೋಗಲೇಬೇಕು. ಸೃಷ್ಟಿಕಾರ್ಯದಲ್ಲಿ ಎಷ್ಟು ಸೌಂದರ್ಯವಿದೆಯೋ ಲಯಶಕ್ತಿಯಲ್ಲಿ ಅಷ್ಟೇ ಭೀಕರತೆಯೂ ಇದೆ22.

ಯಾವುದು ಮಾನವನ ಕಣ್ಣಿಗೆ ಪ್ರಶಾಂತಪರಿಸ್ಥಿತಿಯೆಂದು ತೋರುವುದೋ ಅದು ವಸ್ತುತಃ ಪ್ರಕ್ಷುಬ್ಧ ಪರಿಸ್ಥಿತಿಯೇ ಆಗಿದೆ. ಪ್ರತಿಯೊಂದು ಕ್ಷಣವೂ ಪ್ರತಿಯೊಂದು ಅಂಶದಲ್ಲೂ ವಿಶ್ವರಚನೆಯಲ್ಲಿ ವಿರಸವೈವಿಧ್ಯಗಳ ಹೋರಾಟವಿದ್ದೇ ಇದೆ. ಜಗತ್ಪ್ರವಾಹ ಅನಾದ್ಯನಂತವಾಗಿರುವಂತೆಯೇ ವೈವಿಧ್ಯ-ವೈರಸ್ಯಗಳ ಹೋರಾಟವೂ ಅನಾದ್ಯನಂತ. ಈ ನಡುವೆ ಸಿಕ್ಕಿದ ಪ್ರಾಣಿವರ್ಗಕ್ಕೆ ಇದು ಅನೇಕ ಸಲ ಅಹಿತಕರ. ವ್ಯಕ್ತಿಯ ದೃಷ್ಟಿಯಿಂದ ಜಗತ್ಪ್ರವಾಹ ಅದಮ್ಯವಾದ ಶಕ್ತಿ. ವ್ಯಕ್ತಿಗಳ ಸುಖದುಃಖಗಳ ಪರಿಶೀಲನೆ ಈ ಶಕ್ತಿಯ ಲಕ್ಷ್ಯವಲ್ಲ. ವ್ಯಕ್ತಿಸ್ವಾತಂತ್ರ್ಯವನ್ನು ಅಪಹರಿಸುವ ಜಗಚ್ಛಕ್ತಿ ನಿರ್ದಾಕ್ಷಿಣ್ಯ ಪ್ರಭಾವವುಳ್ಳದ್ದು. ಈ ಸತ್ಯವನ್ನು ವ್ಯಾಸರಷ್ಟು ಉಳಿದ ಯಾವ ಕವಿಯಾಗಲಿ ತತ್ತ್ವಜ್ಞನಾಗಲಿ ಪ್ರಭಾವಪೂರಿತವಾಗಿ ನಿರೂಪಿಸಿಲ್ಲ.

ವ್ಯಾಸರು 'ಇತಿಹಾಸಪ್ರದೀಪ'ದಲ್ಲಿ ವರ್ಣಿಸಿರುವಂತೆ ಮಾನವನ ಮೊದಲನೆಯ ಅನುಭವ ವಿಧಿಯ ಪ್ರಭಾವ. ವಿಧಿಯ ಪ್ರಭುತ್ವದಲ್ಲಿ ವ್ಯಕ್ತಿಯ ಧರ್ಮಾಧರ್ಮಗಳ ಪರಿಗಣನೆಯಿಲ್ಲ. ವಿಧಿಯು

---

19 "Over the expanse of the waters passes the endless uniform wave–train of the generations. . . . But, over this surface, too, great cultures accomplish their majestic wave cycles. They appear suddenly, swell in splendid lines, flatter again and vanish, and the fate of the waters is once more a sleeping waste." —Spenglar, I, P. 106

—Cf. Evolution & Ethics by T. H. Huxley. Pp. 62–64

"In the endless self–repeating
flows evermore the same
. . . .
All the straining, all the striving
is eternal peace in God"—Goethe

20 "ದೈವಂ ಪುರುಷಕಾರೇಣ ಕೋ ನಿವರ್ತಿತುಮರ್ಹತಿ।
ವಿಧಾತೃವಿಹಿತಂ ಮಾರ್ಗಂ ನ ಕಶ್ಚಿದತಿವರ್ತತೇ॥" (ಮ.ಭಾ., ಆ.ಪ. I. 250 ff)

21 "ಕಾಲಮೂಲಮಿದಂ ಸರ್ವಂ ಭಾವಾಭಾವೌ ಸುಖಾಸುಖೇ।
ಕಾಲಃ ಸೃಜತಿ ಭೂತಾನಿ ಕಾಲಃ ಸಂಹರತೇ ಪ್ರಜಾಃ॥
ಕಾಲಃ ಸರ್ವೇಷು ಭೂತೇಷು ಚರತ್ಯವಿಧೃತಃ ಸಮಃ" (ಆ.ಪ. I. 272-6)

22 "ಪುನಃ ಪುನರ್ಜಾಯಮಾನಾ ಪುರಾಣೀ ಸಮಾನಂ ವರ್ಣಮಭಿಶುಂಭಮಾನಾ।
ಶ್ವಘ್ನೀವ ಕೃತ್ನುರ್ವಿಜ ಆಮಿನಾನಾ ಮರ್ತಸ್ಯ ದೇವಿ ಜಹಯಂತ್ಯಾಯುಃ"
(ಋ. ಸಂ. I, 92–10)

ಮುಂದೆ ವಿವೇಕದ ಪ್ರಕಾಶಕ್ಕೆ ಅವಕಾಶವಿಲ್ಲ. ಅನೇಕ ಸಲ ವಿಧಿ ವಿವೇಕವನ್ನು ಮಲಿನಗೊಳಿಸುತ್ತದೆ23. ಪ್ರಕೃತಿಯ ನಿಷ್ಠುರತೆ ಅಪ್ರತಿಹತ. ಪುರುಷ ವಿಧಿಯ ಮುಂದೆ ಅಪ್ರತಿಹತನೂ ಭೀತನೂ ಆಗುತ್ತಾನೆ. ಜೀವನವೆ ನಿರರ್ಥಕ ಎಂಬ ಜುಗುಪ್ಸೆಯೂ ಸಹಜ. ವಿಧಿಯ ಕ್ರೌರ್ಯವನ್ನು ಮನಗಂಡು ಸಾತ್ವಿಕವ್ಯಕ್ತಿಗಳೂ ಧರ್ಮಸಂದೇಶದಲ್ಲೆ ಅವಿಶ್ವಾಸ ತೋರುವ ಸನ್ನಿವೇಶಗಳೂ ವಿಪುಲವಾಗಿವೆ. "ವಿಶ್ವನಿಯಮ, ಧರ್ಮ ಎಂಬುದು ಕೇವಲ ಭ್ರಮೆ. ಜಗತ್ತೆಲ್ಲ ಈಶ್ವರನ ಕ್ರೀಡಾವಿಹಾರ ಕ್ಷೇತ್ರ. ಅಜ್ಞರಾದ ಬಾಲಕರ ಕ್ರೀಡೆಗೆ ಅವರ ಆಟದ ಸಾಮಗ್ರಿಗಳು ಸಾಧಕವಾಗಿರುವಂತೆ ಈಶ್ವರನ ಸ್ವೇಚ್ಛಾವಿಹಾರಕ್ಕೆ ಅವನಿಂದ ಸೃಷ್ಟವಾದ ಪ್ರಜೆಗಳೆ ಸಾಮಗ್ರಿಗಳು. ಒಂದು ಗುಂಪಿನ ಹತ್ಯೆಗೆ ಇನ್ನೊಂದು ಗುಂಪು ಅವನಿಗೆ ಸಾಧಕ. ಮಾತಾಪಿತೃಗಳಿಗಿರಬೇಕಾದ ಪ್ರೇಮವೇ ಅವನಲ್ಲಿಲ್ಲ. ಪ್ರಭುವಿನಲ್ಲಿರಬೇಕಾದ ಧರ್ಮಾಧರ್ಮಗಳ ಗಣನೆಯಿಲ್ಲ24. ಧರ್ಮರಕ್ಷಕರು ದುಃಖಕ್ಕೆ ಭಾಗಿಗಳಾಗಿ ಅಧರ್ಮಿಗಳು ಸುಖಿಸುತ್ತಾರೆ25. ಈಶ್ವರನ ನಿರಂಕುಶ ಪ್ರಭುತ್ವ ಜಗತ್ತಿಗೆ ದುಃಖಕರವಾಗಿ ದೂಷ್ಯವಾಗಿದೆ" ಎಂದು ನಿಷ್ಕಾರಣದುಃಖದಿಂದ ತಪ್ತರಾದ ವ್ಯಕ್ತಿಗಳು ತಮ್ಮ ಮನೋವೇದನೆಯನ್ನು ವ್ಯಕ್ತಪಡಿಸುತ್ತಾರೆ. ವಿಧಿಯ ನಿಷ್ಠುರ ನಿರ್ದಾಕ್ಷಿಣ್ಯ ಪ್ರಭುತ್ವದಲ್ಲಿ ವಿಪ್ಲವಚಿತ್ತರಾದ ಪ್ರಾಣಿಗೆ ಜಗತ್ತೆ ಭಯಂಕರವಾದ ರಣರಂಗದಂತೆ ಕಾಣುತ್ತದೆ. ಈ ದೃಶ್ಯ ಧೈರ್ಯವಿರುವ ಹೃದಯವನ್ನೂ ಕುಗ್ಗಿಸುತ್ತದೆ. ವಿಧಿಯ ಪ್ರಘಾತವನ್ನು ಎದುರಿಸದ ಮತ್ತು ಅದರಿಂದ ಮನಃಕ್ಲೇಶವನ್ನು ಅನುಭವಿಸದ ವ್ಯಕ್ತಿಯೆ ಮಹಾಭಾರತದಲ್ಲಿ ಅಪರೂಪ ಎಂದು ಹೇಳಬಹುದು. ವಿಧಿಯೆಂಬ ಅದೃಶ್ಯಶಕ್ತಿ ಗುಪ್ತಗಾಮಿನಿಯಾಗಿ ಅಂತರಾಳದಲ್ಲಿ ಪ್ರವಹಿಸುತ್ತ ಅತ್ಯಂತ ವಿವೇಕಿಗಳಿಗೂ ದುಃಖಕಾರಕವಾಗಿದೆಯೆಂಬ ಉದ್ವೇಗಪೂರ್ಣವಾದ ಅನುಭವ ಅನೇಕ ಕಡೆ ಪ್ರಕಾಶಿತವಾಗಿದೆ.

ಹೀಗೆ ವಿರೋಧಾಭಾಸಗಳಿಂದ ಕೂಡಿ ಭೀತಿಕಾರಕವೂ ನಿರ್ವೇದಕಾರಕವೂ ಆದ ಇತಿಹಾಸದ ದುರಂತ ಸನ್ನಿವೇಶಗಳನ್ನು ಯಾವ ಕವಿ ವರ್ಣಿಸುತ್ತಾನೋ ಅದೇ ಕವಿ ತತ್ತ್ವಜ್ಞಾನದ ಮುಖವೂ ಆಗಿದ್ದು ವಿಧಿಯನ್ನು ದೂಷಿಸುವ ಉದ್ವೇಗಪ್ರಕಾಶಕ ಪಾತ್ರಗಳನ್ನು 'ಆರ್ತಪ್ರಲಾಪ'26 ಎನ್ನುತ್ತಾನೆ. ಇತಿಹಾಸತತ್ತ್ವಜ್ಞಾನದ ಅಭಾವವೆ ಈ ಉದ್ವೇಗಕ್ಕೆ ಕಾರಣ ಎಂಬುದು ಕವಿಯ ವಾದ.

ವಿಶ್ವನಿಯಮದ ಚೌಕಟ್ಟಿನಲ್ಲಿ ಕರ್ತವ್ಯಪರಿಪಾಲನವಲ್ಲದೆ ಕೇವಲ ವೈಯಕ್ತಿಕ ಸುಖದ ಲಾಭವೆ ಇತಿಹಾಸದಲ್ಲಿ ಮಾನವನ ಗುರಿಯಲ್ಲ ಎಂದು ತಿಳಿಸಲು ಜೀವನದ ಎರಡು ವಿಧವಾದ ದೃಷ್ಟಿಕೋಣಗಳು ವಿವರಿಸಲ್ಪಟ್ಟಿವೆ. ವೈಯಕ್ತಿಕ ಸುಖದ ಲಾಭವೆ ವ್ಯವಹಾರದ ಧ್ಯೇಯ ಎಂಬ ದೃಷ್ಟಿಗೂ ವಿಶ್ವನಿಯಮಕ್ಕನುಸಾರವಾದ ಕರ್ತವ್ಯಪರಿಪಾಲನವೆ ಜೀವನದ ಧ್ಯೇಯ ಎಂಬ ದೃಷ್ಟಿಗೂ ಇರುವ ವ್ಯತ್ಯಾಸವನ್ನು ವಿವರಿಸಿ ಇತಿಹಾಸದ ಸಕಲ ವ್ಯವಹಾರಕ್ಕೂ ಚೌಕಟ್ಟಾಗಿರುವ 'ಬ್ರಹ್ಮಚಕ್ರ'ದ ನಿಯಮವನ್ನರ್ಥಮಾಡಿಕೊಂಡು ಅದನ್ನು ಪಾಲಿಸದ ಸ್ವಾರ್ಥಾಹಂಕಾರಪೂರ್ಣವಾದ ಜೀವನ ಕಲುಷಿತ.

---

23 "ನ ವಿಧಿಂ ಗ್ರಸತೇ ಪ್ರಜ್ಞಾ ಪ್ರಜ್ಞಾಂ ತು ಗ್ರಸತೇ ವಿಧಿಃ॥" (ಮ.ಭಾ., ಆ.ಪ.)

24 "ರಾಜಾನಂ ಧರ್ಮಗೋಪ್ತಾರಂ ಧರ್ಮೋ ರಕ್ಷತಿ ರಕ್ಷಿತಂ।
ಇತಿ ಮೇ ಶ್ರುತಮಾರ್ಯಾಣಾಂ ತ್ವಾಂ ತು ಮನ್ಯೇ ನ ರಕ್ಷತಿ॥
ನಾತ್ಮಾಧೀನೋ ಮನುಷ್ಯೋಽಯಂ ಕಾಲಂ ಭಜತಿ ಕಂ ಚನ।
ಸ್ರೋತಸೋ ಮಧ್ಯಮಾಪನ್ನಃ ಕೂಲವೃಕ್ಷ ಇವ ಚ್ಯುತಃ।
ಕ್ರೀಡತೇ ಭಗವಾನ್ ಭೂತೈರ್ಬಾಲಃ ಕ್ರೀಡನಕೈರಿವ॥
ನಿಹನ್ತಿ ಭೂತೈರ್ಭೂತಾನಿ ಛದ್ಮಕೃತ್ವಾ ಯುಧಿಷ್ಠಿರ।
ನ ಮಾತೃಪಿತೃವದ್ರಾಜನ್ ಧಾತಾ ಭೂತೇಷು ವರ್ತತೇ॥" (ವನಪರ್ವ 30)

25 "ಅನಾರ್ಯಾನ್ ಸುಖಿನಶ್ಚೈವ ವಿಹ್ವಲಾನಿವ ಚಿನ್ತಯೇ।
ಅಹೋ ಬತ ಮಹತ್ಕಷ್ಟಂ ವಿಪರೀತಮಿದಂ ಜಗತ್॥
ಯೇನಾಪತ್ರಪತೇ ಸಾಧುರಸಾಧುಸ್ತೇನ ತುಷ್ಯತಿ॥" (ವನಪರ್ವ 30)

26 "ಆರ್ತಾಹಂ ಪ್ರಲಪಾಮೀತಿ ಮಾಂ ವಿದ್ಧಿ ಭರತರ್ಷಭ" (ವನಪರ್ವ 32–2)

ವ್ಯರ್ಥ ಎಂದು ನಿರ್ದೇಶಿಸಿದೆ27. ಈ ಜ್ಞಾನದ ಆಧಾರದ ಮೇಲೆ ಆತ್ಮ–ಶಕ್ತಿ–ಸಂಯಮಗಳನ್ನು ಬೆಳೆಸಿದರೆ ವ್ಯಕ್ತಿ ಎಂಥ ಕಠಿನ ಸನ್ನಿವೇಶದಲ್ಲೂ ಎದೆಗುಂದದೆ ಸಮಚಿತ್ತತೆಯಿಂದ ಕರ್ತವ್ಯಪರಿಪಾಲನೆ ಮಾಡಬಲ್ಲ. ಹೋರಾಟವೆ ಪ್ರಧಾನವಾದ ಇತಿಹಾಸಕ್ಷೇತ್ರದಲ್ಲಿ ಈ ಶಕ್ತಿ–ಸಂಯಮಗಳ ಬೆಳೆವಣಿಗೆ ಪೂರ್ಣವಾಗಿ ಪುರುಷಸ್ವಾತಂತ್ರ್ಯಕ್ಕೆ ಸೇರಿದುದು.

ನಾನಾ ವಿಧವಾದ ದ್ವಂದ್ವಗಳ ಹೋರಾಟದಲ್ಲಿ ಎದೆಗುಂದದೆ ಸಮಚಿತ್ತತೆಯಿಂದ ಕರ್ತವ್ಯಪರಿಪಾಲನ ಮಾಡಬೇಕಾದರೆ ಕ್ಷುದ್ರವಾದ ಹೃದಯದೌರ್ಬಲ್ಯವುಳ್ಳ ಭೀರುವಿಗೆ ಸಾಧ್ಯವಿಲ್ಲ. ಧೀಶಕ್ತಿಯುಳ್ಳ ಧೀರನಿಗೆ ಮಾತ್ರ ಇದು ಸಾಧ್ಯ. ಎಂಥ ಸನ್ನಿವೇಶದಲ್ಲೂ ಈ 'ಧೀರ'ನ ಧೃತಿ ಕೆಡುವುದಿಲ್ಲ28 ಎಂಬ ವಿಶ್ವಾಸವನ್ನು ಪ್ರಕಾಶಪಡಿಸಿ. ಈ ಸನ್ನಿವೇಶದಲ್ಲಿ ಆತ್ಮಶಕ್ತಿಯನ್ನು ತೋರಿಸುವ 'ಧೀರ'ನ ಧೃತಿಯನ್ನು ಪರೀಕ್ಷಿಸಲು ಭಯಂಕರವಾದ ರಣರಂಗವನ್ನೆ ಏರ್ಪಡಿಸಿದೆ. ಈ ರಣರಂಗದಲ್ಲಿ ಸೌಂದರ್ಯವಿಕಾರಗಳಿಂದ ಕೂಡಿದ ಮೂಲತತ್ತ್ವದ ವಿಶ್ವರೂಪದರ್ಶನವಿದ್ದರೂ ಯೋಧನಿಗೆ ಎದ್ದುಕಾಣುವದು ಇದರ ಭೀಕರ ಸ್ವರೂಪ ಮಾತ್ರ. ಪ್ರಳಯಕಾಲದ ಅಗ್ನಿಯಂತೆ ವಿಕಾರವಾದ ಕೋರೆದಾಡೆಗಳುಳ್ಳ ರುದ್ರಮೂರ್ತಿ ಪ್ರತ್ಯಕ್ಷವಾಗಿದೆ29. ಯೋಧ ವಿಹ್ವಲಚಿತ್ತನಾಗುತ್ತಾನೆ. ವೈಯಕ್ತಿಕ ಲಾಭದ ಆಸೆ ಮತ್ತು ಅದಕ್ಕೆ ಪ್ರತಿಬಂಧಕವಾದ ಭೀಕರಸನ್ನಿವೇಶ ಇವೆರಡೂ ವಿಹ್ವಲಚಿತ್ತತೆಗೆ ಕಾರಣ. ಈ ಸಂದರ್ಭದಲ್ಲಿ ಈ ಯೋಧನಿಗೆ ಕವಿ ಸುಸಂಸ್ಕೃತವಾದ ಮತ್ತು ಶಕ್ತಿಪ್ರಕಾಶಕವಾದ ಕರ್ಮಮಾರ್ಗವನು ಪದೇಶಿಸುತ್ತಾನೆ. ರಣರಂಗದಲ್ಲಿ ಯೋಧನ ಗುರಿ ಯುದ್ಧಕರ್ಮವೆ ವಿನಾ ಭೌತಿಕ ಜಯವಲ್ಲ, ಜಯಾಪಜಯಗಳು ಯಾದೃಚ್ಛಿಕ—ನಿಷ್ಕಾಮಕರ್ಮ ಮಾತ್ರ ಯೋಧನ ಕರ್ತವ್ಯ. ಫಲಾಪೇಕ್ಷೆಯಿಲ್ಲದೆ ವಿಶ್ವವ್ಯವಹಾರ ಪ್ರೇರಕವೂ ಸಾಧಕವೂ ಆದ ಪ್ರಕೃತಿಯ ಸಕಲ ಅಂಶಗಳೂ ಕರ್ತವ್ಯಪರಿಪಾಲನೆಯಲ್ಲೆ ನಿರತವಾಗಿರುವಾಗ ಮಾನವನ ದೃಷ್ಟಿಯೂ ಅದೇ ರೀತಿ ಕಾರ್ಯನಿರತವಾಗಿರಬೇಕು30 ಎಂಬ ಸಂದೇಶವನ್ನು ನೀಡುವ ಈ ಮಹಾಕವಿಗೆ ದೈವಾನುಗ್ರಹದಲ್ಲಿರುವುದಕ್ಕಿಂತಲೂ ಮಾನವನ ಆತ್ಮಶಕ್ತಿಯಲ್ಲೆ ಅಧಿಕ ವಿಶ್ವಾಸ.31

ಆದರೆ, ವೈಯಕ್ತಿಕ ಫಲಾಪೇಕ್ಷೆಯಿಲ್ಲದ ಕರ್ತವ್ಯನಿಷ್ಠೆ ಇತಿಹಾಸತತ್ತ್ವಜ್ಞನೂ, ಇದೇ ಜ್ಞಾನದ ಫಲವಾದ ಆತ್ಮಶಕ್ತಿಯಿಂದ ಕೂಡಿದವನೂ ಆದ 'ಧೀರ'ನಿಗೆ ಮಾತ್ರ ಸಾಧ್ಯ. ಅಜ್ಞನೂ ಆದ್ದರಿಂದಲೆ ಭೀರುವೂ ಆದ 'ಮಂದ'ನಿಗೆ ಸಾಧ್ಯವಿಲ್ಲ. ಇತಿಹಾಸದಲ್ಲಿ ಇಂಥ 'ಶ್ರೇಷ್ಠ'ನಾದ ಧೀರ ಕೋಟಿಗಳಲ್ಲಿ

---

27 "ಏವಂ ಪ್ರವರ್ತಿತಂ ಚಕ್ರಂ ನಾನುವರ್ತಯತೀಹ ಯಃ।
ಅಘಾಯುರಿಂದ್ರಿಯಾರಾಮೋ ಮೋಘಂ ಪಾರ್ಥ ಸ ಜೀವತಿ॥" (ಗೀತಾ. III. 16)

• "It makes a great difference between whether anyone lives under the constant impression that his life is an element in a far wider life–course that goes on for hundreds and thousands of years or conscious of himself as something rounded off and self–contained."—Spenglar I. P. 98

28. "ಧೀರಸ್ತತ್ರ ನ ಮುಹ್ಯತಿ" (III. 13)

29 "ದಂಷ್ಟ್ರಾಕರಾಳಾನಿ ಚ ತೇ ಮುಖಾನಿ ದೃಷ್ಟ್ವೈವ ಕಾಲಾನಲಸನ್ನಿಭಾನಿ" (XI. 25)

30. "ಕರ್ಮಣಾಮೀ ಭಾನ್ತಿ ದೇವಾಃ ಪರತ್ರ ಕರ್ಮಣೈವೇಹ ಪ್ಲವತೇ ಮಾತರಿಶ್ವಾ।
ಅಹೋರಾತ್ರೇ ವಿದಧತ್ಕರ್ಮಣೈವ ಅತಂದ್ರಿತೋ ನಿತ್ಯಮುದೇತಿ ಸೂರ್ಯಃ॥"
(ಉದ್ಯೋಗಪರ್ವ, XXIX. 5–20)

31 "ಆತ್ಮೈವ ಹ್ಯಾತ್ಮನೋ ಬಂಧುರಾತ್ಮೈವ ರಿಪುರಾತ್ಮನಃ।"

ಬಲ್ಲ32. ಕೃತಪುಣ್ಯರಾದ ಈ ಧೀರ ತಮ್ಮ ಶ್ರೇಷ್ಠ ವ್ಯವಹಾರಗಳಿಂದ ಕೋಟಿ 'ಮಂದಿ'ಗೆ33 ಮಾರ್ಗದರ್ಶಕರಾಗುತ್ತಾ ಅವರಿಗೆ ಜೀವನದ ಧ್ಯೇಯಗಳನ್ನು ವಿವರಿಸಿ ಅವರ ಯೋಗಕ್ಷೇಮಕ್ಕೆ ಸಾಧಕರಾಗಿರಬೇಕು. ಇತಿಹಾಸವ್ಯವಹಾರ ಸುಸೂತ್ರವಾಗಿ ನೆರವೇರಬೇಕಾಗಿದ್ದರೆ ಇದು 'ಧೀರ'ರಿಗೆ ವಿಹಿತವಾದ 'ಲೋಕಸಂಗ್ರಹ' ಕಾರ್ಯ.

ಈ ದೃಷ್ಟಿಯಿಂದ ಮಹಾಭಾರತದ ಕಥಾವಸ್ತು ಪ್ರಾಕೃತ ಜನರ ವ್ಯವಹಾರವಲ್ಲ. ಪ್ರಾಕೃತರಿಗೆ ಮಾರ್ಗದರ್ಶಕರಾದ ಮಹಾಜನರ ವ್ಯವಹಾರ. ದುಃಖತಪ್ತವಾದ ಮನಸ್ಸಿನಿಂದ ವಿಧಿಯನ್ನು ದೂಷಿಸುವ ವ್ಯಕ್ತಿಗೂ ಈ ಮಾರ್ಗದರ್ಶನದಿಂದ ಜ್ಞಾನ ಪರಿಪಾಕ ಲಭಿಸುತ್ತದೆ34. ಇತಿಹಾಸದಲ್ಲಿ ವ್ಯಕ್ತಿಗೂ ಸಂಸ್ಕೃತಿಗೂ ರಾಷ್ಟ್ರಕ್ಕೂ ಒಂದು ಉನ್ನತಸ್ಥಾನವನ್ನು ಸಾಧಿಸುವ ಉದಾತ್ತ ಸ್ವರೂಪವುಳ್ಳ ಮಹಾನಾಯಕರ ಅಂತರ್ಸ್ವರೂಪವನ್ನೂ ಕ್ರಿಯೆಯನ್ನೂ ಪ್ರದರ್ಶಿಸಿ ಪ್ರಕಾಶಪಡಿಸುವ ಮಹಾಕಾವ್ಯ. ದೈನಂದಿನ ಕೇವಲ ವಿಷಯಸೌಖ್ಯಪ್ರಧಾನವಾದ ದೈಹಿಕ ಜೀವನದ ಮಟ್ಟದಿಂದ ಮೇಲಕ್ಕೇರಿಸಿ ಮಾನವತ್ವದ ಮೌಲ್ಯವನ್ನು ತೋರಿಸುವ ಮಹಾಕೃತಿ35.

ಸಾತ್ವಿಕ ವ್ಯಕ್ತಿ ಸಾಮರಸ್ಯಸಂಪಾದನೆಗಾಗಿ ಎಷ್ಟೇ ಪ್ರಯತ್ನಿಸಿದರೂ ಪ್ರಕೃತಿಯಲ್ಲಿ ವೈರಸ್ಯ ಉಳಿಯಿತು. ಇತಿಹಾಸದಲ್ಲಿ ಕುರುಕ್ಷೇತ್ರಯುದ್ಧ ಭಯಂಕರ. ಇದರಲ್ಲಿ ಭಾಗವಹಿಸುವ ವ್ಯಕ್ತಿ ಈಶ್ವರ ಸಂಕಲ್ಪಾಧೀನವಾದ ಯಂತ್ರ36 ಎಂಬ ಅನುಭವದ ಫಲವಾಗಿ ಪರಿತಾಪವನ್ನು ಪ್ರಕಾಶಪಡಿಸಿದಾಗ ತತ್ತ್ವಜ್ಞಾನಿ ಕವಿ ಈ ಪರಿತಾಪಕ್ಕೆ ಮೂಲವಾದ ಕಾರಣವನ್ನು ವಿವರಿಸಿ ವ್ಯಕ್ತಿಯ ಸುಖದುಃಖಗಳಿಗೆ ಆಧ್ಯಾತ್ಮಿಕ ಜ್ಞಾನಾಜ್ಞಾನಗಳ ಆಧಾರದ ಮೇಲೆ ಬೆಳೆದ ಸಾಮರಸ್ಯ-ವೈರಸ್ಯ ಪ್ರವೃತ್ತಿಗಳೇ ಕಾರಣ ಎಂದು ಪುರುಷಸ್ವಾತಂತ್ರ್ಯವನ್ನು ಸಮರ್ಥಿಸುತ್ತಾನೆ.

ಆಯಾ ವ್ಯಕ್ತಿಗಳ ಸುಖದುಃಖಗಳಿಗೆ ಅವರ ವ್ಯಕ್ತಿಯ ಮನಃಪ್ರವೃತ್ತಿ ಮತ್ತು ವ್ಯವಹಾರಗಳು ಕಾರಣವಾಗಿರುತ್ತವೆ. ಆದರೆ. ಪ್ರಗತಿಪರವಾದ ಸಂಸ್ಕೃತಿಗಳಿಗೂ ರಾಷ್ಟ್ರಗಳಿಗೂ ಆಘಾತ ಸಂಭವಿಸಿದಾಗಲೂ ಸಾಮರಸ್ಯಕ್ಕೆ ಪ್ರಯತ್ನಿಸುವ ಸಂಸ್ಕೃತಿಗಳಿಗೆ ಅವನತಿ ಪ್ರಾಪ್ತವಾದಾಗಲೂ ಅದಕ್ಕೆ ಯಾವ ವ್ಯಕ್ತಿಯೂ ಕಾರಣನಾಗದಿರುವ ಈ ಆಘಾತ ಅವನತಿಗಳೆಲ್ಲ ವಿಧಿವಿಹಿತ ಅಥವಾ ಆಕಸ್ಮಿಕ. ಅವನ್ನು ತಪ್ಪಿಸಲು ಪುರುಷನಿಗೆ ಸ್ವಾತಂತ್ರ್ಯವಿಲ್ಲ ಎಂಬ ಅನುಭವ ಜಗತ್ತಿನ ಇತಿಹಾಸದಲ್ಲಿ ಅನುಸ್ಯೂತವಾಗಿ ಪ್ರಕಾಶಿತವಾಗಿದೆ.

ವಿಧಿಯ ಕಲ್ಪನೆಗಳಾಗಲಿ ಅಥವಾ ಯಾದೃಚ್ಛಿಕ ಘಟನೆಗಳಾಗಲಿ ಪುರುಷಶಕ್ತಿಗೆ ಮೀರಿದ್ದು. ಪುರುಷನ ಸುಖದುಃಖಗಳ ಗೊಡವೆ ಅದಕ್ಕೆ ಬೇಕಿಲ್ಲ. ಅನಾಯತವನ್ನು ತಪ್ಪಿಸುವ ಪುರುಷಪ್ರಯತ್ನವೂ

---

32 "ಮನುಷ್ಯಾಣಾಂ ಸಹಸ್ರೇಷು ಕಶ್ಚಿದ್ಯತತಿ ಸಿದ್ಧಯೇ।
ಯತತಾಮಪಿ ಸಿದ್ಧಾನಾಂ ಕಶ್ಚಿನ್ಮಾಂ ವೇತ್ತಿ ತತ್ತ್ವತಃ॥" (ಗೀತಾ. VII. 3)

33 "ಯದ್ಯದಾಚರತಿ ಶ್ರೇಷ್ಠಸ್ತತ್ತದೇವೇತರೋ ಜನಃ।
ಸ ಯತ್ಪ್ರಮಾಣಂ ಕುರುತೇ ಲೋಕಸ್ತದನುವರ್ತತೇ॥" (ಗೀತಾ. III. 21)

34 "ನಾವಮನ್ಯೇ ನ ಗರ್ಹೇ ಚ ಧರ್ಮಂ ಪಾರ್ಥ ಕಥಂಚನ।
ಕರ್ಮ ಖಲ್ವಿಹ ಕರ್ತವ್ಯಂ ಜಾತೇನಾಮಿತ್ರಕರ್ಶನ॥" (ವನಪರ್ವ. XXXIII.- 40)

35 "It (The Mahābharata) has no answer to the democratic feeling or to the modern sentimental cult of the average man, but deals with exalted, large and aspiring natures whose pride it is that they do not act like common men (प्रकृतो जनः): they are great spirits (महाजनः) in whose footsteps the world follows."
—Sri Aurobindo: Vyasa and Valmiki (1956). P. 34

36 "ಭ್ರಾಮಯನ್ ಸರ್ವಭೂತಾನಿ ಯಂತ್ರಾರೂಢಾನಿ ಮಾಯಯಾ।" (ಗೀತಾ)

ವ್ಯರ್ಥ. ನಾಶ, ದುಃಖ ಇವೇ ಪುರುಷನ ಅನುಭವ. ಇಂಥ ಸನ್ನಿವೇಶಗಳಲ್ಲಿ ವಿಧಿಯ ನಿರ್ದಾಕ್ಷಿಣ್ಯ ಮತ್ತು ಕ್ರೌರ್ಯಗಳನ್ನು ವರ್ಣಿಸುವ ಪ್ರಕರಣಗಳು ಇತಿಹಾಸದಲ್ಲಿ ಮೊದಲಿನಿಂದಲೂ ಪ್ರಸಿದ್ಧವಾಗಿವೆ. ಈಜಿಪ್ಟ್, ಗ್ರೀಸ್ ಇತ್ಯಾದಿ ರಾಷ್ಟ್ರಗಳ ಇತಿಹಾಸದಲ್ಲೂ ಆಘಾತ ಉಂಟಾದಾಗ ವೇದನೆಯ ಪ್ರಕಾಶದ ಮೂಲಕ ವಿಧಿದೂಷಣವೆ ಆಯಾ ರಾಷ್ಟ್ರಗಳ ಕಾವ್ಯಗಳಲ್ಲಿ ಮುಖ್ಯ ವಸ್ತು.[37] ವಿಧಿಯ ಪ್ರಘಾತಕ್ಕೆ ಸಿಕ್ಕಿದ ಮಾನವನ ಸ್ಥಿತಿಯನ್ನು ಬಿರುಗಾಳಿಯಿಂದ ಕೂಡಿದ ಅಲೆಯ ಹೊಡೆತಕ್ಕೆ ಸಿಕ್ಕಿದ ಅಂಬಿಗನಿಲ್ಲದ ದೋಣಿಗೆ ಹೋಲಿಸಿದೆ. ಇದರಂತೆಯೇ ಆಧುನಿಕ ವೈಜ್ಞಾನಿಕ ಸಿದ್ಧಿಗಳೂ ಪ್ರಕೃತಿಯ ನಿಷ್ಠುರದ ಪ್ರಭುತ್ವವನ್ನೆ[38] ಸಮರ್ಥಿಸುತ್ತವೆ. ಯಾದೃಚ್ಛಿಕ ಘಟನೆಗಳಿಂದಾಗಲಿ ಅಥವಾ ಪ್ರಕೃತಿಯ ಅಪ್ರತಿಹತವಾದ ಪ್ರಭುತ್ವದಿಂದಾಗಲಿ ಸಂಭವಿಸುವ ರಾಷ್ಟ್ರಗಳ ಮತ್ತು ಸಂಸ್ಕೃತಿಗಳ ಪ್ರಗತಿ ಮತ್ತು ಅವನತಿಗಳಿಗೆ ಬಾಹ್ಯ ಪ್ರಭಾವವೆ ಕಾರಣವೇ ವಿನಾ ಪುರುಷಸ್ವಾತಂತ್ರ್ಯವಲ್ಲ ಎಂಬುದೆ ಸಿದ್ಧಾಂತ.

ಇತಿಹಾಸದ ಪ್ರಸಾರ ಮತ್ತು ಪ್ರಗತಿಗಳಿಗೆ ಒಂದು ವಿಶ್ವನಿಯಮವಿದೆಯೆ ಅಥವಾ ಇತಿಹಾಸದ ವ್ಯವಹಾರಗಳೆಲ್ಲ ಆಕಸ್ಮಿಕ ಘಟನೆಗಳನ್ನವಲಂಬಿಸಿವೆಯೆ ಎಂಬುದು ಪಾಶ್ಚಾತ್ಯ ವಿದ್ವಾಂಸರಲ್ಲಿ ಇಂದಿನ ಮುಖ್ಯಪ್ರಶ್ನೆ. "ಲೌಕಿಕ ವ್ಯವಹಾರಗಳೆಲ್ಲ ಅಲೌಕಿಕ ನಿಯಮಕ್ಕೊಳಪಟ್ಟಿವೆ"[39] ಎಂಬುದು ಒಂದು ಮತ. "ಇತಿಹಾಸದಲ್ಲಿ ಅಂಥ ನಿಯಮವೇನೂ ಕಾಣುವುದಿಲ್ಲ. ಆಕಸ್ಮಿಕ ಘಟನೆಗಳೆ ಅನಿರೀಕ್ಷಿತ ಸನ್ನಿವೇಶಗಳಿಗೆ ಕಾರಣವಾಗುತ್ತವೆ"[40] ಎಂಬುದು ಇನ್ನೊಂದು ಮತ. ಈ ಎರಡು ದೃಷ್ಟಿಯಿಂದಲೂ ಪುರುಷಸ್ವಾತಂತ್ರ್ಯಕ್ಕೆ ಅವಕಾಶವಿಲ್ಲ. "ಪ್ರಕೃತಿಯ ವ್ಯವಹಾರಕ್ಕೂ ಮಾನವನ ನೀತಿಗೂ ಸಂಬಂಧ

---

37 "The notion of chance is expressed in the literature of Egyptaic Time of Troubles through the simile of the giddy spinning of a potter's wheel and in the literature of the Hellenic Time of Troubles the simile of a ship that has been abandoned, without a steersman, to the mercy of winds and waves." —A. J. Toynbee, vol. IV, P. 12

38 " The same dogma of omnipotence of Necessity pervades the modern scientific thought." —A. J. Toynbee, Vol. IV. P. 48

"The Vision of Fate, remorseless and indifferent, urging a tragic incident to the inevitable issue, is the vision possessed by science. Faith in Greek Tragedy becomes the Order of Nature in modern thought."

—A. N. Whitehead: Science and Modern World. P. 24

39 "To see in history a Vision of God's creation on the move, from God its source towards God its goal."—A. J. Toynbee. X. P. 3 (1955)

40 "Men wiser and more learned than I have discerned in history a plot, a rhythm, a predetermined pattern. These harmonies are concealed from me. I can see only one emergency following upon another as waves follow upon waves.. only one safe rule for the historian that he should recognise in the development of human destinies the play of the contingent and the unforeseen."

—H. A. L. Fisher. Preface to The History of Europe

ಇಲ್ಲ. ಇತಿಹಾಸದ ಪ್ರಸಾರಕ್ಕೂ ಪ್ರಗತಿಗೂ ಮಾನವನೆ ಸರ್ವತಂತ್ರಸ್ವತಂತ್ರ" ಎಂಬ ಮೂರನೆ ಮತದಲ್ಲಿ ಮಾನವನ ನೀತಿ ವಿಶ್ವನಿಯಮಕ್ಕಿಂತಲೂ ಪ್ರತ್ಯೇಕ ಎಂಬ ಸಿದ್ಧಾಂತವಿದೆ41.

ವ್ಯಾಸರ ಇತಿಹಾಸತತ್ತ್ವಪ್ರತಿಪಾದನ ದೃಷ್ಟಿಯಿಂದ ಈ ಎಲ್ಲ ಮತಗಳಲ್ಲೂ ಆಧ್ಯಾತ್ಮಿಕ ಮತ್ತು ನೈತಿಕ ನ್ಯೂನತೆಗಳಿವೆಯೆಂದು ಹೇಳಲವಕಾಶವಿದೆ. ಇವುಗಳಲ್ಲಿ ಮೊದಲನೆ ಶ್ರದ್ಧೆ ಐಹಿಕ ಜೀವನಕ್ಕೆ ಪ್ರಾಶಸ್ತ್ಯಕೊಡುವುದಿಲ್ಲ. ಎರಡನೆಯದು ಐಹಿಕ ಜೀವನಕ್ಕೆ ನಿತ್ಯವೂ ಪವಿತ್ರವೂ ಆದ ಆದರ್ಶವನ್ನು ತೋರಿಸುವುದಿಲ್ಲ. ಮೂರನೆಯದು ವೈರಸ್ಯಕಾರಕವಾದ ಸ್ವಾರ್ಥಾಹಂಕಾರಗಳನ್ನು ಬೆಳೆಸುತ್ತದೆ. ಈ ಮೂರು ಮತಗಳೂ ಅವುಗಳ ಆಂತರಿಕ ನ್ಯೂನತೆಗಳಿಂದ ವಿಶ್ವಸಾಮರಸ್ಯಸಂಪಾದನೆಗೆ ಸಾಧಕವಾಗಲಾರವು. ವೈರಸ್ಯವೇ ದುಃಖ ಮತ್ತು ಅವನತಿಗೆ ಕಾರಣ.

ಸಂಸ್ಕೃತಿಯ ಪ್ರಗತಿಗಾಗಲಿ, ಅವನತಿಗಾಗಲಿ ಮಾನವನ ಮನಃಪ್ರವೃತ್ತಿಯೆ ಕಾರಣ ಎಂಬುದನ್ನು ವ್ಯಾಸರು ಒಪ್ಪುತ್ತಾರೆ. ಈ ಮನಃಪ್ರವೃತ್ತಿ ಎರಡು ವಿಧ. ಸಾಮರಸ್ಯಕಾರಕವಾದ ಆಧ್ಯಾತ್ಮಿಕತತ್ತ್ವಜ್ಞಾನದ ಆಧಾರದ ಮೇಲೆ ಪುಷ್ಟವಾಗಿ ಬೆಳೆದ ದೈವೀಸಂಪತ್ತು. ವೈರಸ್ಯಕಾರಕವಾದ ಸ್ವಾರ್ಥಾಹಂಕಾರಗಳ ಪ್ರೇರಣೆಯಿಂದ ಬೆಳೆದ ಆಸುರೀಸಂಪತ್ತು42. ದೈವೀಸಂಪತ್ತಿನ ವೃದ್ಧಿಯಿಂದ ಲೋಕಕ್ಷೇಮ. ಆಸುರೀಸಂಪತ್ತಿನ ವೃದ್ಧಿಯಿಂದ ಲೋಕದ ನಾಶ. ಇದೆ ನಿಯಮ ವ್ಯಕ್ತಿ ಮತ್ತು ಸಂಸ್ಥೆ ಎರಡಕ್ಕೂ ಅನ್ವಯಿಸುತ್ತದೆ. ಸಂಸ್ಥೆಯ ಪ್ರಗತಿಯೂ ಮಾನವವ್ಯಕ್ತಿಯ ಪ್ರಗತಿಯನ್ನೆ ಅವಲಂಬಿಸಿದೆ.

ವ್ಯಕ್ತಿಗಳ ಪ್ರಗತಿಗೆ ಧೀರನಾದ 'ಶ್ರೇಷ್ಠ' ಯಾವ ರೀತಿ ಮಾರ್ಗದರ್ಶಕನೋ ಸಂಸ್ಥೆಗಳ ಮತ್ತು ರಾಷ್ಟ್ರಗಳ ಪ್ರಗತಿಗೂ 'ಶ್ರೇಷ್ಠ'ನೆ ಮಾರ್ಗದರ್ಶಕ43.

ರಾಷ್ಟ್ರದ ಪ್ರಗತಿ ಶ್ರೇಷ್ಠನ ನೇತೃತ್ವಕ್ಕೆ ಹಿನ್ನೆಲೆಯಾದ ಅವನ ಮನಃಪ್ರವೃತ್ತಿಯನ್ನವಲಂಬಿಸಿದೆ. ಈ ನೇತೃತ್ವದಲ್ಲಿ ವಿಶ್ವಸಾಮರಸ್ಯಕಾರಕವಾದ ಔದಾರ್ಯವಿಲ್ಲದೆ ಕೇವಲ ರಾಷ್ಟ್ರೀಯ ಅಥವಾ ಮತೀಯ ಸಂಕುಚಿತ ಭಾವನೆಗಳಿದ್ದರೆ ಅಲ್ಲಿ ವೈರಸ್ಯ, ಹೋರಾಟ, ನಾಶ ಇವು ಅನಿವಾರ್ಯ—ಎಂಬುದನ್ನು ಇತಿಹಾಸದ ಘಟನೆಗಳು ಸಮರ್ಥಿಸುತ್ತವೆ. ಆಧ್ಯಾತ್ಮಿಕ ದೃಷ್ಟಿಕೋಣದಲ್ಲಿ ಸಂಕುಚಿತಭಾವವನ್ನು ಬೆಳೆಸಿ ದಾಸ್ಯಸಂಪ್ರದಾಯಕ್ಕೆ ಅವಕಾಶ ಮಾಡಿಕೊಟ್ಟ ಗ್ರೀಕರ ಕಾಲದಿಂದ ಭೋಗಸಂಸ್ಕೃತಿಯಲ್ಲಿ ಶ್ರದ್ಧೆಯನ್ನು ಬೆಳೆಸಿದ ಇಂದಿನ ಲೋಕಾಯತರ ವರೆಗೆ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಸಂಕ್ಷೋಭವಿದ್ದರೆ ಅದಕ್ಕೆ ಆಯಾ ನೇತೃಗಳ ಸಂಕುಚಿತಪ್ರವೃತ್ತಿಯೆ ಕಾರಣ ಎಂದು ಪಾಶ್ಚಾತ್ಯ ಇತಿಹಾಸತತ್ತ್ವ ಜಿಜ್ಞಾಸುಗಳೂ ಸಾಮಾಜಿಕ ಸಂಶೋಧಕರೂ ಸ್ಪಷ್ಟಪಡಿಸಿದ್ದಾರೆ44. ಅದರಲ್ಲೂ ಇಂದಿನ ಭೋಗಸಂಸ್ಕೃತಿಯ ಭೀಕರಸ್ಥಿತಿಯನ್ನು ವರ್ಣಿಸುತ್ತ ಅದಕ್ಕೆಲ್ಲ ಸ್ವಾರ್ಥಾಹಂಕಾರಗಳನ್ನು ಬೆಳೆಸುವ ರಾಷ್ಟ್ರೀಯ ನಾಯಕರ ಸಂಕುಚಿತವಾದ ನಾಯಕತ್ವವೆ ಕಾರಣ ಎಂದು ಸಾಮಾಜಿಕ ಸಂಶೋಧಕರೂ ಇತಿಹಾಸತತ್ತ್ವಜಿಜ್ಞಾಸು

---

41 Cf. R. G. Collingwood: Idea of History

42 ಭಗವದ್ಗೀತಾ, ಅಧ್ಯಾಯ 16

43 "ಯದ್ಯದಾಚರತಿ ಶ್ರೇಷ್ಠಸ್ತತ್ತದೇವೇತರೋ ಜನಃ ।
ಸ ಯತ್ಪ್ರಮಾಣಂ ಕುರುತೇ ಲೋಕಸ್ತದನುವರ್ತತೇ ॥ (ಗೀತಾ)

44 Cf. A. N. Whitehead : Adventure of Ideas
Aldous Huxlly: The Brave New World
George Santayana: Egotism in German Philosophy
Sorokin P. A. : Social and Cultural Dynamics
A. J. Toynbee: A study of History, vols. III to VI

ಗಳೂ ತಮ್ಮ ಕಾತರತೆಯನ್ನು ವ್ಯಕ್ತಪಡಿಸಿದ್ದಾರೆ45. ವಿಶ್ವನಿಯಮವಿಲ್ಲದ ಸ್ವಾರ್ಥಪ್ರವೃತ್ತಿಯೇ ಇದಕ್ಕೆಲ್ಲ ಕಾರಣ ಎಂಬುದೂ ಸ್ಪಷ್ಟ46. ಈ ಅನಾಹುತವನ್ನು ತಪ್ಪಿಸಲು ಪಾಶ್ಚಾತ್ಯ ರಾಷ್ಟ್ರಗಳ ತತ್ತ್ವಜಿಜ್ಞಾಸುಗಳು ಶುದ್ಧಬುದ್ಧಿಯಿಂದ ಪ್ರಯತ್ನಿಸುತ್ತಿದ್ದರೂ ಅವರ ಮನಃಪ್ರವೃತ್ತಿಯೂ ಒಂದಲ್ಲ ಒಂದು ವಿಧದಲ್ಲಿ ಸಂಕುಚಿತವಾದ್ದರಿಂದ ಈ ಸಂದಿಗ್ಧಪರಿಸ್ಥಿತಿ ಇನ್ನೂ ವಿಷಮಿಸುತ್ತಿದೆ. ಈ ವಿಷಮ ಪರಿಸ್ಥಿತಿಯನ್ನು ಕೊನೆಗಾಣಿಸಿ ವಿಶ್ವಪ್ರೇಮವನ್ನೂ ವಿಶ್ವಶಾಂತಿಯನ್ನೂ ಪ್ರಸಾರ ಮಾಡಿ ಮಾನವನ ಸರ್ವತೋಮುಖವಾದ ಪ್ರಗತಿಯನ್ನು ಸಾಧಿಸಬೇಕಾದರೆ ಮಾನವಕುಲಕ್ಕೆ ಯಾವ ರೀತಿಯ ನಾಯಕತ್ವ ಅವಶ್ಯ ಎಂಬುದನ್ನು ವಿಚಾರ ಮಾಡುತ್ತ ಪ್ರಸಿದ್ಧವಾದ ಆಂಗ್ಲಸಾಹಿತ್ಯಕಾರರೂ ತತ್ತ್ವಜಿಜ್ಞಾಸುಗಳೂ ಆದ ಆಲ್ಡಸ್ ಹಕ್ಸ್ಲೇ ಅವರು ವ್ಯಾಸರ ‘ಶ್ರೇಷ್ಠ’ನ ಕಡೆಗೆ ಜಗತ್ತಿನ ಗಮನವನ್ನು ಸೆಳೆಯುತ್ತಾರೆ. ಸ್ಥಿತಪ್ರಜ್ಞನಾದ ಈ ಶ್ರೇಷ್ಠನೊಬ್ಬನೆ ಮಾನವಕುಲವನ್ನು ಕೇವಲ ಭೋಗಸಂಸ್ಕೃತಿಯಿಂದ ಬಿಡುಗಡೆ ಮಾಡಿ ತ್ಯಾಗ–ಭೋಗಗಳ47 ಸಮನ್ವಯದಿಂದ ನಿಜವಾದ ಮಾನವತ್ವವನ್ನು ಪ್ರಕಾಶಿಸುವಂತೆ ಮಾಡಬಲ್ಲ ನಾಯಕ.48 ಇವನು ಕಾಮಕ್ರೋಧರಹಿತನೂ ಪಕ್ಷಪಾತರಹಿತನೂ ಸಂಗರಹಿತನೂ ಪ್ರೇಮ, ಕ್ಷಮೆ. ಧೃತಿ ಇತ್ಯಾದಿ ದೈವೀಸಂಪತ್ತಿನಿಂದ ಕೂಡಿದವನೂ ನಿಷ್ಕಾಮಕರ್ಮನಿಷ್ಠನೂ ಆಗಿ ಮಾನವಕುಲದ ಯೋಗಕ್ಷೇಮಸಾಧಕನಾಗುತ್ತಾನೆ. ಜಗತ್ತಿಗೆ ಮೂಲಕಾರಣನಾದ ಈಶ್ವರನನ್ನು ಸಕಲ ಭೂತಗಳಲ್ಲೂ ಸಕಲ ಭೂತಗಳನ್ನು ಈಶ್ವರನಲ್ಲೂ ಕಾಣುತ್ತಾನೆ. ಆದ್ದರಿಂದಲೆ ಸಕಲ ಭೂತಗಳನ್ನೂ ಆತ್ಮೌಪಮ್ಯದಿಂದ ಕಾಣುತ್ತ ‘ಸರ್ವತ್ರ ಸಮದರ್ಶನ’ನಾಗುತ್ತಾನೆ49. ಕರ್ಮಯೋಗಿಯಾದ ಇವನ ಕ್ರಿಯೆಗಳೆಲ್ಲ ಪರಾರ್ಥದಲ್ಲಿ ಪರ್ಯವಸಾನ ಹೊಂದಿ ವಿಶ್ವಸಾಮರಸ್ಯವೆ ಇವನ ಗುರಿಯಾಗುತ್ತದೆ.

ಜಗತ್ಕಾರಣನಾದ ಈಶ್ವರನನ್ನು ಸಕಲಭೂತಗಳಲ್ಲೂ ಸಕಲಭೂತಗಳನ್ನು ಈಶ್ವರನಲ್ಲೂ ಕಾಣುವ ಸಾಮರ್ಥ್ಯ ಮಾನವಕೋಟಿಗಳಿಗೆಲ್ಲ ಇರುವುದಿಲ್ಲ. ಈ ಸಾಕ್ಷಾತ್ಕಾರಕ್ಕೆ ಪ್ರಯತ್ನ ಮಾಡುವವರೂ ವಿರಳ. ಹೀಗೆ ಪ್ರಯತ್ನಿಸುವವರಲ್ಲೂ ಸಾಕ್ಷಾತ್ಕಾರ ಹೊಂದುವವರು ಇನ್ನೂ ವಿರಳ. ಜಿತಾತ್ಮನೂ ಯುಕ್ತಾತ್ಮನೂ ಆದ ಯೋಗಿಗೆ ಮಾತ್ರ ಇದು ಸಾಧ್ಯ.

ಯುಕ್ತಾತ್ಮನಾದ ‘ಶ್ರೇಷ್ಠ’ನು ಲೋಕಕ್ಕೆ ಮಾರ್ಗದರ್ಶಕನಾಗಬೇಕಾದರೆ ಅವನಿಗೆ ಪೂರ್ವಸಿದ್ಧತೆ

---

45 “The dominant characteristics of contemporary sensate, mentality are hedonism, rude force, coercion in social life and absolute moral nihilism. The radical and ultimate cause of this situation is the denial and rejection of a universal norm or morality.”

–Sorokin, Vol. II, 352–8

46 (1) “forgetting the law of human solidarity and charity (2) Divorcing the authority of civil Government from dependence on a Higher Law. E. Barker: Deeper causes of war

47 “ತೇನ ತ್ಯಕ್ತೇನ ಭುಂಜೀಥಾ ಮಾ ಗೃಧಃ ಕಸ್ಯ ಸ್ವಿದ್ಧನಮ್।” (ಈಶ. 1)

48. “It is difficult to find a single word that will adequately describe this ideal man. ‘Non–attached’ is perhaps the best. This ideal man should be non–attached to his craving for power and possessions; to his exclusive loves.”

—Aldous Huxley: Ends and Means. cf. his Perennial Philosophy

49 “ಯೋ ಮಾಂ ಪಶ್ಯತಿ ಸರ್ವತ್ರ ಸರ್ವಂ ಚ ಮಯಿ ಪಶ್ಯತಿ।
ಆತ್ಮೌಪಮ್ಯೇನ ಸರ್ವತ್ರ ಸಮಂ ಪಶ್ಯತಿ ಯೋಽರ್ಜುನ॥” (ಗೀತಾ. VI, 30-32)

ಅತ್ಯವಶ್ಯ. ಆರಂಭದಲ್ಲಿ ಲೌಕಿಕವ್ಯಾಪಾರಗಳಿಂದ ವಿರಕ್ತನಾಗಿ 'ಬ್ರಾಹ್ಮೀಸ್ಥಿತಿ' ಸಾಧಕವಾದ ಸಮಾಧಿಸ್ಥನಾಗಬೇಕು. ಆಗ 'ಕಾಮಸಂಕಲ್ಪವರ್ಜಿತ'ನೂ 'ದ್ವಂದ್ವಾತೀತ'ನೂ ಆಗಿ ಪಕ್ಷಪಾತರಹಿತನಾಗುತ್ತಾನೆ.50

ಸ್ಥಿತಪ್ರಜ್ಞನು ಲೌಕಿಕ ವ್ಯವಹಾರಗಳಿಂದ ಅತೀತನಾಗಿರುವುದರಿಂದ ಇವನ ವಿಷಯದಲ್ಲಿ ಪಾಶ್ಚಾತ್ಯ ಇತಿಹಾಸತತ್ತ್ವಜಿಜ್ಞಾಸುಗಳು ಅನೇಕ ವಿಧವಾಗಿ ಟೀಕೆ ಮಾಡುತ್ತಾರೆ. ಸ್ಥಿತಪ್ರಜ್ಞನು ಸರ್ವಸಂಗಪರಿತ್ಯಾಗ ಮಾಡಿ ಪಾಷಾಣಹೃದಯನಾಗಿರುವುದರಿಂದ ಅವನು ಲೋಕಸೇವೆಗೆ ಅರ್ಹನಲ್ಲ. ಲೋಕಸೇವೆಗೆ ಪ್ರೇಮ ಅಗತ್ಯ. ಸ್ಥಿತಪ್ರಜ್ಞನಿಗೆ ಈ ಲಕ್ಷಣವೆ ಇಲ್ಲ ಎಂದು ಗ್ರೀಕರ ತತ್ತ್ವಜ್ಞಾನಿಗಳೊಂದಿಗೆ ಹೋಲಿಸಿ ಅವರ ಅರ್ಹತೆ ಭಾರತದ ಸ್ಥಿತಪ್ರಜ್ಞನಿಗೆ ಇಲ್ಲ ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.51

ಭಾರತದ ಲೋಕಸೇವಾಸಂದೇಶ ಪೂರ್ಣವಾಗಿ ಅರ್ಥವಾಗದಿರುವುದೆ ಈ ಟೀಕೆಗೆ ಕಾರಣ. 'ಕಾಮಸಂಕಲ್ಪವರ್ಜಿತ'ವಾದ ಬ್ರಾಹ್ಮೀಸ್ಥಿತಿ ಲೋಕಸೇವೆಗೆ ಪೂರ್ವಸಿದ್ಧತೆ. ಅಲ್ಲಿ ಯೋಗಿ ತನ್ನ ಸ್ವಾರ್ಥಾದಿ ಸಂಕುಚಿತ ಪಕ್ಷಪಾತಗಳಿಂದ ರಹಿತನಾಗಿ ಸರ್ವತ್ರ ಸಮಬುದ್ಧಿಯನ್ನು ಬೆಳೆಸಲು ಜಗತ್ತಿನ ಮೂಲತತ್ತ್ವಕ್ಕೂ ಜಗತ್ತಿಗೂ ಇರುವ ಸಂಬಂಧವನ್ನರಿಯುವುದರಿಂದ ಲೋಕಸೇವೆಯು ಈಶ್ವರಸೇವೆ ಎಂಬ ದೃಢವೈರಾಗ್ಯವೂ ಕರ್ತವ್ಯಜ್ಞಾನವೂ ಬೆಳೆಯುತ್ತದೆ52. ಲೋಕವ್ಯವಹಾರ ಶುದ್ಧವೂ ಕಲ್ಯಾಣಕಾರಕವೂ ಆಗುವಂತೆ ಮಾರ್ಗದರ್ಶನ ನೀಡಲು ಇವನು ಪುನಃ ಲೋಕಸೇವೆಗೆ ಬರಬೇಕಾದುದು ಇವನಿಗೆ ವಿಹಿತವಾದ ಕರ್ತವ್ಯ. 'ಲೋಕಸಂಗ್ರಹ'ವೇ ಇವನ ಮುಂದಿನ ಗುರಿ. ಪಾಶ್ಚಾತ್ಯ ಇತಿಹಾಸತತ್ತ್ವಜಿಜ್ಞಾಸುಗಳು ಹೇಳುವಂತೆ ಗ್ರೀಕರ ಆದರ್ಶಮುನಿಗೆ 'ಲೋಕಸಂಗ್ರಹ' ಕಾರ್ಯ ವಿಹಿತವಲ್ಲ. ಅವನು ಸಮಾಧಿಯನ್ನು ಬಿಟ್ಟು ಪುನಃ ಲೋಕಕ್ಕೆ ಬರುವ ಆವಶ್ಯಕತೆ ನಿಯತವಲ್ಲ. ಅದ್ದರಿಂದಲೆ ಗ್ರೀಕ್ ಲೋಕಕ್ಕೆ ಸರಿಯಾದ ಮಾರ್ಗದರ್ಶನವಿಲ್ಲದೆ ಆ ಸಂಸ್ಕೃತಿ ವಿಫಲವಾಗಿ ಲುಪ್ತವಾಗಲು ಕಾರಣವಾಯಿತು ಎಂದು ಪಾಶ್ಚಾತ್ಯ ತತ್ತ್ವಜ್ಞರ ಅಭಿಪ್ರಾಯವೂ ಇದೆ.53

ಸಮಾಧಿಸ್ಥನಾದ ಶ್ರೇಷ್ಠನಿಗೆ ಲೋಕಸಂಗ್ರಹ ಅವಶ್ಯ. ಲೋಕಸೇವೆಯೂ ಬ್ರಹ್ಮಚಕ್ರದ ನಿಯಮಪಾಲನವೆ54. ಈ ನಿಯಮಪಾಲನ ಸುಲಭಸಾಧ್ಯವಲ್ಲ. ಕತ್ತಲೆಯಲ್ಲಿರುವ ಲೋಕಕ್ಕೆ ಪ್ರಕಾಶವನ್ನುಂಟು

---

50 ಸ್ಥಿತಪ್ರಜ್ಞನ ಲಕ್ಷಣಗಳು. ಗೀತಾ., ಅಧ್ಯಾಯ II
ದೈವೀಸಂಪತ್ತಿನ ಸ್ವರೂಪ. ಗೀತಾ. ಅಧ್ಯಾಯ XVI

51 "To the Indian sage's mind this heartlessness is the adamentine core of philosophy. Such a detachment is morally intolerable. Mankind has two different ideals before it and I do not see how the ideal of detachment is compatible with the ideal of love. If we choose one, we must forgo the other....where love is action cannot be without desire". —A. J. Toynbee. vol. VI

52. "This ecstasy is the repose of a locomotive standing in a station which it awaits for the movement to make a leap forward."
—Henry Bergson: Creative Evolution

53 "This ultimalte refusal of the Hellenic philosophers to return from the world of comtemplation into the world of action out of which they had originally come may explain why it was that the breakdown which the Hellenic civilization suffered in the generation preceding Plato's was never retrieved."
--Burnett: Greek Philosophy from Thales to Plato. p. 42

54 'ಲೋಕಸಂಗ್ರಹಮೇವಾಪಿ ಸಂಪಶ್ಯನ್ ಕರ್ತುಮರ್ಹಸಿ' (ಗೀತಾ. III. 20)

ಮಾಡುವ ಈ ಸೇವಾಕಾರ್ಯ ಗುರುತರವಾದದ್ದು. ಇವನಿಲ್ಲದೆ ಲೋಕಕ್ಕೆ ಪ್ರಕಾಶವಿಲ್ಲ. ಆದರೆ, ತನ್ನ ಮಟ್ಟವೆ ಬೇರೆ, ಲೋಕದ ಮಟ್ಟವೆ ಬೇರೆ. ಲೋಕದ ಕೆಳಮಟ್ಟದಲ್ಲಿರುವ ಅಜ್ಞವಾದ ಲೋಕಕ್ಕೆ ಯಾವ ಮನಃಕ್ಷೋಭೆಯೂ ಉಂಟಾಗದಂತೆ ಅವರ ಯೋಗಕ್ಷೇಮಸಾಧನೆ ಒಂದು ಕಠಿನ ತಪಸ್ಯೆ. ಕರ್ಮಸಂಗಿಗಳಾದ ಅಜ್ಞರ ಮಾರ್ಗದರ್ಶನದ ನೇತೃತ್ವ ಕಾರ್ಯಸಾಧಕವಾಗುವ ರೀತಿಯನ್ನೂ ವ್ಯಾಸರ ತಿಳಿಸಿದ್ದಾರೆ55. ಈಶ್ವರನಲ್ಲಿ ಯಾವ ಭಕ್ತಿಪ್ರೇಮಗಳು ವ್ಯಕ್ತವಾಗುವುವೋ ಅದೇ ಭಕ್ತಿಪ್ರೇಮ ಲೋಕಸೇವೆಯಲ್ಲೂ ಪ್ರಕಾಶಿತವಾಗಬೇಕು. ಇವನು ಸಕಲಲೋಕದ ಸೌಹಾರ್ದವನ್ನೂ ಗಳಿಸಿ, ಯಾವ ಪಕ್ಷಪಾತವೂ ಇಲ್ಲದೆ ವಿಶ್ವಪ್ರೇಮಪೂರ್ವಕವಾದ ಸರ್ವಸಮತಾಭಾವದಿಂದ ಲೋಕಸೇವೆ ಕೈಕೊಳ್ಳಬೇಕು ಎಂದು ಲೋಕದ ಪ್ರಗತಿಗೆ 'ಶ್ರೇಷ್ಠ'ನ ಆವಶ್ಯಕತೆಯನ್ನು ತಿಳಿಸಿದ್ದಾರೆ56. ಲೋಕದ ಮಾರ್ಗದರ್ಶಕನು ಸಾತ್ತ್ವಿಕಗುಣಪ್ರಕಾಶಕವಾದ ದೈವೀಸಂಪತ್ತಿನಿಂದ ಕೂಡಿದ್ದರೆ ಅದು ಲೋಕದ ಪ್ರಗತಿಗೆ ಸಾಧಕ. ರಜೋಗುಣಪ್ರಕಾಶಕವಾದ ಆಸುರೀಸಂಪತ್ತಿನಿಂದ ಕೂಡಿದ್ದರೆ ಲೋಕದ ಅವನತಿ ನಿಶ್ಚಿತ57 ಎಂಬ ವ್ಯಾಸರ ಸಿದ್ಧಾಂತವನ್ನು ಇತಿಹಾಸದ ಘಟನೆಗಳೂ ಸಮರ್ಥಿಸುತ್ತವೆ.

ಲೌಕಿಕವ್ಯವಹಾರದಲ್ಲಿ ಮಾರ್ಗದರ್ಶನ ನೀಡಿ ಲೌಕಿಕಸಂಸ್ಕೃತಿಯ ಪ್ರಗತಿಯ ಸ್ವರೂಪವನ್ನು ವಿವರಿಸಿ ತ್ರೈಗುಣ್ಯೋದ್ಭವವಾದ ಲೋಕಚರಿತಕ್ಕೆ ಸುಸಂಸ್ಕೃತ ಧ್ಯೇಯವನ್ನು ತೋರಿಸುವ 'ಇತಿಹಾಸಪ್ರದೀಪ' ಲೌಕಿಕಪ್ರಜ್ಞಾರಹಿತವಾಗಿ ಕೇವಲ ಅಂತರಿಕ್ಷಸಂಚಾರಿಯಾದ ವಾಕ್ತತ್ವಪ್ರತಿಪಾದನವಲ್ಲ ಎಂಬುದನ್ನು ಸಮರ್ಥಿಸಲು ವ್ಯಾಸರ ಸಂದೇಶವನ್ನು ಅಕ್ಷರಶಃ ಪಾಲಿಸಿ ಸ್ಥಿತಪ್ರಜ್ಞತ್ವವನ್ನು ಸಂಪಾದಿಸಿ ಕತ್ತಲಲ್ಲಿ ಮುಳುಗಿದ್ದ ಲೋಕಕ್ಕೆ ಪ್ರಕಾಶವನ್ನು ಒದಗಿಸಿಕೊಟ್ಟ ಗಾಂಧಿಯಂಥ ಮಹಾನಾಯಕರು ಈ ಮಹಾಸಂದೇಶದ ಮಹತ್ತ್ವವನ್ನೂ ಲೋಕಕ್ಷೇಮಸಾಧಕತ್ವವನ್ನೂ ತಮ್ಮ ದಿವ್ಯಜೀವನದ ಮೂಲಕ ಸಾರಿದ್ದಾರೆ.

"ಯತಃ ಪ್ರವೃತ್ತಿರ್ಭೂತಾನಾಂ ಯೇನ ಸರ್ವಮಿದಂ ತತಮ್ ।
ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿಂದತಿ ಮಾನವಃ ॥"

---

55 "ನ ಬುದ್ಧಿಭೇದಂ ಜನಯೇದಜ್ಞಾನಾಂ ಕರ್ಮಸಂಗಿನಾಮ್" (ಗೀತಾ. III. 26)

56 "The creative individuals who set going the process of growth in the societies to which they belong are more than mere men..the creative personality is impelled to transfigure his fellow men into fellow creators by recreating them in his own image."

—Toynbee vol VII,

57 "The causes for the breakdowns of civilizations are: (1) the failure of creative power in the creative minority and (2) the consequential loss of social unity in the society as a whole."

—Toynbee, vol. IV

"The Piper who has lost his cunning can no longer conjure the feet of the mltitude into a dance....he now attempts to convert himelf into a drill sergent and to coerce by physical force."

—Toynbee, vol. IV

ಪಾಶ್ಚಾತ್ಯರು ನಮ್ಮ ವಿಧಿವಾದಿಗಳೆಂದರೆ. ಅದಕ್ಕೆ ತುಂಬ ಹೀನಾಯಪಟ್ಟುಕೊಂಡು ಕೆಲವು ಭಾರತೀಯ ದಾರ್ಶನಿಕರು ತಮ್ಮ ಶಕ್ತಿಯುಕ್ತಿಗಳನ್ನೆಲ್ಲಾ ಉಪಯೋಗಿಸಿ ನಾವು ವಿಧಿವಾದಿಗಳಲ್ಲವೇ ಅಲ್ಲವೆಂದು ವಿವರಣೆಗಳನ್ನು ಕೊಡುತ್ತಾ ಹೋಗುತ್ತಾರೆ. ಪುರುಷಕಾರವೇ ಪರಮಸತ್ಯವಾಗಿದ್ದರೆ ಹಾಗೆಂದು ಹೇಳೋಣ; ವಿಧಿ ಸತ್ಯವಾಗಿರುವ ಪಕ್ಷಕ್ಕೆ ಅದನ್ನು ಏಕೆ ಒಪ್ಪಿಕೊಳ್ಳಬಾರದು? ಪಾಶ್ಚಾತ್ಯರು ಹೇಳಿದ ಮಾತ್ರದಿಂದಲೇ ಯಾವುದೂ ನಿಜವಾಗುವುದಿಲ್ಲ; ಅವರ ಪ್ರತ್ಯಕ್ಷ ಶಾಸ್ತ್ರವಾದ ವಿಜ್ಞಾನವೇ ಇಂದು ಇದ್ದ ಹಾಗೆ ನಾಳೆ ಇರುವುದಿಲ್ಲ. ಹಾಗಿರಲು. ದರ್ಶನದಲ್ಲೇಕೆ ಅವರು ಹೇಳಿದ್ದೇ ತಥ್ಯವಾಗಬೇಕು? ಮನುಷ್ಯನು ವಿಧಿಯ ಮುಂದೆ ನಾನು ಅಲ್ಪ, ಅಶಕ್ತ. ಎಂದು ಒಪ್ಪಿಕೊಂಡರೆ ಅದಕ್ಕೆ ಸಂಕೋಚವೇಕೆ? ಸತ್ಯವಾವುದೋ ಬಲ್ಲವರಾರು! ಹೋದ ಹೋದ ಕಡೆಯಲ್ಲಿ ಹಿಡಿಹಿಡಿದವನ್ನೆಲ್ಲಾ ಹೊನ್ನಾಗುತ್ತಿದ್ದ ಅದೃಷ್ಟಶಾಲಿ ಪಾಶ್ಚಾತ್ಯರು ಪೌರುಷವೇ ಪರಮಸತ್ಯವೆಂದಿದ್ದರೆ ಅದು ಅವರ ಅಪೂರ್ಣ ಅನುಭವದ ಫಲವೇಕಾಗಬಾರದು? ಅವರ ಅನುಭವ ಇನ್ನೂ ಹೆಚ್ಚಾದರೆ. ವ್ಯತ್ಯಾಸವಾದರೆ. ಪುರುಷ ಪ್ರಯತ್ನದಲ್ಲಿದ್ದ ಅವರ ಶ್ರದ್ಧೆ ವಿಶ್ವಾಸ ಭಾವನೆಗಳು ಶಿಥಿಲವಾದಾವು. ಪಾಶ್ಚಾತ್ಯ ವೈಜ್ಞಾನಿಕರೇ—ದಾರ್ಶನಿಕರೂ. ರಾಜತಂತ್ರಜ್ಞರೂ ಇರಲಿ—ಈಗೀಗ. ಮನುಷ್ಯನೇ ಸರ್ವಸ್ವವೂ ಅಲ್ಲ ಎಂಬ ಮತಕ್ಕೆ ತಿರುಗುತ್ತಿದ್ದಾರೆ. ಭೌತಶಾಸ್ತ್ರದಲ್ಲಿ ನೊಬೆಲ್ ಪಾರಿತೋಷಕ ಪಡೆದ ಪ್ರಸಿದ್ಧ ವಿಜ್ಞಾನಿ ಡಾ. ಮಿಲಿಕನ್ ಅವರು ಈಚೆಗೆ ಅಮೇರಿಕಾದಲ್ಲಿ ಉಪನ್ಯಾಸ ಮಾಡುತ್ತ ಕಳೆದ ಯುದ್ಧದಲ್ಲಿ ನಡೆದ ಕೆಲವು ಸಂದರ್ಭಗಳನ್ನು ಹೇಳಿ—"ಅವು ಮಿತ್ರಮಂಡಳಿಯವರಿಗೆ ಅನುಕೂಲವಾಗುವಂತೆ ತಿರುಗಿದ್ದು ಅವರ ಬುದ್ಧಿ ಸಾಮರ್ಥ್ಯದಿಂದೇನಲ್ಲ: ಯಾವುದೋ ಮತ್ತೊಂದರಿಂದ......ಶುದ್ಧ ಜಡತಾವಾದವು ನನಗೆ ಅಜ್ಞಾನದ ಪರಾಕಾಷ್ಠೆ ಎನ್ನಿಸುತ್ತದೆ" ಎಂದರು. ಮತ್ತು ಅವರಷ್ಟೇ ಪ್ರಸಿದ್ಧರಾದ ಡಾ. ಐನ್‌ಸ್ಟೀನ್‌ರವರ ಕೆಲವು ವಾಕ್ಯಗಳನ್ನು ಅನುವಾದ ಮಾಡಿ "ದೇವರ ಈ ಲಕ್ಷಣ ನನಗೆ ಸಾಕು!" ಎಂದೂ ಹೇಳಿದರು. (ಹಿಂದೂ ಪತ್ರಿಕೆ. 31–8–1948)

ಮಹಾಭಾರತವು ಮನುಷ್ಯ ಪ್ರಯತ್ನವಿಲ್ಲವೆನ್ನುವುದಿಲ್ಲ: "ಮನುಷ್ಯನು ತನ್ನನ್ನು ತಾನು ಯಾವಾಗಲೂ ನಿರಾಕರಿಸಿಕೊಳ್ಳಬಾರದು; ಅಂಥವನಿಗೆ ಸುಖವಿಲ್ಲ" (ಪು. 120). "ಶೀತ ಉಷ್ಣ ಮಳೆ ಹಸಿವು ನೀರಡಿಕೆ ಮುಂತಾದ ದೈವಕೃತವಾದ ವಿಷಯಗಳನ್ನು ಮನುಷ್ಯಪ್ರಯತ್ನದಿಂದ ಹೋಗಲಾಡಿಸಿಕೊಳ್ಳಬಹುದು" (243). ಆದರೆ ಇದು ಸಣ್ಣ ಸಣ್ಣ ವಿಷಯಗಳಲ್ಲಿ ನಿಜ. ಮತ್ತು ಈ ಅಲ್ಪಸ್ವಲ್ಪ ಮನುಷ್ಯನ ಪ್ರಯತ್ನವೂ ದೈವದ ಅಧೀನದಲ್ಲಿಯೇ ನಡೆದರೆ (347) ಅದಕ್ಕೆ ಏನು ಪ್ರಾಶಸ್ತ್ಯ ಬಂತು? ಅದರ ಸ್ವಾತಂತ್ರ್ಯದಷ್ಟರಮಟ್ಟಿನದು? ಪ್ರಕೃತಿನಿಷ್ಠವಾದ ರಜೋಗುಣ ತಮೋಗುಣಗಳಿಂದ ತನಗಿಷ್ಟವಿಲ್ಲದಿದ್ದ ಕೆಲಸವನ್ನೂ 'ಬಲಾದಿವ ನಿಯೋಜಿತ'ನಾಗಿ ಮಾಡಬೇಕಾಗಿ ಬಂದರೆ. ನಾವು ಮಾಡುವ ಪ್ರಯತ್ನ ವ್ಯರ್ಥವಾಗಿ. ಪ್ರಕೃತಿ ನಿಯೋಜಿಸಿದ ದಾರಿಯಲ್ಲಿಯೇ ಹೋಗಬೇಕಾದರೆ. "ನಾವು" ಎನ್ನುವುದು ಎಲ್ಲಿ ಬಂತು? "ಅಹಂಕಾರವಿಮೂಢಾತ್ಮಾ ಕರ್ತಾಹಮಿತಿ ಮನ್ಯತೇ" (ಭ.ಗೀ. 3–27). ಹೀಗೆಂದು ದೈವವೊಂದೇ ಎಲ್ಲದಕ್ಕೂ ಕಾರಣವೆಂದೂ ಹೇಳುವುದಿಲ್ಲ. ಅಧಿಷ್ಠಾನ. ಕರ್ತ. ಕರಣ. ಪ್ರಯತ್ನ. ದೈವ ಇವೈದೂ ಒಟ್ಟಿಗೆ ಕಾರಣಗಳು (18–14). " ಹೀಗೆ ದೈವ ಪುರುಷಕಾರ ಎರಡನ್ನೂ ಹೊಂದಿಸಿಕೊಂಡು ಕರ್ಮದಲ್ಲಿ ತೊಡಗುವ ವಿವೇಕಿಗೆ. ಕಾರ್ಯವಾಗಲಿಲ್ಲವೆಂಬ ವ್ಯಥೆಯಿರುವುದಿಲ್ಲ. ಆಯಿತೆಂಬ ಹರ್ಷವಿರುವುದಿಲ್ಲ" (ವ.ಭಾ. 243) ಇದನ್ನು ಶ್ರೀಕೃಷ್ಣನ ಬೋಧನೆ ಆಚರಣೆ ಎರಡರಲ್ಲಿಯೂ ನೋಡಬಹುದು. ಗೀತೆಯಲ್ಲಿ ಅದನ್ನೇ ಕಡೆದು ಉಂಡೆಯಾಗಿ ಎತ್ತಿಕೊಟ್ಟಿದೆ. ಅವನು ಅರ್ಜುನನಿಗೆ ಬೋಧಿಸಿದ್ದನ್ನು ತಾನೇ ಆಚರಿಸಿದನು. ಅವನಿಗೆ ನನ್ನವರು ತನ್ನವರು ಎಂಬ ವಿಶ್ವಾಸ ಅಂತಃಕರಣಗಳು ಇರಲಿಲ್ಲವೆ? ಆದರೆ ಕಾಲ ಬಂದಾಗ ಅವರನ್ನು ನಿರ್ಮಮತೆಯಿಂದ ಹೊಡೆದು ಕೊಂದು ತಾನೂ ಶಾಂತನಾಗಿ ಪ್ರಾಣ ಬಿಟ್ಟನು.1

—ಎ. ಆರ್. ಕೃಷ್ಣ ಶಾಸ್ತ್ರೀ

---

1 ವಚನ ಭಾರತ: ಶಾರದಾಮಂದಿರ, 1966, ಪು. 45–46

ರಜಿಯಾ ಖಾನ್

ವೈದ್ಯಕೀಯ ಭೂಗೋಳ

ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ ಆರೋಗ್ಯವೆಂದರೆ "ಕೇವಲ ರೋಗರುಜಿನಗಳು ಹಾಗೂ ಅಶಕ್ತತೆಯಿಂದ ಹೊರತಾಗಿರುವುದೇ ಅಲ್ಲ. ಅದು ಒಂದು ರೀತಿಯ ದೈಹಿಕ, ಮಾನಸಿಕ ಹಾಗೂ ಸಾಮಾಜಿಕ ದೃಷ್ಟಿಗಳಿಂದ ಪರಿಪೂರ್ಣವಾಗಿ ಸ್ವಸ್ಥವಾಗಿರುವ ಸ್ಥಿತಿ." ಈ ರೀತಿಯಾಗಿ ದೇಹದಾರ್ಢ್ಯ ಮತ್ತು ಮಾನಸಿಕ ಸ್ಥಿತಿ ಚೆನ್ನಾಗಿರುವ ಹಾಗೂ ರೋಗಗಳಿಗೆ ಈಡಾಗದಿರುವ ವ್ಯಕ್ತಿಯನ್ನು ಆರೋಗ್ಯವಂತನೆನ್ನಬಹುದು. ಸ್ವಾಭಾವಿಕವಾಗಿ ಒಬ್ಬ ಆರೋಗ್ಯವಂತನಾದ ಮನುಷ್ಯ ಉತ್ಸಾಹ ಮತ್ತು ಚಟುವಟಿಕೆಗಳಿಂದ ಕೂಡಿ ಲವಲವಿಕೆಯಿಂದಿರುತ್ತಾನೆ. ಅವನ ಬುದ್ಧಿಯ ಮಟ್ಟ ಉತ್ತುಂಗವಾಗಿರುತ್ತದೆ. ಆತ ಹೊಸ ಹೊಸ ವಿಚಾರಗಳನ್ನು ಕುರಿತು ಯೋಚಿಸಬಲ್ಲ; ರೋಗಿಯಾದ ಮನುಷ್ಯನಿಗಿಂತಲೂ ಅಧಿಕ ಸಾಮರ್ಥ್ಯದಿಂದ ಕೆಲಸಮಾಡಬಲ್ಲ.

ಯಾವುದೇ ದೇಶದ ಏಳಿಗೆಗೆ ಅತ್ಯಗತ್ಯವಾದುದೆಂದರೆ ದೇಶದ ಜನತೆಯ ಆಯುರಾರೋಗ್ಯ. ಆರೋಗ್ಯವಂತರಾದ ಪ್ರಜೆಗಳಿರುವ ದೇಶಗಳು ಇಂದು ನಿಜವಾಗಿಯೂ ಆರ್ಥಿಕವಾಗಿ ಬಹಳ ಮುಂದುವರಿದಿವೆ. ಉದಾಹರಣೆಗೆ ಸಮಶೀತೋಷ್ಣವಲಯದ ದೇಶಗಳಾದ ಅಮೆರಿಕ ಸಂಯುಕ್ತ ಸಂಸ್ಥಾನ, ಕೆನಡ, ಗ್ರೇಟ್ ಬ್ರಿಟನ್ ಮೊದಲಾದವು ಆರೋಗ್ಯವಂತರಾದ ಪ್ರಜೆಗಳನ್ನು ಹೊಂದಿವೆ; ಆಗ್ನೇಯ ಏಷ್ಯ, ಆಫ್ರಿಕ ಮತ್ತು ದಕ್ಷಿಣ ಅಮೆರಿಕಗಳಂಥ ಉಷ್ಣವಲಯದ ದೇಶಗಳಿಗಿಂತ ಗಮನಾರ್ಹವಾಗಿ ಏಳಿಗೆ ಹೊಂದಿವೆ. ಹೀಗೆ ಜನತೆಯ ಸ್ವಾಸ್ಥ್ಯ ಪರಿಸ್ಥಿತಿ ಉತ್ತಮವಾಗಿರುವಲ್ಲಿ ಏಳಿಗೆ ಮತು ವಿಕಾಸಗಳು ಸಾಧ್ಯ. ಇದಕ್ಕೆ ಪ್ರತಿಯಾಗಿ, ಜನತೆಯ ಆರೋಗ್ಯ ಉತ್ತಮವಾಗಿರದಿದ್ದಲ್ಲಿ ದುಡಿಮೆ ಹಾಗೂ ಉನ್ನತಿಯಲ್ಲಿ ಪ್ರಗತಿ ಕಂಡುಬರಲಾರದು.

ದೇಹಾರೋಗ್ಯ ಉತ್ತಮವಿದ್ದಲ್ಲಿ ಮಗು ತನ್ನ ಶಾಲೆಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ಪಾಠಪ್ರವಚನಗಳಿಂದ ಲಾಭ ಪಡೆಯಬಹುದು. ಮಗು ನಿಶ್ಶಕ್ತನಾಗಿ ರೋಗಿಯಾಗಿದ್ದಲ್ಲಿ ಪಾಠಪ್ರವಚನಗಳನ್ನು ಅರ್ಥಮಾಡಿಕೊಳ್ಳಲು ಅಸಮರ್ಥನಾಗಿ ಹಿಂದಿನ ಬೆಂಚಿನಲ್ಲೇ ಉಳಿಯಬಹುದು. ಇದೇ ಸ್ಥಿತಿ ಮುಂದುವರಿದರೆ ಆತ ಜೀವನಪರ್ಯಂತ ಕಷ್ಟಕಾರ್ಪಣ್ಯಗಳಿಗೆ ಗುರಿಯಾಗುತ್ತಾನೆ; ಆತನ ಜೀವನದಲ್ಲಿ ಸೋಲೇ ಕಂಡುಬರುವುದು. ಜವಾಬ್ದಾರಿಯುತ ಪ್ರಜೆ ಆರೋಗ್ಯವಂತನಲ್ಲದಿದ್ದರೆ ತನ್ನ ಎಲ್ಲ ಉತ್ಸಾಹಗಳನ್ನೂ ಕಳೆದುಕೊಂಡು ನಿರುತ್ಸಾಹಿಯಾಗಿ ಸೋಮಾರಿಯಾಗುತ್ತಾನೆ. ಯಾವುದೇ ವಿಷಯದಲ್ಲಿ ಆಸಕ್ತಿಯಾಗಲಿ ಪ್ರೇರಣೆಯಾಗಲಿ ಉಳಿದಿರುವುದಿಲ್ಲ. ಈ ರೀತಿಯ ಪ್ರಜೆಗಳನ್ನು ಹೊಂದಿರುವುದು ಯಾವುದೇ ದೇಶಕ್ಕೆ ತುಂಬಲಾಗದ ನಷ್ಟ. ಇದೇ ರೀತಿಯಾಗಿ ಒಬ್ಬ ರೈತ. ಒಬ್ಬ ಕಾರ್ಮಿಕ ಅಥವಾ ಒಬ್ಬ ಅಧ್ಯಾಪಕ—ಯಾರೇ ಆಗಲಿ ಆರೋಗ್ಯವಿಲ್ಲದಿದ್ದಲ್ಲಿ ತನ್ನ ಕರ್ತವ್ಯಗಳನ್ನು ಸಮರ್ಥವಾಗಿ ನಿರ್ವಹಿಸಲಾರ. ಈ ರೀತಿಯಾಗಿ ಆರೋಗ್ಯ ನಾವು ಪರಿಗಣಿಸಬೇಕಾದ ಮುಖ್ಯ ತತ್ತ್ವ.

ವಿವಿಧ ರೋಗಗಳಿಗೆ ಗುರಿಯಾದ ಮನುಷ್ಯನನ್ನು ನಾವು ರೋಗಿಯೆಂದು ಕರೆಯುತ್ತೇವೆ. ಪ್ರಪಂಚದ ಬೇರೆಬೇರೆ ಸ್ಥಳಗಳಲ್ಲಿ ಆರೋಗ್ಯಮಾದರಿ ಹಾಗೂ ವಿವಿಧ ರೋಗಗಳ ಅಸ್ತಿತ್ವ ಒಂದೇ ರೀತಿಯಲ್ಲಿಲ್ಲದಿರುವುದು ಗಮನಕ್ಕೆ ಬಂದಿದೆ. ಒಂದು ರೀತಿಯ ಭೌಗೋಳಿಕ ಪರಿಸ್ಥಿತಿಯಿರುವ ಒಂದು

ಪ್ರದೇಶದಲ್ಲಿ ಕಂಡುಬರುವ ರೋಗರುಜಿನಗಳು ಬೇರೊಂದು ರೀತಿಯ ಭೌಗೋಳಿಕ ವಾತಾವರಣವಿರುವ ಪ್ರದೇಶದಲ್ಲಿ ಕಂಡುಬರಲಾರವು. ಹೀಗೆ ಭೌಗೋಳಿಕ ಪರಿಸ್ಥಿತಿಗಳನ್ನಾಧರಿಸಿ ರೋಗಗಳ ವಿತರಣೆಯ ಮಾದರಿ ಬದಲಾಗುತ್ತದೆ. ಭೌಗೋಳಿಕ ವಾತಾವರಣಕ್ಕೆ ಸಂಬಂಧಿಸಿದಂತೆ ರೋಗರುಜಿನಗಳ ಪ್ರಾದೇಶಿಕ ವಿತರಣೆಯನ್ನು ಅಭ್ಯಸಿಸುವಲ್ಲಿ ನಮಗೆ ವೈದ್ಯಕೀಯ ಭೂಗೋಳ ಸ್ಥಾಪಿತವಾಗುತ್ತದೆ.

ವೈದ್ಯಕೀಯ ಭೂಗೋಳದ ಪರಿಭಾಷೆಯನ್ನು ಈ ರೀತಿ ನೀಡಬಹುದು: "ವೈದ್ಯಕೀಯ ಭೂಗೋಳದಲ್ಲಿ ರೋಗಗಳ ಉತ್ಪತ್ತಿ ಮತ್ತು ಹರಡುವಿಕೆಗೆ ಯಥೋಚಿತವಾಗಿ ಸಂಬಂಧಿಸಿದಂತೆ ರೋಗಗಳ ಭೌಗೋಳಿಕ ವಿತರಣೆಯ ಬಗ್ಗೆ ಅಭ್ಯಸಿಸಲಾಗುತ್ತದೆ."* ಈ ಅಧ್ಯಯನದಲ್ಲಿ ಒಂದು ಸ್ಥಳದಲ್ಲಿ ರೋಗಗಳ ಪ್ರಾದೇಶಿಕ ವಿತರಣೆಯನ್ನು ಅಭ್ಯಸಿಸಿ, ರೋಗಗಳ ಉತ್ಪತ್ತಿ ಮತ್ತು ಹರಡುವಿಕೆಗೆ ಸಾಧ್ಯವಾಗುವಂತಹ ಪ್ರಸ್ತುತ ಭೌಗೋಳಿಕ ಹಾಗೂ ಸಾಮಾಜಿಕ ಸ್ಥಿತಿಗತಿಗಳೊಡನೆ ಅದಕ್ಕಿರುವ ಸಂಬಂಧವನ್ನು ಕುರಿತು ಪರಿಶೀಲಿಸಲಾಗುತ್ತದೆ.

ವೈದ್ಯಕೀಯ ಭೂಗೋಳದಲ್ಲಿ ಭೂಮಿ, ಮಣ್ಣು, ಹವಾಗುಣ, ಸಸ್ಯ ಹಾಗೂ ಪ್ರಾಣಿ ಸಂಪತ್ತು, ಸೂಕ್ಷ್ಮ ಅಣುಜೀವಿಗಳೇ ಮೊದಲಾದ ಭೌಗೋಳಿಕ ಅಂಶಗಳ ವಿತರಣೆ ಹಾಗೂ ಮನುಷ್ಯ ಜೀವನದ ಮೇಲೆ ಅವುಗಳ ಪ್ರಭಾವವನ್ನು ಕುರಿತು ಅಭ್ಯಾಸ ಮಾಡಲಾಗುತ್ತದೆ. ಒಂದಕ್ಕೊಂದು ಹೊಂದಿಕೊಂಡಂತೆ ಅಥವಾ ಏಕೈಕವಾಗಿ ಈ ಅಂಶಗಳ ಅಸ್ತಿತ್ವ, ಮನುಷ್ಯನ ಮನಸ್ಸು ಮತ್ತು ದೇಹಗಳ ಮೇಲೆ ಅವುಗಳ ಪ್ರತಿಕ್ರಿಯೆ—ಇವು ವೈದ್ಯಕೀಯ ಭೂಗೋಳ ಸಂಶೋಧನೆಯ ತಿರುಳಾಗಿದೆ.

ಧ್ಯೇಯ

ವೈದ್ಯಕೀಯ ಕ್ಷೇತ್ರದ ಸಂಶೋಧಕರಿಂದ ರೋಗಗಳ ಬಗ್ಗೆ ಬೇಕಾದಷ್ಟು ಅಧ್ಯಯನ ನಡೆದಿದ್ದರೂ, ಅವುಗಳ ಭೌಗೋಳಿಕ ವಿತರಣೆಯ ಬಗ್ಗೆ ತಿಳಿದುಬಂದಿರುವುದು ಅತ್ಯಲ್ಪ. ತಜ್ಞರು ರೋಗ ವಿತರಣೆಯ ಈ ಸಮಸ್ಯೆಯನ್ನು ವೈದ್ಯಕೀಯ ಪ್ರಯೋಗ ಸಂಶೋಧನೆಯಿಂದ ಅರಿಯಲೆತ್ನಿಸುತ್ತಾರೆ. ಕೇವಲ ರೋಗಶಾಮಕ ದೃಷ್ಟಿಕೋನದಿಂದ ಪರಿಗಣಿಸಿ, ರೋಗಿಯಾದ ವ್ಯಕ್ತಿಯನ್ನು ಔಷಧಿ ಹಾಗೂ ಚುಚ್ಚುಮದ್ದುಗಳ ಪ್ರಭಾವದಿಂದ ಗುಣಪಡಿಸುತ್ತಾರೆ. ಆದರೆ ವಿಶಿಷ್ಟ ರೋಗವೊಂದಕ್ಕೆ ಮನುಷ್ಯ ಈಡಾಗದಂತೆ ರೋಗವನ್ನು ತಡೆಗಟ್ಟಬೇಕಾಗಿದೆಯೆಂಬುದೂ ಯೋಚಿಸಬೇಕಾದ ವಿಷಯ. ಮನುಷ್ಯ ಬಾಯಿಲೆಯಿಂದ ನರಳಬೇಕಾದುದು ಏಕೆ ಹಾಗೂ ಸಾರ್ವಜನಿಕ ಆರೋಗ್ಯ ತಜ್ಞರು ಮತ್ತು ವೈದ್ಯಕೀಯ ಭೂಗೋಳ ತಜ್ಞರಿಂದ ಇನ್ನೂ ಅನ್ವೇಷಿಸಲಾಗುತ್ತಿರುವ ಈ ರೋಗಗಳ ಪುನರಾವರ್ತನೆಯನ್ನು ಯಶಸ್ವಿಯಾಗಿ ತಡೆಗಟ್ಟುವುದಾದರೂ ಹೇಗೆ ಎಂಬುದರ ಬಗ್ಗೆ ಆಲೋಚಿಸಬೇಕಾಗಿದೆ.

ವೈದ್ಯಕೀಯ ಭೂಗೋಳದ ಉದ್ದೇಶ ಕಾರಣಾತ್ಮಕ ಸಂಬಂಧಗಳನ್ನು ಕುರಿತು ಅಭ್ಯಸಿಸುವುದಲ್ಲ. ಇಲ್ಲಿ ಈ ರೀತಿಯ ಸಂಬಂಧಗಳ ಕಾರಣಾಂಶಗಳನ್ನು ಕಂಡುಹಿಡಿದು, ಮನುಷ್ಯನ ಶರೀರ ವಿಜ್ಞಾನಕ್ಕೂ ಅವನು ವಾಸಿಸುತ್ತಿರುವ ವಾತಾವರಣಕ್ಕೂ ಇರುವ ಸಂಬಂಧವನ್ನು ಕುರಿತು ವಿವರಣೆ ನೀಡಲಾಗುತ್ತದೆ. ಮನುಷ್ಯ ಸ್ವಾಸ್ಥ್ಯಪೂರ್ಣನಾಗಿ ಜೀವಿಸಬಹುದಾದ ಆದರ್ಶ ವಾತಾವರಣದ ಬಗ್ಗೆ ವೈದ್ಯಕೀಯ ಭೂಗೋಳದಲ್ಲಿ ವಿವೇಚಿಸಲಾಗುತ್ತದೆ.

ವೈದ್ಯಕೀಯ ಭೂಗೋಳದ ಅಧ್ಯಯನದ ಆವಶ್ಯಕತೆ

ಇನ್ನೂ ಗುರುತಿಸಲಾಗದ ರೋಗಗಳಿಂದ ಸಾವಿರಾರು ಜನ ನರಳುತ್ತಿರುವ ಭಾರತದಂಥ ದೇಶದಲ್ಲಿ ಈ ರೀತಿಯ ಅಧ್ಯಯನ ಅತ್ಯಂತ ಅವಶ್ಯಕ. ಪ್ರಸ್ತುತ ಭೌಗೋಳಿಕ ಪರಿಸ್ಥಿತಿ, ರೋಗಗಳ ಪ್ರಾದೇಶಿಕ ವಿತರಣೆಯ ಮೇಲೆ ಅವುಗಳ ಪ್ರಭಾವ—ಇವುಗಳನ್ನು ಗಮನದಲ್ಲಿಟ್ಟು ಈ ರೀತಿಯ ಅಧ್ಯಯನ ಮಾಡಿದಲ್ಲಿ, ಶ್ರೀಸಾಮಾನ್ಯ ತನ್ನ ಸುತ್ತಮುತ್ತಲ ಪರಿಸ್ಥಿತಿ ಹಾಗೂ ವಾತಾವರಣದ ಬಗ್ಗೆ ಜಾಗರೂಕನಾಗುತ್ತಾನೆ. ಎದುರಾಗುತ್ತಿರುವ ಸಮಸ್ಯೆಗಳ ಬಗ್ಗೆ ಉತ್ತಮವಾಗಿ ವಿವೇಚಿಸಿ, ಅವನ್ನು ಬಗೆಹರಿಸಲು

---

*Encyclopaedia Britannica, vol. 10, 1968; page 159

ಕ್ರಮ ಕೈಗೊಳ್ಳಲು ಅವನು ಸಮರ್ಥನಾಗುತ್ತಾನೆ. ಪ್ರತಿಯೊಬ್ಬ ವ್ಯಕ್ತಿಯೂ ಈ ರೀತಿಯ ಪ್ರಯತ್ನ ಮಾಡಿದ್ದೇ ಆದಲ್ಲಿ ಕ್ಲೇಶದಾಯಕವಾದ ಅನೇಕ ರೋಗಗಳ ನಿರ್ಮೂಲದ ದಿಶೆಯಲ್ಲಿ ಮುನ್ನಡೆದ ಹಾಗಾಗುತ್ತದೆ. ಇದರ ಫಲವಾಗಿ ದೇಶಾದ್ಯಂತ ಇನ್ನೂ ಉತ್ತಮವಾದ ಆರೋಗ್ಯಸ್ಥಿತಿಯನ್ನು ರೂಪಿಸಿದ ಹಾಗಾಗುತ್ತದೆ.

ಇದೇ ಅಲ್ಲದೆ, ಈ ಅಧ್ಯಯನದಿಂದ ಸರ್ಕಾರಕ್ಕೆ ದೇಶದ ಪ್ರಸ್ತುತ ಸ್ವಾಸ್ಥ್ಯಪರಿಸ್ಥಿತಿಯ ಮತ್ತು ವಿಭಿನ್ನ ಪ್ರದೇಶಗಳಲ್ಲಿರುವ ವೈದ್ಯಕೀಯ ಸೌಲಭ್ಯಗಳ ಬಗ್ಗೆ ಯಥಾವತ್ತಾದ ಚಿತ್ರ ದೊರೆಯುತ್ತದೆ. ಸಾಂಕ್ರಾಮಿಕ ರೋಗಶಾಸ್ತ್ರದ ಬಗ್ಗೆ ಕ್ಲುಪ್ತಸಿದ್ಧವಾದ ಯೋಜನೆ ದೊರಕುವುದಲ್ಲದೆ, ಈ ಯೋಜನೆಯನ್ನು ಸಫಲಗೊಳಿಸಲು ಸಂಬಂಧಿಸಿದ ಅಧಿಕಾರಿಗಳಿಗೆ ಹೆಚ್ಚಿನ ತಿಳಿವಳಿಕೆ ದೊರೆಯುತ್ತದೆ.

ಉದ್ದೇಶ ಹಾಗೂ ವ್ಯಾಪ್ತಿ

ರೋಗಗಳ ಬಗೆಗೆ ಈ ವರೆಗೆ ನಡೆದಿರುವ ಎಲ್ಲ ಅಧ್ಯಯನಗಳಲ್ಲೂ ಒಂದು ದೋಷವಿದೆ. ಅದರಲ್ಲಿ ಮರಣದ ದರದ ದತ್ತಾಂಶಗಳಿಗೆ ಅಧಿಕ ಮಹತ್ವ ನೀಡಲಾಗಿದೆಯೆಂಬುದು ತಿಳಿದುಬರುತ್ತದೆ. ವಿವಿಧ ರೋಗಗಳಿಗೆ ಬಲಿಯಾಗಿ ಮರಣಕ್ಕೆ ತುತ್ತಾಗುತ್ತಿರುವ ಜನರ ಸಂಖ್ಯೆಯನ್ನು ಲೆಕ್ಕಹಾಕಿ, ಅದರಿಂದ ನಿರ್ಣಯಗಳನ್ನು ಮಾಡಲಾಗುತ್ತಿದೆ. ಹೀಗಾದಲ್ಲಿ, ಇನ್ನೂ ಬದುಕಿದ್ದು ರೋಗಗಳಿಂದ ನರಳುತ್ತಿರುವ ಜನತೆಯ ಪಾಡೇನು? ವೈದ್ಯಕೀಯ ಭೂಗೋಳದಲ್ಲಿ ರೋಗವ್ಯಾಪನೆಯ ದತ್ತಾಂಶವನ್ನು, ಅಂದರೆ ಬೇರೆ ಬೇರೆ ಪ್ರದೇಶಗಳಲ್ಲಿ ವಿಭಿನ್ನ ರೋಗಗಳಿಂದ ನರಳುತ್ತಿರುವ ಜನರ ಸಂಖ್ಯೆಯನ್ನು ಕಂಡುಹಿಡಿದು ಜನಜೀವನಕ್ಕೆ ಅಗತ್ಯವೆನಿಸಿದ ಅತ್ಯುತ್ತಮ ಆರೋಗ್ಯ ಪರಿಸ್ಥಿತಿಯನ್ನು ಕುರಿತು ವಿವೇಚಿಸಲಾಗುತ್ತದೆ.

ಎರಡನೆಯದಾಗಿ, ಮಾನವ ಸ್ವಾಸ್ಥ್ಯವನ್ನು ಕುರಿತು ಸಾಪೇಕ್ಷವಾಗಿ ಅಧ್ಯಯನ ಮಾಡಲಾಗುತ್ತದೆ. ಜನತೆಯ ಸಾಮಾನ್ಯ ಆರೋಗ್ಯ ಹಾಗೂ ಸ್ವಾಸ್ಥ್ಯಯುತ ಜೀವನದ ಅಗತ್ಯಗಳ ಬಗ್ಗೆ ಅಭ್ಯಸಿಸಲಾಗುತ್ತದೆ. ಮೂರನೆಯದಾಗಿ, ಭೂಪಟರೇಖೀಯ ನಿರೂಪಣೆಗೆ ಅತ್ಯಧಿಕ ಮಹತ್ವ ನೀಡಲಾಗಿದೆ. ಭೂಪಟಗಳು ಭೂವಿವರಣೆಯ ಅತ್ಯಗತ್ಯ ಸಾಧನಗಳು. ವೈದ್ಯಕೀಯ ಭೂಗೋಳದ ಅಧ್ಯಯನದಲ್ಲಿ ಅವು ಬಹಳ ಮಹತ್ವಪೂರ್ಣವಾಗಿವೆ. ರೋಗಗಳ ಪ್ರಾದೇಶಿಕ ವಿತರಣೆ ಭೂಪಟಗಳಿಂದ ಸ್ಪಷ್ಟವಾಗಿ ದೃಷ್ಟಿಗತವಾಗುತ್ತದೆ. ಭೌಗೋಳಿಕ ಕಾರಕಾಂಶಗಳೊಡನೆ ಇವುಗಳಿಗಿರುವ ಸಂಬಂಧವನ್ನು ಕಂಡುಹಿಡಿಯುವುದು ಸುಲಭವಾಗುತ್ತದೆ.

ವೈದ್ಯಕೀಯ ಭೂಗೋಳ ಅನೇಕ ಅಧ್ಯಯನಗಳಿಂದ ವಿಷಯ ಸಂಗ್ರಹಿಸುತ್ತದೆ. ಮೂಲಆಕರಗಳೆಂದರೆ ವೈದ್ಯಶಾಸ್ತ್ರ ಮತ್ತು ಭೂಗೋಳ. ವೈದ್ಯಶಾಸ್ತ್ರದಲ್ಲಿ ಸಾಂಕ್ರಾಮಿಕ ರೋಗಶಾಸ್ತ್ರ, ಸಾರ್ವಜನಿಕ ಆರೋಗ್ಯ ಮತ್ತು ರೋಗವಿಜ್ಞಾನಗಳ ಬಗ್ಗೆ ವಿವೇಚಿಸಲಾಗುತ್ತದೆ. ಭೂಗೋಳಶಾಸ್ತ್ರದಲ್ಲಿ, ವಿವಿಧ ಭೌಗೋಳಿಕ ಪ್ರದೇಶಗಳಲ್ಲಿ ರೋಗಗಳ ವಿತರಣೆ ಹಾಗೂ ಈ ವಿತರಣೆಗೆ ಅಂಶಿಕ ಕಾರಕಾಂಶಗಳಾಗಿರುವ ಭೌಗೋಳಿಕ ಅಂಶಗಳನ್ನು ಪರಿಶೀಲಿಸಲಾಗುತ್ತದೆ.

ಮಾನವ ಜೀವನ ಪರಿಸ್ಥಿತಿಗಳ ವಿಶಿಷ್ಟ ಅಂಶಗಳು, ಆರೋಗ್ಯದ ಮೇಲೆ ಅವುಗಳ ಪರಿಣಾಮ—ಇವುಗಳನ್ನು ಕುರಿತು ಇತರ ಅಧ್ಯಯನಗಳೂ ಅಮೂಲ್ಯ ವಿಷಯಸಂಪತ್ತನ್ನು ಒದಗಿಸುತ್ತವೆ. ಮಾನವ ವಿಜ್ಞಾನ, ಸಾಂಸ್ಕೃತಿಕ ಹೊಂದಾಣಿಕೆಯ ವಿವಿಧ ಸ್ತರಗಳು, ವಸತಿ, ಉಡುಪು, ಆಹಾರ, ರುಚಿ ಮೊದಲಾದ ಮಾನವ ಸಮಾಜದ ವಿವಿಧ ಮುಖಗಳನ್ನು ಕುರಿತ ಮಾಹಿತಿಗಳನ್ನೊದಗಿಸುತ್ತದೆ.

ಪೋಷಣಾ ವಿಜ್ಞಾನ ಕ್ಷೇತ್ರದಲ್ಲಿ ವಿವಿಧ ಆಹಾರ ಸೇವನೆಯ ಅಭ್ಯಾಸಗಳು ಹಾಗೂ ವಿವಿಧ ಪ್ರದೇಶಗಳಲ್ಲಿ ಕಂಡುಬರುವ ಪೋಷಕಾಂಶಗಳ ಕೊರತೆಯನ್ನು ಕುರಿತು ವಿವೇಚಿಸಲಾಗುತ್ತದೆ. ಹವಾವಿಜ್ಞಾನದಿಂದ ಉಷ್ಣ, ತೇವ, ಗಾಳಿ, ರಶ್ಮಿಪ್ರಸರಣವೇ ಮೊದಲಾದ ಅಂಶಗಳು ಮಾನವನ ಆರೋಗ್ಯ ಹಾಗೂ ರೋಗಗಳ ಮೇಲೆ ಯಾವ ರೀತಿಯ ಪರಿಣಾಮ ಬೀರುತ್ತವೆಂದು ಅರಿಯಲಾಗುತ್ತದೆ. ಭೂವಿಜ್ಞಾನ ಹಾಗೂ ರಸಾಯನಶಾಸ್ತ್ರದ ಕೆಲವು ಅಂಶಗಳು ಮಣ್ಣು ಮತ್ತು ನೀರಿನಲ್ಲಿರುವ ಧಾತುಗಳ

ಪ್ರಭಾವ ಮನುಷ್ಯನ ಆರೋಗ್ಯ ಮತ್ತು ಒಳಿತಿನ ಮೇಲೆ ಯಾವ ರೀತಿ ಬೀಳುತ್ತದೆ ಎಂಬುದನ್ನು ಕುರಿತು ವಿವೇಚಿಸುತ್ತದೆ.

ಇತ್ತೀಚಿನ ವರ್ಷಗಳಲ್ಲಿ ತೀವ್ರವಾಗಿ ಮುಂದುವರಿಯುತ್ತಿರುವ ಹೊಸ ಅಧ್ಯಯನಗಳಲ್ಲಿ ವೈದ್ಯಕೀಯ ಭೂಗೋಳವೂ ಒಂದು. ಅದರ ಮಹತ್ತ್ವ ಹಾಗೂ ತ್ವರಿತ ಅಧ್ಯಯನದ ಆವಶ್ಯಕತೆ ಪ್ರಪಂಚದ ಬಹಳಷ್ಟು ದೇಶಗಳ ಅನುಭವಕ್ಕೆ ಬಂದಿದೆ. ಸೋವಿಯತ್ ದೇಶ ಮತ್ತು ಇಂಗ್ಲೆಂಡ್ ಈ ಕ್ಷೇತ್ರದಲ್ಲಿ ವಿಪುಲ ಸಂಶೋಧನೆಗಳನ್ನು ನಡೆಸಿವೆ. ಭಾರತ ಈ ಕ್ಷೇತ್ರದಲ್ಲಿ ಇನ್ನೂ ಅಂಬೆಗಾಲಿಡುತ್ತಲಿದೆಯಷ್ಟೆ. ಈ ದಿಶೆಯಲ್ಲಿ ಇನ್ನೂ ಅಧ್ಯಯನ ಮಾಡುವ ಆವಶ್ಯಕತೆ ಬಹಳವಾಗಿದೆ.

(ಅನುವಾದ: ಎಸ್. ಲಕ್ಷ್ಮೀನಾರಾಯಣ ‘ಅರೋರಾ’)

ಎನ್. ಪ್ರಭುಸ್ವಾಮಿ

ಏಷ್ಯದ ವ್ಯವಸಾಯಾಭಿವೃದ್ಧಿಗೆ ಅಂತರರಾಷ್ಟ್ರೀಯ ಅಕ್ಕಿ ಸಂಶೋಧನ ಸಂಸ್ಥೆಯ ಕೊಡುಗೆ

ಏಷ್ಯದ ರಾಷ್ಟ್ರಗಳಲ್ಲಿ ವಾಸಿಸುವ ಬಹುಪಾಲು ಜನ ಅಕ್ಕಿಯನ್ನು ತಮ್ಮ ಆಹಾರದ ಮುಖ್ಯ ಅಂಶವಾಗಿ ಉಪಯೋಗಿಸುತ್ತಾರೆ. ಆದರೆ ಅನೇಕ ರಾಷ್ಟ್ರಗಳು ಬತ್ತದ ಬೆಳೆಯಲ್ಲಿ ಸ್ವಯಂಪೂರ್ಣತೆಯನ್ನು ಸಾಧಿಸಿಕೊಂಡಿಲ್ಲ. ಎರಡನೆಯ ಮಹಾಯುದ್ಧವಾದ ಮೇಲೆ ವಿಜ್ಞಾನದ ಬೆಳವಣಿಗೆಯ ಪರಿಣಾಮವಾಗಿ ಏಷ್ಯದ ಅನೇಕ ರಾಷ್ಟ್ರಗಳಲ್ಲಿ ತಾಂಡವವಾಡುತ್ತಿದ್ದ ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಲಾಯಿತು. ಇದರ ಪರಿಣಾಮವಾಗಿ ಏಷ್ಯದ ರಾಷ್ಟ್ರಗಳಲ್ಲಿ ಮರಣದ ವಾರ್ಷಿಕ ಸಂಖ್ಯೆ ಇಳಿಮುಖವಾಗುತ್ತ ಬಂದಿದೆ. ಮರಣ ಸಂಖ್ಯೆ ಇಳಿಮುಖವಾಗುವುದರ ಜೊತೆಗೆ ಅನೇಕ ರಾಷ್ಟ್ರಗಳಲ್ಲಿ ಪ್ರಜಾಸಂಖ್ಯೆಯೂ ಒಂದೇ ಸಮನೆ ಏರುತ್ತಿದೆ. ಇದರ ಪರಿಣಾಮವಾಗಿ ಮುಖ್ಯ ಆಹಾರಧಾನ್ಯವಾದ ಅಕ್ಕಿಗೆ ಬೇಡಿಕೆ ಹೆಚ್ಚುತ್ತಲೇ ಇದೆ. ಏಷ್ಯದಲ್ಲಿ ಪ್ರಮುಖವಾಗಿ ಬತ್ತ ಬೆಳೆಯುವ ರಾಷ್ಟ್ರಗಳು ಕೂಡ ತಮ್ಮ ಬತ್ತದ ಬೆಳೆಯನ್ನು ಹೆಚ್ಚಿಸಿಕೊಂಡು ಅಕ್ಕಿಗೆ ಒದಗಿರುವ ಹೆಚ್ಚಿನ ಬೇಡಿಕೆಯನ್ನು ಪೂರೈಸಲಾಗಲಿಲ್ಲ. ಬತ್ತ ಬೆಳೆಯುವ ಪ್ರಮುಖ ರಾಷ್ಟ್ರಗಳಲ್ಲಿ ನೀರಾವರಿ ಸೌಕರ್ಯ, ಉತ್ತಮ ಕೃಷಿ ವಿಧಾನಗಳು ಮತ್ತು ಇತರ ಸೌಕರ್ಯಗಳನ್ನು ವ್ಯವಸಾಯ ಕ್ಷೇತ್ರದಲ್ಲಿ ಕ್ರಮೇಣ ಜಾರಿಗೆ ತರುತ್ತಿದ್ದರೂ ಏರುತ್ತಿರುವ ಅಕ್ಕಿಯ ಬೇಡಿಕೆಗೆ ಅನುಗುಣವಾಗಿ ಬತ್ತದ ಬೆಳೆ ಏರಲಿಲ್ಲ. ಆದುದರಿಂದ ಅಧಿಕ ಇಳುವರಿ ಕೊಡುವ ಬತ್ತದ ತಳಿಗಳನ್ನು ಕಂಡುಹಿಡಿದರೆ ಮಾತ್ರ ಅಕ್ಕಿಯ ಕೊರತೆಯನ್ನು ಪೂರೈಸಬಹುದೆಂಬ ಭಾವನೆ ಅನೇಕ ವಿಜ್ಞಾನಿಗಳಲ್ಲಿ ತಲೆದೋರಿತು. ಅಧಿಕ ಇಳುವರಿ ಕೊಡುವ ಬತ್ತದ ತಳಿಗಳನ್ನು ಅಭಿವೃದ್ಧಿಪಡಿಸುವುದಕ್ಕಾಗಿ ಸಂಶೋಧನೆ ನಡೆಸಬೇಕೆಂಬ ತೀರ್ಮಾನವನ್ನು ಪ್ರಮುಖ ವಿಜ್ಞಾನಿಗಳು ಕೈಗೊಂಡರು. ವಿಜ್ಞಾನಿಗಳಿಗೆ ಈ ದಿಶೆಯಲ್ಲಿ ಪ್ರೋತ್ಸಾಹ ನೀಡಲು ಫೋರ್ಡ್ ಮತ್ತು ರಾಕ್‌ಫೆಲ್ಲರ್ ಪ್ರತಿಷ್ಠಾನದವರು ನಿರ್ಧರಿಸಿದರು.

ಆಗಸ್ಟ್ 18, 1958ರಂದು ಫೋರ್ಡ್ ಮತ್ತು ರಾಕ್‌ಫೆಲರ್ ಪ್ರತಿಷ್ಠಾನದ ಪ್ರತಿನಿಧಿಗಳು ಒಟ್ಟಾಗಿ ಸೇರಿ ಸಮಾಲೋಚಿಸಿ ಏಷ್ಯದಲ್ಲಿ ಒಂದು ಅಕ್ಕಿ ಸಂಶೋಧನ ಸಂಸ್ಥೆಯನ್ನು ಸ್ಥಾಪಿಸಬೇಕೆಂಬ ನಿರ್ಧಾರಕ್ಕೆ ಬಂದರು. ಅದರ ಫಲವಾಗಿ ಎರಡು ಪ್ರತಿಷ್ಠಾನಗಳೂ ಸಹಕರಿಸಿ ಅಂತರರಾಷ್ಟ್ರೀಯ ಅಕ್ಕಿ ಸಂಶೋಧನ ಸಂಸ್ಥೆಯನ್ನು (ಇಂಟರ್‌ನ್ಯಾಷನಲ್ ರೈಸ್ ರೀಸರ್ಚ್ ಇನ್‌ಸ್ಟಿಟ್ಯೂಟ್) ಸ್ಥಾಪಿಸಲು ಕಾರ್ಯಕ್ರಮ ಕೈಗೊಂಡುವು. ಫೆಬ್ರುವರಿ 1962ರಲ್ಲಿ ಫಿಲಿಪೀನ್ಸ್ ದೇಶದ ರಾಜಧಾನಿ ಮನಿಲಾದಲ್ಲಿ ಸಂಸ್ಥೆ ಕಾರ್ಯಾರಂಭ ಮಾಡಿತು. ಏಷ್ಯದಲ್ಲಿ ಎಷ್ಟರ ಮಟ್ಟಿಗೆ ಬತ್ತದ ಬೆಳೆಯನ್ನು ಪ್ರೋತ್ಸಾಹಿಸುವುದರಲ್ಲಿ ಮತ್ತು ಅಧಿಕ ಇಳುವರಿ ಒದಗಿಸುವ ಬತ್ತದ ತಳಿಗಳನ್ನು ಅಭಿವೃದ್ಧಿಪಡಿಸುವುದರಲ್ಲಿ ಈ ಸಂಸ್ಥೆ ಜಯಪ್ರದವಾಗಿದೆ ಎಂಬುದು ಈ ಲೇಖನದ ವಿಷಯ.

ಸಂಸ್ಥೆಯ ಚಟುವಟಿಕೆಗಳು

ಈ ಸಂಸ್ಥೆಯ ಚಟುವಟಿಕೆಗಳನ್ನು ಮೂರು ಗುಂಪಾಗಿ ವಿಂಗಡಿಸಬಹುದು: 1 ಸಂಶೋಧನೆ. 2 ತರಬೇತು ಮತ್ತು 3 ಅಂತರರಾಷ್ಟ್ರೀಯ ಮಟ್ಟದಲ್ಲಿ ವಿಸ್ತರಣೆ ಯೋಜನೆ.

ಸಂಶೋಧನೆ

ಸಂಸ್ಥೆಯು ಸಂಶೋಧನ ಕಾರ್ಯಗಳನ್ನು ವರ್ಗೀಕರಿಸಿ, ಪ್ರತಿಯೊಂದು ವರ್ಗಕ್ಕೂ ಕೆಲವು ಹಿರಿಯ ಸಂಶೋಧನಾಧಿಕಾರಿಗಳನ್ನು ನೇಮಿಸಲಾಗಿದೆ. ಸಂಸ್ಥೆಯ ನಿರ್ದೇಶಕ ಮಂಡಲಿಯವರು ಸಂಶೋಧನಾಧಿಕಾರಿಗಳನ್ನು ನೇಮಿಸುತ್ತಾರೆ. ಒಟ್ಟು ಅಧಿಕಾರಿಗಳ ಪ್ರತಿ ಮೂರರಲ್ಲಿ ಎರಡು ಭಾಗದ ಅಧಿಕಾರಿಗಳು ಬೇರೆ ರಾಷ್ಟ್ರಗಳಿಗೆ ಸೇರಿದವರು. ಮೂರರಲ್ಲಿ ಒಂದು ಭಾಗ ಅಧಿಕಾರಿಗಳು ಅಮೆರಿಕ ಸಂಯುಕ್ತಸಂಸ್ಥಾನಕ್ಕೆ ಸೇರಿದವರು. ಇವರಲ್ಲಿ ಬಹುಪಾಲು ಅಧಿಕಾರಿಗಳು ಅಮೆರಿಕನ್ ವಿಶ್ವವಿದ್ಯಾನಿಲಯಗಳಲ್ಲಿ ಸ್ನಾತಕೋತ್ತರ ಪದವಿಗಳನ್ನು ಪಡೆದಿದ್ದಾರೆ.

ಪ್ರತಿಯೊಂದು ವರ್ಗಕ್ಕೆ ಸೇರಿದ ಅಧಿಕಾರಿಗಳೂ ತಮ್ಮ ಸಂಶೋಧನ ಚಟುವಟಿಕೆಗಳಿಗೆ ಜವಾಬ್ದಾರರು. ತಮಗೆ ಬೇಕಾದ ಸಹಾಯಕ ಅಧಿಕಾರಿಗಳನ್ನು ನೇಮಿಸಿಕೊಳ್ಳುವ ಸ್ವಾತಂತ್ರ್ಯ ಅವರಿಗಿದೆ. ಸಂಶೋಧನೆಯಲ್ಲಿ ನೆರವಾಗುವ ಇತರ ವಿಜ್ಞಾನಿಗಳನ್ನು, ವಿದ್ಯಾರ್ಥಿಗಳನ್ನು ಮತ್ತು ವ್ಯವಸಾಯ ಸಹಾಯದ ಕ್ಷೇತ್ರದಲ್ಲಿ ಬೇಕಾದ ಅಧಿಕಾರಿಗಳನ್ನು ನೇಮಿಸಿಕೊಳ್ಳಲು ಹಿರಿಯ ಸಂಶೋಧನಾಧಿಕಾರಿಗಳಿಗೆ ಸ್ವಾತಂತ್ರ್ಯವಿದೆ. 1968ರ ಕೊನೆಯ ವೇಳೆಗೆ ಪಟ್ಟಿ 1ರಲ್ಲಿ[1] ಕಾಣಿಸಿರುವಂತೆ ವಿವಿಧ ವರ್ಗಗಳಲ್ಲಿ ಸಂಶೋಧನೆ ನಡೆಸುತ್ತಿದ್ದ ಹಿರಿಯ ಸಂಶೋಧನಾಧಿಕಾರಿಗಳಿದ್ದರು.

ಪಟ್ಟಿ 1

ವಿವಿಧ ವರ್ಗಗಳು	ಅಧಿಕಾರಿಗಳ ಸಂಖ್ಯೆ					
	1963	1964	1965	1966	1967	1968
1 ಉಪಜಾತಿಯ ಬತ್ತದ ತಳಿಗಳ ಅಭಿವೃದ್ಧಿ	3	3	3	3	3	3
2 ಸಸ್ಯಶರೀರ ವಿಜ್ಞಾನ	2	2	2	2	2	2
3 ಕೃಷಿವಿದ್ಯೆ ಮತ್ತು ಭೂಮಿಯ ಗುಣ	3	–	–	–	–	–
(ಅ) ಕೃಷಿವಿದ್ಯೆ		3	3	3	3	2
(ಆ) ಭೂರಸಾಯನಶಾಸ್ತ್ರ		2	1	1	1	1
(ಇ) ಅಣುಜೀವಿಶಾಸ್ತ್ರ (ಮೈಕ್ರೋ ಬಯಾಲಜಿ)			1	1	1	1
4 ಸಸ್ಯಸಂರಕ್ಷಣೆ	2	2	–	–	–	–
(ಅ) ಸಸ್ಯರೋಗಶಾಸ್ತ್ರ			1	2	2	2
(ಆ) ಕೀಟವಿಜ್ಞಾನ			1	1	1	1
5 ಧಾನ್ಯಗಳ ರಸಾಯನ ವಿಜ್ಞಾನ	2	2	2	2	1	1
6 ಕೃಷಿ ಯಂತ್ರಶಿಲ್ಪ (ಅಗ್ರಿಕಲ್ಚರಲ್ ಎಂಜಿನಿಯರಿಂಗ್)	1	1	1	1	1	1
7 ಕೃಷಿ ಅರ್ಥವಿಜ್ಞಾನ	1	1	1	1	1	1
8 ಸಂಖ್ಯಾಶಾಸ್ತ್ರ	1	1	1	1	1	1
ಒಟ್ಟು	15	17	17	18	17	16

1 ವ್ಯವಸಾಯ ಶಾಸ್ತ್ರಕ್ಕೆ ಸಂಬಂಧಪಟ್ಟ ವಿಚಾರಗೋಷ್ಠಿಯ ಪ್ರಬಂಧಗಳು; ಪು. 229; (ವಿಶ್ವದ ಅಭಿವೃದ್ಧಿ ಬ್ಯಾಂಕಿನ ಪ್ರಕಟಣೆ. 1969)

ಪ್ರತಿ ವರ್ಗದ ಸಂಶೋಧನೆಗೂ ಅನುಕೂಲವಾಗುವಂತೆ ಪ್ರಾಯೋಗಿಕ ಜಮೀನು, ಗ್ರಂಥಾಲಯ ಮತ್ತು ಪ್ರಸಾರಾಂಗಗಳನ್ನು ಒದಗಿಸಲಾಗಿದೆ. ಸಂದರ್ಶಕ ವಿಜ್ಞಾನಿಗಳು ಪ್ರಪಂಚದ ವಿವಿಧ ಭಾಗಗಳಿಂದ ಈ ಸಂಸ್ಥೆಗೆ ಬಂದು ಸಂಶೋಧನೆಯಲ್ಲಿ ಭಾಗವಹಿಸಲು ಏರ್ಪಾಡು ಮಾಡಲಾಗಿದೆ.

ಸಂಶೋಧನೆಯಲ್ಲಿ ಸಾಧಿಸಿದ ಪ್ರಗತಿಯನ್ನು ಜನರಿಗೆ ತಿಳಿಯಪಡಿಸಲು ವಾರ್ಷಿಕ ವರದಿ ತಯಾರಿಸಿ ಪ್ರಕಟಿಸಲಾಗುತ್ತದೆ. ಆಗಿಂದಾಗ್ಗೆ ಪ್ರಪಂಚದ ಪ್ರಮುಖ ವಿಜ್ಞಾನಿಗಳನ್ನು ಆಹ್ವಾನಿಸಿ ವಿಚಾರಗೋಷ್ಠಿಯಲ್ಲಿ ಭಾಗವಹಿಸುವಂತೆ ಮಾಡಲಾಗುತ್ತದೆ. ಸಂಶೋಧನೆಯನ್ನು ನಡೆಸುವಾಗ ಅನುಸರಿಸುವ ಮಾರ್ಗಗಳ ವಿಷಯದಲ್ಲಿ ಸಂಶೋಧನಾಧಿಕಾರಿಗಳಿಗೆ ಸಂಪೂರ್ಣ ಸ್ವಾತಂತ್ರ್ಯವಿದೆ. ಸಂಶೋಧನೆಯ ಫಲಿತಾಂಶಗಳಿಗೆ ಅವರೇ ಸಂಪೂರ್ಣ ಜವಾಬ್ದಾರರು.

ತರಬೇತು

ಸಂಶೋಧನೆಯ ಪರಿಣಾಮವಾಗಿ ಪಡೆದ ಜ್ಞಾನವನ್ನು ರೈತರಿಗೆ ತಿಳಿಯಪಡಿಸುವುದಕ್ಕೋಸ್ಕರ ಎರಡು ರೀತಿಯ ತರಬೇತು ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ. ಸಂಶೋಧನೆಯಲ್ಲಿ ನೇರವಾಗಿ ಭಾಗವಹಿಸುವಂತೆ ಕೆಲವು ಅಭ್ಯರ್ಥಿಗಳನ್ನು ಆರಿಸಿಕೊಳ್ಳಲಾಗುತ್ತದೆ. ಅಮೆರಿಕದ ವಿಶ್ವವಿದ್ಯಾನಿಲಯಗಳಲ್ಲಿ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ತರಬೇತು ಕೊಡುವಂತೆ ಈ ಅಭ್ಯರ್ಥಿಗಳಿಗೆ ಈ ಸಂಸ್ಥೆಯಲ್ಲಿ ತರಬೇತು ಕೊಡಲಾಗುತ್ತದೆ. ಅದರ ಪರಿಣಾಮವಾಗಿ ಸಂಸ್ಥೆಯಿಂದ (ತರಬೇತು ಪಡೆದ ಮೇಲೆ) ಹೊರಬರುವ ಅಭ್ಯರ್ಥಿಗಳು ತಾವೇ ಸಂಶೋಧನೆ ನಡೆಸುವ ಶಕ್ತಿ ಪಡೆದಿರುತ್ತಾರೆ. ಗ್ರಾಮಾಂತರ ಪ್ರದೇಶಗಳಿಗೆ ಹೋಗಿ ರೈತರಿಗೆ ಸಲಹೆ ಕೊಡುವ ಶಕ್ತಿ ಪಡೆದಿರುತ್ತಾರೆ. ಇದು ಮೊದಲನೆಯ ರೀತಿಯ ತರಬೇತು ಕ್ರಮ.

ಎರಡನೆಯ ರೀತಿಯ ತರಬೇತು ಕ್ರಮ ಸ್ವತಃ ವ್ಯವಸಾಯಗಾರರಿಗೆ ಅನ್ವಯಿಸುತ್ತದೆ. 6 ತಿಂಗಳ ಕಾಲ ವ್ಯವಸಾಯಗಾರರಿಗೆ ಬತ್ತದ ಬೆಳೆಯ ಎಲ್ಲ ವಿಧಾನಗಳಲ್ಲೂ ತರಬೇತು ಕೊಡಲಾಗುತ್ತದೆ. ಬಿತ್ತನೆಯಿಂದ ಪ್ರಾರಂಭಿಸಿ ಬತ್ತ ಕುಯಿಲು ಮಾಡಿ ಶೇಖರಿಸುವ ವರೆಗೆ ವ್ಯವಸಾಯಗಾರರು ಮಾಡಬೇಕಾದ ಎಲ್ಲ ಕಾರ್ಯಗಳ ವಿಷಯದಲ್ಲಿ ತರಬೇತು ಕೊಡಲಾಗುತ್ತದೆ. ವ್ಯವಸಾಯ ಇಲಾಖೆಯ ಅಧಿಕಾರಿಗಳಿಗೂ ಇಂತಹ ತರಬೇತನ್ನು ಕೊಡಲಾಗುತ್ತದೆ. ಇಂಥ ತರಬೇತು ಈಗ ದೊಡ್ಡ ಪ್ರಮಾಣದಲ್ಲಿ ಬೆಳೆಯುತ್ತಿದೆ. 1968ರ ವರೆಗೆ ಏಷ್ಯದ ವಿವಿಧ ರಾಷ್ಟ್ರಗಳ ಪ್ರತಿನಿಧಿಗಳು ಪಡೆದ ತರಬೇತಿನ ವಿವರಗಳನ್ನು ಪಟ್ಟಿ 2 ರಲ್ಲಿ 2 ಕೊಟ್ಟಿದೆ.

ವಿಸ್ತರಣ ಯೋಜನೆ

ಮೇಲ್ಕಂಡಂತೆ ವಿವಿಧ ರಾಷ್ಟ್ರಗಳ ಪ್ರತಿನಿಧಿಗಳಿಗೆ ತರಬೇತು ಕೊಡುವುದರ ಜೊತೆಗೆ, ಈ ಸಂಸ್ಥೆ ಪ್ರಪಂಚದ ಇತರ ರಾಷ್ಟ್ರಗಳೊಡನೆ ಸಹಕರಿಸಿ ವಿಸ್ತರಣ ಯೋಜನೆಯನ್ನು ಕೈಗೊಂಡಿದೆ. ಈ ಸಂಸ್ಥೆಯ ವಿಜ್ಞಾನಿಗಳು ಏಷ್ಯದ ರಾಷ್ಟ್ರಗಳಲ್ಲಿ ಸಂಚರಿಸಿ ಪ್ರತಿ ರಾಷ್ಟ್ರದ ಸಮಸ್ಯೆಗಳನ್ನೂ ಅಧ್ಯಯನ ಮಾಡಿದ್ದಾರೆ. ಸ್ಥಳೀಯ ವಾತಾವರಣಕ್ಕೆ ಅನುಗುಣವಾಗಿ ಉದ್ಭವಿಸುವ ಸಮಸ್ಯೆಗಳನ್ನು ಬಗೆಹರಿಸುವುದಕ್ಕಾಗಿ ಅಲ್ಲಲ್ಲಿ ಸಂಶೋಧನ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಸಿಂಹಳ, ಥೈಲೆಂಡ್. ಇಂಡೋನೇಷ್ಯ, ಮಲಯ. ಬರ್ಮ. ಫಾರ್ಮೋಸ, ದಕ್ಷಿಣ ಕೊರಿಯ. ಜಪಾನ್. ಪಶ್ಚಿಮ ಆಸ್ಟ್ರೇಲಿಯ ಮತ್ತು ನೈಜೀರಿಯಗಳಲ್ಲಿ ಈ ಸಂಸ್ಥೆ ಸಂಶೋಧನ ಕೇಂದ್ರಗಳನ್ನು ಸ್ಥಾಪಿಸಿದೆ. ಇದಲ್ಲದೆ ರಾಕ್‌ಫೆಲರ್ ಮತ್ತು ಫೋರ್ಡ್ ಪ್ರತಿಷ್ಠಾನಗಳ ಸಹಕಾರದಿಂದ 1965ರಲ್ಲಿ ಈ ಸಂಸ್ಥೆ ಇತರ ಕೆಲವು ರಾಷ್ಟ್ರಗಳಲ್ಲಿ ತನ್ನ ವಿಜ್ಞಾನಿಗಳು ಸಂಶೋಧನೆ ನಡೆಸುವಂತೆ ಏರ್ಪಾಡು ಮಾಡಿದೆ. ಇತರ ಕೆಲವು ರಾಷ್ಟ್ರಗಳು

---

2 ಅದೇ, ಪು. 231

ಪಟ್ಟಿ 2

ತರಬೇತು ಪಡೆದ ಏಷ್ಯನ್ ರಾಷ್ಟ್ರಗಳ ಪ್ರತಿನಿಧಿಗಳ ಸಂಖ್ಯೆ

ದೇಶ	ಒಟ್ಟು ಪ್ರತಿನಿಧಿಗಳ ಸಂಖ್ಯೆ
ಫಿಲಿಪೀನ್ಸ್	109
ಥೈಲೆಂಡ್	27
ಫಾರ್ಮೋಸ	18
ಜಪಾನ್	19
ಭಾರತ	18
ದ. ಕೊರಿಯ	11
ಪೂ. ಪಾಕಿಸ್ತಾನ(ಈಗ ಬಾಂಗ್ಲಾದೇಶ)	12
ಸಿಂಹಳ	8
ಇಂಡೊನೇಷ್ಯ	6
ಪಶ್ಚಿಮ ಪಾಕಿಸ್ತಾನ (ಈಗಿನ ಪಾಕಿಸ್ತಾನ)	8
ಇತರ ದೇಶಗಳವರು	26

ತನ್ನದೇ ಆದ ಸಂಶೋಧನಾ ಕೇಂದ್ರಗಳನ್ನು ಸ್ಥಾಪಿಸಿದೆ. ಅಂಥ ಕೇಂದ್ರಗಳ ಸಹಕಾರದೊಡನೆ ಈ ಸಂಸ್ಥೆಯ ವಿಜ್ಞಾನಿಗಳು ಸಂಶೋಧನೆ ನಡೆಸುತ್ತಿದ್ದಾರೆ.

ಈ ಸಂಸ್ಥೆ ಇತರ ರಾಷ್ಟ್ರಗಳಲ್ಲಿ ಸಂಶೋಧನೆಗಾಗಿ ಈ ಕೆಳಗೆ ಕಂಡ ಸಂಸ್ಥೆಗಳೊಡನೆ ಸಹಕಾರ ಏರ್ಪಡಿಸಿಕೊಂಡಿದೆ:

1 ಸಿಂಹಳದ ವ್ಯವಸಾಯಶಾಸ್ತ್ರದ ಸಂಶೋಧನ ಸಂಸ್ಥೆ
2 ಥೈಲೆಂಡಿನ ಅಕ್ಕಿ ಇಲಾಖೆ ಮತ್ತು ರಾಕ್‌ಫೆಲರ್ ಪ್ರತಿಷ್ಠಾನದವರು ಒಟ್ಟಾಗಿ ಸ್ಥಾಪಿಸಿರುವ ಸಂಶೋಧನ ಸಂಸ್ಥೆ
3 ಬತ್ತದ ಅಭಿವೃದ್ಧಿಯನ್ನು ಸಾಧಿಸಲು ಸ್ಥಾಪಿಸಿರುವ ಅಖಿಲ ಭಾರತ ಯೋಜನಾ ಕೇಂದ್ರ
4 ಪಾಕಿಸ್ತಾನದ ವ್ಯವಸಾಯಶಾಸ್ತ್ರದ ಸಂಶೋಧನ ಸಂಸ್ಥೆ
5 ಬಾಂಗ್ಲಾದೇಶದ ಬತ್ತದ ಸಂಶೋಧನಸಂಸ್ಥೆ
6 ದಕ್ಷಿಣ ಅಮೆರಿಕದ ಕೊಲಂಬಿಯ ರಾಜ್ಯದಲ್ಲಿರುವ ಎರಡು ಸಂಶೋಧನ ಸಂಸ್ಥೆಗಳು

ಸಾಧನೆಗಳು

ಸಂಸ್ಥೆ ಕೈಗೊಂಡ ಮೊದಲನೆಯ ಕಾರ್ಯವೆಂದರೆ ಹೊಸ ರೀತಿಯ ಬತ್ತದ ತಳಿಯನ್ನು ಅಭಿವೃದ್ಧಿಗೊಳಿಸುವುದು. ಉಷ್ಣವಲಯದ ಏಷ್ಯನ್ ರಾಷ್ಟ್ರಗಳಲ್ಲಿ ಸಾಂಪ್ರದಾಯಿಕ ಬತ್ತದ ತಳಿಗಳನ್ನು ಉಪಯೋಗಿಸಲಾಗುತ್ತಿತ್ತು. ವಿಪರೀತ ನೀರು ಹಾಯಿಸುವುದು. ಕಳೆ ಬೆಳೆಯಲು ಅವಕಾಶ ಕೊಡುವುದು ಮತ್ತು ಹಳೆಯ ಸಂಪ್ರದಾಯದ ಪದ್ಧತಿಗಳನ್ನು ಅನುಸರಿಸುವುದು ಈ ರಾಷ್ಟ್ರಗಳಲ್ಲಿದ್ದುದರಿಂದ ಇದುವರೆಗೆ ಬೆಳೆಯುತ್ತಿದ್ದ ಬತ್ತದ ತಳಿಗಳು ಕಡಿಮೆ ಫಸಲು ಕೊಡುತ್ತಿದ್ದವು. ಆದರೆ ಜಪಾನಿನಲ್ಲಿ ಮಾತ್ರ ಇತರ ಏಷ್ಯನ್ ರಾಷ್ಟ್ರಗಳ ಪದ್ಧತಿಯನ್ನು ಅನುಸರಿಸದೆ ಹೊಸ ಮಾದರಿಯ ವ್ಯವಸಾಯ ಕ್ರಮಗಳನ್ನು ಅನುಸರಿಸಲಾಗುತ್ತಿತ್ತು. ಅದರ ಫಲವಾಗಿ ಜಪಾನಿನಲ್ಲಿ ಬತ್ತದ ಪೈರಿನಿಂದ ಬರುತ್ತಿದ್ದ ಧಾನ್ಯದ ಅಂಶ ಹೆಚ್ಚಾಗಿತ್ತು. ಇದನ್ನು ಗಮನಿಸಿ ಅಂತರರಾಷ್ಟ್ರೀಯ ಅಕ್ಕಿ ಸಂಶೋಧನ ಸಂಸ್ಥೆ ಹೊಸ ಬತ್ತದ ತಳಿಗಳನ್ನು ಅಭಿವೃದ್ಧಿಪಡಿಸುವ ಯೋಜನೆ ಕೈಗೊಂಡಿತು. ಫಾರ್ಮೋಸ ದ್ವೀಪದಲ್ಲಿ ಜಪಾನಿನಂತೆ ಸಣ್ಣ ಬತ್ತದ ಪೈರುಗಳನ್ನು ಬೆಳೆಯುತ್ತಿದ್ದರು. ಈ ಪೈರುಗಳೊಂದಿಗೆ ಫಿಲಿಪೀನ್ಸ್‌ನ ಉದ್ದದ

ಬತ್ತದ ಪೈರುಗಳನ್ನು ಸೇರಿಸಿ ಮಿಶ್ರ ಜಾತಿಯ ಬತ್ತದ ತಳಿಗಳನ್ನು ಕಂಡುಹಿಡಿಯಲಾಯಿತು. ಇದರ ಪರಿಣಾಮವಾಗಿ 1965ರಲ್ಲಿ ಮೊದಲ ಬಾರಿಗೆ ಐ.ಆರ್.–ಎಂಟು ಎಂಬ ಬತ್ತವನ್ನು ಅಭಿವೃದ್ಧಿಗೊಳಿಸಲಾಯಿತು.

ಉಷ್ಣವಲಯದಲ್ಲಿರುವ ಎಲ್ಲ ದೇಶಗಳಲ್ಲೂ ಈ ಹೊಸ ಬತ್ತವನ್ನು ಬಿತ್ತನೆ ಮಾಡಿ ಅದರ ಪರಿಣಾಮಗಳನ್ನು ಪರೀಕ್ಷಿಸಲಾಯಿತು. ಎಲ್ಲ ದೇಶಗಳಲ್ಲಿಯೂ ಒಂದೇ ರೀತಿಯಾದ ಫಲಿತಾಂಶ ಕಂಡುಬರಲಿಲ್ಲ. ಆದರೆ ಎಲ್ಲ ದೇಶಗಳಲ್ಲಿಯೂ ಈ ಬತ್ತವನ್ನು ಬಿತ್ತುವುದರಿಂದ ಅಧಿಕ ಇಳುವರಿ ಪಡೆಯಬಹುದೆಂಬ ತೀರ್ಮಾನಕ್ಕೆ ಬರಲಾಯಿತು. ಅದರ ಪರಿಣಾಮವಾಗಿ ನವೆಂಬರ್ 1966ರಲ್ಲಿ ಸಂಸ್ಥೆ ಅಧಿಕೃತ ಪ್ರಕಟಣೆ ಹೊರಡಿಸಿ ಐ. ಆರ್.–ಎಂಟು ಬತ್ತವನ್ನು ಉಪಯೋಗಿಸುವಂತೆ ಎಲ್ಲ ದೇಶಗಳಿಗೂ ಕರೆಕೊಟ್ಟಿತು.

ಈ ಬತ್ತವನ್ನು ಬಿತ್ತಿದ ಮೇಲೆ ಫಸಲೇನೋ ಹೆಚ್ಚಾಯಿತು. ಆದರೆ ಇದರ ಅಕ್ಕಿಯನ್ನು ಉಪಯೋಗಿಸಲಾರಂಭಿಸಿದ ಮೇಲೆ, ಈ ಅಕ್ಕಿ ಅಡಿಗೆಗೆ ಯೋಗ್ಯವಾದುದಲ್ಲವೆಂಬ ಮತ್ತು ರುಚಿಕರವಾಗಿಲ್ಲವೆಂಬ ಆಕ್ಷೇಪಣೆ ಕೆಲವು ದೇಶಗಳಿಂದ ಬಂತು. ಅನಂತರ ಸಂಸ್ಥೆ ಬತ್ತದ ಗುಣಮಟ್ಟವನ್ನು ಹೆಚ್ಚಿಸುವ ಸಲುವಾಗಿ ಸಂಶೋಧನೆ ನಡೆಸಿತು. ಈ ಬತ್ತಕ್ಕೆ ತಗಲುತ್ತಿದ್ದ ರೋಗವನ್ನು ಮತ್ತು ಕ್ರಿಮಿಗಳ ಕಾಟವನ್ನು ತಪ್ಪಿಸಲು ಕಾರ್ಯಕ್ರಮ ಕೈಗೊಳ್ಳಲಾಯಿತು. ಇದೆಲ್ಲದರ ಪರಿಣಾಮವಾಗಿ ಐ.ಆರ್.-ಎಂಟು ಬತ್ತ ಅಧಿಕ ಇಳುವರಿ ಒದಗಿಸುವ ಧಾನ್ಯವಾಗಿ ಎಲ್ಲ ದೇಶಗಳಲ್ಲಿಯೂ ಮೆಚ್ಚುಗೆ ಪಡೆಯಿತು. ಈ ಕೆಳಗೆ ಕಂಡಂತೆ ಅನೇಕ ಏಷ್ಯನ್ ರಾಷ್ಟ್ರಗಳಲ್ಲಿ ರೈತರು ನೂತನ ಬತ್ತವನ್ನು ಹೆಚ್ಚುಹೆಚ್ಚಾಗಿ ಬಿತ್ತಲಾರಂಭಿಸಿದರು. ಅಧಿಕ ಇಳುವರಿ ಪಡೆಯಲಾರಂಭವಾಯಿತು.

ಅಧಿಕ ಇಳುವರಿ ಪಡೆಯುವ ಬತ್ತವನ್ನು ಕಂಡುಹಿಡಿದ ಮೇಲೆ ಅಕ್ಕಿ ಉತ್ಪಾದನೆ ಹೆಚ್ಚಾಗುತ್ತ ಬಂತು. ಆದರೆ ಇದರೊಂದಿಗೆ ಕೆಲವು ಸಮಸ್ಯೆಗಳು ಉದ್ಭವಿಸಿದುವು. ಅಧಿಕ ಪ್ರಮಾಣದಲ್ಲಿ ಉತ್ಪತ್ತಿಯಾದ ಬತ್ತವನ್ನು ಹದವಾಗಿ ಒಣಗಿಸಿಡಲು ಅನೇಕ ದೇಶಗಳಲ್ಲಿ ಸಾಕಷ್ಟು ಸೌಕರ್ಯಗಳಿರಲಿಲ್ಲ. ಉಗ್ರಾಣಗಳ ಅಭಾವ ಇತ್ತು. ಬತ್ತವನ್ನು ಸರಿಯಾದ ಪ್ರಮಾಣದಲ್ಲಿ ಅಕ್ಕಿ ಮಾಡುವ ಗಿರಣಿಗಳಿರಲಿಲ್ಲ. ಇದ್ದ ಗಿರಣಿಗಳಲ್ಲಿ ಅಕ್ಕಿ ಮಾಡಿದರೆ ಸೇಕಡ 50ರಷ್ಟು ಮಾತ್ರ ಇಳುವರಿ ಬರುತ್ತಿತ್ತು. ಬಹುಪಾಲು ಅಕ್ಕಿ ನುಚ್ಚಾಗಿ ಬತ್ತದ ಹೊಟ್ಟಿನೊಡನೆ ಸೇರಿಹೋಗುತ್ತಿತ್ತು. ಇದರಿಂದ ಅಕ್ಕಿ ಮಾಡಿಸಿದವರಿಗೆ ನಷ್ಟವಾಗುತ್ತಿತ್ತು. ಆದುದರಿಂದ ಆಧುನಿಕ ರೀತಿಯ ಅಕ್ಕಿ ಗಿರಣಿಗಳನ್ನು ಸ್ಥಾಪಿಸಿದರೆ ಬತ್ತದಿಂದ ಅಧಿಕ ಇಳುವರಿ ಪಡೆಯಬಹುದು ಎಂಬ ತೀರ್ಮಾನಕ್ಕೆ ಬರಲಾಯಿತು.

ಮೇಲ್ಕಂಡ ವಿಷಯಗಳಲ್ಲಿ ಸಂಶೋಧನೆ ನಡೆಸಿ ಯಾವ ರೀತಿಯ ಗಿರಣಿಗಳು, ಉಗ್ರಾಣಗಳು ಮತ್ತು ಬತ್ತವನ್ನು ಹದಮಾಡುವ ವಿಧಾನಗಳನ್ನು ಪ್ರಾರಂಭಿಸಬೇಕು ಎಂಬುದರ ವಿಷಯದಲ್ಲಿ ತಿಳಿವಳಿಕೆ ಕೊಡಲು ಅಂತರರಾಷ್ಟ್ರೀಯ ಅಕ್ಕಿ ಸಂಶೋಧನ ಸಂಸ್ಥೆ ನಿರ್ಧರಿಸಿತು. ಮೇಲ್ಕಂಡ ವಿಷಯಗಳಲ್ಲಿ ಸಂಶೋಧನೆ ನಡೆಸುವಂತೆ ಭಾರತದಲ್ಲಿರುವ ಖರಗಪುರದ ತಾಂತ್ರಿಕ ಸಂಸ್ಥೆಗೆ ತಿಳಿಸಲಾಗಿದೆ. ಸಂಸ್ಥೆಗೆ. ಸಂಶೋಧನೆಯ ವಿಷಯದಲ್ಲಿ ಖರಗಪುರದ ಅಂತರರಾಷ್ಟ್ರೀಯ ಅಕ್ಕಿ ಸಂಶೋಧನ ಸಂಸ್ಥೆ ಎಲ್ಲ ರೀತಿಯ ನೆರವು ನೀಡುತ್ತದೆ.

ಇದಲ್ಲದೆ ಕಳೆದ ಕೆಲವು ವರ್ಷಗಳಲ್ಲಿ ಏಷ್ಯದ ಅನೇಕ ದೇಶಗಳಲ್ಲಿ ಯೋಜನೆಗಳ ಪರಿಣಾಮವಾಗಿ ವ್ಯವಸಾಯ ಕ್ಷೇತ್ರದಲ್ಲಿ ನೀರಾವರಿ ಸೌಕರ್ಯ ಮತ್ತು ರಾಸಾಯನಿಕ ಗೊಬ್ಬರಗಳ ಉಪಯೋಗ ಹೆಚ್ಚಾಗಿದೆ. ಇದರಿಂದ ಬತ್ತದ ಉತ್ಪನ್ನ ಹೆಚ್ಚಾಗುತ್ತ ಇದೆ. ಆದರೆ ಅನೇಕ ಸಂದರ್ಭಗಳಲ್ಲಿ ಎಷ್ಟು ನೀರು ಹಾಯಿಸಬೇಕು ಮತ್ತು ಗೊಬ್ಬರ ಉಪಯೋಗಿಸಬೇಕು ಎಂಬುದರ ವಿಷಯದಲ್ಲಿ ರೈತರಿಗೆ ಸರಿಯಾದ ತಿಳಿವಳಿಕೆಯಿಲ್ಲದೆ ಬೆಳೆಗಳು ನಾಶವಾಗುತ್ತಿವೆ. ಈ ರೀತಿಯ ನಾಶವನ್ನು ತಪ್ಪಿಸಿದರೆ ಇನ್ನೂ ಅಧಿಕ ಅಕ್ಕಿ ಉತ್ಪನ್ನವನ್ನು ಪಡೆಯಬಹುದು. ಆದುದರಿಂದ ಅಂತರರಾಷ್ಟ್ರೀಯ ಅಕ್ಕಿ ಸಂಶೋಧನ ಸಂಸ್ಥೆ ಮೇಲ್ಕಂಡ ವಿಷಯಗಳಲ್ಲಿ ಸಂಶೋಧನೆ ನಡೆಸಿ (ಆಯಾ ದೇಶಗಳ ವಾತಾವರಣಕ್ಕೆ ತಕ್ಕ ಹಾಗೆ) ಗೊಬ್ಬರ ಉಪಯೋಗಿಸುವ ಪ್ರಮಾಣ ಮತ್ತು ನೀರು ಹಾಯಿಸುವ ಪ್ರಮಾಣದಲ್ಲಿ ತಿಳಿವಳಿಕೆ

ಪಟ್ಟಿ 3

1969–70ರ ಕೊನೆಯ ವೇಳೆಗೆ ವಿವಿಧ ಏಷ್ಯನ್ ರಾಷ್ಟ್ರಗಳಲ್ಲಿ ಹೊಸ ಬತ್ತವನ್ನು ಬಿತ್ತಲಾದ ಜಮೀನಿನ ವಿಸ್ತೀರ್ಣ

ದೇಶ ಮತ್ತು ಹೊಸ ಬತ್ತವನ್ನು ಬಿತ್ತಲು ಆರಂಭಿಸಿದ ವರ್ಷಗಳು	ಬತ್ತವನ್ನು ಬೆಳೆಯುತ್ತಿದ್ದ ಒಟ್ಟು ಜಮೀನು 1965/66ರಲ್ಲಿ ಇದ್ದ ಹಾಗೆ (ಹೆಕ್ಟೇರ್‌ಗಳಲ್ಲಿ)	ಹೊಸ ಬತ್ತವನ್ನು ಬಿತ್ತಿದ ಜಮೀನಿನ ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ)
1 ಬರ್ಮ	4,856,000	
1968–69		324,000
2 ಇಂಡೊನೇಷ್ಯ	7.348.000	
1968–69		271.000
1969–70		809.000
3 ಮಲೇಷಿಯ	480,000	
1967–68		30.000
4 ಫಿಲಿಫೀನ್ಸ್	3,109,000	
1967–68		447.000
5 ವಿಯೆಟ್ನಾಂ	2,450,000	
1969–70		200.000
6 ಸಿಂಹಳ	492,000	
1968–69		10,000
7 ಭಾರತ	35,274,000	
1966–67		379,000
1968–69		3,077.000
8 ಬಾಂಗ್ಲಾ ದೇಶ	8,900,000	
1968–69		242,000
9 ಪಾಕಿಸ್ತಾನ	1,393,000	
1968–69		344.000

ಕೊಡಲು ನಿರ್ಧರಿಸಿದೆ. ವ್ಯರ್ಥವಾಗಿ ಹೋಗುವ ನೀರನ್ನು ಸದುಪಯೋಗ ಪಡಿಸುವಂತೆ ರೈತರಿಗೆ ತಿಳಿವಳಿಕೆ ಕೊಡಲು ನಿರ್ಧರಿಸಿದೆ.

ಉಪಸಂಹಾರ

ಮೇಲೆ ವಿವರಿಸಿರುವ ಸಾಧನೆಗಳ ಪರಿಣಾಮವಾಗಿ ಅಂತರರಾಷ್ಟ್ರೀಯ ಅಕ್ಕಿ ಸಂಶೋಧನ ಸಂಸ್ಥೆ ಏಷ್ಯನ್ ರಾಷ್ಟ್ರಗಳ ಮೇಲೆ ಸಾಕಷ್ಟು ಪರಿಣಾಮ ಉಂಟುಮಾಡಿದೆ. ಏಷ್ಯದ ಅನೇಕ ರೈತರು ಹೊಸ ಬತ್ತದ ಬೆಳೆಯಿಂದ ಉಂಟಾಗುವ ಆರ್ಥಿಕ ಪ್ರಗತಿಗಾಗಿ ಎದುರುನೋಡುತ್ತಿದ್ದಾರೆ. ಹೊಸ ಬತ್ತಗಳಾದ ಐ.ಆರ್.–8 ಮತ್ತು ಐ.ಆರ್.–5 ಅನೇಕ ರೈತರ ಮನೆಮಾತಾಗಿವೆ. ಇನ್ನು ಕೆಲವು ವರ್ಷಗಳಲ್ಲಿ ಇನ್ನೂ ಕೆಲವು ಹೊಸ ಜಾತಿಯ ಬತ್ತಗಳನ್ನು ಅಭಿವೃದ್ಧಿಪಡಿಸಿ ಅಕ್ಕಿಯ ಉತ್ಪಾದನೆಯಲ್ಲಿ ವಿಕ್ರಮ ಸಾಧಿಸಲು ಸಾಧ್ಯವಾಗಬಹುದೆಂಬ ನಿರೀಕ್ಷೆ ಏಷ್ಯದ ಅನೇಕ ರಾಷ್ಟ್ರಗಳಲ್ಲಿದೆ.

ಡಾ. ಅಬ್ದುಲ್ ಅಜೀಸ್

ಔದ್ಯಮಿಕ ಸಂಬಂಧಗಳಲ್ಲಿ ಗಾಂಧಿಮಾರ್ಗ

ಗಾಂಧೀಜಿಯವರು ಬರೆಯದಿರುವ ವಿಷಯಗಳೇ ವಿರಳ. ಅವರ 'ಯಂಗ್ ಇಂಡಿಯ' ಪತ್ರಿಕೆಯಲ್ಲಿ ಅವರ ಸಮಕಾಲೀನ ರಾಜಕೀಯ, ಧಾರ್ಮಿಕ, ನೈತಿಕ, ಸಾಮಾಜಿಕ ಹಾಗೂ ಆರ್ಥಿಕ ಜೀವನಕ್ಕೆ ಸಂಬಂಧಿಸಿದ ಹೆಚ್ಚುಕಡಿಮೆ ಎಲ್ಲಾ ವಿಷಯಗಳ ಬಗ್ಗೆಯೂ ಗಾಂಧೀಜಿಯವರು ಬರೆಯುತ್ತಿದ್ದರು. ಇದಲ್ಲದೆ ಅವರ ಆತ್ಮಕಥನ, ಅವರ ಲೇಖನಗಳು ಹಾಗೂ ಭಾಷಣಗಳು ಈ ವಿಷಯಗಳ ಬಗ್ಗೆ ಗಾಂಧೀಜಿಯವರ ಅಭಿಪ್ರಾಯಗಳನ್ನು ಸ್ಪಷ್ಟಪಡಿಸುತ್ತವೆ. ಆರ್ಥಿಕ ಜೀವನದ ಬಗ್ಗೆ ಗಾಂಧೀಜಿಯವರ ಬರೆಹ ಸಾಕಷ್ಟಿದೆ. ಅದರ ಪೈಕಿ ಔದ್ಯಮಿಕ ಸಂಬಂಧಗಳನ್ನು ಕುರಿತ ಅವರ ಅಭಿಪ್ರಾಯಗಳು ಗಮನಾರ್ಹವಾದವು. ದೆಹಲಿಯಲ್ಲಿಯ ಭಾರತೀಯ ಕಾರ್ಮಿಕ ಅಧ್ಯಯನ ಸಂಸ್ಥೆ ಇತ್ತೀಚೆಗೆ ಕೈಗೊಂಡ ಸಮ್ಮೇಳನದಲ್ಲಿ ಗಾಂಧೀಜಿಯವರು ಔದ್ಯಮಿಕ ಸಂಬಂಧಗಳ ಬಗ್ಗೆ ಕುರಿತು ಬರೆದ ಅಭಿಪ್ರಾಯಗಳನ್ನು ವಿವೇಚಿಸುವ ಹಾಗೂ ಅವುಗಳನ್ನು ಪ್ರಸಾರ ಮಾಡುವ ಧ್ಯೇಯವನ್ನಿಟ್ಟುಕೊಂಡಿತ್ತು. ಈ ಸಮ್ಮೇಳನಕ್ಕೆ ರಾಜ್ಯ ಸರ್ಕಾರಗಳ ಕಾರ್ಮಿಕ ಮಂತ್ರಿಗಳು, ದೇಶದ ಪ್ರಮುಖ ಕೈಗಾರಿಕೋದ್ಯಮಿಗಳು ಹಾಗೂ ಕಾರ್ಮಿಕ ಮುಖಂಡರು ಮತ್ತು ಅರ್ಥಶಾಸ್ತ್ರ ಹಾಗೂ ಸಾಮಾಜಿಕ ವಿಜ್ಞಾನಗಳ ಪ್ರಮುಖ ಪಂಡಿತರು ಆಗಮಿಸಿದ್ದರು. ಈ ಸಮ್ಮೇಳನದಲ್ಲಿ ಔದ್ಯಮಿಕ ಸಂಬಂಧಗಳಲ್ಲಿ ಗಾಂಧೀಜಿಯವರ ಅಭಿಪ್ರಾಯಗಳನ್ನು ಪ್ರಚಾರ ಮಾಡುವುದರ ಜೊತೆಗೆ ಅವರು ಮನಗಂಡಂಥ ಶಾಂತಿಯುತವಾದ ಔದ್ಯಮಿಕ ಸಮಾಜವನ್ನು ರಚಿಸುವ ಪ್ರಯತ್ನ ಮಾಡುವಂಥ ಒಂದು ಕಾರ್ಮಿಕ ಅಧ್ಯಯನ ಸಂಸ್ಥೆಯನ್ನು ಸ್ಥಾಪಿಸಬೇಕೆಂದು ಎಲ್ಲರೂ ಒಮ್ಮತವಾಗಿ ಸಲಹೆ ನೀಡಿದರು.[1] ಈ ಲೇಖನದಲ್ಲಿ ಔದ್ಯಮಿಕ ಸಂಬಂಧಗಳ ಬಗ್ಗೆ ಗಾಂಧೀಜಿಯವರಲ್ಲಿದ್ದ ಅಭಿಪ್ರಾಯಗಳ ಯುಕ್ತಾಯುಕ್ತತೆಯನ್ನು ಪರಿಶೀಲಿಸುವುದಾಗಲಿ ಇಲ್ಲವೆ ಅವರು ಮನಗಂಡಂತಹ ಶಾಂತಿಯುತವಾದ ಔದ್ಯಮಿಕ ಸಮಾಜವನ್ನು ಸೃಷ್ಟಿಸುವ ಔಚಿತ್ಯವನ್ನು ಪ್ರಶ್ನಿಸುವುದಾಗಲಿ ನಮ್ಮ ಧ್ಯೇಯವಲ್ಲ. ಈ ಲೇಖನದಲ್ಲಿ ನಮ್ಮ ಗುರಿ ಗಾಂಧೀಜಿಯವರ ಅಭಿಪ್ರಾಯಗಳನ್ನು ಒಟ್ಟುಗೂಡಿಸಿ ಔದ್ಯಮಿಕ ಸಂಬಂಧಗಳ ಬಗ್ಗೆ ಅವರ ತಾತ್ತ್ವಿಕ ದೃಷ್ಟಿಯೇನೆಂಬುದನ್ನು ವಿಶದಪಡಿಸುವುದು. ಹಾಗೂ ಪ್ರಸ್ತುತದಲ್ಲಿ ನಮ್ಮಲ್ಲಿ ಜಾರಿಯಲ್ಲಿರುವ ಔದ್ಯಮಿಕ ಸಂಬಂಧಗಳ ವ್ಯವಸ್ಥೆ ಎಷ್ಟರ ಮಟ್ಟಿಗೆ ಗಾಂಧೀಜಿಯವರು ಮನಗಂಡಂತಹ ಶಾಂತಿಯುತ ಸಮಾಜವನ್ನು ಸೃಷ್ಟಿಸಲು ಅನುಕೂಲಕಾರಿಯೆಂಬುದನ್ನೂ ಇಲ್ಲಿ ವಿವೇಚಿಸಲಾಗುವುದು.

ಕಾರ್ಮಿಕ ಸಮಸ್ಯೆಗಳ ಬಗ್ಗೆ ಗಾಂಧೀಜಿಯವರ ಅಭಿಪ್ರಾಯಗಳು ಅವರ ಕೆಲವು ಸಿದ್ಧಾಂತಗಳ ಆಧಾರದ ಮೇಲಿವೆ. ಆ ಸಿದ್ಧಾಂತಗಳು ಯಾವುವೆಂದರೆ ಅವರ ದಾರ್ಶನಿಕ ತತ್ತ್ವಕ್ಕೆ ಸಂಬಂಧಿಸಿದ ಸತ್ಯ ಮತ್ತು ಅಹಿಂಸೆ ಹಾಗೂ ಆರ್ಥಿಕ ವ್ಯವಸ್ಥೆಯ ಬಗ್ಗೆ ಗಾಂಧೀಜಿಯವರ ವಿಚಾರಗಳ ಮೇಲೆ ಪ್ರಭಾವ

---

1 ವಾರಾಣಸಿಯಲ್ಲಿ ಗಾಂಧೀಜಿಯವರ ಆರ್ಥಿಕ ಅಭಿಪ್ರಾಯಗಳ ಬಗ್ಗೆ ಸಂಶೋಧನೆ ಕೈಗೊಳ್ಳುತ್ತಿರುವ ಗಾಂಧೀ ಅಧ್ಯಯನ ಸಂಸ್ಥೆ ಸುಮಾರು ಒಂದು ದಶಕದಿಂದ ಕೆಲಸ ಮಾಡುತ್ತಿರುವುದನ್ನು ಓದುಗರು ಗಮನಿಸಬಹುದು.

ಬೀರಿದ ಸಿದ್ಧಾಂತಗಳಾದ ಅಪರಿಗ್ರಹ (non–possession), ದುಡಿಮೆ ಜೀವನ (bread–labour) ಮತ್ತು ಸಮಾನತೆ. ಈ ಮೂರು ಸಿದ್ಧಾಂತಗಳ ಭಾವಾರ್ಥವಿಷ್ಟೆ: ಅತ್ಯಾವಶ್ಯಕವಾದ ಬಯಕೆಗಳನ್ನು ತೃಪ್ತಿಪಡಿಸಲು ಬೇಕಾದುದಕ್ಕಿಂತ ಹೆಚ್ಚಾದ ಸಂಪತ್ತನ್ನು ಸ್ವಾಧೀನಪಡಿಸಿಕೊಳ್ಳುವ ಇಚ್ಛೆಯನ್ನು ವರ್ಜಿಸುವುದು: ಪ್ರತಿವ್ಯಕ್ತಿಯೂ ತಾನು ಸ್ವತಃ ದುಡಿದು ಹೊಟ್ಟೆಹೊರೆದುಕೊಳ್ಳುವ ಧರ್ಮವನ್ನು ಪಾಲಿಸುವುದು: ಹಾಗೂ ಪ್ರಾಮಾಣಿಕತನದ ಶ್ರಮಕ್ಕೆ ಸಮನಾದ ವೇತನವನ್ನು ಕಾರ್ಮಿಕನಿಗೆ ಕೊಡುವುದು. ಹೀಗೆ ಮೇಲೆ ವಿವರಿಸಿದ ಮೂಲ ಸಿದ್ಧಾಂತಗಳ ಆಧಾರದ ಮೇಲೆ ಗಾಂಧೀಜಿಯವರು ನ್ಯಾಸಧಾರಿಕೆ (Trusteeship) ಸಿದ್ಧಾಂತವನ್ನು ಬೆಳಕಿಗೆ ತಂದರು. ನ್ಯಾಸಧಾರಿಕೆ ಸಿದ್ಧಾಂತ ನಮ್ಮ ದೇಶದ ಆರ್ಥಿಕ ವ್ಯವಸ್ಥೆಯನ್ನು ನಿಶ್ಚಯಿಸಬೇಕು ಎಂಬುದು ಅವರ ಅಭಿಪ್ರಾಯ.

ನ್ಯಾಸಧಾರಿಕೆಯ ಸಿದ್ಧಾಂತದ ಪ್ರಕಾರ ಬಂಡವಾಳಗಾರರು ಮತ್ತು ಕಾರ್ಮಿಕರು ಪರಸ್ಪರ ನ್ಯಾಸಧಾರಿಗಳಾಗಿದ್ದು ರಾಷ್ಟ್ರದ ಸಂಪನ್ಮೂಲಗಳನ್ನು ಸರ್ವೋದಯ ಸಾಧನೆಗೆ ಬಳಸುವ ಕಾರ್ಯದಲ್ಲಿ ನಿರತರಾಗಿರುವಂತಹವರು. ಇಲ್ಲಿ ಸರ್ವೋದಯವನ್ನು ಸಾಧಿಸುವುದೆಂದರೆ ಎಲ್ಲರ ಕ್ಷೇಮವನ್ನು ಸಾಧಿಸುವುದೆಂದರ್ಥ. ಈ ಸಿದ್ಧಾಂತದ ಆಧಾರದ ಮೇಲೆ ಬಂಡವಾಳಗಾರರು ಮತ್ತು ಕಾರ್ಮಿಕರು ಪರಸ್ಪರ ಘರ್ಷಣೆ ಮತ್ತು ಹೋರಾಟದಲ್ಲಿ ಮಗ್ನರಾಗಿರದೆ ಪರಸ್ಪರ ಸಹಕಾರ ಮತ್ತು ಹೊಂದಿಕೆಯುಳ್ಳ ಸಂಬಂಧಗಳನ್ನು ಬೆಳೆಸಿಕೊಳ್ಳುವ ಯತ್ನವನ್ನು ಕೈಗೊಳ್ಳಬೇಕೆಂದು ಗಾಂಧೀಜಿಯವರು ಸಲಹೆ ನೀಡಿದರು. ಅವರ ಅಭಿಪ್ರಾಯದಲ್ಲಿ ಬಂಡವಾಳಗಾರರಲ್ಲೂ ಕಾರ್ಮಿಕರಲ್ಲೂ ಘರ್ಷಣೆಗೆ ಅವಕಾಶವೇ ಇಲ್ಲ. ಏಕೆಂದರೆ ಕಾನೂನಿನ ದೃಷ್ಟಿಯಲ್ಲಿ ಸಂಪತ್ತು ಅದರ ಮಾಲೀಕರಿಗೆ ಸೇರಿದ್ದೇ ಆದರೂ ನೈತಿಕದೃಷ್ಟಿಯಲ್ಲಿ ಅದು ಸಮಾಜಕ್ಕೆ ಸೇರಿದ್ದು. ಈ ಅರ್ಥದಲ್ಲಿ ಬಂಡವಾಳಗಾರರ ಸ್ವಾಧೀನದಲ್ಲಿರುವ ಸಂಪತ್ತು ಕಾರ್ಮಿಕರ ಸ್ವತ್ತೂ ಹೌದು. ಹೀಗೆ ಸಂಪತ್ತು ನೈತಿಕ ದೃಷ್ಟಿಯಿಂದ ಸಮಾಜದ ಸ್ವತ್ತಾದರೂ ಸಮಾಜ(ರಾಜ್ಯ)ವಾಗಲೀ ಕಾರ್ಮಿಕರಾಗಲೀ ಬಂಡವಾಳಗಾರರ ಸ್ವಾಧೀನದಲ್ಲಿರುವ ಸಂಪತ್ತಿಗೆ ಕಾನೂನುಬದ್ಧವಾದ ಮಾಲೀಕತ್ವದ ಹಕ್ಕನ್ನು ಸಾಧಿಸುವಂತಿಲ್ಲ. ಈ ಒಂದು ಕಾರಣದಿಂದಲೆ ಗಾಂಧೀಜಿಯವರು ಬಂಡವಾಳಗಾರರನ್ನು ಸಾಮಾಜಿಕ ಹಾಗೂ ಆರ್ಥಿಕ ನ್ಯಾಯಸಮ್ಮತ ಹಕ್ಕುಸ್ಥಾಪನೆಗೆ ಒಲಿಸಿಕೊಳ್ಳಬೇಕಾದರೆ ಅವರ ಸದ್ವಿವೇಚನೆಗೆ ಅಥವಾ ಕರ್ತವ್ಯಜ್ಞಾನಕ್ಕೆ ಮುಟ್ಟುವಂತೆ ಮೊರೆ ಇಡಬೇಕೆ ಹೊರತು ಶಾಸನದ ಮೂಲಕ ಬಲಪ್ರಯೋಗ ಮಾಡುವ ವಿಧಾನವನ್ನೆಂದೂ ಅನುಸರಿಸಬಾರದು ಎಂದು ವಾದಿಸುತ್ತಾರೆ. ಅವರ ಅಭಿಪ್ರಾಯದಲ್ಲಿ ಯಾವುದೇ ಬಗೆಯ ಬಲಪ್ರಯೋಗವೂ ಅಹಿಂಸಾತತ್ತ್ವವನ್ನು ವಿರೋಧಿಸಿದಂತೆ.

ಹೀಗೆ ಗಾಂಧೀಜಿಯವರು ಬಂಡವಾಳಗಾರರನ್ನು ನೈತಿಕ ಬಲಪ್ರಯೋಗದಿಂದ ಮಾತ್ರವೆ ಒಲಿಸಿಕೊಳ್ಳುವುದು ಸೂಕ್ತವೆಂದು ಸಾರುತ್ತಾರೆ. ಬಂಡವಾಳಗಾರರ ವಿಷಯದಲ್ಲಿ ಸೂಚಿಸಿದ ನೈತಿಕ ವರ್ತನೆಯ ಜೊತೆಗೆ ಗಾಂಧೀಜಿಯವರು ಕಾರ್ಮಿಕರಲ್ಲೂ ಒಂದು ಬಗೆಯ ಜ್ಞಾನೋದಯದ ಆವಶ್ಯಕತೆ ಇದೆ ಎಂದು ಅಭಿಪ್ರಾಯಪಡುತ್ತಾರೆ. ಅದೇನೆಂದರೆ. ಕಾರ್ಮಿಕರಲ್ಲಿ ತಮ್ಮ ನೈತಿಕ ಬಲದ ಮೇಲೆ ನಂಬಿಕೆ ಹಾಗೂ ಅದರ ಅಸ್ತಿತ್ವದ ಗ್ರಹಿಕೆ ತಮಗೆ ಉಂಟಾಗುವ ಆವಶ್ಯಕತೆ. ಕಾರ್ಮಿಕರು ಗ್ರಹಿಸಬೇಕಾದ ಅತಿಮುಖ್ಯವಾದ ಅಂಶವಿದು: ಬಂಡವಾಳಗಾರರು ಕಾರ್ಮಿಕರ ಸಹಕಾರವಿಲ್ಲದೆ ಅವರ ದುಡಿಮೆಯಿಂದ ಪ್ರಯೋಜನವನ್ನನುಭವಿಸಲು ಸಾಧ್ಯವಿಲ್ಲ: ಅವರು ಸಹಕಾರ ಚಳವಳಿಯನ್ನು ಕೈಗೊಂಡ ಪಕ್ಷದಲ್ಲಿ ಬಂಡವಾಳಗಾರರು ಹೀಗೆ ಕಾರ್ಮಿಕರ ದುಡಿಮೆಯಿಂದ ಪ್ರಯೋಜನ ಹೊಂದುವುದು ನಿಲ್ಲುವುದು ಖಂಡಿತ. ಹೀಗೆ ಬಂಡವಾಳಗಾರರು ಮತ್ತು ಕಾರ್ಮಿಕರು ಆರ್ಥಿಕ ಸಮಾಜದಲ್ಲಿ ತಮಗಿರುವ ಸ್ಥಾನವನ್ನು ಪರಸ್ಪರ ಗ್ರಹಿಸಿಕೊಂಡರೆ ಅವರಲ್ಲಿ ಸ್ವಾಭಾವಿಕವಾಗಿಯೆ ನೈತಿಕ ಸಮಾನತೆ ಸ್ಥಾಪಿತವಾಗುವುದರಲ್ಲಿ ಸಂದೇಹವಿಲ್ಲ.

ಮೇಲೆ ವಿವರಿಸಿದ ಸಿದ್ಧಾಂತಗಳ ಆಧಾರದ ಮೇಲೆ ಗಾಂಧೀಜಿಯವರು ಕೈಗಾರಿಕಾ ಕ್ಷೇತ್ರದಲ್ಲಿ ನ್ಯಾಸಧಾರಿಕೆ ಯಾವ ರೂಪ ತಾಳುತ್ತದೆ ಎಂಬುದನ್ನು ನಿರೂಪಿಸುತ್ತಾರೆ. ಅವರು ಬಂಡವಾಳಗಾರರನ್ನು ತಮ್ಮ ಸೇವೆಗೆ ತಕ್ಕ ವೇತನವನ್ನಿಟ್ಟುಕೊಂಡು ಕಾರ್ಮಿಕರಿಗೆ ಸಾಕಾಗುವಷ್ಟು ಆಹಾರ, ಬಟ್ಟೆ. ವಸತಿ

ಇತ್ಯಾದಿ ಸಿಗುವಂತಹ ಕನಿಷ್ಠ ವೇತನವನ್ನು ಕೊಡುವಂತೆ ಪ್ರೇರೇಪಿಸುತ್ತಾರೆ. ಆದರೆ ಬಂಡವಾಳಗಾರರು ಇಂತಹ ಮೊರೆಗೆ ಪರಿವರ್ತನೆ ಹೊಂದದಿದ್ದ ಪಕ್ಷದಲ್ಲಿ ಕಾರ್ಮಿಕರು ಅಹಿಂಸಾತ್ಮಕ ಅಸಹಕಾರ ಚಳವಳಿ ಕೈಗೊಳ್ಳಬೇಕಾಗುತ್ತದೆ ಎಂಬುದನ್ನು ಗಾಂಧೀಜಿ ತಿಳಿಸುತ್ತಾರೆ. ಎಲ್ಲ ಕಾರ್ಮಿಕರೂ ಒಂದುಗೂಡಿ ಅಹಿಂಸಾತ್ಮಕ ಅಸಹಕಾರ ಚಳವಳಿ ಹೂಡಿದ ಪಕ್ಷದಲ್ಲಿ ಬಂಡವಾಳ ಕಾರ್ಮಿಕರ ಹತೋಟಿಯಲ್ಲಿ ಬರುವುದು ಖಂಡಿತ. ಅಂತಹ ಸಂದರ್ಭದಲ್ಲಿ ಬಂಡವಾಳಗಾರರು ನ್ಯಾಸಧಾರಿಗಳಂತೆಯೂ ಕಾರ್ಮಿಕರು ಸಹಪಾಲುಗಾರರಂತೆಯೂ ಚಟುವಟಿಕೆಗಳನ್ನು ಮುಂದುವರಿಸಿಕೊಂಡು ಹೋಗುವ ಸನ್ನಿವೇಶ ತಾನಾಗಿಯೇ ಅಸ್ತಿತ್ವಕ್ಕೆ ಬರುತ್ತದೆ ಎಂಬುದೇ ಗಾಂಧೀಜಿಯವರ ವಾದ[2].

ನ್ಯಾಸಧಾರಿಕೆ ಭಾವದಲ್ಲಿ ಎರಡು ಅಂಶಗಳು ಅಡಕವಾಗಿರುವುದನ್ನು ಗಮನಿಸಬಹುದು. ಒಂದನೆಯ ಅಂಶವೇನೆಂದರೆ ಬಲವಾದ ಒಗ್ಗಟ್ಟುಳ್ಳ ಕಾರ್ಮಿಕ ಸಂಘಗಳಿರಬೇಕು ಎಂಬುದು. ಬಲವಾದ ಕಾರ್ಮಿಕ ಸಂಘಗಳು ಅತ್ಯಾವಶ್ಯಕ. ಏಕೆಂದರೆ ಕಾರ್ಮಿಕರಲ್ಲಿ ಅಸಹಕಾರ ಚಳವಳಿ ಏರ್ಪಡಬೇಕಾದರೆ ಕಾರ್ಮಿಕರೆಲ್ಲರೂ ಒಂದು ಸಂಘದ ರೂಪದಲ್ಲಿ ವ್ಯವಸ್ಥಿತರಾಗಿರಬೇಕು. ಇದರಿಂದ ಹೊರಡುವ ಮತ್ತೊಂದು ಅಂಶವೇನೆಂದರೆ ಕಾರ್ಮಿಕ ಸಂಘಗಳಲ್ಲಿ ಪೈಪೋಟಿ ಇರಬಾರದು. ಹೀಗೆ ಪೈಪೋಟಿಯಿರುವುದರಿಂದ ಕಾರ್ಮಿಕರಲ್ಲಿ ಒಗ್ಗಟ್ಟು ಒಡೆದು ಅಸಹಕಾರ ಚಳವಳಿ ಪರಿಣಾಮಕಾರಿಯಾಗುವುದಕ್ಕೆ ಧಕ್ಕೆ ಬರುತ್ತದೆ. ನ್ಯಾಸಧಾರಿಕೆಯುಲ್ಲಿಯ ಮತ್ತೊಂದು ಅಂಶ ಎಂದರೆ ಮೇಲೆ ಹೇಳಿದಂತೆ ಅಹಿಂಸಾತ್ಮಕ ಅಸಹಕಾರ ಚಳವಳಿ. ಅಹಿಂಸಾತ್ಮಕ ಅಸಹಕಾರ ಶಾಂತಿಯುತವಾದ ಮುಷ್ಕರವನ್ನು ಸೂಚಿಸುತ್ತದೆ. ವಾಸ್ತವವಾಗಿ ಗಾಂಧೀಜಿಯವರು ಮುಷ್ಕರಗಳ ವಿರುದ್ಧವಾಗಿರಲಿಲ್ಲ. ಅವರು ಅನೇಕ ಸಾರಿ ಮುಷ್ಕರ ಅನಿವಾರ್ಯ ಹಾಗೂ ಕಾರ್ಮಿಕರು ಮುಷ್ಕರವನ್ನು ಹೂಡುವುದು ಆವಶ್ಯಕವೆಂಬುದಾಗಿ ಅಭಿಪ್ರಾಯ ಪಟ್ಟರು. ಆದರೆ ಈ ಕೆಳಗಿನ ಕಟ್ಟುಪಾಡುಗಳನ್ನು ತೃಪ್ತಿಪಡಿಸುವ ಮುಷ್ಕರಗಳನ್ನು ಮಾತ್ರ ಅವರು ಅನುಮೋದಿಸಿದರು: ಒಂದನೆಯದಾಗಿ, ಮುಷ್ಕರಗಳು ಶಾಂತಿಯುತವಾಗಿರಬೇಕು ಹಾಗೂ ಅಹಿಂಸಾತ್ಮಕವಾಗಿರಬೇಕು, ಎರಡನೆಯದಾಗಿ, ಹಂಗಾಮಿ ಪರ್ಯಾಯ ಕೆಲಸವನ್ನು ನೋಡಿಕೊಂಡು ಜೀವನಾಧಾರಕ್ಕೆ ದಾರಿ ಮಾಡಿಕೊಂಡನಂತರವೇ ಕಾರ್ಮಿಕರು ಮುಷ್ಕರ ಹೂಡಬೇಕು. ಏಕೆಂದರೆ ಮುಷ್ಕರ ಹೂಡಿದ ಕಾಲದಲ್ಲಿ ಅವರಿಗೆ ವೇತನ ಸಿಗುವ ಭರವಸೆಯಿರುವುದಿಲ್ಲ. ಈ ಅವಧಿಯಲ್ಲಿ ಅವರ ಜೀವನಕ್ಕೆ ಬೇರೆ ಮಾರ್ಗ ಒಂದಿದ್ದರೆ ಮಾತ್ರ ಕಾರ್ಮಿಕರು ಮುಷ್ಕರ ಯಶಸ್ವಿಯಾಗುವವರೆಗೆ ಹೋರಾಡಲು ಸಾಧ್ಯ. ಇಲ್ಲದಿದ್ದರೆ ಆರ್ಥಿಕ ಮುಗ್ಗಟ್ಟಿನ ಕಾರಣ ಬಂಡವಾಳಗಾರ ಹೇರುವ ಕಟ್ಟುಪಾಡಿನ ಮೇರೆಗೆ ಕೆಲಸಕ್ಕೆ ಹಾಜರಾಗುವ ಪರಿಸ್ಥಿತಿಗೆ ಇಳಿಯಬೇಕಾಗುತ್ತದೆ. ಮೂರನೆಯದಾಗಿ, ಮುಷ್ಕರ ಹೂಡುವ ಕಾರ್ಮಿಕರಲ್ಲಿ ಮುಷ್ಕರ ಹೂಡುವ ತೀರ್ಮಾನದ ಬಗ್ಗೆ ಒಮ್ಮತವಿರಬೇಕು. ಹಾಗಿಲ್ಲದ ಪಕ್ಷದಲ್ಲಿ ಮುಷ್ಕರಕ್ಕೆ ಸಮ್ಮತಿ ನೀಡದ ಕಾರ್ಮಿಕರು ಕೆಲಸಕ್ಕೆ ಹಾಜರಾಗಿ ಅಸಹಕಾರ ಚಳವಳಿಯಲ್ಲಿ ಒಗ್ಗಟ್ಟಿಲ್ಲದಂತಾಗುತ್ತದೆ. ಕೊನೆಯದಾಗಿ, ನ್ಯಾಯಸಮ್ಮತವಾದ ಕುಂದುಕೊರತೆಗಳಿದ್ದು ಅಂತಹ ಕುಂದುಕೊರತೆಗಳ ಪರಿಹಾರದ ದೃಷ್ಟಿಯಿಂದ ಮಾತ್ರ ಮುಷ್ಕರವನ್ನು ಹೂಡಬೇಕು. ಇಲ್ಲಸಲ್ಲದ ಕಾರಣಗಳಿಗಾಗಿ ಮುಷ್ಕರ ಹೂಡುವುದನ್ನು ಗಾಂಧೀಜಿಯವರು ಅನುಮೋದಿಸುವುದಿಲ್ಲ. ಗಾಂಧೀಜಿಯವರು ಮೇಲಿನ ಸಂದರ್ಭಗಳಲ್ಲಿ ಮಾತ್ರ ಮುಷ್ಕರ ಹೂಡುವುದು ಸೂಕ್ತವೆಂದು ಸೂಚಿಸಿದ್ದರೂ ಬಂಡವಾಳಗಾರ ನೈತಿಕ ಮೊರೆಗಳಿಗೆ ಜಗ್ಗದೆ ಪರಿವರ್ತನೆಗೊಳ್ಳದಿದ್ದ ಸಂದರ್ಭದಲ್ಲಿ ಮಾತ್ರ ಮುಷ್ಕರವನ್ನು ಕಟ್ಟಕಡೆಯ ಅಸ್ತ್ರವನ್ನಾಗಿ ಉಪಯೋಗಿಸಬೇಕೆಂದೂ ಒತ್ತಿಹೇಳಿದರು. ಆದ್ದರಿಂದ ಮಾತು ಮಾತಿಗೂ ಮುಷ್ಕರ

---

2 ನ್ಯಾಸಧಾರಣ ಭಾವ ಹಾಗೂ ಔದ್ಯಮಿಕ ಸಂಬಂಧಗಳ ಬಗ್ಗೆ ಗಾಂಧೀಜಿಯವರ ಅಭಿಪ್ರಾಯಗಳ ಸಮಗ್ರ ಪರಿಚಯಕ್ಕಾಗಿ ನೋಡಿ: Soman, R.J., *Peaceful Indurstrial Relations, Their Science and Technique* (Ahmedabad; Navjivan, 1957.

ಹೂಡಲು ಅನುಮತಿ ಕಾರ್ಮಿಕರಿಗೆ ಗಾಂಧೀಜಿಯವರಿಂದ ಎಂದಿಗೂ ಸಿಗುತ್ತಿರಲಿಲ್ಲ3. ಮುಷ್ಕರವನ್ನು ಹೂಡುವ ಮೊದಲು ಬೇರೆ ರೀತಿಯಲ್ಲಿ ತಮ್ಮ ಕುಂದುಕೊರತೆಗಳನ್ನು ಪರಿಹರಿಸಿಕೊಳ್ಳಲು ಅವಕಾಶವಿದ್ದರೆ ಅವನ್ನು ಉಪಯೋಗಿಸಿಕೊಳ್ಳಬೇಕೆಂಬುದು ಗಾಂಧೀಜಿಯವರ ಮತ. ಉದಾಹರಣೆಗೆ. ವಿವಾದವನ್ನು ಮಧ್ಯಸ್ಥಿಕೆಯ ಮೂಲಕ (arbitration) ಇತ್ಯರ್ಥಗೊಳಿಸುವ ಅವಕಾಶ ಸಿಕ್ಕರೆ ಅಂತಹ ವ್ಯವಸ್ಥೆಗೆ ಕಾರ್ಮಿಕರು ಒಪ್ಪಿಕೊಳ್ಳುವಂತೆ ಸಲಹೆ ನೀಡಿದ್ದಾರೆ. ಹೀಗೆ ಗಾಂಧೀಜಿಯವರು ಹಾಕಿಕೊಟ್ಟಿರುವ ಮುಷ್ಕರದ ವ್ಯವಸ್ಥೆಯಲ್ಲಿ ಶಾಂತಿಯುತವಾದ ಹಾಗೂ ನ್ಯಾಯಸಮ್ಮತವಾದ ಮಾರ್ಗಗಳಿಗೆ ಅವಕಾಶವುಂಟೆ ಹೊರತು ಘೇರಾವ್. ಯಂತ್ರೋಪಕರಣಗಳ ಹಾನಿ. ಹೆದರಿಸುವಿಕೆ, ದಾಳಿ ಮಾಡುವುದೇ ಮುಂತಾದ ಸಮಯೋಚಿತ ಹಿಂಸಾಕೃತ್ಯಗಳಿಗೆ ಅವಕಾಶವಿಲ್ಲ.

ಮುಂದಿನ ಸಾಲುಗಳಲ್ಲಿ ಭಾರತ ಸರ್ಕಾರದ ಔದ್ಯಮಿಕ ಸಂಬಂಧಗಳ ನೀತಿ ಎಷ್ಟರಮಟ್ಟಿಗೆ ಗಾಂಧೀಜಿಯವರ ಮಾರ್ಗವನ್ನು ಅನುಸರಿಸಿದೆ ಹಾಗೂ ಈ ಮಾರ್ಗವನ್ನು ವಾಸ್ತವವಾಗಿ ಎಷ್ಟರಮಟ್ಟಿಗೆ ಅನುಷ್ಠಾನಕ್ಕೆ ತರಲಾಗಿದೆ ಎಂಬುದನ್ನು ವಿವೇಚಿಸೋಣ. ಭಾರತ ಸರ್ಕಾರದ ಔದ್ಯಮಿಕ ಸಂಬಂಧಗಳ ನೀತಿಯನ್ನು ಪರಿಶೀಲಿಸಿದ್ದೇ ಆದರೆ ನಮ್ಮ ಗಮನಕ್ಕೆ ಬರುವ ಅಂಶಗಳಿವು4: ಈ ನೀತಿ ಬಂಡವಾಳಗಾರ ಮತ್ತು ಕಾರ್ಮಿಕರಲ್ಲಿ ಉಂಟಾಗುವ ವಿವಾದಗಳನ್ನು ಪರಸ್ಪರ ಸಂಧಾನದ ಮೂಲಕ ಇತ್ಯರ್ಥಗೊಳಿಸಿಕೊಳ್ಳುವಂತಹ ಔದ್ಯಮಿಕ ಸಂಬಂಧಗಳ ವ್ಯವಸ್ಥೆಯನ್ನು ಸೃಷ್ಟಿಸುವುದೇ ಗುರಿಯಾಗಿಟ್ಟುಕೊಂಡಿದೆ. ಹೀಗಾಗಿ ವಿವಾದ ಕಾಣಿಸಿಕೊಂಡ ಕೂಡಲೆ ಇಲ್ಲವೆ ವಿವಾದಕ್ಕವಕಾಶಕೊಡುವ ಸನ್ನಿವೇಶ ಉದ್ಭವಿಸಿದ ಕೂಡಲೆ ಎರಡು ಪಂಗಡಗಳೂ ಪರಸ್ಪರ ಸಂಧಾನಕ್ಕೆ ಏರ್ಪಾಡು ಮಾಡಿಕೊಳ್ಳಬೇಕು. ಇದುವೇ ಸರ್ಕಾರದ ಔದ್ಯಮಿಕ ಸಂಬಂಧಗಳ ನೀತಿಯ ಪ್ರಥಮ ಹಂತ. ಎರಡನೆಯ ಹಂತದಲ್ಲಿ ಸಂಧಾನ ಯಶಸ್ವಿಯಾಗದಿದ್ದ ಪಕ್ಷದಲ್ಲಿ ಎರಡೂ ಪಂಗಡಗಳು ರಾಜಿ ವ್ಯವಸ್ಥೆ (conciliation) ಇಲ್ಲವೆ ಮಧ್ಯಸ್ಥನ ಮೂಲಕ ಇತ್ಯರ್ಥ ಮಾಡಿಕೊಳ್ಳುವ ವ್ಯವಸ್ಥೆಗೆ ಒಪ್ಪಿಕೊಳ್ಳಬೇಕು. ಈ ಹಂತದಲ್ಲೂ ವಿವಾದ ಇತ್ಯರ್ಥಗೊಳ್ಳದಿದ್ದ ಪಕ್ಷದಲ್ಲಿ ಮುಂದಿನ ಕ್ರಮ ಬಂಡವಾಳಗಾರ ಮತ್ತು ಕಾರ್ಮಿಕರಿಗೆ ಬಿಟ್ಟದ್ದು. ಎಂದರೆ ಮೂರನೆಯ ಹಂತದಲ್ಲಿ ಶಾಂತಿಯುತ ಮಾರ್ಗಗಳಿಂದ ವಿವಾದ ಇತ್ಯರ್ಥಗೊಳ್ಳದಿದ್ದರೆ ಮಾತ್ರ ಮುಷ್ಕರಗಳಿಗೆ ಅವಕಾಶವುಂಟು. ಈ ಹಂತದಲ್ಲಿಯೂ ಸಹ ಸರ್ಕಾರ ಮಧ್ಯೆ ಪ್ರವೇಶಿಸಿ ಮುಷ್ಕರವಾಗುವುದಕ್ಕೆ ಮೊದಲೆ ವಿವಾದವನ್ನು ಔದ್ಯಮಿಕ ಕೋರ್ಟ್ ಇಲ್ಲವೆ ಔದ್ಯಮಿಕ ಟ್ರಿಬ್ಯೂನಲ್ (Industrial Tribunal) ವಶಕ್ಕೆ ಇತ್ಯರ್ಥಕ್ಕಾಗಿ ವಹಿಸಿಕೊಡಬಹುದು. ವಿವಾದವನ್ನು ಈ ಸಂಸ್ಥೆಗಳ ವಶಕ್ಕೆ ವಹಿಸಿಕೊಟ್ಟ ಮೇಲೆ ಮುಷ್ಕರ ಹೂಡುವುದು ನ್ಯಾಯಬಾಹಿರ. ಔದ್ಯಮಿಕ ಕೋರ್ಟ್ ಅಥವಾ ಔದ್ಯಮಿಕ ಟ್ರಿಬ್ಯೂನಲ್ ಕೊಡುವ ತೀರ್ಮಾನ ಅಂತಿಮವಾದುದು: ಈ ತೀರ್ಮಾನವನ್ನು ಎರಡೂ ಪಂಗಡಗಳು ಕಡ್ಡಾಯವಾಗಿ ಒಪ್ಪಿಕೊಳ್ಳುವಂತಹದು. ಹೀಗೆ ಸರ್ಕಾರದ ನೀತಿ ಔದ್ಯಮಿಕ ಸಂಬಂಧಗಳ ಬಗ್ಗೆ ಶಾಂತಿಯುತ ಮಾರ್ಗಗಳನ್ನೇ ಅನುಮೋದಿಸುತ್ತದೆ. ಸರ್ಕಾರಿ ವ್ಯವಸ್ಥೆಯಲ್ಲಿ ಶಾಂತಿಯುತ ಮಾರ್ಗಗಳನ್ನು ಅನುಸರಿಸುವ ಮುನ್ನ ಮುಷ್ಕರಗಳಿಗೆ ಅವಕಾಶವಿಲ್ಲ. ಎಲ್ಲ ಶಾಂತಿಯುತ ಮಾರ್ಗಗಳೂ ವಿವಾದವನ್ನು ಇತ್ಯರ್ಥಗೊಳಿಸುವುದರಲ್ಲಿ ವಿಫಲವಾದಾಗ ಮಾತ್ರ ಬಂಡವಾಳಗಾರರೂ ಕಾರ್ಮಿಕರೂ ಮುಷ್ಕರಗಳಿಗೆ ಕೈಹಾಕಬೇಕು.

ಮೇಲಿನ ಸಮೀಕ್ಷೆಯಿಂದ ಸರ್ಕಾರಿ ಔದ್ಯಮಿಕ ಸಂಬಂಧಗಳ ವ್ಯವಸ್ಥೆಯಲ್ಲಿ ಗಾಂಧೀಜಿಯವರು ತೋರಿಸಿಕೊಟ್ಟಂತಹ ಮಾರ್ಗದ ಅನೇಕ ಅಂಶಗಳು ಒಳಗೊಂಡಿರುವುದನ್ನು ಗಮನಿಸಬಹುದು. ವಾಸ್ತವವಾಗಿ ಭಾರತಸರ್ಕಾರದ ಔದ್ಯಮಿಕ ಸಂಬಂಧಗಳ ನೀತಿಯ ಮೇಲೆ ಗಾಂಧೀಜಿಯವರ ಮಾರ್ಗದ

---

3 ಗಾಂಧಿಯವರ ದಾರ್ಶನಿಕ ತತ್ತ್ವಗಳ ಆಧಾರದ ಮೇಲೆ ಅವರ ನೇತೃತ್ವದಲ್ಲೇ ಸ್ಥಾಪಿಸಲ್ಪಟ್ಟ 'ಅಹಮದಾಬಾದ್ ಹತ್ತಿ ಗಿರಣಿ ಕಾರ್ಮಿಕ ಸಂಘ' ಗಾಂಧೀಜಿಯವರ ಮುಂದಾಳುತ್ವದಲ್ಲಿಯೇ ಅನೇಕ ವರ್ಷಗಳು ಕೆಲಸ ಮಾಡಿದುದನ್ನು ಓದುಗರು ಗಮನಿಸಬಹುದು.

4 Cf., *Industrial Disputes Act*, 1947 ಹಾಗೂ 1956 ಮತ್ತು, ಅನಂತರದ ತಿದ್ದುಪಡಿಗಳು

ಪ್ರಭಾವ ಸಾಕಷ್ಟಿದೆ. ಇದಲ್ಲದೆ ಕಾರ್ಮಿಕರ ರಾಷ್ಟ್ರೀಯ ಮಟ್ಟದ ಸಂಯುಕ್ತ ಸಂಘಗಳಲ್ಲಿ ಅತಿ ಮುಖ್ಯವಾದ ಭಾರತೀಯ ರಾಷ್ಟ್ರೀಯ ಕಾರ್ಮಿಕ ಸಂಘದ ಕಾಂಗ್ರೆಸ್ ಔದ್ಯಮಿಕ ಸಂಬಂಧಗಳ ಬಗ್ಗೆ ಗಾಂಧೀಜಿಯವರ ಮಾರ್ಗವನ್ನೇ ಅನುಸರಿಸುತ್ತೇವೆ ಎಂದು ಸಾರಿಹೇಳುತ್ತದೆ. ಇದಕ್ಕೆ ಒಂದು ಕಾರಣವೂ ಉಂಟು. ಮೇಲೆ ಹೇಳಿದ ಕಾಂಗ್ರೆಸ್ಸನ್ನು ಗಾಂಧೀಜಿಯವರು ಸ್ಥಾಪಿಸಿ ಬೆಳೆಸಿದ ಅಹಮದಾಬಾದ್ ಹತ್ತಿ ಗಿರಣಿ ಕಾರ್ಮಿಕರ ಸಂಘದ ಮಾದರಿಯಲ್ಲಿ ವ್ಯವಸ್ಥಾಪಿಸಲಾಯಿತು. ಅಹಮದಾಬಾದ್ ಹತ್ತಿ ಗಿರಣಿ ಕಾರ್ಮಿಕರ ಸಂಘ ಗಾಂಧೀಜಿಯವರು ಹಾಕಿಕೊಟ್ಟ ಅಹಿಂಸಾತ್ಮಕ ಹಾಗೂ ಶಾಂತಿಯುತವಾದ ಮಾರ್ಗವನ್ನು ಅನುಸರಿಸುತ್ತ ಬಂದಿತ್ತು. ಭಾರತ ರಾಷ್ಟ್ರೀಯ ಕಾರ್ಮಿಕ ಸಂಘದ ಕಾಂಗ್ರೆಸ್ಸಿನ ಮುಂದಾಳುಗಳೆಲ್ಲರೂ ತಮ್ಮ ಸಂಘ ಗಾಂಧೀಜಿಯವರು ಹಾಕಿಕೊಟ್ಟ ಮಾರ್ಗಗಳನ್ನೇ ಅನುಸರಿಸುತ್ತೇವೆ ಎಂದು ಹೇಳಿಕೊಂಡಿದ್ದಾರೆ[5].

ಆದರೆ ಇಲ್ಲಿ ಪರಿಶೀಲನೆಗೆ ಒಳಪಡಿಸಬೇಕಾದ ಅಂಶ ಗಾಂಧೀಜಿಯವರು ತೋರಿಸಿಕೊಟ್ಟ ಮಾರ್ಗ ನಮ್ಮಲ್ಲಿ ಕಾರ್ಯತಃ ಅನುಷ್ಠಾನದಲ್ಲಿದೆಯೆ ಎಂಬುದು. ಮೇಲೆ ವಿವರಿಸಿದ ಗಾಂಧೀಜಿಯವರು ಮನಗಂಡಂತಹ ಶಾಂತಿಯುತ ಔದ್ಯಮಿಕ ಸಮಾಜದ ಮೂರು ಮುಖ್ಯ ಲಕ್ಷಣಗಳನ್ನು ಗಮನಿಸಬಹುದು:

1 ಬಂಡವಾಳಗಾರರು ತಮ್ಮ ಸೇವೆಗೆ ತಕ್ಕ ಪ್ರತಿಫಲವನ್ನು ಮಾತ್ರ ತೆಗೆದುಕೊಂಡು ಕಾರ್ಮಿಕರಿಗೆ ಆಹಾರ, ಬಟ್ಟೆ, ವಸತಿ ಮುಂತಾದ ಅವಶ್ಯಕತೆಗಳನ್ನು ಪೂರೈಸುವಂತಹ ವೇತನವನ್ನು ಕೊಡಬೇಕು.

2 ಒಂದು ವೇಳೆ ಹಾಗೆ ಮಾಡದೆ ಬಂಡವಾಳಗಾರರು ಕಾರ್ಮಿಕರ ದುಡಿಮೆಯಿಂದ ಪ್ರಯೋಜನ ಪಡೆಯುತ್ತಿದ್ದು ಅವರನ್ನು ಸುಲಿಗೆಮಾಡುತ್ತಿದ್ದರೆ ಕಾರ್ಮಿಕರು ಬಂಡವಾಳಗಾರರನ್ನು ನೈತಿಕ ಮೊರೆಗಳ ಮೂಲಕ ಪರಿವರ್ತಿಸತಕ್ಕದ್ದು.

3 ಬಂಡವಾಳಗಾರರು ನೈತಿಕ ಮೊರೆಗಳಿಗೆ ಕಿವಿಗೊಡದಿದ್ದರೆ ಕಾರ್ಮಿಕರೆಲ್ಲರೂ ಒಡಗೂಡಿ ಅಹಿಂಸಾತ್ಮಕ ಅಸಹಕಾರ ಚಳವಳಿಯನ್ನು ಕೈಗೊಂಡು ಬಂಡವಾಳಗಾರರನ್ನು ತಮ್ಮ ಕಡೆಗೆ ಒಲಿಸಿಕೊಳ್ಳಬೇಕು. ಈ ಸಂದರ್ಭದಲ್ಲಿ ಮುಷ್ಕರ ಹೂಡುವ ಆವಶ್ಯಕತೆ ಬಿದ್ದರೂ ಚಿಂತೆಯಿಲ್ಲ. ಆದರೆ ಮುಷ್ಕರದಲ್ಲೂ ಸತ್ಯ ಮತ್ತು ಅಹಿಂಸೆಗಳನ್ನು ಬಿಡಬಾರದು.

ಈಗ ಭಾರತದಲ್ಲಿಯ ಔದ್ಯಮಿಕ ಸಂಬಂಧಗಳ ವ್ಯವಸ್ಥೆಯನ್ನು ಮೇಲಿನ ದೃಷ್ಟಿಯಿಂದ ನೋಡೋಣ. ಮೊದಲನೆಯದಾಗಿ ಗಾಂಧೀಜಿಯವರು ಮನಗಂಡಂತೆ ಬಂಡವಾಳಗಾರರು ನಡೆದುಕೊಳ್ಳಲಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಆರ್ಥಿಕ ದೃಷ್ಟಿಯಿಂದ ನಮ್ಮ ದೇಶ ಸ್ವಲ್ಪ ಮುಂದುವರಿದಿದ್ದರೂ ವ್ಯವಸಾಯೋದ್ಯಮ ಹಾಗೂ ಸ್ವದೇಶ ಕೈಗಾರಿಕಾ ಕ್ಷೇತ್ರವೆನಿಸುವ, ಕಾರ್ಮಿಕರು ಸಾಕಷ್ಟು ಪ್ರಮಾಣದಲ್ಲಿ ಸಂಘಟಿತರಾಗದ ಕ್ಷೇತ್ರಗಳಲ್ಲಿ ಕಾರ್ಮಿಕರ ಆರ್ಥಿಕ ಜೀವನ ಶೋಚನೀಯವಾಗಿದೆ. ಈ ಅವಸ್ಥೆಗೆ ಸಾಮಾನ್ಯವಾಗಿ ಕೊಡುವ ಕಾರಣವೇನೆಂದರೆ ಇಲ್ಲಿ ಕಾರ್ಮಿಕರು ಕಾರ್ಮಿಕ ಸಂಘಗಳನ್ನು ಸ್ಥಾಪಿಸಿ ಚೌಕಾಸಿ ಸಾಮರ್ಥ್ಯವನ್ನು ವೃದ್ಧಿಗೊಳಿಸಿಕೊಳ್ಳಲಿಲ್ಲ ಎಂಬುದು. ಆದರೆ ಕಾರ್ಮಿಕ ಸಂಘಗಳು ಪ್ರಬಲವಾಗಿರುವ ವ್ಯವಸ್ಥಿತ ಕೈಗಾರಿಕಾ ಕ್ಷೇತ್ರದಲ್ಲಿ ಪರಿಸ್ಥಿತಿ ಸುಧಾರಿಸಿದೆಯೆ? ಈ ಕ್ಷೇತ್ರದಲ್ಲಿಯೂ ಸಹ ಕೆಲವು ಅಧ್ಯಯನಗಳು ತೋರಿಸಿಕೊಡುವಂತೆ ಕಾರ್ಮಿಕರ ಉತ್ಪಾದನಸಾಮರ್ಥ್ಯ ಸಾಕಷ್ಟು ಹೆಚ್ಚಿದ್ದರೂ ಅವರ ನಿಜ ವೇತನ ಮಟ್ಟ ಸುಧಾರಿಸಿಲ್ಲ[6]. ಆದರೆ ಬಂಡವಾಳಗಾರರು ಪಡೆಯುತ್ತಿರುವ

---

5 ನೋಡಿ: Ramanujam, G.; *Industrial Relalions—A Point of View* (New Delhi: Indian National Trade Union Congress, 1965)

6 ಉದಾಹರಣೆಗೆ ನೋಡಿ: Abdul Aziz, "Wages in Policy and Practice in India", *Eastern Economist, Annual Number* (Dec. 1970)

ಲಾಭದ ಪ್ರಮಾಣದ ಮಟ್ಟ ವರ್ಷವರ್ಷವೂ ಏರುತ್ತ ಹೋಗುತ್ತದೆ[7]. ಇಲ್ಲಿ ಕಾರ್ಮಿಕರು ಅವರ ಅಧಿಕೋತ್ಪತ್ತಿ ಸಾಮರ್ಥ್ಯದಿಂದ ಏನೇನೂ ಪ್ರಯೋಜನ ಪಡೆಯುತ್ತಿಲ್ಲವೆಂದರ್ಥವಲ್ಲ. ಆದರೆ ಔದ್ಯಮಿಕ ಅಭಿವೃದ್ಧಿಯಿಂದ ಅವರಿಗೆ ನ್ಯಾಯವಾಗಿ ಸಿಗಬೇಕಾಗಿದ್ದ ಫಲ ದೊರೆತಿಲ್ಲವಷ್ಟೆ.

ಹೀಗೆ ನ್ಯಾಯವಾಗಿ ಸಿಗಬೇಕಾಗಿದ್ದ ಫಲ ದೊರೆಯದಿದ್ದಾಗ ಕಾರ್ಮಿಕರ ಪ್ರತಿಕ್ರಿಯೆ ಏನು. ಈ ಸನ್ನಿವೇಶವನ್ನು ಸರಿಪಡಿಸಲು ಅವರು ಅನುಸರಿಸಿದ ಮಾರ್ಗ ಯಾವುದು ಎಂಬ ಪ್ರಶ್ನೆ ಏಳುವುದು ಸ್ವಾಭಾವಿಕ. ಇಲ್ಲಿ ಕಾರ್ಮಿಕರ ಪ್ರತಿಕ್ರಿಯೆಯ ಸ್ವಭಾವವನ್ನು ಕುರಿತು ಹೇಳುವುದಕ್ಕೆ ಮೊದಲು ಸರ್ಕಾರ ಈ ಸನ್ನಿವೇಶವನ್ನು ಸರಿಪಡಿಸಲು ಕೈಗೊಂಡ ಕ್ರಮಗಳ ಬಗ್ಗೆ ತಿಳಿಯುವುದು ಅವಶ್ಯಕ. ಏಕೆಂದರೆ ಭಾರತದಲ್ಲಿ ಕಾಲಾಂತರದಿಂದ ಔದ್ಯಮಿಕ ಸಂಬಂಧಗಳ ವ್ಯವಸ್ಥೆಯಲ್ಲಿ ಸರ್ಕಾರದ ಪಾತ್ರ ಅವಶ್ಯಕತೆಗಿಂತ ಅಧಿಕವಾಗಿದ್ದು ಕಾರ್ಮಿಕರ ಎಷ್ಟೋ ಸಮಸ್ಯೆಗಳಿಗೆ ಶಾಸನಗಳ ಮೂಲಕ ಹಾಗೂ ತನ್ನ ಮಧ್ಯಪ್ರವೇಶಿಕೆಯ ಮೂಲಕ ಪರಿಹಾರವನ್ನು ಕೊಡುವ ಪ್ರಯತ್ನ ಮಾಡಿದೆ. ಉದಾಹರಣೆಗೆ, ಕಾರ್ಮಿಕರಲ್ಲಿ ವ್ಯವಸ್ಥೆ ಕಂಡುಬರದ ಸ್ವೇದನ ಕೈಗಾರಿಕಾ ಕ್ಷೇತ್ರದಲ್ಲಿ ಸರ್ಕಾರ ಕನಿಷ್ಠ ವೇತನ ಶಾಸನದ ಮೂಲಕ ಕಾರ್ಮಿಕರ ಆರ್ಥಿಕ ಜೀವನವನ್ನು ಸುಧಾರಿಸುವ ಪ್ರಯತ್ನ ಮಾಡಿದೆ. ವ್ಯವಸ್ಥಿತ ಕೈಗಾರಿಕಾ ಕ್ಷೇತ್ರದಲ್ಲಿಯೂ ಸಹ ವೇತನ ಮತ್ತಿತರ ವಿಷಯಗಳಿಗೆ ಸಂಬಂಧಿಸಿದ ವಿವಾದಗಳನ್ನು ಶಾಸನಬದ್ಧವಾಗಿ ಸ್ಥಾಪಿಸಲ್ಪಟ್ಟ ಔದ್ಯಮಿಕ ಕೋರ್ಟು ಔದ್ಯಮಿಕ ಟ್ರಿಬ್ಯೂನಲ್‌ಗಳಂತಹ ಸಂಸ್ಥೆಗಳ ತೀರ್ಮಾನಕ್ಕೆ ಒಳಪಡಿಸಿ ಇತ್ಯರ್ಥಗೊಳಿಸುವ ವ್ಯವಸ್ಥೆ ಮಾಡಿದೆ. ಇಲ್ಲಿ ಪರಸ್ಪರ ಸಂಧಾನದ ಮೂಲಕ ತೀರ್ಮಾನವಾಗದಿದ್ದ ಪಕ್ಷದಲ್ಲಿ ಮಾತ್ರ ವಿವಾದಗಳನ್ನು ಶಾಸನಬದ್ಧ ಸಂಸ್ಥೆಗಳಿಗೆ ಕಳುಹಿಸುವುದೇನೋ ನಿಜ. ಆದರೆ ಶಾಸನ ಮಾರ್ಗದಲ್ಲಿ ಗಾಂಧೀಜಿಯವರು ಅನುಮೋದಿಸದ ನಿರ್ಬಂಧ ಅಥವಾ ಒತ್ತಾಯದ ಅಂಶ ಇರುವ ಕಾರಣ ಈ ಮಾರ್ಗ ಗಾಂಧೀಜಿಯವರ ಮಾರ್ಗವೆನಿಸುವುದಿಲ್ಲ.

ಆದರೂ ಕಾರ್ಮಿಕರಲ್ಲಿ ಆರ್ಥಿಕ ಜೀವನವನ್ನು ಸುಧಾರಿಸಲು ಸರ್ಕಾರ ಕೈಗೊಂಡ ಕ್ರಮಗಳೆಲ್ಲವೂ ನಿರ್ಬಂಧ ರೂಪದವೆಂದರ್ಥವಲ್ಲ. ಗಾಂಧೀಜಿಯವರು ಸೂಚಿಸಿದ ನೈತಿಕ ಹೊರೆಗಳ ಮೂಲಕ ಬಂಡವಾಳಗಾರರನ್ನು ಪರಿವರ್ತಿಸಲು ಅನುಸರಿಸಿದ ಮಾರ್ಗಗಳನ್ನು ಸರ್ಕಾರ ಯೋಜಿಸಿರುವುದುಂಟು. ವ್ಯವಸ್ಥಿತ ಕೈಗಾರಿಕೋದ್ಯಮಗಳಿಗೆ ಸಂಬಂಧಿಸಿದಂತೆ ರಾಷ್ಟ್ರೀಯ ಮಟ್ಟದಲ್ಲಿ ವೇತನ ಕ್ರಮಪಡಿಸುವಿಕೆಯನ್ನು ಕೈಗೊಳ್ಳುವ ವೇತನ ಮಂಡಳಿಗಳನ್ನು ತೆಗೆದುಕೊಳ್ಳೋಣ. ಈ ಮಂಡಳಿಗಳು ಸರ್ಕಾರ. ಬಂಡವಾಳಗಾರ ಹಾಗೂ ಕಾರ್ಮಿಕರ ಪ್ರತಿನಿಧಿಗಳಿಂದ ಸಂಯೋಜಿತವಾಗಿರುವ ಕಾರಣ ಇಲ್ಲಿ ಪರಸ್ಪರ ಸಂಧಾನಕ್ಕೆ ಅವಕಾಶ ಮಾಡಿಕೊಟ್ಟಂತಾಯಿತು. ಸರ್ಕಾರಕ್ಕೂ ಇಲ್ಲಿ ಬಂಡವಾಳಗಾರರ ಮೇಲೆ ನೈತಿಕ ಒತ್ತಾಯವನ್ನು (ನಿರ್ಬಂಧದ ಒತ್ತಾಯವಲ್ಲ) ಪ್ರಯೋಗಿಸಿ ಕಾರ್ಮಿಕರ ಆರ್ಥಿಕ ಜೀವನಮಟ್ಟವನ್ನು ಸುಧಾರಿಸುವ ಬಗ್ಗೆ ಒಲಿಸಿಕೊಳ್ಳುವ ಪ್ರಯತ್ನ ಮಾಡುವ ಅವಕಾಶವುಂಟು. ಅಲ್ಲದೆ ಸರ್ಕಾರ ಪ್ರತಿ ವರ್ಷವೂ ರಾಷ್ಟ್ರೀಯ ಮಟ್ಟದಲ್ಲಿ ಕೂಡಿಸುವ ಭಾರತೀಯ ಕಾರ್ಮಿಕರ ಸಮ್ಮೇಳನದಲ್ಲಿಯೂ ಇದೇ ಬಗೆಯ ನೈತಿಕ ಒತ್ತಾಯವನ್ನು ಬಂಡವಾಳಗಾರರ ಮೇಲೆ ಪ್ರಯೋಗಿಸುವುದು. ಇಲ್ಲಿಯೂ ಸರ್ಕಾರ. ಉದ್ಯಮಿಗಳು ಹಾಗೂ ಕಾರ್ಮಿಕರ ಪ್ರತಿನಿಧಿಗಳು ಕೂಡಿದ್ದು ರಾಷ್ಟ್ರೀಯ ಮಟ್ಟದ ಕಾರ್ಮಿಕ ಸಮಸ್ಯೆಗಳ ಬಗ್ಗೆ ಕೆಲವು ನಿರ್ಧಾರಗಳನ್ನು ಕೈಗೊಳ್ಳಲಾಗುವುದು. ಈ ನಿರ್ಧಾರಗಳು ಸಮ್ಮೇಳನದಲ್ಲಿ ಭಾಗವಹಿಸಿದ ಸದಸ್ಯರ ಸಂಧಾನದ ಪರಿಣಾಮವಾಗಿ ಅಸ್ತಿತ್ವಕ್ಕೆ ಬರುತ್ತವೆ ಎಂಬುದನ್ನು ಗಮನಿಸಬೇಕು.

ಹೀಗೆ ಸರ್ಕಾರ ರಾಷ್ಟ್ರೀಯ ಮಟ್ಟದಲ್ಲಿ ಕೂಡಿಸುವ ಕೆಲವು ಸಂಸ್ಥೆಗಳ ಮೂಲಕ ಬಂಡವಾಳಗಾರರ ಮೇಲೆ ನೈತಿಕ ಒತ್ತಾಯವನ್ನು ಪ್ರಯೋಗಿಸುವುದನ್ನು ಕಾಣಬಹುದು. ಇದೇ ಸಂಸ್ಥೆಗಳಲ್ಲಿಯೂ ಕಾರ್ಮಿಕರಿಗೆ ಬಂಡವಾಳಗಾರರನ್ನು ನೈತಿಕ ಪೊರೆಗಳ ಮೂಲಕ ಒಲಿಸಿಕೊಳ್ಳುವ ಅವಕಾಶವೂ ಸಿಗುವಂತಾಗುತ್ತದೆ. ಉದಾಹರಣೆಗೆ. ವಾರ್ಷಿಕ ಭಾರತೀಯ ಕಾರ್ಮಿಕ ಸಮ್ಮೇಳನದಲ್ಲಿ ಮೂರು ದಶಕಗಳ ಇತಿಹಾಸದಲ್ಲಿ ಚರ್ಚೆಗೆ ಬಂದ ಸಂಗತಿಗಳು ಅನೇಕ; ಆದರೆ ಅವುಗಳಲ್ಲಿ ಮುಖ್ಯವಾದವು ಕಾರ್ಮಿಕರ

---

7 ಈ ಬಗ್ಗೆ ನೋಡಿ: *Reserve Bank of India Bulletin*, Nov. 1958. Nov. 1961 ಹಾಗೂ Dec. 1966

ವೇತನ, ಸಾಮಾಜಿಕ ಹಾಗೂ ಆರ್ಥಿಕ ಭದ್ರತೆ, ಉದ್ಯೋಗ ಹಾಗೂ ಕೆಲಸದ ಪರತ್ತುಗಳು8. ಈ ಸಂಗತಿಗಳ ಬಗ್ಗೆ ರಾಷ್ಟ್ರೀಯ ಮಟ್ಟದಲ್ಲಿ ಕಾರ್ಮಿಕರು ಹಾಗೂ ಸರ್ಕಾರ ಸ್ಥೂಲವಾದ ಕೆಲವು ನಿರ್ಣಾಯಕಗಳಿಗೆ ಉದ್ಯಮಿಗಳು ಒಪ್ಪಿಕೊಳ್ಳುವಂತೆ ಅವರ ಮೇಲೆ ನೈತಿಕ ಬಲಪ್ರಯೋಗಮಾಡುತ್ತವೆ. ವೇತನ ಮಂಡಳಿ ಹಾಗೂ ಭಾರತೀಯ ಕಾರ್ಮಿಕ ಸಮ್ಮೇಳನಗಳು ಮೇಲೆ ವಿವರಿಸಿದ ಸಂಗತಿಗಳ ಬಗ್ಗೆ ರಾಷ್ಟ್ರೀಯ ಮಟ್ಟದಲ್ಲಿ ಸ್ಥೂಲವಾದ ನಿರ್ಣಾಯಕಗಳನ್ನು ಮಾತ್ರ ವಿಕಸನಗೊಳಿಸುವ ಕಾರಣ ಅವುಗಳನ್ನು ಕಾರ್ಯರೂಪಕ್ಕೆ ತರುವ ಸಂದರ್ಭದಲ್ಲಿ ಒಂದು ಹೊಸ ಸಮಸ್ಯೆ ಉದ್ಭವಿಸುತ್ತದೆ. ಪ್ರತಿ ಉದ್ಯಮ ಸಂಸ್ಥೆಯ ಆರ್ಥಿಕ ಪರಿಸ್ಥಿತಿ ಬೇರೆ ಬೇರೆ ರೂಪದಲ್ಲಿರುತ್ತದೆ. ಆಗ ರಾಷ್ಟ್ರೀಯ ಮಟ್ಟದಲ್ಲಿ ವಿಕಸಿತಗೊಂಡ ನಿರ್ಣಾಯಕಗಳನ್ನು ಎಲ್ಲ ಉದ್ಯಮ ಸಂಸ್ಥೆಗಳಿಗೂ ಏಕರೀತಿಯಲ್ಲಿ ಅನ್ವಯಿಸುವಂತೆ ಕ್ರಮಕೈಗೊಳ್ಳುವುದು ಸರಿಯೆನಿಸುವುದಿಲ್ಲ. ಈ ನ್ಯೂನತೆಯನ್ನು ತೊಡೆದುಹಾಕುವ ದೃಷ್ಟಿಯಿಂದ ಹಲವು ವೇಳೆ ರಾಷ್ಟ್ರೀಯ ಮಟ್ಟದಲ್ಲಿ ಕೈಗೊಂಡ ನಿರ್ಣಾಯಕಗಳನ್ನು ಉದ್ಯಮ ಸಂಸ್ಥೆಗೆ ಅನ್ವಯಿಸುವಾಗ ಉದ್ಯಮ ಸಂಸ್ಥೆಯ ಮಟ್ಟದಲ್ಲಿ ಕಾರ್ಮಿಕರು ಹಾಗೂ ಉದ್ಯಮಿಗಳು ಪರಸ್ಪರ ಸಂಧಾನದಿಂದ ಒಂದು ನಿರ್ಣಯಕ್ಕೆ ಬರಬೇಕು ಎಂಬ ವ್ಯವಸ್ಥೆಯನ್ನು ಮಾಡಲಾಗಿದೆ.

ರಾಷ್ಟ್ರೀಯ ಮಟ್ಟದಲ್ಲಿ ಉದ್ಯಮಿಗಳ ಮೇಲೆ ನೈತಿಕ ಬಲವನ್ನು ಪ್ರಯೋಗಿಸುವ ಕಾರ್ಮಿಕರು ಉದ್ಯಮ ಸಂಸ್ಥೆಯ ಮಟ್ಟದಲ್ಲೂ ಗಾಂಧೀಜಿಯವರು ತೋರಿಸಿಕೊಟ್ಟ ಮಾರ್ಗವನ್ನೇ ಅನುಸರಿಸಿದ್ದಾರೆಯೇ-ನೋಡೋಣ. ಗಾಂಧೀಜಿಯವರ ಮಾರ್ಗಾನುಸಾರ ಬಂಡವಾಳಗಾರ ನೈತಿಕ ಮೊರೆಗಳಿಗೆ ಕಿವಿಗೊಡದಿದ್ದರೆ ಕಾರ್ಮಿಕರು ಅಹಿಂಸಾತ್ಮಕ ಅಸಹಕಾರ ಚಳವಳಿಯ ಮೂಲಕ ಅವನನ್ನು ಒಲಿಸಿಕೊಳ್ಳಬೇಕು ಹಾಗೂ ಆದಷ್ಟುಮಟ್ಟಿಗೆ ಶಾಂತಿಯುತ ಮಾರ್ಗವನ್ನನುಸರಿಸಿ ಸಂಧಾನದ ಮೂಲಕ ವಿವಾದಗಳನ್ನು ಇತ್ಯರ್ಥಪಡಿಸಿಕೊಳ್ಳಬೇಕು. ಔದ್ಯಮಿಕ ವಿವಾದಗಳು ಹಾಗೂ ಇವುಗಳ ಕಾರಣ ಮುಷ್ಕರ ಹೂಡಿದ ಕಾರ್ಮಿಕರ ಸಂಖ್ಯೆ ಮತ್ತು ಮುಷ್ಕರದಿಂದ ಕೆಲಸ ನಿಂತ ದಿನಗಳ ಸಂಖ್ಯೆಯನ್ನು ಪರಿಶೀಲಿಸಿದರೆ9 ಕಾರ್ಮಿಕರು ಪರಸ್ಪರ ಸಂಧಾನಕ್ಕೆ ಬದಲಾಗಿ ಬಲಪ್ರಯೋಗವನ್ನೇ ಎಷ್ಟು ಸಾರಿ ಮಾಡಿದ್ದಾರೆ ಎಂಬುದು ಅರಿವಾಗುತ್ತದೆ. ಅಲ್ಲದೆ ಇಂತಹ ಮುಷ್ಕರಗಳು ಅನೇಕ ಸಾರಿ ಹಿಂಸಾತ್ಮಕ ರೂಪತಾಳಿ ಪ್ರಾಣ ಹಾಗೂ ಸ್ವತ್ತು ಹಾನಿಯಲ್ಲಿ ಅವಸಾನಗೊಂಡುದೂ ಉಂಟು. ಈಚೆಗೆ ಕಾರ್ಮಿಕರು 'ಘೇರಾವೊ' ಎಂಬ ಅಸ್ತ್ರವನ್ನು ಉದ್ಯಮಿಗಳ ಮೇಲೆ ಅಥವಾ ಉದ್ಯಮದ ಕಾರ್ಯನಿರ್ವಾಹಕದ ಸಿಬ್ಬಂದಿಯ ಮೇಲೆ ಪ್ರಯೋಗಿಸಿ ಅವರನ್ನು ಹಿಂಸೆಗೊಳಪಡಿಸಲು ಪ್ರಾರಂಭಿಸಿದ್ದಾರೆ. ಅಲ್ಲದೆ ದೆಹಲಿಯ ಸರ್ಕಾರಿಕ್ಷೇತ್ರದ ಒಂದು ಕಾರ್ಖಾನೆಯ ಆಡಳಿತವರ್ಗದ ಸುಮಾರು ನೂರು ಮಂದಿಯನ್ನು ಕಾರ್ಮಿಕರು ಸುಡುವ ಪ್ರಯತ್ನವನ್ನು ಕೈಗೊಂಡಿದ್ದ ಸಂಗತಿಯನ್ನು ನಾವಿನ್ನೂ ಮರೆತಿಲ್ಲ. ಇದರ ಜೊತೆಗೆ ಕಾರ್ಮಿಕರು ಕಾರ್ಖಾನೆಯಲ್ಲಿ ಕುಳಿತು ಮುಷ್ಕರ ಹೂಡುವುದು, ಉಪಕರಣ ಹಾಗೂ ಯಂತ್ರಗಳನ್ನು ನಷ್ಟಪಡಿಸುವುದು, ಉದ್ಯಮಿಗಳನ್ನು ಬೆದರಿಸುವುದೇ ಮೊದಲಾದ ಎಷ್ಟೋ ಸಂದರ್ಭಗಳನ್ನು ಉದಾಹರಿಸಬಹುದು. ಮೇಲಿನ ನಿದರ್ಶನಗಳು ಗಾಂಧೀಜಿಯವರು ತೋರಿಸಿಕೊಟ್ಟ ಮಾರ್ಗವನ್ನು ಕಾರ್ಮಿಕರು ಕಾರ್ಯರೂಪದಲ್ಲಿ ಎಷ್ಟರ ಮಟ್ಟಿಗೆ ಅನುಸರಿಸುತ್ತಿದ್ದಾರೆ ಎಂಬುದರ ಬಗ್ಗೆ ಸಾಕಷ್ಟು ಸಾಕ್ಷಿ ಹೇಳುತ್ತವೆ.

ಮೇಲಿನ ಸಮೀಕ್ಷೆಯಿಂದ ಕೆಲವು ಅಂಶಗಳು ನಮ್ಮ ಗಮನಕ್ಕೆ ಬರುತ್ತವೆ. ಒಂದನೆಯದಾಗಿ, ಗಾಂಧೀಜಿಯವರು ಮನಗಂಡಂತಹ ನ್ಯಾಸಧಾರಿಕೆ ವ್ಯವಸ್ಥೆ ನಮ್ಮ ಸಮಾಜದಲ್ಲಿ ಅನುಷ್ಠಾನಕ್ಕೆ ಬಂದಿಲ್ಲ. ಕೈಗಾರಿಕೋದ್ಯಮಗಳಲ್ಲಿ ಈಚೆಗೆ ಉತ್ಪತ್ತಿಸಾಮರ್ಥ್ಯ ಅಧಿಕ ಪ್ರಮಾಣದಲ್ಲಿ ಏರಿಕೆ

---

8 ಭಾರತೀಯ ಕಾರ್ಮಿಕ ಸಮ್ಮೇಳನದಲ್ಲಿ ವಿವೇಚನೆಗೊಳಪಟ್ಟ ಸಂಗತಿಗಳ ಕೂಲಂಕಷ ವಿವರಣೆಗೆ ನೋಡಿ: Mathur and Sheth, *Tripartism in Labour Policy*: (New Delhi: Shri Ram Center for Industrial Relations, 1969)

9 ಈ ಬಗ್ಗೆ ನೋಡಿ: Johri, *Unionism in a Developing Economy* (Bombay: Asia Publishing House, 1967)

ತೋರಿಸಿದ್ದರೂ ಕಾರ್ಮಿಕರ ಆರ್ಥಿಕ ಜೀವನಪರಿಸ್ಥಿತಿ ಸುಧಾರಿಸಿಲ್ಲ. ಅವರ ನಿಜ ವೇತನ ಮಟ್ಟದಲ್ಲಿ ಏನೊಂದೂ ಏರಿಕೆ ಕಂಡುಬಂದಿಲ್ಲ. ಉದ್ಯಮಿಗಳಾದರೋ ತಮ್ಮ ಸೇವೆಗನುಗುಣವಾದ ಪ್ರತಿಫಲವನ್ನು ಪಡೆಯುವುದಕ್ಕೆ ಬದಲಾಗಿ ಅಧಿಕ ಪ್ರಮಾಣದ ಲಾಭವನ್ನು ಗಳಿಸುತ್ತ ಬಂದಿದ್ದಾರೆ. ಎರಡನೆಯದಾಗಿ ಸರ್ಕಾರ ತನ್ನ ಔದ್ಯಮಿಕ ಸಂಬಂಧಗಳ ನೀತಿಯಲ್ಲಿ ಗಾಂಧೀಜಿಯವರ ಮಾರ್ಗವನ್ನೇ ಬಹುಮಟ್ಟಿಗೆ ಅನುಸರಿಸಿರುವುದು ನಿಜ. ಹಾಗೂ ಸರ್ಕಾರ ಮತ್ತು ಕಾರ್ಮಿಕರು ಗಾಂಧೀಜಿಯವರು ಸಲಹೆ ನೀಡಿದಂತೆ ರಾಷ್ಟ್ರೀಯ ಮಟ್ಟದಲ್ಲಿ ಬಂಡವಾಳಗಾರರ ಮೇಲೆ ನೈತಿಕ ಬಲಪ್ರಯೋಗ ಮಾಡಿ ಅವರನ್ನು ಕಾರ್ಮಿಕರ ಸಮಸ್ಯೆಗಳ ಬಗ್ಗೆ ಅನುಕಂಪ ದೃಷ್ಟಿಯಿಡುವಂತೆ ಒಲಿಸಿಕೊಳ್ಳುವ ಪ್ರಯತ್ನವನ್ನೂ ಮಾಡಿರುವುದು ನಿಜ. ಆದರೆ ಉದ್ಯಮ ಸಂಸ್ಥೆಯ ಮಟ್ಟದಲ್ಲಿ ಕಾರ್ಮಿಕರು ತಮ್ಮ ಸಮಸ್ಯೆಗಳ ಪರಿಹಾರಕ್ಕೆ ಹಾಗೂ ಬಂಡವಾಳಗಾರರೊಡನೆ ಉಂಟಾದ ವಿವಾದಗಳನ್ನು ಇತ್ಯರ್ಥಗೊಳಿಸಲು ಅನುಸರಿಸಿರುವ ಮಾರ್ಗಕ್ಕೂ ಗಾಂಧೀಜಿಯವರು ಸೂಚಿಸಿದ ಮಾರ್ಗಕ್ಕೂ ಅಜಗಜಾಂತರ. 'ಘೇರಾವೊ. ಬೆದರಿಸುವಿಕೆ. ಯಂತ್ರಗಳನ್ನು ಧ್ವಂಸಮಾಡುವುದು. ಹಿಂಸಾತ್ಮಕ ಕೃತ್ಯಗಳನ್ನೆಸಗುವುದು ಇವೇ ಮೊದಲಾದ ಕಾರ್ಮಿಕರ ಕ್ರಮಗಳಿಗೆ ಗಾಂಧೀಜಿಯವರ ಮಾರ್ಗದಲ್ಲಿ ಅವಕಾಶವಿಲ್ಲ. ಆದರೆ ಇಲ್ಲಿ ಕಾರ್ಮಿಕ ಕೈಗೊಳ್ಳುವ ಕ್ರಮಗಳು ನ್ಯಾಯಬಾಹಿರವಾದವೆಂಬ ಗುಣಾತ್ಮಕವಾದ ನಿರ್ಣಯವನ್ನು ಕೊಡುವುದು ನಮ್ಮ ಧ್ಯೇಯವಲ್ಲ. ಕಾರ್ಮಿಕರು ಇಂತಹ ಕ್ರಮಗಳನ್ನು ಕೈಗೊಳ್ಳಲು ಬೇರೆ ಕಾರಣಗಳಿವೆ. ಇಲ್ಲಿ ನಮ್ಮ ಮುಖ್ಯ ಧ್ಯೇಯವೆಂದರೆ ಔದ್ಯಮಿಕ ಸಂಬಂಧಗಳಲ್ಲಿ ನಾವು ಗಾಂಧೀಜಿಯವರ ಮಾರ್ಗವನ್ನೇ ಅನುಸರಿಸುತ್ತಿದ್ದೇವೆ ಎಂದು ಘೋಷಿಸುವವರಿಗೆ ನಮ್ಮ ಸಂದೇಹವನ್ನು ಸೂಚಿಸುವುದು ಮಾತ್ರ. ಹಾಗೂ ಲೇಖನದ ಆರಂಭದಲ್ಲಿಯೇ ನಾವು ಈ ಲೇಖನದಲ್ಲಿ ಗಾಂಧೀಜಿಯವರ ಮಾರ್ಗದ ಔಚಿತ್ಯವನ್ನು ಪರೀಕ್ಷಿಸುವುದು ನಮ್ಮ ಧ್ಯೇಯವಲ್ಲವೆಂದು ಸ್ಪಷ್ಟಪಡಿಸಿದ್ದೇವೆ. ಅದ್ದರಿಂದ ಇಲ್ಲಿ ಗಾಂಧೀಜಿಯವರ ಮಾರ್ಗವನ್ನು ಔದ್ಯಮಿಕ ಸಂಬಂಧಗಳ ಪಕ್ಷಗಳು ಏಕೆ ಅನುಸರಿಸುತ್ತಿಲ್ಲವೆಂಬ ಅಂಶದ ಬಗ್ಗೆಯೂ ವಿವೇಚಿಸುವುದು ನಮ್ಮ ಧ್ಯೇಯವಲ್ಲ.

ವಸ್ತುಕೋಶ

ಪ್ರೊ. ಕೆ. ಎ. ನೀಲಕಂಠಶಾಸ್ತ್ರಿಗಳಿಗೆ ಸನ್ಮಾನ

ಪ್ರೊ. ನೀಲಕಂಠಶಾಸ್ತ್ರಿಗಳ ಹೆಸರನ್ನು ಕೇಳದ ಇತಿಹಾಸವಿದ್ಯಾರ್ಥಿಯಿಲ್ಲವೆಂದರೆ ಉತ್ಪ್ರೇಕ್ಷೆಯಾಗಲಾರದು. ಅದರಲ್ಲಿಯೂ ದಕ್ಷಿಣ ಭಾರತೀಯ ಇತಿಹಾಸ ಮತ್ತು ಸಂಸ್ಕೃತಿಯ ಅಧ್ಯಯನದಲ್ಲಿ ಅವರದು ಬಲು ದೊಡ್ಡ ಹೆಸರು. ಭಾರತದ ಚರಿತ್ರೆಯೆಂದರೆ ಕೇವಲ ಉತ್ತರ ಭಾರತದ ಚರಿತ್ರೆ ಎಂಬ ಕಾಲವಿತ್ತು. ಮೌರ್ಯರು. ಗುಪ್ತರು. ಪಾಲರು. ಸೇನರು, ಗೂರ್ಜರರು ಮುಂತಾದ ರಾಜವಂಶಗಳ ಬಗೆಗೆ ಪುಟಗಟ್ಟಲೆ ಬರೆದು ಚಾಲುಕ್ಯರು. ಹೊಯ್ಸಳರು, ಕದಂಬರು. ಚೋಳರು. ಪಲ್ಲವರು ಮುಂತಾದ ಅನೇಕ ದಕ್ಷಿಣಭಾರತರಾಜಮನೆತನಗಳನ್ನು ಪೂರ್ಣವಾಗಿ ಕೈಬಿಡುತ್ತಿದ್ದರು. ಇಲ್ಲವೇ ಒಂದೆರಡು ಪುಟಗಳಲ್ಲಿ ಪೂರೈಸುತ್ತಿದ್ದರು. ಇಂತಹ ಪ್ರವೃತ್ತಿಯನ್ನು ಖಂಡಿಸಿ, ದಕ್ಷಿಣ ಭಾರತದ ಇತಿಹಾಸಕ್ಕೆ ಒಂದು ಹೊಸ ಗೌರವವನ್ನು ತಂದುಕೊಟ್ಟ ಕೀರ್ತಿ ಪ್ರೊ. ಕೃಷ್ಣಸ್ವಾಮಿ ಅಯ್ಯಂಗಾರ್ ಮತ್ತು ಪ್ರೊ. ನೀಲಕಂಠಶಾಸ್ತ್ರಿಗಳಿಗೆ ಸೇರುತ್ತದೆ.

ಆಂಧ್ರರಾದ ನೀಲಕಂಠಶಾಸ್ತ್ರಿಗಳು ಕಲಿತದ್ದು ಮದರಾಸಿನಲ್ಲಿ. ಮದರಾಸು ವಿಶ್ವವಿದ್ಯಾನಿಲಯದಲ್ಲಿ 1929ರಿಂದ 1947ರ ವರೆಗೆ ಇತಿಹಾಸದ ಪ್ರಾಧ್ಯಾಪಕರಾಗಿದ್ದರು. ನಿವೃತ್ತರಾದಮೇಲೆ 1952 ರಿಂದ 1956ರ ವರೆಗೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ 'ಇಂಡಾಲಜಿ' ಪ್ರಾಧ್ಯಾಪಕರಾಗಿದ್ದು, ಆ ವಿಭಾಗದ ಬೆಳವಣಿಗೆಗೆ ಸುಭದ್ರವಾದ ತಳಹದಿಯನ್ನು ಹಾಕಿದರು. 1958ರಲ್ಲಿ ಇತಿಹಾಸಕ್ಕೆ ಸಂದ ಸೇವೆಗೋಸ್ಕರ ಭಾರತ ಸರ್ಕಾರ ಶಾಸ್ತ್ರಿಗಳಿಗೆ ಪದ್ಮಭೂಷಣ ಪ್ರಶಸ್ತಿಯನ್ನು ಕೊಟ್ಟಿತು. 1957ರಿಂದ 1971ರ ವರೆಗೆ ಯುನೆಸ್ಕೊ ಇನ್‌ಸ್ಟಿಟ್ಯೂಟ್ ಆಫ್ ಟ್ರೆಡಿಷನಲ್ ಕಲ್ಚರ್ ಸಂಸ್ಥೆಯ ಡೈರೆಕ್ಟರಾಗಿ ಕೆಲಸಮಾಡಿ ಇದೀಗ ನಿವೃತ್ತರಾಗಿದ್ದಾರೆ.

ಪ್ರೊ. ನೀಲಕಂಠಶಾಸ್ತ್ರಿಗಳು ಶ್ರೇಷ್ಠ ವಿದ್ವಾಂಸರು ಮತ್ತು ಬರಹಗಾರರು. ಅವರು ಇಪ್ಪತ್ತೈದಕ್ಕೂ ಹೆಚ್ಚು ಗ್ರಂಥಗಳನ್ನು ರಚಿಸಿದ್ದಾರೆ. ಚೋಳರು ಮತ್ತು ಪಾಂಡ್ಯರ ಮೇಲಿನ ಅವರ ಗ್ರಂಥಗಳು ಇತಿಹಾಸಕ್ಕೆ ಅಮೂಲ್ಯ ಕೊಡುಗೆಗಳು ಮತ್ತು ರಾಜಮನೆತನ ಇತಿಹಾಸಕ್ಕೆ ಉತ್ತಮ ನಿದರ್ಶನಗಳು. ಇವರ ದಕ್ಷಿಣ ಭಾರತ ಇತಿಹಾಸ ಅನೇಕ ಆವೃತ್ತಿಗಳನ್ನು ಕಂಡು. ಆ ಗ್ರಂಥದ ಜನಪ್ರಿಯತೆಗೆ ದ್ಯೋತಕವಾಗಿದೆ. ಭಾರತೀಯ ಇತಿಹಾಸ ಕಾಂಗ್ರೆಸ್‌ಗೆ ಅಧ್ಯಕ್ಷರಾಗಿದ್ದ ಇವರು ಸುಮಾರು ಇನ್ನೂರು ವಿದ್ವತ್ ಪ್ರಬಂಧಗಳನ್ನೂ ಬರೆದಿದ್ದಾರೆ. ಈ ಎಲ್ಲ ಬರವಣಿಗೆಗಳಿಂದ ದಕ್ಷಿಣ ಭಾರತೀಯ ಇತಿಹಾಸದ ಅನೇಕ ಸಮಸ್ಯೆಗಳು ಬಗೆಹರಿದಿವೆ.

ಜ್ಞಾನವೃದ್ಧರೂ ವಯೋವೃದ್ಧರೂ ಆದ ಪ್ರೊ. ಶಾಸ್ತ್ರಿಗಳ ಸೇವೆಯನ್ನು ಕೊಂಡಾಡಲು ಅವರ ಶಿಷ್ಯರೂ ಮಿತ್ರರೂ ಮದರಾಸಿನಲ್ಲಿ ಅವರ ಎಂಬತ್ತನೆಯ ಹುಟ್ಟುಹಬ್ಬವನ್ನು ಆಚರಿಸಿದರು. ಅದರ ಜ್ಞಾಪಕಾರ್ಥವಾಗಿ ಐದುನೂರು ಪುಟಗಳ ಸಂಭಾವನಾ ಗ್ರಂಥವನ್ನು ಶಾಸ್ತ್ರಿಗಳಿಗೆ ಅರ್ಪಿಸಲಾಯಿತು. ಈ ಗ್ರಂಥದಲ್ಲಿ ಭಾರತೀಯ ಮತ್ತು ಪಾಶ್ಚಾತ್ಯ ವಿದ್ವಾಂಸರುಗಳಿಂದ ಬರೆಯಲಾದ ಅರವತ್ತೆರಡು ವಿದ್ವತ್ ಪ್ರಬಂಧಗಳಿವೆ. ಇತಿಹಾಸ. ಶಾಸನಶಾಸ್ತ್ರ. ಕಲೆ. ಪುರಾತತ್ವ. ಭಾಷೆಗಳು. ತತ್ತ್ವಶಾಸ್ತ್ರ, ಆಗ್ನೇಯ ಏಷ್ಯ, ನಾಟ್ಯಶಾಸ್ತ್ರ ಮುಂತಾದ ವಿವಿಧ ಪ್ರಕಾರಗಳಿಗೆ ಸೇರಿದ ಲೇಖನಗಳುಳ್ಳ ಈ ಗ್ರಂಥ ವಿದ್ಯಾರ್ಥಿಗಳಿಗೂ ವಿದ್ವಾಂಸರಿಗೂ ಬಹು ಉಪಯುಕ್ತವಾದದ್ದು ತಮಿಳುನಾಡಿನ ಮುಖ್ಯಮಂತ್ರಿ ಕರುಣಾನಿಧಿಯವರು, ನೆಡುಂಚಳಿಯನ್. ಯುನೆಸ್ಕೋದ ಮ್ಯಾಲ್‌ಕಾಮ್ ಆದಿಶೇಷಯ್ಯ. ಸಾ. ಗಣೇಶನ್. ಸಂಪತ್ ಮೊದಲಾದವರು ಈ ಸಮಾರಂಭದಲ್ಲಿ ಭಾಗವಹಿಸಿ ಶಾಸ್ತ್ರಿಗಳ

ಸೇವೆಯನ್ನು ಕೊಂಡಾಡಿದರು. ಪ್ರೊ. ಶಾಸ್ತ್ರಿಗಳ ಮಾದರಿ ತರುಣ ವಿದ್ವಾಂಸರಿಗೆ ಆದರ್ಶವಾಗಲಿ ಮತ್ತು ಮಾರ್ಗದರ್ಶಕವಾಗಲಿ ಎಂದು ಆಶಿಸಿ ಶಾಸ್ತ್ರಿಗಳಿಗೆ ಆಯುರಾರೋಗ್ಯಗಳು ವರ್ಧಿಸಲಿ ಎಂದು ಹಾರೈಸಬಹುದು.

—ಎ. ವಿ. ಎನ್.

ಮಾನಸಗಂಗೋತ್ರಿಯಲ್ಲಿ ಒಂದು ವಿದ್ಯಾರ್ಥಿ ಕಲಾಪ್ರದರ್ಶನ

ಇತ್ತೀಚೆಗೆ ಕಲಾಕೃತಿಗಳ ಪ್ರದರ್ಶನ ನಡೆಯುತ್ತಿರುವುದೂ ಅದು ಜನಪ್ರಿಯತೆಯನ್ನು ಗಳಿಸುತ್ತಿರುವುದೂ ಸೌಭಾಗ್ಯಸೂಚಕವಾಗಿದೆ. ಆದರೆ ಚರ್ಚಾಸ್ಪರ್ಧೆ, ಉಪನ್ಯಾಸವೇ ಮೊದಲಾದ ಸಾಹಿತ್ಯಕ ಚಟುವಟಿಕೆಗಳೇ ಇದುವರೆಗೂ ನಡೆಯುತ್ತ ಬಂದಿರುವ ಮಾನಸಗಂಗೋತ್ರಿಯಲ್ಲಿ ಕಲೆಗಳಿಗೆ ಸಂಬಂಧಪಟ್ಟ ಒಂದು ವಿಶೇಷ ಕಾರ್ಯಕ್ರಮವನ್ನು ಏಕೆ ನಡೆಸಬಾರದೆಂದು ಹಲವಾರು ವಿದ್ಯಾರ್ಥಿಗಳು ಯೋಚಿಸುತ್ತಿದ್ದರು. ಈ ಯೋಚನೆ ಯೋಜನಾರೂಪದಲ್ಲಿ ಬರಲು ಸ್ವಲ್ಪ ಕಾಲ ತೆಗೆದುಕೊಂಡಿತು.

ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿದ್ಯಾರ್ಥಿನಿಲಯದ 'ವಿದ್ಯಾರ್ಥಿ ಸಂಘ' ಈ ಒಂದು ವಿಶೇಷ ವಿದ್ಯಾರ್ಥಿ ಕಲಾಪ್ರದರ್ಶನವನ್ನು ಪ್ರಪ್ರಥಮವಾಗಿ ಮಾನಸಗಂಗೋತ್ರಿಯಲ್ಲಿ ನಡೆಸಲು ಮುಂದೆ ಬಂತು. ಅಂತೆಯೇ ಜನವರಿ 20ರಿಂದ 26ರ ವರೆಗೆ—ಒಂದು ವಾರ—ಈ ಕಲಾಪ್ರದರ್ಶನ ಬಹು ಯಶಸ್ವಿಯಾಗಿಯೂ ನಡೆಯಿತು. ಸಾವಿರಾರು ಕಲಾಪ್ರೇಮಿಗಳು ವಿದ್ಯಾರ್ಥಿಕಲೆಯನ್ನು ವೀಕ್ಷಿಸಿದರು. ಕಲಾಕಾರರ ಸಂಘಟನೆಯನ್ನು ಸ್ತುತಿಸಿಹೋದರು. ಮೊಟ್ಟಮೊದಲ ಬಾರಿಗೆ ಏರ್ಪಡಿಸಿದ ಈ ಕಲಾಪ್ರದರ್ಶನದ ಪರಂಪರೆ ಪ್ರತಿವರ್ಷವೂ ಮುಂದುವರಿದುಕೊಂಡು ಬರಲೆಂದು ಎಲ್ಲರೂ ಹಾರೈಸಿದರು.

ಇವತ್ತಿನ ಜೀವನ ಯಾಂತ್ರಿಕವಾಗಿ, ಅದರ ಸೆಳೆತಕ್ಕೆ ಸಿಕ್ಕಿ ಸುಗ್ಗಾಗುತ್ತಿರುವ ವಿದ್ಯಾರ್ಥಿಗೆ ಸಿಕ್ಕುವ ಸಮಯ ಅತ್ಯಲ್ಪ. ಈ ಅತಲ್ಪಸಮಯವನ್ನು ಸದುಪಯೋಗಪಡಿಸಿಕೊಳ್ಳಬೇಕೆಂಬ ವಿದ್ಯಾರ್ಥಿಗಳ ಸಂಖ್ಯೆ ಇನ್ನೂ ಕಡಿಮೆ. ಅಂಥವರಲ್ಲಿ ಅಡಗಿರುವ ಕಲಾಕೌಶಲಕ್ಕೆ ಮೇಲ್ಕಂಡ ಕಲಾಪ್ರದರ್ಶನ ಒಂದು ಒಳ್ಳೆಯ ಪ್ರಚೋದನೆಯನ್ನು ಕೊಟ್ಟಂತಿತ್ತು. ವಿದ್ಯಾರ್ಥಿಗಳ 'ಹವ್ಯಾಸಕಲೆ'ಗೆ ಈ ಪ್ರದರ್ಶನ ಒಂದು ಸದವಕಾಶವನ್ನೂ ಕಲ್ಪಿಸಿಕೊಟ್ಟಿತು. ಗಂಗೋತ್ರಿಯಲ್ಲಿರುವ ಇಪ್ಪತ್ತೊಂಬತ್ತು ವಿಭಾಗಗಳಲ್ಲಿ ಇಪ್ಪತ್ತಕ್ಕೂ ಮೇಲ್ಪಟ್ಟ ವಿಭಾಗಗಳ ವಿದ್ಯಾರ್ಥಿಗಳು ಈ ಪ್ರದರ್ಶನದಲ್ಲಿ ಭಾಗವಹಿಸಿದ್ದರೆಂಬುದು ಉಲ್ಲೇಖಾರ್ಹ ವಿಚಾರ. ಪ್ರಸ್ತುತ ವಿದ್ಯಾರ್ಥಿ ಕಲಾಪ್ರದರ್ಶನದಲ್ಲಿ ರೇಖಾಚಿತ್ರ, ವರ್ಣಚಿತ್ರ (ನವ್ಯ ಮತ್ತು ಸಾಂಪ್ರದಾಯಿಕ), ಬಾಟಿಕ್, ಛಾಯಾಚಿತ್ರ, ಕುಶಲಕಲೆ ಇತ್ಯಾದಿ ಹಲವಾರು ಬಗೆಯ ಕಲಾಕೃತಿಗಳು ಮುನ್ನೂರಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಪ್ರದರ್ಶಿತಗೊಂಡಿದ್ದುವು. ಅವುಗಳಲ್ಲಿ ಕೆಲವು ಕಲಾಕೃತಿಗಳು ಪ್ರೌಢಕಲಾವಿದನ ಕುಂಚದಿಂದ ಬಂದಷ್ಟೇ ಅದ್ಭುತವಾಗಿದ್ದುವು. ಇನ್ನು ಕೆಲವು ಛಾಯಾಚಿತ್ರಗಳು, ಇಲಸ್ಟ್ರೇಟೆಡ್ ವೀಕ್ಲಿಯಂಥ ವಾರಪತ್ರಿಕೆಗಳಲ್ಲಿ ಪ್ರಥಮ ಬಹುಮಾನ ಗಳಿಸಿದಂಥವಾಗಿದ್ದುವು. ಕೋಳಿಮೊಟ್ಟೆಯ ಮೇಲೆ ಚಿತ್ರಿಸಿದಂಥ ಸೂಕ್ಷ್ಮ ವರ್ಣಚಿತ್ರಗಳು ಅನೇಕರ ಮನ ಸೆಳೆದುವು. ಇವೆಲ್ಲಕ್ಕಿಂತ ಮುಖ್ಯವಾಗಿ ಈ ಕಲಾಪ್ರದರ್ಶನದ ಸಂಘಟನೆಯ ವ್ಯವಸ್ಥೆ ಮತ್ತು ಶಿಸ್ತು ಹಲವಾರು ರಸಿಕರ ಮೆಚ್ಚುಗೆ ಗಳಿಸಿತು.

ಆದರೂ ಇಂಥ ಒಂದು ವಿದ್ಯಾರ್ಥಿ ಕಲಾಪ್ರದರ್ಶನ ಮೊಟ್ಟಮೊದಲ ಬಾರಿಗೆ ನಡೆಯುತ್ತಿದೆಯೆಂದಮೇಲೆ ಅದರಲ್ಲಿ ಹಲಕೆಲವು ನ್ಯೂನತೆಗಳು ಇರುವುದೂ ಸ್ವಾಭಾವಿಕವೆನ್ನಬಹುದು. ಅಂಥವುಗಳಲ್ಲಿ ಛಾಯಾಚಿತ್ರವಿಭಾಗ ಬಹುಜನರ ವಿಮರ್ಶೆಗೆ ಪಾತ್ರವಾಗಿತ್ತು. ಅದರಲ್ಲಿ ಬಹುಶಃ ಸರಿಯಾದ ವರ್ಗೀಕರಣವಾಗಲಿ, ಛಾಯಾಚಿತ್ರಗಳನ್ನು ಪ್ರದರ್ಶಿಸುವಲ್ಲಿ ತೋರಿಸಿದ ಕ್ರಮವಾಗಲಿ ಉತ್ತಮ ಮಟ್ಟದಲ್ಲಿ ಇರಲಿಲ್ಲ. ಇತರ ಕಲಾಕೃತಿಗಳನ್ನು ಪ್ರದರ್ಶಿಸುವಲ್ಲಿಯೂ ಸರಿಯಾದ ವರ್ಗೀಕರಣವನ್ನು ಮಾಡಬಹುದಾಗಿತ್ತು. ರೇಖಾಚಿತ್ರಗಳದೇ ಒಂದು ವಿಭಾಗ, ವರ್ಣಚಿತ್ರಗಳದೇ ಇನ್ನೊಂದು ವಿಭಾಗ, ನವ್ಯಕಲೆಗಳದೇ ಮತ್ತೊಂದು ವಿಭಾಗ, ಸಾಂಪ್ರದಾಯಿಕ ಕಲಾಕೃತಿಗಳದೇ





ಮಾನಸಗಂಗೋತ್ರಿಯ ಕಲಾಪ್ರದರ್ಶನದ ಅಂಗವಾಗಿ ಏರ್ಪಡಿಸಿದ್ದ
ಅರ್ಹತಾಪತ್ರ ವಿತರಣೋತ್ಸವ

ಕುಳಿತಿರುವವರು : ಡಾ. ಎಂ. ಶೇಷಾದ್ರಿ, ಉ. ಕಾ. ಸುಬ್ಬರಾಯಾಚಾರ್.
ಪಿ. ಆರ್. ತಿಪ್ಪೇಸ್ವಾಮಿಯವರು ಅರ್ಹತಾಪತ್ರ ನೀಡುತ್ತಿದ್ದಾರೆ.

ಮಗುದೊಂದು ವಿಭಾಗ ಎಂಬುದಾಗಿ ಬೇರೆ ಬೇರೆ ವಿಭಾಗ ಮಾಡಿ ಪ್ರದರ್ಶಿಸಿದ್ದರೆ ಇನ್ನೂ ಚೆನ್ನಾಗಿರುತ್ತಿತ್ತು.

ಒಟ್ಟಿನಲ್ಲಿ ಪ್ರಥಮ ವಿದ್ಯಾರ್ಥಿ ಕಲಾಪ್ರದರ್ಶನ ಯಶಸ್ವಿಯಾಗಿ ನಡೆಯಿತು. ಒಂದು ವಾರದ ಕಾಲ ಸಾವಿರಾರು ವಿದ್ಯಾರ್ಥಿಗಳ, ಕಲಾಪ್ರೇಮಿಗಳ ಆಕರ್ಷಣೆಗೆ ಒಳಗಾಗಿತ್ತು. ಅಷ್ಟೇ ಅಲ್ಲ, ಅನೇಕರ ಅಭಿಪ್ರಾಯದಂತೆ ಶೈಕ್ಷಣಿಕವೂ ಪ್ರಚೋದಕವೂ ಆಗಿದ್ದು ಹಲವಾರು ಕಲಾಪ್ರೇಮಿಗಳಿಗೆ ಕಲಾನಂದ ವನ್ನು ಈ ಮೂಲಕ ನೀಡಿತು. ನಮ್ಮ ವಿಶ್ವವಿದ್ಯಾನಿಲಯದ ಸನ್ಮಾನ್ಯ ಕುಲಪತಿಗಳು, ಅನೇಕ ಪ್ರಾಧ್ಯಾಪಕರು, ಅಧ್ಯಾಪಕರು ಮತ್ತು ಇತರ ರಸಿಕರು ಈ ಪ್ರದರ್ಶನವನ್ನು ವೀಕ್ಷಿಸಿ, ಮೆಚ್ಚಿಗೆಯನ್ನು ವ್ಯಕ್ತ ಪಡಿಸಿದರು.

ಹೀಗೆ ಮೆಚ್ಚಿಗೆ ಗಳಿಸಿದ ಕಲಾಪ್ರದರ್ಶನ ನೂರಾರು ವಿದ್ಯಾರ್ಥಿ ಕಲಾವಿದರ ಪರಿಶ್ರಮದ ಫಲ. ಅವರ ಪರಿಶ್ರಮಕ್ಕೆ, ಕಲಾಭಿರುಚಿಗೆ ಪ್ರೋತ್ಸಾಹ ಸಿಗುವಂತೆ ಒಂದು ಸನ್ಮಾನ ಸಮಾರಂಭ ತಾ. 25–1–1972ರ ಮಂಗಳವಾರದಂದು ನಡೆಯಿತು. ಅದೇ ಸಂದರ್ಭದಲ್ಲಿ 'ಕಲೆ'ಯ ಮೇಲೆ ಒಂದು ವಿಶೇಷ ಉಪನ್ಯಾಸವನ್ನೂ ಭಾರತೀಯ ಕಲೆಗೆ ಸಂಬಂಧಪಟ್ಟ ಚಲನಚಿತ್ರ ಪ್ರದರ್ಶನಗಳನ್ನೂ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಶಾಖೆಯ ಮುಖ್ಯಸ್ಥರೂ, ಮೈಸೂರು ರಾಜ್ಯದ ಪ್ರಾಕ್ತನ ಇಲಾಖೆಯ ಡೈರೆಕ್ಟರರೂ ಆದ ಪ್ರೊ. ಶೇಷಾದ್ರಿಯವರು ಯಶಸ್ವಿಯಾಗಿ ನಡೆಸಿಕೊಟ್ಟರು. ಈ ಸಂದರ್ಭದಲ್ಲಿ ಪಿ. ಆರ್. ತಿಪ್ಪೇಸ್ವಾಮಿಯವರು ಅರ್ಹತಾಪತ್ರಗಳ ವಿತರಣೆ ಮಾಡಿದರು.

"ಗಂಗೋತ್ರಿಯ ಆವರಣದಲ್ಲಿಯೇ ಇರುವ ಜಾನಪದ ವಸ್ತುಸಂಗ್ರಹಾಲಯದಲ್ಲಿ ಎಂಥ ಕಲಾವಿದನಿಗೂ ಬೇಕಾಗುವ ವಸ್ತುಗಳೂ ವಿಷಯಗಳೂ ಹೇರಳವಾಗಿ ತುಂಬಿರುವಾಗ ಅದರ ಸದುಪಯೋಗವನ್ನು ಪ್ರತಿಯೊಬ್ಬ ವಿದ್ಯಾರ್ಥಿ ಕಲಾವಿದನೂ ಕಲಾಭಿಮಾನಿಯೂ ಪಡೆಯಬೇಕು. ಜನಪದ ಕಲೆ ನಿಜವಾಗಿಯೂ ಸೃಷ್ಟಿಕಾರಿ ಕ್ರಿಯೆ, ಅದರಲ್ಲಿ ಸ್ವಂತಿಕೆಯಿದೆ, ಅದರದೇ ಆದ ಶ್ರೀಮಂತಿಕೆಯಿದೆ" ಎಂದು ವಿವರಿಸುತ್ತ ತರುಣ ಕಲಾವಿದರಿಗೆ ಅನೇಕ ಸಲಹೆಗಳನ್ನು ನೀಡಿ ಉಪಕರಿಸಿದರು.

ಈ ವಿದ್ಯಾರ್ಥಿ ಕಲಾಪ್ರದರ್ಶನದ ಮೂಲಶಕ್ತಿಯಾಗಿ ಅನೇಕ ರೀತಿಯಿಂದ ಮಾರ್ಗದರ್ಶನ ನೀಡಿದ ವಿದ್ಯಾರ್ಥಿ ಕ್ಷೇಮಪಾಲರು ಅಧ್ಯಕ್ಷ ಸ್ಥಾನದಿಂದ ಮಾತನಾಡುತ್ತ, "ವಿದ್ಯಾರ್ಥಿ ಜಗತ್ತು ಅತ್ಯಂತ ಪವಿತ್ರ. ವಿದ್ಯಾರ್ಥಿಗಳ ಸುಪ್ತಶಕ್ತಿಗೆ ಪ್ರೋತ್ಸಾಹ ದೊರೆತರೆ ಹೊಸ ಮನ್ವಂತರವನ್ನೆ ಸೃಷ್ಟಿಸುತ್ತಾರೆ. ವಿದ್ಯಾರ್ಥಿ ಕಲಾವಿದರ ಈ ಕಲಾಪ್ರದರ್ಶನ ವರ್ಷವರ್ಷವೂ ಬೆಳೆದು ಕಲಾವಿದರ ತಪಸ್ಸಿನ ಅರಿವು ಸರ್ವರಿಗೂ ಲಭಿಸಲಿ. ಸ್ನಾತಕೋತ್ತರ ವಿದ್ಯಾರ್ಥಿಗಳ ಪ್ರಯತ್ನ ಸಫಲ. ಅವರಿಗೆ ಹಾರ್ದಿಕ ಅಭಿನಂದನೆಗಳು" ಎಂದು ಹಾರೈಸಿದರು. ಮುಂದುವರಿದು, ವಿದ್ಯಾರ್ಥಿಗಳ ಕಲಾಭಿರುಚಿಗೆ ಪ್ರೋತ್ಸಾಹ ಕೊಡಲೆಂಬಂತೆ ಶೀಘ್ರದಲ್ಲಿಯೇ ಕಲಾಭ್ಯಾಸಂಗ ವ್ಯವಸ್ಥೆಯನ್ನು ಮಾಡಲು ಸನ್ಮಾನ್ಯ ಕುಲಪತಿಗಳು ತಾತ್ವಿಕವಾಗಿ ಯೋಚಿಸಿದ್ದಾರೆ. ಈ ವ್ಯವಸ್ಥೆಯಿಂದಾಗಿ ಕೇವಲ ವಿದ್ಯಾರ್ಥಿಗಳಷ್ಟೆ ಅಲ್ಲ ಕಲೆಯಲ್ಲಿ ಆಸಕ್ತಿಯುಳ್ಳ ಯಾರೇ ಆಗಲಿ ಬಿಡುವಿನ ವೇಳೆಯಲ್ಲಿ ಕಲಾಭ್ಯಾಸಂಗ ಮಾಡಬಹುದೆಂದೂ ಇಂತಹ ಒಂದು ಪ್ರಯತ್ನ ಲಲಿತಕಲೆಗಳ ಕಾಲೇಜಿನಲ್ಲಿ ಆಗುವುದೆಂದೂ ತಿಳಿಸಿದರು.

—ರಘು

ಮಲೇಷಿಯದ ಯೋಜನೆ: ಒಂದು ಪ್ರಯೋಗ

ಮಲೇಷಿಯದ ಪಾರ್ಲಿಮೆಂಟ್ ತನ್ನ ರಾಷ್ಟ್ರದ ಎರಡನೆಯ ಪಂಚವಾರ್ಷಿಕ ಯೋಜನೆಯನ್ನು ಹೆಚ್ಚು ಧೈರ್ಯದಿಂದ ಆರಂಭಿಸಿದೆ. ಮೊದಲನೆಯ ಪಂಚವಾರ್ಷಿಕ ಯೋಜನೆಗಿಂತ ಹೆಚ್ಚು ಆಶಾದಾಯಕ ಫಲಿತಾಂಶಗಳನ್ನು ಸಾಧಿಸುವ ಈ ಯೋಜನೆಯ ಒಟ್ಟು ಅಂದಾಜು ವೆಚ್ಚ 14.350 ದಶಲಕ್ಷ ಮಲೇಷಿಯ ಡಾಲರ್‌ಗಳು (4.783 ದಶಲಕ್ಷ ಅಮೆರಿಕ ಡಾಲರ್). ಅಂದರೆ ಮೊದಲನೆಯ ಯೋಜನೆ

ಗಿಂತ (1966–70) 3,850 ದಶಲಕ್ಷ ಯು. ಡಾಲರ್ ಹೆಚ್ಚು ವೆಚ್ಚ. ಇದರಲ್ಲಿ ಸಾರ್ವಜನಿಕ ರಂಗದ ವೆಚ್ಚ 7.250 ದಶಲಕ್ಷ ಯು. ಡಾಲರ್‌ಗಳು. ಉಳಿದದ್ದು ಖಾಸಗಿ ರಂಗದ ವೆಚ್ಚ.

ಈ ಯೋಜನೆಯ ಮೂರು ಮುಖ್ಯ ಉದ್ದೇಶಗಳೆಂದರೆ 1 ಮಲೇಷಿಯದಲ್ಲಿ ಬಡತನವನ್ನು ಸಂಪೂರ್ಣವಾಗಿ ಅಳಿಸಿಹಾಕುವುದು. 2 ರಾಷ್ಟ್ರದ ಒಳಗಿನ ಅಸಮಾನ ಬೆಳವಣಿಗೆಯನ್ನು ಹೋಗಲಾಡಿಸಿ, ಸಮತೋಲನ ಬೆಳವಣಿಗೆಯನ್ನು ಸಾಧಿಸುವುದು ಮತ್ತು 3 ವಾಣಿಜ್ಯ ಹಾಗೂ ಕೈಗಾರಿಕಾ ಪ್ರಧಾನ ಮಲಯವನ್ನು ನಿರ್ಮಿಸುವುದು.

ಈ ಯೋಜನೆಯು ಈ ಗುರಿಗಳನ್ನು ಸಾಧಿಸಲು ರಾಷ್ಟ್ರೀಯ ಉತ್ಪನ್ನವನ್ನು ವರ್ಷಕ್ಕೆ ಸೇ. 6.5ರಂತೆ ಹೆಚ್ಚಿಸಬೇಕೆಂದು ಅಂದಾಜು ಮಾಡಿದೆ. ಇದರಿಂದ ರಾಷ್ಟ್ರದ ತಲಾ ಆದಾಯ 1.040 ಡಾಲರ್‌ಗಳಿಂದ (1970) ಯೋಜನೆಯ ಅಂತ್ಯದ ವೇಳೆಗೆ 1.300ಕ್ಕೆ ಏರುತ್ತದೆ. ವರ್ಷಕ್ಕೆ 1.20.000 ಹೊಸ ಉದ್ಯೋಗಗಳನ್ನು ಕಲ್ಪಿಸಿಕೊಡುವುದು ಯೋಜನೆಯ ಮುಖ್ಯ ಗುರಿಗಳಲ್ಲೊಂದು.

ಕೃಷಿಕ್ಷೇತ್ರದಲ್ಲಿ ಗ್ರಾಮೀಣ ಪುನರುತ್ಥಾನಕ್ಕೆ ಯೋಜನೆ ಪ್ರಧಾನಾವಕಾಶವನ್ನು ಒದಗಿಸಿ ಕೊಡುತ್ತದೆ.

6.85.000 ಎಕರೆಗಳಷ್ಟು ಹೊಸ ಪ್ರದೇಶದಲ್ಲಿ ರಬ್ಬರ್ ಉತ್ಪಾದನೆಯ ಕಾರ್ಯವನ್ನು ಯೋಜನೆ ರೂಪಿಸಿದೆ. ಗ್ರಾಮೀಣ ಜನರಿಗೆ ವಿದ್ಯಾಭ್ಯಾಸ, ವಸತಿಸೌಕರ್ಯ ಮತ್ತು ಆರೋಗ್ಯರಕ್ಷಣೆಗಳನ್ನು ಸೃಷ್ಟಿಸುವುದರ ಮೂಲಕ ಅವರ ಜೀವನ ಮಟ್ಟವನ್ನು ವೃದ್ಧಿಸುವ ಕಾರ್ಯವನ್ನು ಯೋಜನೆ ಆಶಿಸುತ್ತದೆ.

ಕೈಗಾರಿಕಾರಂಗದಲ್ಲಿ ಮಲೇಷಿಯ ಈ ಯೋಜನಾವಧಿಯಲ್ಲಿ ಮತ್ತೊಂದು ಹೊಸ ನೀತಿಯನ್ನು ಕಾರ್ಯರೂಪಕ್ಕೆ ತರುತ್ತದೆ. ಅದೆಂದರೆ, ಸರ್ಕಾರವೇ ಅನೇಕ ಕೈಗಾರಿಕೆಗಳನ್ನು ಸ್ಥಾಪಿಸಿ, ಸ್ವಲ್ಪ ಕಾಲ ನಡೆಸಿ ಅನಂತರ ಖಾಸಗಿಯವರಿಗೆ ಅವನ್ನು ವರ್ಗಾಯಿಸುವುದು. ಜಪಾನಿನಲ್ಲಿ ಸಿದ್ಧಿಸಿರುವ ಈ ಕಾರ್ಯಕ್ರಮ ಮಲೇಷಿಯದಲ್ಲೂ ಸಿದ್ಧಿಸುತ್ತದೆಂದು ನಂಬಲಾಗಿದೆ.

ಭಾರತ–ಜಪಾನ್‌ಗಳ ಜೀವನಮಟ್ಟ

ಸತೀಶ್ ಎಂ. ಕನ್ವಾಲ್ ಎಂಬ ಅರ್ಥಶಾಸ್ತ್ರ ಸಂಶೋಧಕರು ಜಪಾನಿನ 'ದಿ ಡೆವಲಪಿಂಗ್ ಎಕಾನಮೀಸ್' ಎಂಬ ಸಂಶೋಧನ ಪತ್ರಿಕೆಯ ಜೂನ್ 1971ರ ಸಂಚಿಕೆಯಲ್ಲಿ 'ಭಾರತ ಮತ್ತು ಜಪಾನ್‌ಗಳ ಜೀವನ ಮಟ್ಟದ ಒಂದು ಹೋಲಿಕೆ' ಎಂಬ ಉಪಯುಕ್ತ ಲೇಖನವನ್ನು ಪ್ರಕಟಿಸಿದ್ದಾರೆ. ಈ ಆಳವಾದ ಸಂಶೋಧನೆಯ ಕೆಲವು ಫಲಿತಾಂಶಗಳು ಬಹಳ ಸ್ವಾರಸ್ಯಕರವಾಗಿವೆ.

1960-70ರ ದಶಕದಲ್ಲಿ ಈ ಎರಡೂ ಏಷ್ಯನ್ ರಾಷ್ಟ್ರಗಳ ಬೆಳವಣಿಗೆಯನ್ನು ಗಮನಿಸಿದರೆ ಭಾರತದ ಬೆಳವಣಿಗೆ ಅತ್ಯಂತ ಮಂದಗತಿಯಿಂದ ನಡೆಯುತ್ತಿರುವುದು ಗೋಚರವಾಗುತ್ತದೆ. ಸಮಗ್ರ ಆರ್ಥಿಕ ಸೂಚಿಗಳಾದ ರಾಷ್ಟ್ರೀಯ ವರಮಾನ, ವೈಯಕ್ತಿಕ ಅನುಭೋಗ ವೆಚ್ಚ ಇವನ್ನು ಹೋಲಿಸಿದರೆ ಈ ಎರಡೂ ರಾಷ್ಟ್ರಗಳೂ ಅತ್ಯಂತ ಭಿನ್ನವಾದ ಆರ್ಥಿಕ ಬೆಳವಣಿಗೆಯ ಹಂತದಲ್ಲಿರುವುದು ಗೋಚರವಾಗುತ್ತದೆ. ಜಪಾನಿನ ಅರ್ಥವ್ಯವಸ್ಥೆ ಯೂರೋಪಿನ ರಾಷ್ಟ್ರಗಳ ಬೆಳವಣಿಗೆಯನ್ನು ಮೀರಿ ನಿಲ್ಲುವ ಆತ್ಮಶಕ್ತಿಯನ್ನು ವ್ಯಕ್ತಪಡಿಸುತ್ತಿದ್ದರೆ ಭಾರತದ ಬೆಳವಣಿಗೆ ತೀರ ಕಡಿಮೆ ಮಟ್ಟದಲ್ಲಿ ನಡೆಯುತ್ತಿದೆ. ಜಪಾನ್ ತನ್ನ ರಾಷ್ಟ್ರೀಯ ಉತ್ಪನ್ನದ ಸೇ. 40ರಷ್ಟನ್ನು ಬಂಡವಾಳ ಸಂಚಯಕ್ಕೆ ವಿನಿಯೋಗಿಸುತ್ತಿದೆ. ಭಾರತದಲ್ಲಿ ಇದರ ಶೇಕಡ ಪ್ರಮಾಣ 18. ಜಪಾನಿನ ಕೃಷಿರಂಗ ಆ ರಾಷ್ಟ್ರದ ಒಟ್ಟು ವರಮಾನಕ್ಕೆ ಕೇವಲ ಸೇ. 11ರಷ್ಟು ಕಾಣಿಕೆ ಮಾತ್ರ ನೀಡುತ್ತಿದೆ. ಭಾರತದಲ್ಲಿ ಇದರ ಶೇಕಡ ಪ್ರಮಾಣ 50. ವಾಸ್ತವ ವೈಯಕ್ತಿಕ ತಲಾ ಅನುಭೋಗ ಭಾರತದಲ್ಲಿ ಜಪಾನಿನಲ್ಲಿರುವುದರ ಕೇವಲ ಸೇ. 23ರಷ್ಟಿದೆ.

ಮುಂದಿನ ಕೆಲವು ಮುಖ್ಯವಾದ ಅಂಕಿ–ಅಂಶಗಳು ಈ ಎರಡೂ ರಾಷ್ಟ್ರಗಳ ಬೆಳವಣಿಗೆಯನ್ನು ಸ್ಥೂಲವಾಗಿ ಸೂಚಿಸುತ್ತವೆ:

	(ರಾಷ್ಟ್ರೀಯ ವರಮಾನ ಮೂಲಗಳಿಂದ)					
	ಜಪಾನ್ (100 ಕೋಟಿ ಯೆನ್‌ಗಳಲ್ಲಿ)			ಭಾರತ (100 ಕೋಟಿ ರೂ.ಗಳಲ್ಲಿ)		
	1960–61	65–66	67–68	60–61	65–66	67–68
1 ಕೃಷಿ	1,941	2,907	4,008	68.2	98.5	149.7
2 ಗಣಿ, ಉತ್ಪಾದನೆ ಮತ್ತು ಕಟ್ಟಡ	4,837	9,373	13,402	26.2	42.8	49.1
3 ಸಾಗಣೆ, ಸಂಪರ್ಕ ಮತ್ತು ಸಾರ್ವಜನಿಕ ಉಪಯುಕ್ತ ಉದ್ಯಮ	1,224	2,214	3,066	6.5	11.1	13.0
4 ವಾಣಿಜ್ಯ, ಬ್ಯಾಂಕಿಂಗ್, ವಿಮೆ ಮತ್ತು ಗೃಹ	3,348	7,079	9,603	18.4	31.5	40.7
5 ಸರ್ಕಾರಿ ಸೇವೆಗಳು	511	1,079	1,330	5.4	9.9	12.0
6 ಇತರ ಸೇವೆಗಳು	1,433	3,400	4,413	9.1	13.7	17.3
7 ನಿವ್ವಳ ರಾಷ್ಟ್ರೀಯ ಉತ್ಪನ್ನ (ಫ್ಯಾಕ್ಟರ್ ಕಾಸ್ಟ್‌ನಲ್ಲಿ)	13.294	26.052	35,822	133.8	207.5	281.8
8 ಹೊರದೇಶದಿಂದ ನಿವ್ವಳ ಆದಾಯ	–24	–98	–115	–0.7	–1.7	–2.6
9 ರಾಷ್ಟ್ರೀಯ ಆದಾಯ	13.270	25.945	35,707	133.1	205.8	279.2
10 ಪ್ರಜಾಸಂಖ್ಯೆ (ದಶಲಕ್ಷದಲ್ಲಿ)	93.4	98.2	100.2	434	490	554
11 ತಲಾ ಆದಾಯ (ಜಪಾನಿಗೆ 1000 ಯೆನ್‌ಗಳಲ್ಲಿ, ಭಾರತಕ್ಕೆ ರೂ.ಗಳಲ್ಲಿ)	142.1	264.3	356.4	307	420	543

ಜಪಾನಿನಲ್ಲಿ ಕೂಡ ಜನಸಂಖ್ಯೆಯ ಸಮಸ್ಯೆಯಿದೆ. ಭಾರತದ ಆರ್ಥಿಕ ಬೆಳವಣಿಗೆ ಮೇಲಿನ ಅಂಕಿ–ಅಂಶಗಳಿಂದ ವ್ಯಕ್ತವಾಗುವಂತೆ ಬಹಳ ಮಂದಗತಿಯಿಂದ ಸಾಗುತ್ತಿದೆ. ಜಪಾನಿನ ಬೆಳವಣಿಗೆಯ ದರವನ್ನು ಭಾರತವೂ ಪಡೆದುಕೊಳ್ಳಬೇಕಾದ್ದು ಅವಶ್ಯ.

—ಸಿ. ಕೆ. ರೇಣುಕಾರ್ಯ

ಪುಸ್ತಕಲೋಕ

ಕದಂಬ-ಗಂಗರ ಇತಿಹಾಸ : ಕರ್ನಾಟಕ ಇತಿಹಾಸ ಮಾಲಿಕೆ. ಲೇ : ಪಿ. ಬಿ. ನಂಜುಂಡಸ್ವಾಮಿ: ಪ್ರ: ಸಮಾಜ ಪುಸ್ತಕಾಲಯ, ಧಾರವಾಡ-1: ಪು. 123: ಬೆಲೆ: ರೂ. 2.50

ಚಾಲುಕ್ಯ ಇತಿಹಾಸ : ಕರ್ನಾಟಕ ಇತಿಹಾಸ ಮಾಲಿಕೆ : ಲೇ : ಪಿ. ಬಿ. ನಂಜುಂಡಸ್ವಾಮಿ. ಪ್ರ : ಸಮಾಜ ಪುಸ್ತಕಾಲಯ, ಧಾರವಾಡ-1 : ಪು. 120: ಬೆಲೆ : 2.50

ಪ್ರಸ್ತುತ ಪುಸ್ತಕಗಳೆರಡೂ ಪ್ರೊ. ಪಿ. ಬಿ. ನಂಜುಂಡಸ್ವಾಮಿಯವರು ಕರ್ನಾಟಕ ಇತಿಹಾಸ ಮಾಲಿಕೆ ಎಂಬ ಶೀರ್ಷಿಕೆಯಲ್ಲಿ ಬರೆದು ಸಮಾಜ ಪುಸ್ತಕಾಲಯದವರು ಪ್ರಕಟಗೊಳಿಸುತ್ತಿರುವ ಸರಣಿಗೆ ಸೇರಿವೆ. ಇವಲ್ಲದೆ ಈ ಲೇಖಕರು ರಾಷ್ಟ್ರಕೂಟರ ಇತಿಹಾಸ ಮತ್ತು ಹೊಯ್ಸಳರ ಇತಿಹಾಸ ಎಂಬ ಕೃತಿಗಳನ್ನು ಪ್ರಕಟಿಸಿದ್ದಾರೆ. ಮತ್ತೆ ವಿಜಯನಗರ ಸಾಮ್ರಾಜ್ಯವೆಂಬ ಪುಸ್ತಕವನ್ನು ಬರೆದು ಪ್ರಕಟಿಸುವುದಾಗಿಯೂ ತಿಳಿಸಿದ್ದಾರೆ.

ಕರ್ನಾಟಕದ ಇತಿಹಾಸದ ಬಗ್ಗೆ ಕನ್ನಡದಲ್ಲಿ ಹೊರಬಂದಿರುವ ಗ್ರಂಥಗಳು ಬಹಳ ಕಡಿಮೆ. ಮೈಸೂರು ಸರಕಾರದವರು ಪ್ರಕಟಿಸಿರುವ ಕರ್ನಾಟಕ ಪರಂಪರೆ ಕರ್ನಾಟಕ ಇತಿಹಾಸದ ಸಮಗ್ರ ಚಿತ್ರವನ್ನು ನಿರೂಪಿಸುವ ಪ್ರಯತ್ನ. ಆದರೆ ವಿದ್ಯಾರ್ಥಿಗಳ ದೃಷ್ಟಿಯಿಂದ ಆ ಗ್ರಂಥದಲ್ಲಿ ಕೆಲವು ಕೊರತೆಗಳಿವೆ. ಆ ದಿಶೆಯಲ್ಲಿ ಬಿ. ಎಂ. ಪಿ. ಕೃಷ್ಣರಾಯರು ಮತ್ತು ಎಂ. ಕೇಶವಭಟ್ಟರು ರಚಿಸಿದ ಕರ್ನಾಟಕ ಇತಿಹಾಸ ದರ್ಶನ ಮತ್ತೊಂದು ಗಮನಾರ್ಹ ಪ್ರಯತ್ನ. ಆದರೆ ಆ ಗ್ರಂಥವೂ ಪದವಿ ಮಟ್ಟದ ವಿದ್ಯಾರ್ಥಿ ವರ್ಗಕ್ಕೆ ಹೆಚ್ಚು ಉಪಯುಕ್ತವಲ್ಲ. ಮೇಲಿನ ಗ್ರಂಥಗಳಲ್ಲಿ ಅನೇಕ ಉಪಯುಕ್ತ ವಿಷಯಗಳಿದ್ದರೂ ಯಾವುದೇ ಒಂದು ಪ್ರತ್ಯೇಕ ರಾಜಮನೆತನದ ಆಳ್ವಿಕೆಯಲ್ಲಿ ನೆಲಸಿದ್ದ ಜನಜೀವನ-ಸಾಮಾಜಿಕ ಸ್ಥಿತಿಗತಿಗಳ ಬಗ್ಗೆ ಆಧಾರಸಹಿತವಾದ ಮಾಹಿತಿಗಳು ದೊರಕುವುದಿಲ್ಲ. ವಿದ್ಯಾರ್ಥಿಗಳಿಗೆ ಆ ಗ್ರಂಥಗಳು ಸುಲಭವಾಗಿ ಸಿಟುಕುವುದೂ ಇಲ್ಲ. ಇಂತಹ ಪರಿಸ್ಥಿತಿಯಲ್ಲಿ ಕರ್ನಾಟಕದ ಪ್ರಮುಖ ರಾಜಮನೆತನಗಳ ಇತಿಹಾಸ, ಆಯಾ ಕಾಲದ ಜನಜೀವನ, ಆಡಳಿತ ಪದ್ಧತಿ, ಧಾರ್ಮಿಕ ಪರಿಸ್ಥಿತಿ, ಕಲೆ ಮತ್ತು ಸಾಹಿತ್ಯಕ್ಷೇತ್ರಗಳಲ್ಲುಂಟಾದ ಪ್ರಗತಿಯನ್ನು ಸಂಕ್ಷಿಪ್ತವಾದರೂ ಸರಳವಾಗಿಯೂ ಸ್ಪಷ್ಟವಾಗಿಯೂ ತಿಳಿಸುವ ಸಣ್ಣ ಪುಸ್ತಕಗಳ ಅವಶ್ಯಕತೆ ಇದೆ. ಪ್ರೊ. ನಂಜುಂಡಸ್ವಾಮಿಯವರ ಈ ಪುಸ್ತಕಗಳು ಅಂತಹ ಅವಶ್ಯಕತೆಗಳನ್ನು ಪೂರೈಸುವುದಲ್ಲದೆ, ಜನಸಾಮಾನ್ಯರಿಗೂ ನಾಡಿನ ಇತಿಹಾಸದ ಸೂಕ್ಷ್ಮ ಪರಿಚಯವನ್ನು ಒದಗಿಸುತ್ತವೆ.

ಪುಸ್ತಕದಲ್ಲಿ ತಿಳಿಸಿರುವ ವಿಷಯಗಳ ಸಂಬಂಧವಾದ ಶಾಸನ ಸಾಹಿತ್ಯಕ ಆಧಾರಗಳನ್ನು ಅಲ್ಲಲ್ಲೇ ಸೂಚಿಸಿ ತಮ್ಮ ಬರಹದ ಉಪಯುಕ್ತತೆಯನ್ನು ಹೆಚ್ಚಿಸಿದ್ದಾರೆ. ಪುಸ್ತಕಗಳ ಕೊನೆಯಲ್ಲಿ ಮುಖ್ಯ ಆಧಾರ ಗ್ರಂಥಗಳ ಪಟ್ಟಿ ಕೊಟ್ಟು ಹೆಚ್ಚಿನ ಅಭ್ಯಾಸಕ್ಕೆ ಬೇಕಾದ ಸಾಮಗ್ರಿಗಳನ್ನೂ ಒದಗಿಸಿದ್ದಾರೆ. ಹಲವಾರು ವರ್ಷಗಳ ಕಾಲ ಉಪಾಧ್ಯಾಯರಾಗಿದ್ದು, ವಿದ್ಯಾರ್ಥಿಗಳ ತೊಂದರೆ, ಅವಶ್ಯಕತೆಗಳ ಪರಿಚಯ ಪಡೆದಿರುವ ಲೇಖಕರ ಈ ಪುಸ್ತಕಗಳು ಉಪಯುಕ್ತವಾಗಿವೆಯೆಂದು ಹೇಳಬಹುದು.

ಈ ಪುಸ್ತಕಗಳಲ್ಲಿರುವ ಕೆಲವು ಸಣ್ಣ ಕೊರತೆಗಳನ್ನು ಲೇಖಕರು ಸರಿಪಡಿಸಿಕೊಂಡಲ್ಲಿ ಇವುಗಳ ಮೌಲ್ಯ ಹೆಚ್ಚುತ್ತದೆ. ಸಾಮಾಜಿಕ ಧಾರ್ಮಿಕ ಪರಿಸ್ಥಿತಿಗಳನ್ನು ವಿವರಿಸುವಾಗ ಒಂದೊಂದು ವಿಷಯಕ್ಕೂ ಹಲವಾರು ನಿದರ್ಶನಗಳನ್ನು ಕೊಡುವ ಬದಲು ಆ ವಿಷಯಗಳ ಸಾಮಾನ್ಯ ತತ್ತ್ವಗಳನ್ನು ನಿರೂಪಿಸಿ ಅವನ್ನು ಒಂದೆರಡು ನಿದರ್ಶನಗಳಿಗೇ ಸೀಮಿತಗೊಳಿಸಬಹುದು. ಕಲೆಗೆ ಸಂಬಂಧಿಸಿದ ಅಧ್ಯಾಯಗಳಲ್ಲಿ ದೇವಾಲಯಗಳ ವರ್ಣನೆಗಿಂತ ಆಗಿನ ಕಲಾಶೈಲಿಯ ಪ್ರಮುಖ ಲಕ್ಷಣಗಳು, ಶೈಲಿಯ ಬೆಳವಣಿಗೆ ಮುಂತಾದ ವಿಷಯಗಳಿಗೇ ಪ್ರಾಮುಖ್ಯ ನೀಡಬಹುದು.

ಪುಸ್ತಕಗಳು ಅಂದವಾಗಿ, ಹೆಚ್ಚು ತಪ್ಪುಗಳಿಲ್ಲದೆ ಅಚ್ಚಾಗಿರುವುದು ಸಂತಸದ ವಿಚಾರ. ಇಂಥ ಉಪಯುಕ್ತ ಪುಸ್ತಕಗಳನ್ನು ಬರೆದ ಲೇಖಕರೂ ಪ್ರಕಟಿಸಿದ ಪ್ರಕಾಶಕರೂ ಅಭಿನಂದನಾರ್ಹರು.

—ಬಿ. ಕೆ. ಗುರುರಾಜರಾವ್

ಕಾರ್ಮಿಕ ಮತ್ತು ಯೋಜನೆ : ಡಾ. ಟಿ. ಕೆ. ಮೇಟಿ; ಪ್ರ : ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ; ಸೆಪ್ಟೆಂಬರ್ 1971 ; ಪು. 7 + 54; ಬೆಲೆ: ರೂ. 0.25

ಈ ಗ್ರಂಥ ಕರ್ನಾಟಕ ವಿಶ್ವವಿದ್ಯಾಲಯದ ಉಪನ್ಯಾಸ ಗ್ರಂಥಮಾಲೆಯ 128ನೆಯ ಕುಸುಮ. ಈ ಗ್ರಂಥದ ಮುಖ್ಯ ಉದ್ದೇಶ, ಲೇಖಕರೇ ಅಭಿಪ್ರಾಯಪಡುವಂತೆ, "ವಿಷಯಸಂದರ್ಭವನ್ನು ರಾಷ್ಟ್ರೀಯ ನೋಟದಿಂದ ಮತ್ತು ಅಂತರರಾಷ್ಟ್ರೀಯ ದೃಷ್ಟಿಯಿಂದ ಕೂಲಂಕಷವಾಗಿ ವಿವೇಚಿಸುವುದು, ಓದುಗರಿಗೆ ಮನದಟ್ಟಾಗುವ ರೀತಿಯಲ್ಲಿ ಸ್ಪಷ್ಟಪಡಿಸುವುದು." ಲೇಖಕರು ಈ ಗ್ರಂಥದಲ್ಲಿ ತಮ್ಮ ಈ ಪ್ರಯತ್ನದಲ್ಲಿ ಸಫಲತೆ ಪಡೆದಿದ್ದಾರೆ ಎಂದು ಹೇಳಬಹುದು.

"ಕಾರ್ಮಿಕನು ಉತ್ಪಾದಕ ಘಟಕಗಳಲ್ಲಿ ಒಂದು ಮುಖ್ಯ ಅಂಗವೆಂಬುದು ಅರ್ಥಶಾಸ್ತ್ರದ ಸಿದ್ಧಾಂತ." (ಪು. 7). ಆದ್ದರಿಂದ ಒಂದು ರಾಷ್ಟ್ರದ ಆರ್ಥಿಕ ಬೆಳೆವಣಿಗೆಯಲ್ಲಿ ಕಾರ್ಮಿಕನ ಪಾತ್ರ ಹಿರಿದಾದ್ದು. ಅದರಲ್ಲೂ ಯೋಜನೆಯನ್ನು ಪ್ರಧಾನವಾಗಿರಿಸಿಕೊಂಡಿರುವ ರಾಷ್ಟ್ರದಲ್ಲಂತೂ ಕಾರ್ಮಿಕನ ಶ್ರಮವನ್ನು ಆರ್ಥಿಕ ಬೆಳೆವಣಿಗೆಗೆ ನಿರ್ದೇಶಿಸುವುದು ಮುಖ್ಯವಾಗುತ್ತದೆ. ಆದ್ದರಿಂದ ಈ ಗ್ರಂಥದಲ್ಲಿ ಕ್ರಮವಾಗಿ ಆರ್ಥಿಕ ಅಭಿವೃದ್ಧಿಯಲ್ಲಿ ಕಾರ್ಮಿಕರ ಪಾತ್ರ, ಯೋಜನೆಗಳಲ್ಲಿಯ ಕಾರ್ಮಿಕ ಪದ್ಧತಿ, ಔದ್ಯಮಿಕ ಸಂಬಂಧಗಳು, ಕಾರ್ಮಿಕ ಸಂಘಗಳು, ವೇತನ ಪ್ರೋತ್ಸಾಹ ಮತ್ತು ಕಾರ್ಮಿಕನ ಉತ್ಪಾದಕ ಶಕ್ತಿ ಇವನ್ನು ಸಂಕ್ಷಿಪ್ತವಾಗಿ ಚರ್ಚಿಸಲಾಗಿದೆ. ಈ ವಿಷಯಗಳನ್ನು ಸರಳವಾಗಿ ಚರ್ಚಿಸಲಾಗಿರುವುದರಿಂದ ಸಾಮಾನ್ಯ ಓದುಗರಿಗೆ ಈ ಆರ್ಥಿಕ ಬೆಳೆವಣಿಗೆಯಲ್ಲಿ ಕಾರ್ಮಿಕನ ಪಾತ್ರವೇನು ಎಂಬುದು ಸುಲಭವಾಗಿ ಮನದಟ್ಟಾಗುತ್ತದೆ.

ಅನಂತರ ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆ ಮತ್ತು ಅಂತರರಾಷ್ಟ್ರೀಯ ಸ್ವತಂತ್ರ ಕಾರ್ಮಿಕ ಸಂಘಗಳ ಒಕ್ಕೂಟದ ಸಂಕ್ಷಿಪ್ತ ಪರಿಚಯವನ್ನು ಮಾಡಿಕೊಡಲಾಗಿದೆ. ಕೊನೆಯದಾಗಿ ಕಾರ್ಮಿಕ ಪದ್ಧತಿಯ ದೂರದೃಷ್ಟಿಯನ್ನು ಚರ್ಚಿಸಿ, ಕಾರ್ಮಿಕರ ಕಾಯಿದೆಯ ತಿದ್ದುಪಡಿಗಳನ್ನು ಪರಿಚಯ ಮಾಡಿಕೊಡಲಾಗಿದೆ.

ಪುಸ್ತಕವನ್ನು ಪೂರ್ಣವಾಗಿ ಓದಿ ಮುಗಿಸಿದಾಗ ಒಂದು ಅಂಶ ಎದ್ದು ಕಾಣುತ್ತದೆ. ಅದೆಂದರೆ ಪುಸ್ತಕ ಕಾರ್ಮಿಕ ಮತ್ತು ಯೋಜನೆಯ ವಿಷಯವನ್ನು ಪರಿಚಯ ಮಾಡಿಕೊಡುವುದಕ್ಕೆ ಹೊರಟು, ಅನೇಕ ಬಾಹ್ಯ ವಿಷಯಗಳನ್ನೂ ವಿಚಾರದ ವ್ಯಾಪ್ತಿಯೊಳಕ್ಕೆ ತರುವ ಪ್ರಯತ್ನ ನಡೆಸಿರುವುದು. ಈ ಗ್ರಂಥ ಸಂಪೂರ್ಣವಾಗಿ ಉತ್ಪಾದನಾಂಗವಾದ ಶ್ರಮವನ್ನು ಯೋಜನೆಯ ಮೂಲಕ ನಿರ್ದೇಶಿಸಿ ಹೇಗೆ ಆರ್ಥಿಕ ಬೆಳೆವಣಿಗೆಯನ್ನು ಪ್ರಚೋದಿಸಬಹುದು ಎಂಬುದಕ್ಕೆ ಮಾತ್ರ ಸೀಮಿತವಾಗಿದ್ದರೆ, ಇನ್ನೂ ಹೆಚ್ಚು ಶಕ್ತಿಯುತವಾಗಬಹುದಿತ್ತು. ಆದರೆ ಪ್ರಸ್ತುತ ಗ್ರಂಥವನ್ನು ಸಾಮಾನ್ಯ ಓದುಗರಿಗಾಗಿ ಬರೆಯಲಾಗಿರುವುದರಿಂದ ಕಾರ್ಮಿಕರಿಗೆ ಸಂಬಂಧಿಸಿದ ಎಲ್ಲ ಮುಖಗಳನ್ನೂ ಓದುಗರಿಗೆ ಪರಿಚಯ ಮಾಡಿಕೊಡಲು ಲೇಖಕರು ಪ್ರಯತ್ನಿಸಿದ್ದಾರೆ. ಈ ದೃಷ್ಟಿಯಿಂದ ಲೇಖಕರು ಫಲಪ್ರದರಾಗಿದ್ದಾರೆ ಎಂದು ಹೇಳಬಹುದು. ಸರಳವಾದ ಶೈಲಿ ಮತ್ತು ನೇರ ನಿರೂಪಣೆಯಿಂದಾಗಿ ಈ ಗ್ರಂಥ ಹೆಚ್ಚು ಉಪಯುಕ್ತವಾಗಿದೆ.

—ಸಿ. ಕೆ. ರೇಣುಕಾರ್ಯ

ಶಿವಾತ್ಮ ಸಿರಿಕ್ಷೆ: ಲೇ : ಶ್ರೀ ಶ್ರೀ ಸ್ವಾಮಿ ವೀರಭದ್ರ ಶಿವಾಚಾರ್ಯರು : ಬೃಹನ್ಮಠ ; ಪ್ರ : ಪರಮಾರ್ಥಧಾಮ, ಬೃಹನ್ಮಠ, ಹಲಗೂರು, ಮಂಡ್ಯ ಜಿಲ್ಲೆ : ಪುಟ: 236 : ಬೆಲೆ : 3.00;1970

ವೈದಿಕ ಸಾಹಿತ್ಯದಲ್ಲಿಯ ಯಜ್ಞದ ಕಲ್ಪನೆ ಅತ್ಯಂತ ಗಹನವಾದುದು. ಯಜ್ಞ ಎಂದರೆ ದೇವತೆ

ಗಳನ್ನು ತೃಪ್ತಿಪಡಿಸುವುದರ ಮೂಲಕ ಮಾನವರು ತಮ್ಮ ಐಹಿಕ ಸುಖಸಂವರ್ಧನೆಗೋಸ್ಕರ ಮಾಡುತ್ತಿದ್ದ ಕಾರ್ಯವಿಧಾನ ಎಂಬ ವಿವರಣೆಗೆ ಮೇಲ್ನೋಟಕ್ಕೆ ವೇದದಲ್ಲಿ ಅವಕಾಶವಿರುವುದಾದರೂ. ಸಮಗ್ರ ವೈದಿಕಸಾಹಿತ್ಯವನ್ನು ಪರಿಶೀಲಿಸಿದರೆ ಕಾಲಕ್ರಮದಲ್ಲಿ ಯಜ್ಞ ಹೆಚ್ಚುಹೆಚ್ಚು ವೈವಿಧ್ಯವನ್ನೂ ತರ್ಕಾತೀತ ಅನುಭಾವಿಕತೆಯನ್ನೂ (ಮಿಸ್ಟಿಸಿಸಂ) ಒಳಗೊಂಡ ಒಂದು ಮಹತ್ತತ್ತ್ವ ಎಂಬ ಅಂಶ ಅರಿವಾಗದೆ ಇರದು. 'ಋತ' ಎಂದು ಕರೆಯಲ್ಪಟ್ಟಿರುವ ವಿಶ್ವನಿಯಮದ ಸಾಧನ ಯಜ್ಞ: ಸೃಷ್ಟಿ. ಸ್ಥಿತಿ. ಲಯಗಳೆಲ್ಲವೂ ಯಜ್ಞದ ಆವಿರ್ಭಾವಗಳು: ವಿಶ್ವಚೈತನ್ಯ ವಿವಿಧ ವಸ್ತುಗಳಾಗಿ ಅಭಿವ್ಯಕ್ತಗೊಳ್ಳುವುದು ಯಜ್ಞಕ್ರಿಯೆಯಿಂದಲೇ. ಎಂಬ ವಿವರಣೆಯನ್ನು ನೋಡಬಹುದು. ಆದ್ದರಿಂದಲೇ ಯಜ್ಞವನ್ನು ವಿಶ್ವದ ಮೂಲ (ಅಯಂ ಯಜ್ಞೋ ಭುವನಸ್ಯ ನಾಭಿಃ) ಎಂದು ಋಗ್ವೇದದಲ್ಲಿ ಕರೆಯಲಾಗಿದೆ. ಬ್ರಹ್ಮತತ್ತ್ವ ಯಜ್ಞತತ್ತ್ವದಲ್ಲಡಗಿದೆ ಎಂದು ಗೀತೆ ಸಾರುತ್ತದೆಯಲ್ಲದೆ. ಯಜ್ಞದಲ್ಲಿ ದ್ರವ್ಯಯಜ್ಞ. ತಪೋಯಜ್ಞ. ಯೋಗಯಜ್ಞ. ಸ್ವಾಧ್ಯಾಯ ಯಜ್ಞ. ಜ್ಞಾನಯಜ್ಞ ಎಂಬುದಾಗಿ ವಿಭಾಗವನ್ನು ಮಾಡಿದೆ. ಶ್ರೇಯಸ್ಸಾಧನವಾದ. ನಿಯತವಾದ. ಪವಿತ್ರವಾದ ಎಲ್ಲಾ ಕಾರ್ಯಗಳೂ ಯಜ್ಞಗಳೇ ಎಂಬುದಾಗಿ ಅಲ್ಲಲ್ಲಿ ಅರ್ಥೈಸಿರುವುದನ್ನು ಕಾಣಬಹುದು.

ಈ ರೀತಿಯಿಂದ ವ್ಯಾಪಕವಾದ ಅರ್ಥವ್ಯಾಪ್ತಿಯನ್ನುಳ್ಳ ಯಜ್ಞತತ್ತ್ವವನ್ನು ವೀರಶೈವದರ್ಶನದ ಹಿನ್ನೆಲೆಯಲ್ಲಿ ಶಿವಾಚಾರ್ಯರು ವಿವೇಚಿಸಲು ಪ್ರಯತ್ನಿಸಿದ್ದಾರೆ. ತಪೋಯಜ್ಞ. ಕರ್ಮಯಜ್ಞ. ಜಪಯಜ್ಞ. ಧ್ಯಾನಯಜ್ಞ ಮತ್ತು ಜ್ಞಾನಯಜ್ಞದ ಮೂಲಕ ಪರಮಾತ್ಮನನ್ನು ಹೇಗೆ ಸಾಕ್ಷಾತ್ಕರಿಸಿಕೊಳ್ಳಬಹುದೆಂಬುದನ್ನು. ವೇದ. ಪುರಾಣ. ಆಗಮ. ಉಪನಿಷತ್ತು ಮತ್ತು ವೀರಶೈವ ಗ್ರಂಥಗಳು (ವಿಶೇಷವಾಗಿ ಸಿದ್ಧಾಂತಶಿಖಾಮಣಿ) ಇವುಗಳ ಆಧಾರದ ಮೇಲೆ ವಿವರವಾಗಿ ವಿವೇಚಿಸಹೊರಟು ವಿಫಲರಾಗಿದ್ದಾರೆ.

ತಪೋಯಜ್ಞದ ಚಿತ್ರಣದಲ್ಲಿ—ತಪಸ್ಸಿನ ಸ್ವರೂಪವನ್ನೂ. ಮಹತ್ತ್ವವನ್ನೂ. ವಿಶ್ಲೇಷಿಸುತ್ತ ಜೀವನದ ಗುರಿ ತಪಸ್ಸು ಎಂತಲೂ. ತಪಸ್ಸಿನ ಮುಖ್ಯಗುರಿ ಸಹನಶೀಲತೆಯೆಂದೂ ಹೇಳಿದ್ದಾರೆ. ಕರ್ಮಯಜ್ಞ ಸೌಂದರ್ಯದಲ್ಲಿ- ತಪೋಯಜ್ಞಕ್ಕೂ ಕ್ರಿಯಾಯಜ್ಞಕ್ಕೂ ಇರುವ ಘನಿಷ್ಠ ಸಂಬಂಧವನ್ನು ಪರೀಕ್ಷಿಸಿ—ಸತ್ಕರ್ಮ ಸದಾಚಾರಗಳಲ್ಲಿ ಶ್ರದ್ಧೆ ಆಸಕ್ತಿ ಹುಟ್ಟಿಸಿ. ಅವರ ಆಚರಣೆಗೆ ತಕ್ಕಂತೆ ತನುಮನಭಾವಗಳನ್ನು ಸಿದ್ಧಗೊಳಿಸುವುದು ತಪಸ್ಸಿನ ಮುಖ್ಯಗುರಿಯಾದರೆ. ಹಾಗೆ ಸಿದ್ಧವಾದ ಅಂಶಗಳು ಕಾರ್ಯೋನ್ಮುಖವಾಗುವಂತೆ ಮಾಡಿ ತೋರಿಸುವುದೇ ಕ್ರಿಯಾಯಜ್ಞವೆಂದು ನಿರೂಪಿಸಿದ್ದಾರೆ. ಜಪಯಜ್ಞದ ವೈಖರಿಯಲ್ಲಿ—ಚಿತ್ತಕ್ಕೆ ಸ್ಥಿರತೆಯನ್ನೀಯುವ ಪಂಚಾಕ್ಷರೀ ಮಹಾಮಂತ್ರದ ಅನುಷ್ಠಾನ. ಮಂತ್ರದ ಆವಶ್ಯಕತೆ. ಜಪಭೇದ—ಮುಂತಾದವುಗಳನ್ನು ವಿವರಿಸಿದ್ದಾರೆ. ಧ್ಯಾನಯಜ್ಞ ಪ್ರಭಾವದಲ್ಲಿ—ಧ್ಯಾನಲಕ್ಷಣವನ್ನು ತಿಳಿಸುತ್ತ ಶಕ್ತಿವಿಶಿಷ್ಟಾದ್ವೈತ ದರ್ಶನದಲ್ಲಿಯ ಪ್ರಾಣತತ್ತ್ವವಾದ 'ಇಷ್ಟಲಿಂಗನಿಷ್ಠೆ' ಆತ್ಮಜ್ಞಾನಕ್ಕೆ ಸಾಧನವಾಗುವ ಹೊಲಬನ್ನು ತಿಳಿಸಲು ಯತ್ನಮಾಡಿದ್ದಾರೆ. ಜ್ಞಾನಯಜ್ಞ ಘೋಷಣೆಯಲ್ಲಿ—ಜ್ಞಾನದ ಸ್ವರೂಪವನ್ನೂ. ಜ್ಞಾನಯಜ್ಞದ ಕಾರ್ಯ–ಕಾರಣಸಂಬಂಧವನ್ನೂ. ಕ್ರಿಯೆ–ಜ್ಞಾನಗಳಿಗಿರುವ ನಿಕಟಬಾಂಧವ್ಯವನ್ನೂ ನಿರೂಪಿಸಿ. ಅಂತ್ಯದಲ್ಲಿ ಈ ಐದು ಯಜ್ಞಗಳೂ ಪರಸ್ಪರ ಪೂರಕಗಳು. ಪ್ರತ್ಯೇಕವಾದ ಘಟಕಗಳಲ್ಲ ಎಂದು ಸಮರ್ಥಿಸಲು ಶ್ರಮಪಟ್ಟಿದ್ದಾರೆ ಶ್ರೀಗಳು.

ಈ ಕೃತಿಯಲ್ಲಿ ವೈಚಾರಿಕತೆಯ ಹೊಳಹು ಅಲ್ಲಲ್ಲಿ ಕಂಡುಬಂದರೂ ಇಡೀ ಗ್ರಂಥದುದ್ದಕ್ಕೂ ಎದ್ದುಕಾಣುವ ದೋಷವೆಂದರೆ ಏಕಸೂತ್ರತೆಯ ಅಭಾವ. ವಿಷಯಪ್ರತಿಪಾದನೆಯಲ್ಲಿ ಕ್ರಮಬದ್ಧತೆ ಇಲ್ಲ. ಅಸ್ಪಷ್ಟತೆ. ಅನಗತ್ಯವಾದ ಪದಜಾಲ—ಇವುಗಳಿಂದ ತುಂಬಿರುವ ಈ ಕೃತಿ ತತ್ತ್ವಜಿಜ್ಞಾಸುಗಳಿಗೂ ಅಧ್ಯಾತ್ಮ ಸಾಹಿತ್ಯದಲ್ಲಿ ಅಭಿರುಚಿಯುಳ್ಳ ಜನರಿಗೂ ಅಗ್ರಾಹ್ಯವಾಗಿದೆ ಎನ್ನದೆ ವಿಧಿಯಿಲ್ಲ. ಶಬ್ದದ ಬಿನ್ನಾಣಕ್ಕೆ ಮನಸೋತು ಅರ್ಥವನ್ನು ಕೈಬಿಟ್ಟಿದ್ದಾರೆ ಲೇಖಕರು. ಒಂದೆಡೆ "......ಪುರೋಗಾಮಿ ಪಾತ್ರಶೋಷಣೆಯ ಸ್ಥಿತಿಯಲ್ಲಿ ಯಾವ ಸ್ಥಿತಪ್ರಜ್ಞೆಯನ್ನು ಕುರಿತು ಜೀವನು ತಾದಾತ್ಮ್ಯಹೊಂದುತ್ತಾನೆಯೋ ಅಂತಹ ಪರಬ್ರಹ್ಮದ ಪ್ರಭಾವವನ್ನು ತಿಳಿದುಕೊಂಡು ಅಲ್ಲಿಯೇ ಪ್ರವೇಶಿಸು" ಎಂದಿದ್ದಾರೆ. ಪುರೋಗಾಮಿ ಪಾತ್ರಶೋಷಣೆಯ ಸ್ಥಿತಿ ಎಂದರೇನು ಎನ್ನುವುದು ಕಲ್ಪನೆಗೆ ನಿಲುಕದ ಪದಸಮೂಹ.

ಸ್ಥಿತಪ್ರಜ್ಞೆಯು ಭಗವದ್ಗೀತೆಯಲ್ಲಿ ಹೇಳಲ್ಪಟ್ಟಿರುವಂತೆ ಸುಖದುಃಖವನ್ನು ಸಮದೃಷ್ಟಿಯಿಂದ ಕಾಣುವ ಒಂದು ಸ್ಥಿತಿ. ಇವರಲ್ಲಿ ಜೀವನು ತಾದಾತ್ಮ್ಯಹೊಂದುವುದು ಎಂದರೆ ಅರ್ಥವೇನು? ಎಂಬುದನ್ನು ವಿವರಿಸಬೇಕಿತ್ತು. ಇನ್ನೊಂದೆಡೆ ಹೀಗಿದೆ: "ಶಿವಪ್ರಕಾಶದ ಪಾರದರ್ಶಕ (Transparent ಅಂಗ(Body)ವಾದ—ತಪಸ್ಸು, ಕ್ರಿಯೆ, ಜಪ, ಧ್ಯಾನ, ಜ್ಞಾನ ಒಂದೊಂದೂ ಪರಿಪೂರ್ಣ ಸಾಧನೆಗಳಾಗಿ ಇರುತ್ತಿದ್ದು, ತಟಸ್ಥ ಸಮೀಕರಣ (Neutral equation) ರೂಪ ಶಿವಧರ್ಮಕ್ಕೆ ತಂತಮ್ಮ ಕರ್ತವ್ಯಪೂರ್ಣಶಕ್ತಿಯನ್ನು ಹದವಾಗಿ ಒದಗಿಸಿ ಬೆಳೆಸುತ್ತವೆ" (ಪು. 209)". ಈ ಮಾತಿನಿಂದ ಏನನ್ನು ಹೇಳಬಯಸಿದ್ದಾರೆ ಎನ್ನುವುದು ಅರ್ಥವಾಗದ ಸಂಗತಿ. ಈ ರೀತಿ 'ಶಬ್ದ ಸುಖಕ್ಕೆ ಮರುಳಾ'ಗಿರುವ ವಾಕ್ಯಗಳನ್ನು ಹೇರಳವಾಗಿ ಕಾಣಬಹುದು. ಅನೇಕ ಕಡೆಗಳಲ್ಲಿ ಪುನರುಕ್ತಿ ಮತ್ತು ಅಸಂಗತವಾದ ಅಂಶಗಳು ಸ್ಪಷ್ಟವಾಗಿ ಗೋಚರವಾಗುತ್ತವೆ. "ಚೆನ್ನಾಗಿ ಮಾಗಿ ಹಣ್ಣಾದ ಬೇಲದ ಹಣ್ಣಿನ ಒಳಗಿರುವ ಮದ್ದಾನೆ ಎಂಬ ಹುಳುವು ಹಣ್ಣಿನ ಒಳಗಿನ ತಿರುಳನ್ನೇ ತಿಂದುಬಿಡುತ್ತದಲ್ಲದೆ, ಅದರ ಬುರುಡೆಯೊಳಗೆ ತಿರುಳೇ ಇಲ್ಲದಂತೆ ಹೇಗೆ ಬರಿದು ಮಾಡುತ್ತದೆಯೋ..." ಎಂಬ ಮಾತಿನಲ್ಲಿ (ಮಾಗಿದ) ಬೇಲದ ಹಣ್ಣಿನಲ್ಲಿ ಮದ್ದಾನೆ ಎಂಬ ಹುಳುವಿರುತ್ತದೆ ಎಂಬ ತಪ್ಪು ಕಲ್ಪನೆ ವಾಚಕರಲ್ಲಿ ಮೂಡುವುದಲ್ಲದೆ, ಪುನರುಕ್ತಿದೋಷವನ್ನು ಕಾಣಬಹುದು. "ಕೃತ್ರಿಮಾಹಂಕಾರ ದೈತ್ಯಜಾಲ ಸಾಧಕನ ಅಂತರಂಗದಲ್ಲಿ ಪ್ರವೇಶಿಸಿದರೆ" ಅಧಃಪತನ ಎನ್ನುತ್ತಾರೆ. ಅಹಂಕಾರದಲ್ಲಿ ಕೃತ್ರಿಮವಾದದ್ದು, ನಿಜವಾದದ್ದು ಎಂದು ಎರಡು ಬಗೆ ಇರುವುದೆ? ಯಾವುದೇ ಅಹಂಕಾರವೂ ಆತ್ಮೋನ್ನತಿಗೆ ಅಡ್ಡಿಯಷ್ಟೆ. ಈ ರೀತಿ ಶಬ್ದಗಳನ್ನು ಬಳಸುವುದರಲ್ಲಿ ಸಂಯಮ ತೋರುವುದೊಳಿತು. 'ಭಕ್ತಿಜ್ಞಾನವೈರಾಗ್ಯಾದಿ ಗುಣಗಳು ಅಭಿವೃದ್ಧಿ ಹೊಂದಿದ್ದಂತೆಲ್ಲಾ ಇಂದ್ರಿಯಸುಪ್ತಿ(Anaesthetic)ಯಿಂದ ಲಭಿಸುವ ಅತಿನಿದ್ರಾವಸ್ಥೆಯೂ, ಅತೀಂದ್ರಿಯ ಶಕ್ತಿಸಂಪತ್ತೂ ಲಭ್ಯವಾಗುತ್ತವೆ. ಇದನ್ನು ಅತಿಮಸ್ತಿಷ್ಕದ ನೆನಪು ಎನ್ನುತ್ತಾ—ಇದನ್ನೇ 'ಪರಾನಂದ'ವೆಂದೂ, 'ಶಿವಪ್ರಕಾಶ'ವೆಂದೂ 'ಶ್ರೀ ರೇಣುಕಾಚಾರ್ಯರು ಹೆಸರಿಸಿರುವುದನ್ನು ಕಾಣುತ್ತೇವೆ' ಎಂದಿರುವುದು ಅವಿಚಾರಿತ ರಮಣೀಯ. ಆಧ್ಯಾತ್ಮಿಕ ವಿಕಾಸಕ್ಕೆ ಅತಿನಿದ್ರಾವಸ್ಥೆಯ ಅಗತ್ಯವಾದರೂ ಏಕೆ? ಅತೀಂದ್ರಿಯಶಕ್ತಿ ಲಭ್ಯವಾದರೂ (ಅದೂ ಒಂದು ವಿಧವಾದ ಸಿದ್ಧಿಯೆ) ಅತಿಮಸ್ತಿಷ್ಕದ (ಶ್ರೀಗಳ ಅನುವಾದ) ನೆನಪನ್ನು ಪರಾನಂದಕ್ಕೆ (ಈ ಶಬ್ದ ಆತ್ಮಾನಂದ ಸಂಪಾದಿ ಎಂಬುದನ್ನು ನೆನಪಿನಲ್ಲಿಡಬೇಕು) ಹೋಲಿಸಿರುವುದು ಚಿಂತನೆಯ ಅಭಾವವನ್ನು ವ್ಯಕ್ತಪಡಿಸುತ್ತದೆ ಎನ್ನದೆ ಗತ್ಯಂತರವೇ ಇಲ್ಲ. "ವೀರಶೈವರಾದರೂ ಕ್ರಿಯಾ–ಜ್ಞಾನ ಸಂಬಂಧ ಸ್ಥಿತಿಯನ್ನು ಶೂನ್ಯ ಅಥವಾ ಬಯಲು ಎಂದು ಸಂಬೋಧಿಸಿದರು" (ಪು. 164) ಎಂದಿದ್ದಾರೆ. ವೀರಶೈವ ದರ್ಶನದಲ್ಲಿ ಶೂನ್ಯ, ಬಯಲು ಈ ಶಬ್ದಗಳನ್ನು ಒಂದು ವಿಶಿಷ್ಟವಾದ ಅರ್ಥದಲ್ಲಿ ಬಳಸಿದ್ದಾರೆ. ವಿಶ್ವವನ್ನೆಲ್ಲ ವ್ಯಾಪಿಸಿ, ಮೀರಿನಿಂತಿರುವ ಪರಿಪೂರ್ಣವಾದ ಮೂಲಸ್ವರೂಪದ ಶಿವತತ್ತ್ವವನ್ನು ಬಯಲು ಅಥವಾ ಶೂನ್ಯ ಎಂದು ಹೆಸರಿಸಿದ್ದಾರೆ. ಅದು ಕ್ರಿಯಾ–ಜ್ಞಾನಗಳ ಸಂಬಂಧವನ್ನು ತೋರಿಸುವ ಸ್ಥಿತಿಯಲ್ಲ. ಆದ್ದರಿಂದಲೇ 'ಜ್ಞಾನಶೂನ್ಯಸ್ಥಲ' ಎಂಬ ಒಂದು 'ಸ್ಥಲ'ವನ್ನು ಕಾಣುತ್ತೇವೆ. 'ವಸ್ತು ಮತ್ತು ಮೂಲವಸ್ತು' ಭೇದ ವಿವೇಚನೆಯನ್ನೂ, ಉಭಯದ ಸಾಮರಸ್ಯ ಯೋಗವನ್ನೂ, ದೇವ–ದಾನವ–ಮಾನವ ಕುಲಕೋಟಿಗೆ ಉಪದೇಶಿಸಿದವರಲ್ಲಿ ವೀರಶೈವ ಸಿದ್ಧಾಂತಜ್ಞರೇ ಪ್ರಪ್ರಥಮರೆಂದು ತಿಳಿಯುವುದರಲ್ಲಿ ಔಚಿತ್ಯವಿದೆ" (ಪು. 178) ಎಂಬ ಮಾತು ವೇದೋಪನಿಷತ್ತುಗಳನ್ನು ಅರಿಯದ ಮತಾಭಿಮಾನಿಗಳಿಗೆ ಸುಂದರವಾಗಿಯೂ ಔಚಿತ್ಯಪೂರ್ಣವಾಗಿಯೂ ತೋರಬಹುದು. "ವೇದಾಗಮಗಳ ಪೂರ್ವಕಾಲದ ಪುರಾಣಸಾಹಿತ್ಯದಲ್ಲಿ ವಿವರಿಸಲ್ಪಡದ ವಿದ್ಯೆಯೇ ಇಲ್ಲ" ಎಂಬ ಮಾತು ವೇದಾಗಮಗಳಿಗಿಂತಲೂ ಪುರಾಣ ಪ್ರಾಚೀನ ಎಂಬ ಭ್ರಾಂತಿಯನ್ನು ಮೂಡಿಸುತ್ತವೆ. "...ವೇದದ ಜ್ಞಾನಕಾಂಡೋಕ್ತ ಅಷ್ಟಾವರಣ ಪಂಚಾಚಾರಯುಕ್ತವಾದ ಶಿವಾರ್ಚನೆ" ಎಂಬ ಹೇಳಿಕೆ ವೇದದ ಜ್ಞಾನಕಾಂಡವೆಂದೆನಿಸಿಕೊಳ್ಳುವ ಉಪನಿಷತ್ತಿನಲ್ಲಿ ಅಷ್ಟಾವರಣ, ಪಂಚಾಚಾರಗಳು ಉಕ್ತವಾಗಿವೆ ಎಂಬರ್ಥವನ್ನು ಕೊಡುತ್ತದೆ. ಇದು ಸತ್ಯಕ್ಕೆ ದೂರವಾದ ಸಂಗತಿ. ಯಾವ ಉಪನಿಷತ್ತಿನಲ್ಲೂ ಅಷ್ಟಾವರಣ, ಪಂಚಾಚಾರ ಶಬ್ದಗಳು ಗೋಚರವಾಗುವುದಿಲ್ಲ. ಅವು ಆಚರಣೆಯ ಮಾರ್ಗಗಳು, ಆಗಮಗಳಲ್ಲಿ ಕಾಣಬಹುದು. "ರಾಷ್ಟ್ರದ ಅಭ್ಯುದಯವನ್ನು ನಿರೀಕ್ಷಿಸುವ ಮಹಾತ್ಮರ ಜಾತೀಯತೆ–ಮತಾಂಧತೆ—ಆತ್ಮಗೌರವದ ರಕ್ಷಣೆ

ಗಾಗಿ......" ಎಂಬ ಮಾತಿನಿಂದ ಆತ್ಮಗೌರವಕ್ಕೆ ಜಾತೀಯತೆ ಮತಾಂಧತೆ ಅಗತ್ಯ ಎಂದಂತಾಗುತ್ತದೆ. ಶ್ರೀ ಶಿವಾಚಾರ್ಯರ ಅರಿವಿಗೆ ಗೋಚರವಾಗದೆ ಈ ತಪ್ಪು ನುಸುಳಿರಬೇಕು ಎನಿಸುತ್ತದೆ.

ಸಂಸ್ಕೃತದಲ್ಲಿ ಪ್ರಾರ್ಥನಾಪದ್ಯವನ್ನು ರಚಿಸಿರುವ ಲೇಖಕರು (ಅದರಲ್ಲಿನ ತಪ್ಪುಗಳನ್ನು ಗಮನಿಸದೆ ಹೋದರೂ) ಸಾಮರಸ್ಯತೆ, ದೌರ್ಜನ್ಯತೆ, ವೈಷಮ್ಯತೆ, ಸೌಜನ್ಯತೆ ಖಂಡಾತುಂಡ ಮುಂತಾದ ಪದಗಳನ್ನು ಪ್ರಯೋಗಿಸಿರುವುದು ಆಶ್ಚರ್ಯ. ಅಲ್ಲದೆ ಪರಿಚಿತವಾದ ಪದಗಳಿಗೆ ಆವರಣದ ಗುರುತಿನಲ್ಲಿ ಮತ್ತೊಂದು ಪದವನ್ನು ಕೊಡುವುದು ಸರಿಯಲ್ಲ. ಉದಾ: ದೀಪ (ಜ್ಯೋತಿ). ಅಗ್ನಿ (ಬೆಂಕಿ). ಮೂಲಧಾತು (ತತ್ತ್ವ). ತತ್ತ್ವ (ಮೂಲಧಾತು). ವಿದ್ಯುದ್ದೀಪ (ಎಲೆಕ್ಟ್ರಿಕ್ ಲ್ಯಾಂಪ್) ಇತ್ಯಾದಿ. ಕೆಲವು ಪದಗಳಿಗೆ ಇಂಗ್ಲಿಷ್ ಭಾಷೆಯಲ್ಲಿ ಪರ್ಯಾಯ ಪದವನ್ನು ನೀಡಿರುವುದು ಯಾವ ರೀತಿಯಲ್ಲೂ ಸರಿಹೋಗದು ವುದಿಲ್ಲ. ಉದಾ: ತನ್ನತನ (Egoism). ಸ್ವಯಂಪ್ರಭೆ (Radio activity). ಅಂಗ (Body). ವಿಸ್ತೃತ ವ್ಯಾಪ್ತಿ (Definition) ಜ್ಯೋತಿ (Matter) ಅಂಗತ್ರಯ ಸಂಗಮನ (Communication). (ಗುರುಲಿಂಗಜಂಗಮ) ಸಂಪುಟ ಜಿಜ್ಞಾಸೆ (Receptacle think) ಇತ್ಯಾದಿ.

ಒಟ್ಟಿನಲ್ಲಿ ಹೇಳುವುದಾದರೆ, ಸರಳತೆ,ಸ್ಪಷ್ಟತೆ, ಕ್ರಮಬದ್ಧವಾದ ವಿವರಣೆಗಳನ್ನೊಳಗೊಂಡಿದ್ದರೆ ಈ ಕೃತಿ ಧರ್ಮಜಿಜ್ಞಾಸುಗಳಿಗೆ ಪ್ರಯೋಜನಕಾರಿಯಾಗುತ್ತಿತ್ತು. ವಿಷಯಪ್ರತಿಪಾದನೆಗಾಗಿ ಆರಿಸಿಕೊಂಡ ಸಾಕ್ಷ್ಯವಚನಗಳು ಕೆಲವೆಡೆ ವಿಷಯವನ್ನು ಪ್ರತಿಪಾದಿಸದೆ ಮೂಕಸಾಕ್ಷಿಗಳಂತಿರುವುದನ್ನು ಮುಂದಿನ ಕೃತಿಗಳಲ್ಲಿ ನಿವಾರಿಸುತ್ತಾರೆಂದು ಆಶಿಸುತ್ತೇವೆ.

—**ಇಮ್ಮಡಿ ಶಿವಬಸವಸ್ವಾಮಿಗಳು**

ಇಷ್ಟಲಿಂಗಾರ್ಚನಾ ರಹಸ್ಯ: ಕರ್ತೃ: ಶ್ರೀ ಶ್ರೀ ಸ್ವಾಮಿ ವೀರಭದ್ರ ಶಿವಾಚಾರ್ಯರು. ಬೃಹನ್ಮಠ; ಪ್ರ: ಪರಮಾರ್ಥಧಾಮ. ಬೃಹನ್ಮಠ. ಹಲಗೂರು. ಮಂಡ್ಯ ಜಿಲ್ಲೆ: ಪುಟ: 240 ; ಬೆಲೆ: 3.50

ಶೈವಧರ್ಮ ಅತ್ಯಂತ ಪ್ರಾಚೀನವಾದುದು. ವೇದಗಳ ಕಾಲಕ್ಕಿಂತಲೂ ಪೂರ್ವದ್ದೆಂದು ನಿರ್ಣೀತವಾಗಿರುವ ಸಿಂಧೂ ನಾಗರಿಕತೆಯಲ್ಲೇ ಶೈವ ಸಂಸ್ಕೃತಿಯ ಮೂಲವನ್ನು ಕಾಣಬಹುದು ಎಂದು ವಿದ್ವಾಂಸರು ನಿರ್ಧರಿಸಿದ್ದಾರೆ. ಈ ಶೈವಧರ್ಮವು ಕಾಲಕಾಲಕ್ಕೆ ವಿಕಾಸವಾಗಿ ಅನೇಕ ಕವಲುಗಳಾಗಿ ಒಡೆಯಿತು. ಅವುಗಳಲ್ಲಿ ಪ್ರಧಾನವಾದವುಗಳು—ಕಾಶ್ಮೀರಶೈವ, ಸಿದ್ಧಾಂತಶೈವ ಮತ್ತು ವೀರಶೈವ. ಈ ಮೂರು ದರ್ಶನಗಳಲ್ಲೂ ತಾತ್ತ್ವಿಕ ವಿಚಾರಗಳಲ್ಲಿ ಕೆಲವೆಡೆ ಪರಸ್ಪರ ಸಾಮ್ಯ ಕಂಡುಬಂದರೂ ಅನೇಕ ವಿಷಯಗಳಲ್ಲಿ ಭಿನ್ನತೆ ಗೋಚರವಾಗುತ್ತದೆ.

ಎಲ್ಲ ಧರ್ಮಗಳಲ್ಲೂ ಎರಡು ವಿಭಾಗಗಳಿವೆ. ಒಂದು ತಾತ್ತ್ವಿಕ ಸಿದ್ಧಾಂತ. (Philosophical aspect). ಮತ್ತೊಂದು ಆಚರಣೆಯ ಮಾರ್ಗ (Religious aspect). ಅಂತೆಯೇ ವೀರಶೈವರ ತಾತ್ತ್ವಿಕದೃಷ್ಟಿಯನ್ನು 'ಶಕ್ತಿವಿಶಿಷ್ಟಾದ್ವೈತದರ್ಶನ'ವೆಂದು ಕರೆಯಲಾಗಿದೆ. ಶಕ್ತಿವಿಶಿಷ್ಟನಾದ ಜೀವನು, ಶಕ್ತಿವಿಶಿಷ್ಟನಾದ ಶಿವನೊಡನೆ ಪಡೆಯುವ ಸಮರಸವೇ ಜೀವನದ ಗುರಿ ಎಂದು ಸಾರುವುದರಿಂದ 'ಶಕ್ತಿ ವಿಶಿಷ್ಟಾದ್ವೈತದರ್ಶನ' ಎಂಬ ಹೆಸರು ಬಂದಿದೆ. ಆಚರಣೆಯ ದೃಷ್ಟಿಯನ್ನು 'ಷಟ್‌ಸ್ಥಲಮಾರ್ಗ'ವೆಂದು ಹೆಸರಿಸಿದ್ದಾರೆ. ಷಟ್‌ಸ್ಥಲವನ್ನು ಆತ್ಮವೆಂತಲೂ ಇದಕ್ಕೆ ಪೂರಕಗಳಾದ ಪಂಚಾಚಾರ ಅಷ್ಟಾವರಣಗಳನ್ನು ಪ್ರಾಣ ಮತ್ತು ಶರೀರವೆಂತಲೂ ಕರೆದಿದ್ದಾರೆ. ಈ ಅಷ್ಟಾವರಣಗಳಲ್ಲೊಂದಾದ ಲಿಂಗೋಪಾಸನೆಯ ಬಗೆಗೆ ಶ್ರೀಗಳು ಈ ಗ್ರಂಥದಲ್ಲಿ ವಿವರಣೆಯನ್ನಿತ್ತಿದ್ದಾರೆ. ಇಷ್ಟಲಿಂಗೋಪಾಸನೆ ಉಪನಿಷತ್ತುಗಳಲ್ಲಿ ಕಂಡುಬರುವ ದಹರೋಪಾಸನೆಯ ವ್ಯಕ್ತರೂಪ. ಆದ್ದರಿಂದ ಇಷ್ಟಲಿಂಗವು ಸಾಧನವೂ ಹೌದು, ಸಾಧ್ಯವೂ ಹೌದು. ಗುರುವಿನಿಂದ ಅನುಗ್ರಹೀತನಾದ ಭಕ್ತನು ಇಷ್ಟಲಿಂಗಾನುಸಾಧನದ ಮೂಲಕ ತನ್ನ ಇರವಿನ ಅರಿವನ್ನು ಮನಗಾಣುತ್ತಾನೆ.

ವೀರಶೈವರ ಧರ್ಮಾಚರಣೆಯ ಪ್ರಧಾನಾಂಗವಾದ ಲಿಂಗಾರ್ಚನೆಯನ್ನು ಮಾಡುವ ವಿಧಾನ ಮತ್ತು ಕ್ರಮಗಳನ್ನು ಮೊದಲನೆಯ ಪ್ರಕರಣದಲ್ಲಿ ನೀಡಿದ್ದಾರೆ. ಎರಡನೆಯ ಪ್ರಕರಣವಾದ ಸಾಧನ ಸಮನ್ವಯದಲ್ಲಿ ಸಾಧಕನು ಪೂಜಾವೇಳೆಯಲ್ಲಿ ಆಚರಿಸಬೇಕಾದ ನೀತಿನಿಯಮಗಳನ್ನು ವಿವರವಾಗಿ

ವಿವೇಚಿಸಿದ್ದಾರೆ. ಇಷ್ಟ–ಪ್ರಾಣ–ಭಾವಲಿಂಗೋಪಾಸನೆಗಳಿಗಿರುವ ಅಂತರವನ್ನು ಮತ್ತು ರಹಸ್ಯವನ್ನು ಬಿಡಿಸಲು ಪ್ರಯತ್ನಪಟ್ಟಿರುವುದು ಶ್ಲಾಘನೀಯವಾದ ವಿಷಯ. ಪರಿಶಿಷ್ಟದಲ್ಲಿ ಶಿವಪೂಜಾವೇಳೆಯಲ್ಲಿ ಪಠಿಸಬಹುದಾದ ಪ್ರಸಿದ್ಧ ಅನುಭಾವಿಗಳ ಉತ್ತಮ ಸಂಸ್ಕೃತ, ಕನ್ನಡ ಪದ್ಯಗಳನ್ನು ಕಲೆಹಾಕಿರುವುದು ಕೃತಿಗೆ ಹೆಚ್ಚಿನ ಶೋಭೆಯನ್ನುಂಟುಮಾಡಿದೆ. ಇಷ್ಟಲಿಂಗಾರ್ಚನೆಯ ಬಗೆಗೆ ಅನೇಕ ಹೊತ್ತಗೆಗಳು ಪ್ರಕಟವಾಗಿದ್ದರೂ ಪೂಜಾಕ್ರಮದಲ್ಲುದಯಿಸುವ ಏಕೆ, ಹೇಗೆ ಎಂಬ ಪ್ರಶ್ನೆಗಳಿಗೆ ಉತ್ತರವನ್ನೀಯುವುದರ ಮೂಲಕ ಉಪಯುಕ್ತ ಕಾರ್ಯವನ್ನೂ ಮಾಡಿದ್ದಾರೆ ಶ್ರೀ ಶಿವಾಚಾರ್ಯರು. ಆನಂದಭಿಃ, ಪಾವಿತ್ರ್ಯತೆ ಮುಂತಾದ ಶಬ್ದಗಳು ಹೇಗೋ ಸೇರಿವೆ. 'ಶಿವಾಷ್ಟೋತ್ತರ ನಾಮಾವಳಿ'ಯನ್ನು ಸೇರಿಸಿದ್ದರೆ ಚೆನ್ನಾಗಿರುತ್ತಿತ್ತು ಎಂದೆನಿಸುತ್ತದೆ. ಒಟ್ಟಿನಲ್ಲಿ 'ಲಿಂಗಾಂಗಸಾಮರಸ್ಯ'ವನ್ನು ಸಾಧಿಸಬೇಕೆನ್ನುವವರಿಗೆ ಇದೊಂದು ಸಂಗ್ರಹಾರ್ಹವಾದ ಕೃತಿ.

—ಇಮ್ಮಡಿ ಶಿವಬಸವಸ್ವಾಮಿಗಳು

ಭಾರತೀಯ ಹಬ್ಬಗಳು : ಲೇ : ಸಿ. ವ್ಹಿ. ಕೆರಿಮನಿ; ಪ್ರ : ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ; ಸೆಪ್ಟೆಂಬರ್ 1971; ಪು. 64

ಉಪನ್ಯಾಸ ಗ್ರಂಥಮಾಲೆಯ 129ನೆಯ ಪ್ರಕಟಣೆಯಾದ ಈ ಚಿಕ್ಕ ಪುಸ್ತಕದಲ್ಲಿ ಭಾರತೀಯ ಹಬ್ಬಗಳ ಉದ್ದೇಶ, ಆಚರಣೆಯ ವಿವರ, ಪ್ರಮುಖ ಹಬ್ಬಗಳ ವೈಶಿಷ್ಟ್ಯ, ಅವಕ್ಕೆ ಸಂಬಂಧಪಟ್ಟ ಐತಿಹ್ಯಗಳು, ಹಬ್ಬಗಳ ಆಧ್ಯಾತ್ಮಿಕ ಅರ್ಥ—ಈ ಮೊದಲಾದ ವಿವರಗಳಿವೆ. ಮೊದಲ ಭಾಗದಲ್ಲಿ ಯುಗಾದಿ, ನವರಾತ್ರಿ ಮೊದಲಾದ ಪ್ರಮುಖ ಹಬ್ಬಗಳ ವಿಷಯವೂ ಎರಡನೆಯ ಭಾಗದಲ್ಲಿ ರಾಮನವಮಿ, ಬಸವಜಯಂತಿ ಮೊದಲಾದ ಜಯಂತಿಗಳ ವಿಷಯವೂ ಬಂದಿವೆ. ಸ್ವಾತಂತ್ರ್ಯೋತ್ಸವ, ಗಣರಾಜ್ಯೋತ್ಸವ ಮೊದಲಾದ ರಾಷ್ಟ್ರೀಯ ಹಬ್ಬಗಳ ಪ್ರಸ್ತಾಪ ಮೂರನೆಯ ಭಾಗದಲ್ಲಿದೆ. ನಾಲ್ಕನೆಯ ಭಾಗದಲ್ಲಿ ಕರ್ನಾಟಕ, ತಮಿಳುನಾಡು ಮೊದಲಾದ ಪ್ರದೇಶಗಳಿಗೆ ವಿಶಿಷ್ಟವೆನಿಸಿದ ಹಬ್ಬಗಳ ವಿವರಗಳಿವೆ. ಇರುವ ಸ್ವಲ್ಪ ಅವಕಾಶದಲ್ಲೆ ಲೇಖಕರು ಸ್ವಾರಸ್ಯವಾಗಿ ವಿಷಯನಿರೂಪಣೆ ಮಾಡಿದ್ದಾರೆ.

ತೀವ್ರವಾಗಿ ಬದಲಾಗುತ್ತಿರುವ ಸಾಮಾಜಿಕ ಜೀವನವನ್ನು ಗಮನಿಸಿದರೆ ಹಬ್ಬಗಳ ಭವಿಷ್ಯ ಏನು ಎಂದು ಹೇಳುವುದು ಕಷ್ಟವಾಗುತ್ತದೆ. ಅವುಗಳಲ್ಲಿ ಎಷ್ಟು ಉಳಿಯುತ್ತವೆ, ಎಷ್ಟು ಅಳಿಯುತ್ತವೆ ಎಂಬ ವಿಷಯ ಕಾಲಕ್ಕೆ ಬಿಟ್ಟ ಮಾತು. ಮಾನವ ಸಮಾಜಶಾಸ್ತ್ರ ಹಾಗೂ ಜಾನಪದದ ದೃಷ್ಟಿಯಿಂದ ನಮ್ಮೆಲ್ಲ ವಿಶಿಷ್ಟ ಹಬ್ಬಗಳ ಆಚರಣೆ ಮಾಸುವ ಮುನ್ನ, ಅವುಗಳ ತಳಹದಿಯಾಗಿರುವ ಜನಪದ ಆಚಾರವಿಚಾರ, ನಂಬಿಕೆ, ವೈಶಿಷ್ಟ್ಯ, ಕಲಾಪಗಳ ಹಿಂದಿನ ಲಲಿತಕಲೆ, ಹಾಡು ಹಸೆ, ಮಂತ್ರ ತಂತ್ರ—ಇವುಗಳ ಸೂಕ್ಷ್ಮ ಅಧ್ಯಯನ ಮತ್ತು ದಾಖಲೆ ಅಗತ್ಯವೆನಿಸುತ್ತದೆ.

—ಎನ್. ಪ್ರಹ್ಲಾದರಾವ್

WO 9988—MUPM—2000 + 25 copies—5-4-72

ಮಾನವಿಕ ಕರ್ಣಾಟಕ

ವಾರ್ಷಿಕ ಚಂದಾ

(ಅಂಚೆವೆಚ್ಚ ಸೇರಿ)

ವಿದ್ಯಾರ್ಥಿಗಳಿಗೆ	೪ ರೂ.
ಸಾಮಾನ್ಯ ಚಂದಾದಾರರಿಗೆ	೬ ರೂ.
ಸಂಸ್ಥೆಗಳಿಗೆ	೮ ರೂ.
ಆಜೀವ ಸದಸ್ಯತ್ವ	೧೦೦ ರೂ.

ಡೈರೆಕ್ಟರ್
'ಪ್ರಸಾರಾಂಗ'
ಮಾನಸಗಂಗೋತ್ರಿ
ಮೈಸೂರು–೬